೪) ವಿಜಾಪುರ ಸಹಕಾರಿ ನೂಲಿನ ಗಿರಣಿ ಮೂರನೆಯ ಬಾರಿ ಮುಚ್ಚಿರುವುದು.

ಶ್ರೀ ಬಾಬುರೆಡ್ಡಿ ಮ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ವಿಜಾಪುರ ಸಹಕಾರಿ ನೂಲಿನ ಗಿರಣಿ ಮೂರನೆಯ ಸಲ ಎಂದರೆ ಕಳೆದ ವರ್ಷದ ಅಕ್ಟೋಬರ್ ತಿಂಗಳಿನಿಂದ ಮುಚ್ಚಿಕೊಂಡಿದೆ. ಆಡಳಿತ ವರ್ಗದ ದುರಾಡಳಿತದಿಂದಾಗಿ ಈ ಸಹಕಾರಿ ನೂಲಿನ ಗಿರಣಿ ಒಂದು ಸಲ ಬಂದ್ ಆಗಿತ್ತು. ನಂತರ ಸರಕಾರ ಪ್ರಯತ್ನ ಮಾಡಿ ೧೯೮೫ರ ಗಾಂಧೀಜಯಂತಿಯಂದು ಗಿರಣಿಯನ್ನು ಪುನರಾರಂಭಿಸಿತು. ಇಲ್ಲಿ ಆಗಿರುವ ದುರಂತವೆಂದರೆ ೧೯೮೫ರ ಗಾಂಧೀಜಯಂತಿಯಂದು ಆರಂಭವಾದ ಈ ಗಿರಣಿ ಸರ್ಕಾರದಿಂದ ನೇಮಕಗೊಂಡ ಆಡಳಿತಾಧಿಕಾರಿ ನಾರಾಯಣ ಅಯ್ಯಂಗಾರ್ ಎಂಬುವರ ನಿರಂತರ ದುರಾಡಳಿತದಿಂದಾಗಿ ೧೯೮೭ರ ಗಾಂಧೀ ಜಯಂತಿಯ ಹಿಂದಿನ ದಿನವೇ ಮತ್ತೆ ಮುಚ್ಚಿಕೊಂಡು ಸುಮಾರು ೫೦೦ ಕಾರ್ಮಿಕ ಕುಟುಂಬಗಳು ಬೀದಿಪಾಲಾದವು. ಗಿರಣಿ ಬಂದ್ ಆಗಲು ಕಾರ್ಮಿಕ ಮುಷ್ಕರವೇ ಕಾರಣವಾಗಿರದೆ ಆಡಳಿತಾಧಿಕಾರಿ ಅಯ್ಯಂಗಾರಿಯ ಸ್ವೇಚ್ಛಾಧಿಕಾರದಿಂದಾಗಿ ಗಿರಣಿ ಮುಚ್ಚಿದೆ. ಕಳೆದ ೫ ತಿಂಗಳುಗಳಿಂದ ಕಾರ್ಮಿಕರ ಬಾಳಿನಲ್ಲಿ ಕತ್ತಲೆ ಕವಿದಿದೆ. ಅವರ ಕುಟುಂಬಗಳು ಬೀದಿಪಾಲಾಗಿವೆ. ಗಿರಣಿಯನ್ನು ಪುನರಾರಂಭಿಸಲು ವಿಧಾನಸೌಧದ ಮಟ್ಟದಲ್ಲಿ ಒಂದೆರಡು ಬಾರಿ ಮಾತುಕತೆಗಳು ನಡೆದರೂ ಫಲಿತಾಂಶವು ಶೂನ್ಯ. ಈ ಮಧ್ಯೆ ಈ ಗಿರಣಿಯನ್ನು ಬೇರೆಯವರಿಗೆ ಮಾರಾಟ ಮಾಡುವ ತರಾತುರಿ ನಡೆದಿದೆಯೆಂದು ನನಗೆ ತಿಳಿದುಬಂದಿದೆ. ದುರಾಡಳಿತ ಮಾಡಿದ ಅಧಿಕಾರಿ ಹಾಯಾಗಿದ್ದು, ಆತನ ಮೇಲೆ ಯಾವುದೇ ಕ್ರಮವಿಲ್ಲ. ಕಾರ್ಮಿಕರು ಮಾತ್ರ ಕಣ್ಣೀರಿಡುತ್ತಿದ್ದಾರೆ. ರಾಜ್ಯಾದ್ಯಂತ ಕೈಮಗ್ಗ ಉದ್ದಿಮೆ ನೂಲಿನ ಅಭಾವದಿಂದ ಕಂಗೆಟ್ಟಿದೆ. ಈ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಂಡಾದರೂ ಶತಾಯಗತಾಯ ಪ್ರಯತ್ನಿಸಿ ವಿಜಾಪುರದ ಸಹಕಾರಿ ನೂಲಿನ ಗಿರಣಿಯನ್ನು ಶೀಘ್ರವೇ ಪುನರಾರಂಭಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಹಕಾರಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಈ ಬಗ್ಗೆ ನಾಳೆ ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಸುಮಾವಸಂತ್, ಸದಸ್ಯರು ಇಲ್ಲ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣದ ಬಗ್ಗೆ ನಾನು ಕೆಲವು ಪ್ರಮುಖವಾದ ಅಂಶಗಳನ್ನು ಈ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮೊದಲನೆಯದು ರಾಜ್ಯಪಾಲರ ಭಾಷಣದಲ್ಲಿ ರೈತರು ಸಹಕಾರ ಸಂಘಗಳಲ್ಲಿ ತೆಗೆದುಕೊಂಡಿರುವ ಎಲ್ಲಾ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಸ್ಪಷ್ಟೀಕರಣ ನೀಡಬೇಕೆಂದು ಸಹಕಾರ ಸಚಿವರಿಗೆ ಕೇಳಿದಾಗ, ಅವರು ಸರಿಯಾದ ಉತ್ತರ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ನಮ್ಮ ರೈತರು ಸಹಕಾರ ಸಂಘಗಳ ಎಲ್ಲಾ ಸಾಲಗಳನ್ನು ಮತ್ತು ಬಡ್ಡಿಯನ್ನು ಕಟ್ಟಬೇಕಾಗಿದೆ. ಇದುವರೆಗೆ ಸರ್ಕಾರದ ಯಾವುದೇ ಆದೇಶ ಬಂದಿಲ್ಲ. ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡುತ್ತಿಲ್ಲ. ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ರೈತರಿಗೆ ಅನುಕೂಲವಾಗತಕ್ಕ ಇದು ಒಂದು ಸಂಗತಿಬಿಟ್ಟರೆ, ಬೇರೆ ಯಾವುದೇ ಸಂಗತಿ ಇಲ್ಲದೇ ಇರುವುದರಿಂದ, ಕೊನೆಯ ಪಕ್ಷ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡಬೇಕು. ದಿನಾಂಕ ೩೦-೬-೮೮ರೊಳಗೆ ಯಾರು ಸಾಲವನ್ನು ವಾಪಸ್ಸು ಕಟ್ಟುತ್ತಾರೆ ಅಂತಹವರಿಗೆ ಪೂರ್ಣ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲಾಗುವುದೆಂದು ಹೇಳಿದ್ದಾರೆ. ಅದು ಬೆಳೆ ಸಾಲವಿರಬಹುದು, ಮಧ್ಯಮಾವಧಿ ಸಾಲ ಇರಬಹುದು, ಯಾರು ಈ ವರ್ಷದೊಳಗೆ ೧೯೮೭-೮೮ರೊಳಗೆ ಸಹಕಾರ ಸಂಘಗಳಿಗೆ ಕಟ್ಟಿದರೆ ಅಂತಹವರ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಲಾಗುವುದೆಂದು ಸ್ಪಷ್ಟವಾಗಿ ಸರ್ಕಾರಿ ಆಜ್ಞೆ ಎಲ್ಲಾ ಕಡೆಗೆ ಹೋಗಿವೆಯೆ ? ಕಳೆದ ನಾಲ್ಕೈದು ವರ್ಷಗಳಿಂದ ಭೀಕರ ಬರಗಾಲ ರಾಜ್ಯದಲ್ಲಿರುವುದರಿಂದ ರಾಜ್ಯದ ಬೊಕ್ಕಸದ ಮೇಲೆ ಪರಿಣಾಮ ಬೀರಿದೆ. ಇದರಿಂದ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮವುಂಟಾಗಿದೆ. ಇದು ನೇರವಾಗಿ ರೈತರ ಮೇಲೆ ಆಗಿರುವುದರಿಂದ ಸರ್ಕಾರ ದಿವಾಳಿಯಾಗಿದೆ. ಈ ಸಂದರ್ಭದಲ್ಲಿ ರಾಜ್ಯದ ರೈತರು ದಿವಾಳಿಯಾಗಿದ್ದಾರೆ, ನಾನು ತಮ್ಮಲ್ಲಿ ಕೈಮುಗಿದು ವಿನಂತಿ ಮಾಡಕೊಳ್ಳುತ್ತೇನೆ, ಈ ರಾಜ್ಯದ ರೈತರ ಸಾಲದ ಮೇಲಿನ ಬಡ್ಡಿ, ಸುಸ್ತಿಬಡ್ಡಿಯನ್ನು ಮನ್ನಾ ಮಾಡದಿದ್ದರೆ ರೈತರು ಬದುಕುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಅವರ ಪೂರ್ಣ ಸಾಲವನ್ನು ಮನ್ನಾ ಮಾಡಬೇಕೆಂದು ಅನೇಕ ಸಾರಿ ವಿನಂತಿ ಮಾಡಿಕೊಂಡಿದ್ದೇನೆ. ಹಾಗೆ ಮಾಡಿದರೆ ನಿಮಗೆ ಗೌರವ ಬರುತ್ತದೆ. ಈಗಲೂ ವಿನಂತಿ ಮಾಡಿಕೊಳ್ಳುತ್ತೇನೆ, ಒತ್ತಾಯ ಮಾಡುತ್ತೇನೆ, ರಾಜ್ಯದ ರೈತರು ನಿಮಗೆ ಅಧಿಕಾರವನ್ನು ತಂದು ಕೊಟ್ಟಿದ್ದಾರೆ. ಅವರಿಗೆ ನೀವು ಅನುಕೂಲ ಮಾಡಿಕೊಡಿ. ೨೦-೨೫ ವರ್ಷಗಳಿಂದ ಬಗರ್ ಹುಕುಂ ಮಾಡಿರತಕ್ಕ ಜಮೀನು ಏನಿದೆ ಅದನ್ನು ಬಿಡಿಸಲಿಕ್ಕೆ ಕಾನೂನು ತರಲಾಗುತ್ತಿದೆಯೆಂದು ಗೊತ್ತಾಗಿದೆ. ಅದು ಗೋಮಾಳ ಇರಬಹುದು, ಅರಣ್ಯ ಇಲಾಖೆಯ ಜಮೀನು ಇರಬಹುದು, ಮತ್ತೊಂದು ಇರಬಹುದು, ಇವತ್ತು ಏನು ಕಾನೂನು ತರುತ್ತಿದ್ದಾರೆ ಅದು ಸರಿಯಲ್ಲ. ಎರಡು ಮೂರು ಎಕರೆ ಭೂಮಿಯನ್ನು ಬಗರ್ ಹುಕುಂ ಮಾಡಿ ಏನು ಬೆಳೆಯನ್ನು ರೈತ ಬೆಳೆದುಕೊಳ್ಳುತ್ತಾನೆ. ಅವನನ್ನು ಅಲ್ಲಿಂದ ಓಡಿಸಲಿಕ್ಕೆ ಫಾರೆಸ್ಟ್ ಆಕ್ಟ್‌ಗೆ ತಿದ್ದುಪಡಿ ಬರುತ್ತಿದೆ, ಹಿಂದೆ ಯಾರು ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಅವರನ್ನು ಹೊರಗಡೆ ಹಾಕುತ್ತೇವೆ, ಯಾವುದೇ ಕಾರಣಕ್ಕೆ ಅತಿಕ್ರಮಣಕಾರರನ್ನು ಅಲ್ಲಿ ಉಳಿಯುವುದಕ್ಕೆ ಬಿಡುವುದಿಲ್ಲವೆಂದು ಆಕ್ಟ್‌ಗೆ ತಿದ್ದುಪಡೆ ತರುವುದಕ್ಕೆ ಹೊರಟಿದ್ದಾರೆ. ಇದನ್ನು ಸರ್ಕಾರ ಮಾಡಿದರೆ ಇದು ಮಹಾದ್ರೋಹ, ನಾನು ಆಗ್ರಹ ಮಾಡುತ್ತೇನೆ, ಇವತ್ತು ಕಾಡು ಉಳಿದಿದೆ ಎಂದರೆ ಅದು ರೈತರಿಂದ ಉಳಿದಿದೆ ಕಾಡನ್ನು ಹಾಳು ಮಾಡುವವನು ರೈತನಲ್ಲ. ತನ್ನ ಹೊಟ್ಟೆಪಾಡಿಗೋಸ್ಕರ ಎರಡು-ಮೂರು ಎಕರೆ ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಮಾಡಿರಬಹುದು. ಅಂತಹವನ್ನು ಹೊರಗಡೆ ಹಾಕಲಿಕ್ಕೆ ನೀವು ಕಾನೂನಿಗೆ ತಿದ್ದುಪಡಿ ತರಲಿಕ್ಕೆ ಪ್ರಯತ್ನ ಮಾಡಿದರೆ, ಬಹುಶಃ ಈ ಸರ್ಕಾರಕ್ಕೆ ಅದು ಕೊನೆಯ ದಿವಸವಾಗುತ್ತದೆಂದು ಹೇಳಬಹುದು. ಹಿರಿಯ ಮಂತ್ರಿಗಳು ಮತ್ತೊಮ್ಮೆ ಮಂತ್ರಿಮಂಡಲದ ಸಭೆಯನ್ನು ಕರೆದು ಈ ಕಾನೂನಿನ ತಿದ್ದುಪಡಿಗೆ ಇನ್ನೂ ಅಂಗೀಕಾರ ದೊರೆತಿಲ್ಲವಾದ್ದರಿಂದ ದಯವಿಟ್ಟು ಅದನ್ನು ವಾಪಸ್ಸು ಪಡೆಯಬೇಕೆಂದು ನಿಮ್ಮಲ್ಲಿ ಆಗ್ರಹ ಮಾಡುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆಯ ಬಗ್ಗೆ ಅನೇಕ ಬಾರಿ ಚರ್ಚೆ ಮಾಡಲಾಗಿದೆ. ಮನೆಗೊಂದು ಉದ್ಯೋಗ ಕೊಡುತ್ತೇವೆಂದು ಹೇಳಿದ ಐದು ವರ್ಷಗಳಲ್ಲಿ, ಇನ್ನೆರಡು ಮೂರು ವರ್ಷಗಳು ಬಾಕಿಯಿವೆ. ಅದಕ್ಕೆ ಯಾವುದೇ ಪ್ಲಾನ್, ನಾನ್ ಪ್ಲಾನ್ ಇಲ್ಲ. ಉದ್ಯೋಗ ನಿರ್ಮಾಣ ಮಾಡುವುದಿಲ್ಲ. ಹೊಸ ನೇಮಕಾತಿಗಳನ್ನು ಮಾಡುವುದಿಲ್ಲವೆಂದು ತಾವೇನು ಹೇಳಿದ್ದೀರಿ ಅದರ ಪರಿಣಾಮ ತುಂಬಾ ಕಷ್ಟವಾಗುತ್ತದೆ. ಯಾರು ಹಳ್ಳಿಯಲ್ಲಿದ್ದು ವಿದ್ಯಾಭ್ಯಾಸ ಮಾಡುತ್ತಾರೆ, ಅವರಲ್ಲಿ ಯಾರು ಡಿಗ್ರಿಗಳನ್ನು ಪಡೆದಿರುತ್ತಾರೆ ಅವರಿಗೆ ಕಷ್ಟವಾಗುತ್ತದೆ ದಯಮಾಡಿ ಆ ಆಜ್ಞೆಯನ್ನು ವಾಪಸ್ಸು ಪಡೆಯಬೇಕು. ಕಳೆದ ೮-೯ ತಿಂಗಳುಗಳಿಂದ ರಾಜ್ಯದಲ್ಲಿನ ಡೆವಲಪ್‌ಮೆಂಟ್ ವರ್ಕ್ಸ್ ಸ್ಥಗಿತವಾಗಿದೆ. ಇದರಿಂದ ರಾಜ್ಯದಲ್ಲಿರುವ ಲಕ್ಷಾಂತರ ಕೃಷಿ ಕಾರ್ಮಿಕರಿಗೆ ಕೆಟ್ಟ ಪರಿಣಾಮವಾಗಿದೆ ಆದ್ದರಿಂದ ತಾವು ಈ ರೀತಿ ರಾಜ್ಯದಲ್ಲಿ ಎಲ್ಲಾ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸುವುದು ಸರಿಯಲ್ಲ ಕೃಷಿ ಕಾರ್ಮಿಕರಿಗೆ ಅನುಕೂಲವಾಗತಕ್ಕ ಕೆಲಸವನ್ನು ಮಾಡಬೇಕು.

ರಾಜ್ಯಪಾಲರ ಭಾಷಣದಲ್ಲಿ ಸ್ವಾಮಿ, ಇರತಕ್ಕಂಥ ಕೃಷಿ ಕಾರ್ಮಿಕರಿಗೆ, ಬಡವರಿಗೆ ತೊಂದರೆ ಆಗದಂತೆ ಬರಗಾಲ ಕಾಮಗಾರಿಗಳನ್ನು, ಫುಡ್ ಫಾರ್‌ವರ್ಕ್ ಎಲ್ಲಾ ಮಾಡುತ್ತೇವೆ ಎಂದು ಸತ್ಯಕ್ಕೆ ದೂರವಾದ ಮಾತನ್ನು ಹೇಳಿಸಿದ್ದೀರಿ. ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದುವರೆಗೂ ತಾವು ರಾಜ್ಯಪಾಲರ ಭಾಷಣದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಏನು ಹೇಳಿಸಿದ್ದೀರಿ. ನೀವು ಏನು ಕೆಲಸ ಕಾರ್ಯಗಳನ್ನು ಮಾಡಿದಿರಿ, ಎಷ್ಟು ಪ್ರಗತಿಯಾಗಿದೆ ಎಂದು ಅಂಕಿಅಂಶಗಳನ್ನು ಕೊಟ್ಟಂಥ ನಿಮ್ಮ ಸರ್ಕಾರ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಯಾವುದೇ ವಿಷಯದ ಬಗ್ಗೆ ಏನು ಖರ್ಚು ಮಾಡುತ್ತೇವೆ, ಏನು ಖರ್ಚು ಮಾಡಿದ್ದೀರಿ, ಏನು ಮಾಡಬೇಕೆಂದಿದ್ದೇವೆ ಎಂದು ನಿಮ್ಮ ಕಾರ್ಯಕ್ರಮಗಳ ಬಗ್ಗೆ ಒಂದು ಶಬ್ದವೂ ಇಲ್ಲದೇ ಇರುವುದರಿಂದ ನಿಮ್ಮ ಸರ್ಕಾರ ದಿವಾಳಿಯಾಗಿದೆ

ಎಂದು ಹೇಳುವುದಕ್ಕೆ ಇದೇ ಸಾಕ್ಷಿಯಾಗಿದೆ. ದಿವಾಳಿಪದವನ್ನು ನಾನು ಉಪಯೋಗ ಮಾಡಿರುವುದು ನಿಮ್ಮ ಮನಸ್ಸಿಗೆ ನೋವನ್ನು ಉಂಟು ಮಾಡಬೇಕೆಂದಲ್ಲ. ಅದರ ಬದಲು ಹಣಕಾಸಿನ ತೊಂದರೆ ಎಂದು ನೀವು ಪರಿವರ್ತನೆ ಮಾಡಿಕೊಳ್ಳಬಹುದು.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಸರ್ಕಾರದಲ್ಲಿ ಹೊಸ ಹುದ್ದೆಗಳನ್ನು ನಿರ್ಮಿಸುವುದಿಲ್ಲ ಎಂದು ಹೇಳುವಾಗ ಹೊಸದಾಗಿ ಹುದ್ದೆಗಳನ್ನು ನಿರ್ಮಿಸಬೇಕಾಗಿದ್ದರೆ ಫೈನಾನ್ಸ್‌ನವರ ಒಪ್ಪಿಗೆಯನ್ನು ತೆಗೆದುಕೊಂಡು ಮಾಡಬೇಕೆಂದಿದೆಯೇ ವಿನಹ ಹೊಸ ಹುದ್ದೆಗಳನ್ನು ಮಾಡಕೂಡದು ಎಂದೇನೂ ಇಲ್ಲ. ಉದಾಹರಣೆಗೆ ನಮ್ಮ ಇಲಾಖೆಯಲ್ಲಿ ೩೫೦ ಜನ ಡಾಕ್ಟರ್ ಹುದ್ದೆಗಳನ್ನು ಕೊಟ್ಟಿದ್ದೇವೆ. ಇನ್ನೂ ೯೦೦ ಜನರಿಗೆ ಎ ಎನ್‌ಎಂ. ಹುದ್ದೆಗಳನ್ನು ಕೊಡುತ್ತಿದ್ದೇವೆ, ಕೆಲವು ಹುದ್ದೆಗಳನ್ನು ಕೆಲಸ ಸಂದರ್ಭಗಳಲ್ಲಿ ಭರ್ತಿ ಮಾಡದೆ ನಿಲ್ಲಿಸಿದ್ದರೆ ಅದನ್ನು ಈಗ ಭರ್ತಿ ಮಾಡುತ್ತಿದ್ದೇವೆ. ಹೊಸದಾಗಿ ಹುದ್ದೆಗಳನ್ನು ಸೃಷ್ಟಿ ಮಾಡುವಾಗ ಪ್ಲಾನ್‌ನಲ್ಲಿ ಇಲ್ಲದೇ ಇದ್ದರೆ ಈಗ ಫೈನಾನ್ಸ್‌ನವರನ್ನು ಕೇಳಿ ಮಾಡಬೇಕೆಂದು ಇದೆಯೇ ವಿನಹ ಇನ್ನು ಮೂರು ವರ್ಷಗಳಲ್ಲಿ ಯಾವುದೇ ಹುದ್ದೆಗಳನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಲ್ಲ, ಬಹುಶಃ ೯೦೦ ಕೋಟಿ ರೂಪಾಯಿಗಳನ್ನು ಪ್ಲಾನ್‌ನಲ್ಲಿ ಅಳವಡಿಸಬೇಕಾಗಿರುವುದರಿಂದ ಅಂತಹ ಹುದ್ದೆಗಳನ್ನು ಮಾಡುವುದಿಲ್ಲ ವೆಂದು ಪ್ಲಾನಿಂಗ್ ಕಮಿಷನ್‌ಗೆ ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ. ಜನವರಿಮಧ್ಯ ಭಾಗದಲ್ಲಿ ನಾವು ಇದ್ದೇವೆ. ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಆಗುತ್ತಿಲ್ಲ. ೫೦ ರೂಪಾಯಿ ಬಿಲ್‌ಗಳು ಟ್ರಜರಿಯಲ್ಲಿ ಪಾಸ್ ಆಗುತ್ತಿಲ್ಲ.

(ಆಡಳಿತ ಪಕ್ಷದವರಿಂದ ಪ್ರತಿಭಟನೆ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಜನ ಹೇಳುತ್ತಿದ್ದಾರೆ, ನಾನು ಎಲ್ಲಾ ದಾಖಲೆಗಳನ್ನೂ ಕೊಡುತ್ತೇನೆ. ತಾವು ದಯವಿಟ್ಟು ಸ್ವಲ್ಪ ತಾಳಿ. ಇಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಇದ್ದಾರೆ. ನಾನು ಒಂದು ಮಾತನ್ನು ನೇರವಾಗಿ ಮಾನ್ಯ ರಾಚಯ್ಯನವರಿಗೆ ಮತ್ತು ದೇವೇಗೌಡರಿಗೆ ಕೇಳುತ್ತೇನೆ. ೪ ಪರ್ಸೆಂಟ್, ೫ ಪರ್ಸೆಂಟ್ ಬಡ್ಡಿಯಲ್ಲಿ ಹಣ ತಂದಿರುವಂಥ ಪಿ.ಡಬ್ಲ್ಯೂ.ಡಿ. ಸಣ್ಣಪುಟ್ಟ ಕಂಟ್ರಾಕ್ಟರ್‌ಗಳು ತಮ್ಮ ಬಿಲ್‌ಗಳು ಪಾಸ್ ಆಗದೆ ಕಷ್ಟಪಡುತ್ತಿದ್ದಾರೆ. ದೊಡ್ಡ ಕಂಟ್ರಾಕ್ಟರ್‌ಗಳು ನಾಲ್ಕೈದು ಜನ ಮಾತ್ರ ಅವರಿಗೆ ದುಡ್ಡು ತೆಗೆದುಕೊಳ್ಳುವುದು ಹೇಗೆಂದು ಗೊತ್ತಿದೆ. ಈ ರೀತಿ ನಿಮ್ಮ ಸರ್ಕಾರವನ್ನು ನಂಬಿಕೊಂಡು ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೆಲಸ ಮಾಡುವಂಥ ಕಂಟ್ರಾಕ್ಟುದಾರರಿಗೆ ಸರ್ಕಾರದವರು ೭೫ ಕೋಟಿಗಿಂತಲೂ ಹೆಚ್ಚಾಗಿ ದುಡ್ಡನ್ನು ಕೊಡಬೇಕಾಗಿದೆ. ಅವರ ಹೆಂಡತಿ ಮಕ್ಕಳ ಗತಿಯೇನು ? ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಸ್ಪಷ್ಟವಾದ ಅಂಕಿ ಅಂಶಗಳನ್ನು ಕೊಟ್ಟಿದ್ದರೆ ನಮಗೆ ಅರ್ಥವಾಗುತ್ತಿತ್ತು.

ಶ್ರೀ ಬಿ. ರಾಚಯ್ಯ.—ಅದನ್ನು ಬಡ್ಜೆಟ್‌ನಲ್ಲಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ. ಈಗ ಅವರು ಬೀದಿ ಪಾಲಾಗಿದ್ದಾರೆ, ಅವರ ಗತಿ ಏನು ? ನಿಮ್ಮ ಕಷ್ಟ ನನಗೆ ಅರ್ಥವಾಗುತ್ತದೆ. ಈ ರಾಜ್ಯದಲ್ಲಿ ಐದು ವರ್ಷಗಳ ಹಿಂದೆ ಒಂದು ತಿಂಗಳಿಗೆ ೩೩ ಕೋಟಿ ರೂಪಾಯಿಗಳಷ್ಟು ಸಂಬಳ ಸಾರಿಗೆಗಾಗಿ ಖರ್ಚು ಮಾಡುತ್ತಿದ್ದಂಥ ಈ ಸರ್ಕಾರ ಇವತ್ತು ಬೇರೆ ಬೇರೆ ಕಾರಣಗಳಿಂದ ಸುಮಾರು ೧೦೫ರಿಂದ ೧೧೦ ಕೋಟಿ ರೂಪಾಯಿಗಳನ್ನು ಒಂದು ತಿಂಗಳಿಗೆ ಖರ್ಚು ಮಾಡಬೇಕಾದಂಥ ದುಸ್ಥಿತಿಗೆ ಬಂದಿದೆ ನಿಮ್ಮ ಕಣ್ಣಮುಂದೆ ಸರಿಯಾದ ಪ್ಲಾನ್ ಇಲ್ಲ. ಅದರ ಪರಿಣಾಮವಾಗಿ ಬೊಕ್ಕಸದಿಂದ ಬಡ್ಜೆಟ್‌ನಲ್ಲಿ ಅಲಾಟ್ ಮಾಡಿದಂಥ ಹಣದಲ್ಲಿ ೩೫ ಪರ್ಸೆಂಟ್‌ಗಿಂತ ಹೆಚ್ಚಿಗೆ ಹಣವನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ಇಂತಹ ಪರಿಸ್ಥಿತಿಗೆ ನೀವು ಬಂದಿರುವಾಗ ಮನೆಗೊಂದು ಉದ್ಯೋಗ ಎಂದು ಘೋಷಣೆ ಮಾಡಿ ಜನರಿಂದ ಓಟನ್ನು ಏಕೆ ತೆಗೆದುಕೊಂಡಿರಿ? ಅಂದರೆ ಸರ್ಕಾರಿ ನೌಕರಿಯನ್ನೇ ಕೊಡಿ ಎಂದಲ್ಲ. ನನಗೆ ಅರ್ಥವಾಗುತ್ತದೆ. ನಾನೂ ಕೂಡ ರೈತಮನೆಯಿಂದ ಬಂದಿದ್ದೇನೆ, ಮನೆಗೊಂದು ಉದ್ಯೋಗ ಎಂದು ಹೇಳುವಾಗ ಸರ್ಕಾರಿ ನೌಕರಿ ಎಂದು ನಾನು ಹೇಳುವುದಿಲ್ಲ. ನಾನು ಹೇಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಇವೊತ್ತು ಮನೆಗೊಂದು ಉದ್ಯೋಗ ಎಂದು ತೆಗೆದುಕೊಂಡು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ನೀವು

ಮಾಡಿರತಕ್ಕಂಥ ವ್ಯವಸ್ಥೆ ಏನು ? ನಿಮ್ಮ ಆಡಳಿತದಲ್ಲಿ ಹಳ್ಳಿಯಲ್ಲಿರುವ ಜನ ಬೀದಿ ಪಾಲಾಗಿದ್ದಾರೆ. ಶಾಸಕರ ಭವನದಲ್ಲಿ ಹೋಗಿ ನೋಡಿ. ನಾಳೆ ನಿಮ್ಮ ಮನೆಗೂ ಬರಬಹುದು. ತನ್ನ ಕಾಲ ಮೇಲೆ ಆತ ನಿಂತಿದ್ದರೆ ಈ ದುಸ್ಥಿತಿ ಏತಕ್ಕೆ ಬರುತ್ತಿತ್ತು ? ನಿರುದ್ಯೋಗಿ ವಿದ್ಯಾವಂತರಿಗೆ ಹಣಕಾಸಿನ ನೆರವು ಕೊಡುತ್ತೇವೆ ಎಂದು ವ್ಯವಸ್ಥೆ ಮಾಡಿದಿರಿ. ಬ್ಯಾಂಕುಗಳಲ್ಲಿ ಅವರಿಗೆ ೨೫_೩೦ ಸಾವಿರ ರೂಪಾಯಿ ಸಿಗುತ್ತಿದೆಯೇ ? ಸೈಕಲ್ ಶಾಪ್ ಪ್ರಾರಂಭ ಮಾಡುತ್ತೇನೆ ಎಂದರೆ ನಾಲ್ಕು ಸೈಕಲ್‌ಗಳನ್ನು ಇಟ್ಟುಕೊ, ಆಮೇಲೆ ನೋಡೋಣ ಎಂದು ಹೇಳುತ್ತಾರೆ. ಸಣ್ಣ ಅಂಗಡಿ ಇಟ್ಟುಕೊಳ್ಳುತ್ತೇನೆ, ೨೫ ಸಾವಿರ ಕೊಡಿ ಎಂದರೆ ಐದು ಸಾವಿರ ತೆಗೆದುಕೋ ಮುಂದೆ ನೋಡೋಣ ಎಂದು ತೆಗೆದುಕೋ ಮುಂದೆ ಹೇಳುತ್ತಾರೆ. ನಿಮ್ಮ ಯೋಜನೆಗಳಿಂದ ಆತನಿಗೆ ನೆರವು ಸಿಕ್ಕಿದ್ದರೆ, ಆತ ಹಳ್ಳಿ ಬಿಟ್ಟು ಪಟ್ಟಣಕ್ಕೆ ಏತಕ್ಕೆ ಬರುತ್ತಿದ್ದ ? ಇಂತಹ ಒಂದು ಪರಿಸ್ಥಿತಿಗೆ ಈ ರಾಜ್ಯದ ಜನರನ್ನು ತಂದಿದ್ದೀರಿ. ಒಂದು ಕಡೆ ದುಡ್ಡು ಇಲ್ಲವೆಂದು ಹೇಳುತ್ತೀರಿ.

೧೨-೩೦ ಪಿ. ಎಂ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಯಡಿಯೂರಪ್ಪನವರು ಸೆಲ್ಫ್ ಎಂಪ್ಲಾಯ್‌ಮೆಂಟ್ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಈ ಬಗ್ಗೆ ಅಂಕಿಅಂಶಗಳನ್ನು ಈ ಸದನದಲ್ಲಿ ಕೊಟ್ಟಿದ್ದೇನೆ. ಮೂರು ವರ್ಷಗಳಲ್ಲಿ ಹೆಚ್ಚು ಕಡಿಮೆ ೯೦ ಕೋಟಿ ರೂಪಾಯಿಗಳ ಸಾಲವನ್ನು ಸುಮಾರು ೩೬ ಸಾವಿರ ನಿರುದ್ಯೋಗಿಗಳಿಗೆ ಕೊಟ್ಟಿದ್ದೇವೆ, ಯಾವ ಬ್ಯಾಂಕ್‌ನವರೂ ತಾತ್ಸಾರ ಮಾಡುವುದಾಗಲೀ, ರಿಜೆಕ್ಟ್ ಮಾಡುವುದಾಗಲೀ, ನಮ್ಮ ಗಮನಕ್ಕೆ ಬಂದಿಲ್ಲ, ಮಂಜೂರಾತಿ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಈ ಸದನಕ್ಕೆ ಅಂಕಿ ಅಂಶ ಕೊಡುತ್ತೀರಿ. ಆದರೆ ಈ ಯೋಜನೆಯಿಂದ ಎಷ್ಟು ಜನಕ್ಕೆ ಉದ್ಯೋಗಾವಕಾಶ ಸಿಗಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ. ಈ ಯೋಜನೆಯ ಹಣದಲ್ಲಿ ಅರ್ಧಭಾಗ ಸಿಕ್ಕಿದೆಯೆಂಬ ಅಂಕಿಅಂಶಗಳ ಪಟ್ಟಿಯನ್ನು ಕೊಟ್ಟರೆ, ನಾನು ಮಾಡಿರತಕ್ಕ ಚಾರ್ಜಸ್ ವಾಪಸ್ ತೆಗೆದುಕೊಳ್ಳುತ್ತೇನೆ. ವಾಸ್ತವಿಕವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ನಿರುದ್ಯೋಗಿ ತರುಣರು ಹೆಚ್ಚಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ನಿಮ್ಮ ಗಮನವನ್ನು ಹರಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ನಿಮಗೆ ಹಣಕಾಸಿನ ತೊಂದರೆ ಇದೆ. ಭೀಕರ ಬರಗಾಲ ಬಂತು ಎಂಬ ಮಾತನ್ನು ಹೇಳುತ್ತೀರಿ. ಹೌದು. ನೀವು ಬಂದ ೫ ವರ್ಷಗಳಿಂದ ಬರಗಾಲ ಬಂದಿದೆ. ಈ ಸಂದರ್ಭದಲ್ಲಿ ಬರಗಾಲಕ್ಕಾಗಿ ನೀವು ಮಾಡಿದಂಥ ಖರ್ಚು ಎಷ್ಟು ಹೋದ ಸಾರಿ ಅಸೆಂಬ್ಲಿ ನಡೆಯುವಾಥ ಸಂದರ್ಭದಲ್ಲಿ ಮಾನ್ಯ ಬೊಮ್ಮಾಯಿಯವರು ವರದಿಯನ್ನು ಕೊಟ್ಟರು. ನೀವು ಈ ಬರಗಾಲಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಉದಾಹರಣೆಗೆ ನಮ್ಮ ಶಿವಮೊಗ್ಗ ಜಿಲ್ಲೆಗೇ ಬನ್ನಿ. ಮಂತ್ರಿಗಳೂ, ಶಾಸಕರೂ ಹೋಗೋಣ. ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದಾದರೊಂದು ತಾಲ್ಲೂಕಿನಲ್ಲಿ, ನಿನ್ನೆ, ಮೊನ್ನೆ, ಇವತ್ತು ಅಥವಾ ಸದನ ಸೇರಿದ ದಿನಗಳಲ್ಲಿ, ಕಳೆದ ಒಂದು ವಾರದಿಂದ ಫುಡ್ ಫಾರ್ ವರ್ಕ್ ಆಗಲೀ ಅಥವಾ ಬರಗಾಲ ಕಾಮಗಾರಿ ಕೆಲಸಗಳಾಗಲೀ ಒಂದು ಕಡೆ ನಡೆಯುತ್ತಿದೆಯೇ ನೀವು ಹೇಳಿ. ನೀವು ಹೇಳಿದ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಈಗ ಎಲ್ಲಿಯೂ ಕೆಲಸ ನಡೆಯುತ್ತಿಲ್ಲ. ಈ ಹಿಂದೆ ಬರಗಾಲ ಕಾಮಗಾರಿ ಕೆಲಸಗಳನ್ನು ಮಾಡಿದ ಬಡವರಿಗೆ ದುಡ್ಡು ಸಿಕ್ಕಿದೆಯೇ ? ಅವರಿಗೆ ಪೇಮೆಂಟ್ ಆಗಿದೆಯೇ ? ಶಿಕಾರಿಪುರ ಪಂಚಾಯಿತಿ ಮುಂದೆ, ಸಾಗರ ಪಂಚಾಯಿತಿ ಮುಂದೆ ಸತ್ಯಾಗ್ರಹ ಮಾಡಿದ್ದೇವೆ. ಸಾಗರದ ಶಾಸಕರು, ತಪ್ಪಾಗಿದೆ ದುಡ್ಡು ಕೊಡುವ ವ್ಯವಸ್ಥೆ ಮಾಡಿಸುತ್ತೇವೆಂದು ಹೇಳಿದರು, ಅಕ್ಕಿ ಕೊಡುತ್ತೇವೆಂದು ಹೇಳಿದ್ದರು. ಆದರೆ ಅಲ್ಲಿ ಅಕ್ಕಿ ಬಂದಿಲ್ಲ. ಅಕ್ಕಿಯನ್ನೂ ತರಿಸಿಕೊಡುವ ವ್ಯವಸ್ಥೆ ಮಾಡುತ್ತೇವೆಂದು ಅಲ್ಲಿನ ಶಾಸಕರು ಹೇಳಬೇಕಾಯಿತು ನಾನೂ ಹೇಳಬೇಕಾಯಿತು. ಏಕೆಂದರೆ ನಾವೆಲ್ಲಾ ಒಂದೇ ಹೀಗಿದೆ ಅಲ್ಲಿನ ಸ್ಥಿತಿ. ಇನ್ನು ಎ. ಪಿ. ಎಂ. ಸಿ. ನವರು, ಕಾರ್ಪೊರೇಷನ್‌ನವರು, ಸಿ. ಐ. ಟಿ. ಬಿ. ನವರು ಬಿ. ಡಿ. ಎ. ನವರು ಸ್ವಲ್ಪ ದುಡ್ಡು ಇಟ್ಟುಕೊಂಡಿದ್ದರು. ನಾನು ಈ ಬಗ್ಗೆ ಅಂಕಿ ಅಂಶ ಕೊಡುತ್ತೇನೆ. ನಾನು ಒಬ್ಬ ಶಾಸಕನಾಗಿ ಈ ವಿಚಾರ ಜನಗಳಿಗೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ. ನೀವು ಎಷ್ಟು ಕೋಟಿ ರೂಪಾಯಿಗಳನ್ನು ಈ ಸಂಸ್ಥೆಗಳಿಂದ ತೆಗೆದುಕೊಂಡು ಬಂದಿದ್ದೀರಿ ? ಮಂಗಳೂರಿಗೆ ನೀವು ಟೆಲೆಕ್ಸ್ ಮೆಸೇಜ್ ಕಳುಹಿಸಿ ಎ. ಪಿ. ಎಂ. ಸಿ. ನಲ್ಲಿದ್ದ ಹಣವನ್ನು ಟ್ರಜರಿಗೆ ಇಡಿ ಎಂದು ಹೇಳಿದಿರಿ, ಅವರ ಕಣ್ಮುಂದೆ

ಇಟ್ಟುಕೊಂಡಿದ್ದರೆ ಹೆಚ್ಚು ಬಡ್ಡಿ ಬರುತ್ತಿತ್ತು. ಈ ವ್ಯತ್ಯಾಸದ ಬಡ್ಡಿಯನ್ನು ನಾವು ಕೊಡುತ್ತೇವೆಂದು ಹೇಳಿದಿರಿ. ನಾನು ಈ ಸದನದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಎ. ಪಿ. ಎಂ. ಸಿ., ಕಾರ್ಪೊರೇಷನ್, ಸಿ ಐ. ಟಿ. ಬಿ ಮತ್ತು ಬಿ, ಡಿ. ಎ, ನಿಂದ ಎಷ್ಟು ಕೋಟಿ ರೂಪಾಯಿಗಳನ್ನು ನಿಮ್ಮ ಸರ್ಕಾರ ತಂದಿದೆ. ನನಗನ್ನಿಸುತ್ತದೆ ಒಂದು ನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ತಂದಿರಬಹುದೆಂದು. ಅಂದರೆ ನೀವು ಎಲ್ಲಿಂದ ಹಣ ತರುತ್ತೀರಿ ? ಆ ಹಣದಿಂದ ಬಡವರ ಕೆಲಸಗಳನ್ನು ಮಾಡುವುದಕ್ಕೆ ಸಿದ್ಧರಿಲ್ಲ, ಈ ಹಣ ಏನಾಗುತ್ತದೆ ? ಮಾನ್ಯ ಜಾಲಪ್ಪನವರು ಇದ್ದಾರೆ, ಅವರು ನೇರವಾಗಿ ಉತ್ತರ ಕೊಡುತ್ತಾರೆ. ಅವರ ಬಗ್ಗೆ ನನಗೆ ವಿಶ್ವಾಸ ಇದೆ. ನಂಬಿಕೆ ಇದೆ ಸ್ವಾಮಿ, ಲಿಡ್ಕರ್ ಸಂಸ್ಥೆ ಇದೆ. ಇಲ್ಲಿ ಹಿಂದುಳಿದ ಜನರಿಗೆ, ಚರ್ಮ ಉದ್ಯಮದವರಿಗೆ ಅನುಕೂಲವಾಗಲಿ ಎಂದು ಈ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದೀರಿ. ಇದರಲ್ಲಿ ಜನವರಿಯಲ್ಲಿ ಸುಮಾರು ೫೦ ಸಾವಿರ ಷೂ ಗಳಿಗೆ ಆರ್ಡರ್ ಕೊಟ್ಟಿದ್ದೀರಿ, ಇದು ತಮಗೂ ಜ್ಞಾಪಕ ಇರಬಹುದು. ಇವು ೯೦ ರೂಪಾಯಿಗಳಿಗೆ ಒಂದು ಜೊತೆ. ಅಂದರೆ ೫೦ ಸಾವಿರ ಷೂ ಗಳಿಗೆ ೪೫ ಲಕ್ಷ ರೂಪಾಯಿಗಳಾಯಿತು. ಈ ಹಣದಲ್ಲಿ ಇವತ್ತಿನವರೆಗೆ ಎಷ್ಟು ಹಣವನ್ನು ವಾಪಸ್ ಕೊಟ್ಟಿದ್ದೀರಿ. ಬರೀ ೫ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ, ಇನ್ನು ೪೦ ಲಕ್ಷ ರೂಪಾಯಿಗಳನ್ನು ಈವರೆಗೂ ವಾಪಸ್ ಕೊಟ್ಟಿಲ್ಲ. ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥ ಸಂಸ್ಥೆ ಇದು. ೪೦ ಲಕ್ಷ ರೂಪಾಯಿಗಳನ್ನು ವಾಪಸ್ ಕೊಡದೇ ಇದ್ದರೆ. ಅದರ ಗತಿ ಏನು ? ನಿಮ್ಮ ಬಜೆಟ್‌ನಲ್ಲಿ ಅಲೋಕೇಟ್ ಮಾಡಿದ ಹಣ ನಿಮ್ಮಲ್ಲಿ ಇದ್ದಾಗ. ನಿಮ್ಮ ಇಲಾಖೆಗೆ ತರಿಸಿಕೊಂಡಂಥ ಷೂಗಳ ಹಣ ಕೊಡದೇ ಹೋದರೆ ಸರ್ಕಾರಿ ಉದ್ದಿಮೆಗಳು ಯಾವರೀತಿ ನಡೆಯುತ್ತವೆ ? ಅಲ್ಲಿ ಚರ್ಮ ಉದ್ಯೋಗವನ್ನು ನಂಬಿಕೊಂಡಿರತಕ್ಕ, ಈ ರಾಜ್ಯದ ಹರಿಜನ ಗಿರಿಜನರ ಸ್ಥಿತಿ ಏನು ? ಒಂದು ಕಡೆ ನೀವು ಹರಿಜನ ಗಿರಿಜನರ ಉದ್ಧಾರ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಅಲ್ಲಿ ಕೆಲಸ ಮಾಡುವಂಥ ಉದ್ಯಮಿಗಳು ಕಳೆದ ೧೫-೨೦ ವರ್ಷಗಳಿಂದ ದಿನಗೂಲಿ ಮೇಲೆ ದುಡಿಯುತ್ತಿದ್ದಾರೆ. ಅವರನ್ನು ಇನ್ನೂ ಖಾಯಂ ಮಾಡಿಲ್ಲ. ಹರಿಜನ ಗಿರಿಜನರ ಬಗ್ಗೆ ಚಿಂತೆ ಇರತಕ್ಕ ಜನ ನೀವು, ಇನ್ನು ೧೯೮೭-೮೮ಕ್ಕೆ ಬಜೆಟ್‌ನಲ್ಲಿ ಕೆ. ಇ. ಬಿ.ಗೆ ಎಷ್ಟು ಕೊಟ್ಟಿದ್ದೀರಿ ? ೮೭ ಕೋಟಿ ೬೭ ಲಕ್ಷ ಎಂದು ಏನೋ ಹೇಳಿದ್ದೀರಿ, ಈ ಅಂಕಿ ಅಂಶ ಸರಿಯಿಲ್ಲ. ಇದು ಸತ್ಯಕ್ಕೆ ದೂರವಾದುದು. ಸುಮಾರು ೧೫೦-೧೬೦ ಕೋಟಿ ಇರಬೇಕು. ಈ ಹಣವನ್ನು ನೀವು ಕೆ. ಇ. ಬಿ.ಯವರಿಗೆ ಕೊಡದೇ ಹೋದರೆ ಯಾವರೀತಿ ಅಲ್ಲಿ ಉತ್ಪಾದನೆಯಾಗಬೇಕು, ಯಾವರೀತಿ ವಿದ್ಯುತ್ ಉತ್ಪತ್ತಿ ಆಗಬೇಕು. ಸಬ್ಸಿಡಿ ರೂಪದಲ್ಲಿ ೧೯೮೭-೮೮ರಲ್ಲಿ ಕೊಡಬೇಕಾದ ೧೨೭ ಲಕ್ಷ ರೂಪಾಯಿಗಳನ್ನು ಇದುವರೆಗೆ ಒಂದು ಪೈಸೆ ಕೊಟ್ಟಿಲ್ಲ. ನಮ್ಮ ರಾಜ್ಯದಲ್ಲಿ ರೈತನ ಸ್ಥಿತಿ, ಮತ್ತು ಹರಿಜನರ ಸ್ಥಿತಿ ಏನಾಗಿದೆ ಎಂದು ತಮಗೂ ಗೊತ್ತಿದೆ. ಐ. ಆರ್. ಡಿ. ಪಿ. ಯ ೧೦೦ ವರ್ಕ್ಸ್ ಪ್ರೋಗ್ರಾಂ ಇವತ್ತು ನಡೆಯುತ್ತಿಲ್ಲ. ಎಸ್‌ಸಿ. ಎಸ್‌ಟಿ. ಕಮಿಟಿ ಚೇರ್ಮನ್ನರು ಇಲ್ಲಿಯೇ ಇದ್ದಾರೆ. ಶಾಸಕರು ಸಮಿತಿ ಅಧ್ಯಕ್ಷರು, ಅವರ ಕಳವಳವನ್ನು ನೋಡಿದರೆ ಆಶ್ಚರ್ಯವಾಗುತ್ತದೆ, ಹರಿಜನ ಗಿರಿಜನರ ಏಳಿಗೆಯಾಗಬೇಕೆಂದು ಚಿಂತನೆ ಮಾಡತಕ್ಕಂಥ ಮಾನ್ಯ ಡಾ| ತಿಪ್ಪೇಸ್ವಾಮಿಯವರು ಇರತಕ್ಕಂಥ ಸಂದರ್ಭದಲ್ಲಿ,

ಶಿವಮೊಗ್ಗ ಜಿಲ್ಲೆಗೆ. ಎಸ್.ಸಿ. ಎಸ್.ಟಿ, ಕಾರ್ಪೊರೇಷನ್‌ನಿಂದ ಇದುವರೆಗೆ ಒಂದು ಪೈಸೆ ದುಡ್ಡು ಬಂದಿಲ್ಲ. ನಾನು ನಿನ್ನೆ ಜಿಲ್ಲಾಪರಿಷತ್‌ನಿಂದ ವಿವರಗಳನ್ನು ತೆಗೆದುಕೊಂಡು, ಕ್ಲಿಯರ್ ಮಾಡಿಕೊಂಡು ಬಂದು, ಅಂಕಿ ಅಂಶಗಳನ್ನು ತೆಗೆದುಕೊಂಡು ಬಂದು ಹೇಳುತ್ತಿದ್ದೇನೆ. ಹರಿಜನ ಗಿರಿಜನ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ತಿಪ್ಪೇಸ್ವಾಮಿಯವರು ಶಿವಮೊಗ್ಗ ಜಿಲ್ಲೆಗೆ ಹರಿಜನ ಗಿರಿಜನರ ಅಭಿವೃದ್ಧಿ ಹೇಗೆ ಆಗಿದೆ ಎಂಬುದನ್ನು ನೋಡಲು ಬಂದರು. ಶಿಕಾರಿಪುರ ತಾಲ್ಲೂಕಿನಲ್ಲಿ ನಾನು ಶಾಸಕನಾಗಿದ್ದಾಗ ಹರಿಜನ ವಾಟರಕ್ಕೆ ಮಂಜೂರು ಮಾಡಿದಂಥ ಕೆಲಸಕ್ಕೆ ದುಡ್ಡು ಇದುವರೆಗೂ ಬಂದಿಲ್ಲ. ಕೆಲಸ ಪೂರ್ಣವಾಗಲಿಲ್ಲ. ಹರಿಜನ ವಾಡಾ ರಸ್ತೆಗೆ ಇನ್ನೂ ಟಾರ್ ಬೀಳಲಿಲ್ಲ. ಜೆಲ್ಲಿ ಪಾಕಿದ್ದುದು ಸರಿಯಾಗಿಲ್ಲ ಎಂದು ಚೀಫ್ ಇಂಜಿನಿಯರ್‌ರವರು ಇನ್‌ಸ್ಪೆಕ್ಷನ್‌ಗೆ ಬಂದಿದ್ದರು. ಇನ್‌ಸ್ಪೆಕ್ಷನ್ ಮಾಡಿದ ಮೇಲೆ ತಪ್ಪಾಯಿತು. ಕೆಲಸ ಇದುವರೆಗೂ ಆಗಿಲ್ಲ ಎಂದು ಹೇಳಿದರು, ಇದು ನೀವು ಹರಿಜನರನ್ನು ಉದ್ಧಾರ ಮಾಡುತ್ತಿರುವ ರೀತಿ. ನಾನು ಇಲ್ಲಿ ಅಂಕಿ ಅಂಶಗಳನ್ನು ಕೊಡುವ ಉದ್ದೇಶ ಏನು ಎಂದು ಹೇಳಿದರೆ, ನಾವು ಯಾವ ದುಡ್ಡನ್ನು ನಿಮಗೆ ಕೊಟ್ಟಿದ್ದೇವೆ. ಯಾವ ಕಾರಣದಿಂದ ಕೊಟ್ಟಿದ್ದೇವೆ ಅದನ್ನು ನೀವು ಸರಿಯಾಗಿ ಖರ್ಚು ಮಾಡಲು ಸಿದ್ಧರಿಲ್ಲ. ಇದರ ಉದ್ದೇಶ ಏನು? ಶಿವಮೊಗ್ಗ ಜಿಲ್ಲೆಗೆ ಸಬ್ಸಿಡಿ ರೂಪದಲ್ಲಿ ಏನು ಮಾಡಿದ್ದೀರಿ? ನನಗೆ ಅಂಕಿ ಅಂಶದ ಅನುಭವ ಗೊತ್ತಿಲ್ಲ. ನಾನು ಹಳ್ಳಿ

ಯಲ್ಲಿದ್ದಂಥ ರೈತನ ವರ್ಗ. ಸಬ್ಸಿಡಿ ಬಂದಿದೆಯೋ ಇಲ್ಲವೋ ಹೇಳಿ ? ಬೋರ್‌ವೆಲ್ ಹಾಗೂ ಇನ್ನೂ ಯಾವುದೇ ಅನುಕೂಲ ಏನು ಕೇಳಿದರೂ ಇಲ್ಲ, ಶಿವಮೊಗ್ಗ ಜಿಲ್ಲೆಗೆ ಏನೂ ಇಲ್ಲ. ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳಿಗೆ ಸಬ್ಸಿಡಿ ರೂಪದಲ್ಲಿ ಧನಸಹಾಯ ಮಾಡುತ್ತೀರಿ. ನಿಮ್ಮ ಉದ್ದೇಶ ಏನು ಎಂದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳನ್ನು ಉದ್ಧಾರ ಮಾಡುವುದು, ಜನರಿಗೆ ಉದ್ಯೋಗ ಕೊಡುವುದು, ಆದರೆ ಏನು ಮಾಡಿದ್ದೀರಿ ? ಶಿವಮೊಗ್ಗ ಜಿಲ್ಲೆ ಒಂದಕ್ಕೇ ೬೦ ಲಕ್ಷ ರೂಪಾಯಿಗಳ ಸಬ್ಸಿಡಿ ಬರಬೇಕಾದುದರಲ್ಲಿ ಒಂದು ಪೈಸೆಯೂ ಸಹ ಬಂದಿಲ್ಲ, ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳಿಗೆ ಏನು ಸವಲತ್ತುಗಳನ್ನು ಕೊಡಬೇಕೋ ಅದನ್ನು ಕೊಟ್ಟಿಲ್ಲ, ಇನ್ನು ಗೋಬರ್ ಗ್ಯಾಸ್ ಪ್ಲಾಂಟ್‌ಗೆ ೩೫ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದಿರಿ. ರೈತ ಹೇಗೋ ಸೀಮೆಎಣ್ಣೆ ಬುಡ್ಡಿ ಇಟ್ಟುಕೊಂಡು ಕಾಲ ಕಳೆಯುತ್ತಿದ್ದ, ನೀವು ಏತಕ್ಕೆ ಅವರನ್ನು ಅಡ್ಡದಾರಿ ಹಿಡಿಸುತ್ತೀರಿ? ಗೋಬರ್ ಗ್ಯಾಸ್ ಗೋಬರ್ ಗ್ಯಾಸ್ ಎಂದು ಬಾಯಿ ಬಡಿದುಕೊಂಡು ಎಲ್ಲರನ್ನೂ ಅಡ್ಡದಾರಿ ಹಿಡಿಸಿದಿರಿ, ಅವರು ನಿಮ್ಮ ಮುಖಾಂತರ ಬ್ಯಾಂಕ್ ಸಾಲ ತೆಗೆದುಕೊಂಡರು, ನೀವು ಸಬ್ಸಿಡಿ ಕೊಡಲಿಲ್ಲ. ಈಗ ಬ್ಯಾಂಕ್‌ನವರು ಅವರಿಗೆ ಬಡ್ಡಿಗೆ ಬಡ್ಡಿ ಸೇರಿಸಿ ಹಾಕುತ್ತಿದ್ದಾರೆ. ಅದು ಒಂದಕ್ಕೆ ಹತ್ತರಷ್ಟು ಆಗಿದೆ. ನೀವು ಸಬ್ಸಿಡಿ ರಿಲೀಸ್ ಮಾಡಲಿಲ್ಲ. ಎಷ್ಟು ಸಬ್ಸಿಡಿ ಕೊಡಬೇಕು ಎಂದು ಲೆಕ್ಕ ಕೊಡಿ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾಗಿತ್ತು. ಚುನಾವಣೆ ಟೈಮ್‌ನಲ್ಲಿ ಓಟು ತೆಗೆದುಕೊಳ್ಳುವುದಕ್ಕೆ ಏನೇನೋ ಯೋಜನೆಗಳನ್ನು ಮಾಡಿ ಈಗ ಈ ರೀತಿ ಮಾಡುತ್ತಿದ್ದೀರಿ. ಅಧಿಕಾರದಲ್ಲಿ ಯಾರೇ ಇರಲಿ, ನಾನೇ ಇರಲಿ, ಇವರೇ ಇರಲಿ, ಯಾರಿದ್ದರೂ ಹಣಕಾಸಿನ ಪರಿಸ್ಥಿತಿಗೆ ತಕ್ಕಹಾಗೆ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಈ ಸ್ಥಿತಿ ಬರುತ್ತದೆ, ಹರಿಜನರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿದಿರಿ, ಆದರೆ ಅವರಿಗೆ ಬೇಕಾದುದನ್ನು ಕೊಡಲಿಲ್ಲ. ಅದಕ್ಕೆ ನಾನು ಮುಖ್ಯಮಂತ್ರಿಗಳನ್ನು ಕೇಳಿದ್ದುದು, ಇಂತಹ ಒಂದು ಪರಿಸ್ಥಿತಿ ಇದ್ದಂಥ ಸಂದರ್ಭದಲ್ಲಿ ರಾಜ್ಯ ಇಂತಹ ಬರಗಾಲಕ್ಕೆ ತುತ್ತಾದ ಸಂದರ್ಭದಲ್ಲಿ, ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದಿರುವ ಸಂದರ್ಭದಲ್ಲಿ, ಕೇಂದ್ರ ಸರಕಾರದಿಂದ ಏನೂ ಸಹಕಾರ ಸಿಗದಿರುವಂತಹ ಸಂದರ್ಭದಲ್ಲಿ ನಮ್ಮಲ್ಲಿರುವಂತಹ ಹಣದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚು ಮಾಡಬೇಕೆಂಬುದನ್ನು ವಿರೋಧಪಕ್ಷದ ಸದಸ್ಯರ ಸಭೆಯನ್ನು ಕರೆದು ಯೋಚನೆಯನ್ನು ಮಾಡಿ ಎಂಬ ಮಾತನ್ನು ಅವರಿಗೆ ಹೇಳಿದ್ದುದು.

ಶ್ರೀ ಬಿ ಎ ಜೀವಿಜಯ (ಮಾನ್ಯ ಸಣ್ಣ ಕೈಗಾರಿಕಾ ಮಂತ್ರಿಗಳು).—ಅಧ್ಯಕ್ಷರೇ, ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವ ವಿಷಯದಲ್ಲಿ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ೧೯೮೩ಕ್ಕೆ ಪೂರ್ವದಲ್ಲಿ ಹಿಂದಿನ ಸರ್ಕಾರ ಕೋಟ್ಯಾಂತರ ರೂಪಾಯಿಗಳಷ್ಟು ಸಬ್ಸಿಡಿ ಕೊಡುವುದಕ್ಕೆ ಬಾಕಿ ಉಳಿಸಿತ್ತು. ನಮ್ಮ ಸರ್ಕಾರ ಬಂದಮೇಲೆ ಆ ಸಬ್ಸಿಡಿಯನ್ನು ಕೊಟ್ಟಿದ್ದೇವೆ, ಈಗ ಕಳೆದ ವರ್ಷ ಸಬ್ಸಿಡಿಯನ್ನು ಸಕಾಲದಲ್ಲಿ ಕೊಟ್ಟಿದ್ದೇವೆ, ಈ ವರ್ಷ ಸಕಾಲದಲ್ಲಿ ಕೊಡುವುದಕ್ಕೆ ಆಗಲಿಲ್ಲ, ಆದರೂ ಸಹ ಎರಡು ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಈ ವರ್ಷ ಬಿಡುಗಡೆ ಮಾಡಿದ್ದೇವೆ.

ಶ್ರೀ ಬಿ, ಎಸ್. ಯಡಿಯೂರಪ್ಪ.—ನೀವು ಅಧಿಕಾರಕ್ಕೆ ಬಂದು ಒಂದೆರಡು ವರ್ಷ ಆಗಿದ್ದರೆ ಈ ಮಾತನ್ನು ನಾನು ಒಪ್ಪುತ್ತಿದ್ದೆ. ನೀವು ಅಧಿಕಾರಕ್ಕೆ ಬಂದು ಐದು ವರ್ಷ ಆಗಿಹೋಯಿತು. ನೀವು ಅಧಿಕಾರಕ್ಕೆ ಬಂದ ಮೇಲೆ ಕಳೆದ ಐದು ವರ್ಷಗಳಲ್ಲಿ ಎಷ್ಟು ಜನ ವಿದ್ಯಾವಂತ ತರುಣರಿಗೆ ಸಬ್ಸಿಡಿಯನ್ನು ಸಕಾಲದಲ್ಲಿ ನೀಡಿ ಅವನು ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡಿದ್ದೀರಿ. ವಿದ್ಯಾವಂತ ತರುಣರು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಬೇಕೆಂದು, ಕೆ.ಎಸ್ ಎಫ್ ಸಿ.ಯಿಂದಲೋ, ಮತ್ತೊಂದು ಕಡೆಯಿಂದಲೋ ಸಾಲ ಸೋಲ ಮಾಡಿದಾಗ, ಆ ವಿದ್ಯಾವಂತ ತರುಣರು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಎಂಟು ದಿನಗಳ ಮುಂಚೆ ಅವರಿಗೆ ಸಬ್ಸಿಡಿಯನ್ನು ಕೊಡಬೇಕು. ಆಗ ಅವನು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುತ್ತಾನೆ. ಆದರೆ ನೀವು ಸಬ್ಸಿಡಿಯನ್ನು ಸಕಾಲದಲ್ಲಿ ಕೊಟ್ಟಿಲ್ಲ, ಒಂದು ಕಡೆ ವಿದ್ಯುಚ್ಛಕ್ತಿ ಕೊರತೆ, ಇನ್ನೊಂದು ಕಡೆ ಆತನು ಏನು ಉತ್ಪನ್ನಗಳನ್ನು, ಸಾಮಗ್ರಿಗಳನ್ನು ತಯಾರಿಸುತ್ತಾನೆ, ಅದನ್ನು ಕೊಂಡುಕೊಳ್ಳುವಂತಹ ಶಕ್ತಿ ಸರಕಾರಕ್ಕೆ ಇಲ್ಲ. ಇಂತಹ ಒಂದು ವಿಚಿತ್ರ ಸನ್ನಿವೇಶ ಇದೆ. ಇಂತಹ ವಿಚಿತ್ರ ಸನ್ನಿವೇಶದಲ್ಲಿ ಒಂದು ಕಡೆ ವಿದ್ಯುತ್ ಇಲ್ಲ. ಇನ್ನೊಂದು ಕಡೆ ಸಬ್ಸಿಡಿಯ ದುಡ್ಡನ್ನು ಕೊಟ್ಟಿಲ್ಲ. ಅಲ್ಲಿ ಕೆ.ಎಸ್.ಎಫ್ ಸಿ. ಯವರು ತಾವು ಕೊಟ್ಟಂತಹ ಹಣಕ್ಕೆ ಬಡ್ಡಿಯನ್ನು ಸೇರಿಸುತ್ತಿದ್ದಾರೆ, ಅದು ಒಂದಕೆ

ನಾಲ್ಕರಷ್ಟಾಗುತ್ತಿದೆ, ಇದರ ಬಗ್ಗೆ ಒಂದು ವರದಿಯನ್ನು ಕೊಡುತ್ತೀರಾ ? ಸರಕಾರದಿಂದ ಸಬ್ಸಿಡಿ ಹಾಗೂ ಸಾಲವನ್ನು ಪಡೆದು ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರಲ್ಲ, ಅವರಲ್ಲಿ ಎಷ್ಟು ಜನ, ಅವರ ಕಾಲ ಮೇಲೆ ಅವರು ನಿಂತು ಕೊಂಡು, ಬಡ್ಡಿಯನ್ನು ಸರಿಯಾಗಿ ಕಟ್ಟಿಕೊಂಡು ಬರುತ್ತಿದ್ದಾರೆ ? ಅಸಲಲ್ಲ ಕೇವಲ ಬಡ್ಡಿಯನ್ನು ಕಟ್ಟಿಕೊಂಡು ಸರಿಯಾಗಿ ನಡೆಯುತ್ತಿರುವ ಸಂಸ್ಥೆಗಳು ಎಷ್ಟು ? ಬೀದಿ ಪಾಲಾಗಿ ತಲೆ ಮೇಲೆ ಕಲ್ಲು ಎಳೆದುಕೊಂಡು, ಹೆಂಡತಿ ಮಕ್ಕಳಿಗೆ ಮುಖ ತೋರಿಸದೇ ಇರಲಾರದಂಥ ಪರಿಸ್ಥಿತಿಯಲ್ಲಿ ಎಷ್ಟು ಜನ ಇದ್ದಾರೆ ? ಚೆನ್ನಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳನ್ನು ನಡೆಸಿದಂಥವರು ಯಾರು ಇರುತ್ತಾರೆ ಎಂಬ ಬಗ್ಗೆ ವರದಿ ಕೊಟ್ಟರೆ ಆಗ ತಾವು ಹೇಳಿದಂಥ ಮಾತಿಗೆ ಬೆಲೆ ಬರುತ್ತದ, ಅರ್ಥ ಇರುತ್ತದೆ ಎಂದು ಹೇಳುತ್ತೇನೆ, ಅದನ್ನು ಹೇಳುವಂತಹ ಪ್ರಯತ್ನ ಮಾಡುತ್ತೀರಾ ? ಒಂದು ಕಡೆ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ರಾಜ್ಯ ಸರಕಾರ ಎದುರಿಸುತ್ತಿರುವ ಆರ್ಥಿಕ ಪರಿಸ್ಥಿತಿಗೋಸ್ಕರ, ವಿತ್ತ ಸಂಹಿತೆಯನ್ನು ಜಾರಿಗೆ ತರುತ್ತೇವೆಂದು ಹೇಳಿದರು. ತಾವು ಎಷ್ಟುಕಟ್ಟುನಿಟ್ಟಾಗಿ ವಿತ್ತ ಸಂಹಿತೆಯನ್ನು ಜಾರಿಗೆ ತಂದಿದ್ದೀರಿ ? ಯಾವ ಯಾವ ಬಾಬಿನಲ್ಲಿ ಉಳಿತಾಯ ಮಾಡುವಂತಹ ಪರಿಸ್ಥಿತಿ ತಂದಿದ್ದೀರಿ ? ಆದರೆ ಸನ್ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಯಾವ ಬಾಬಿನಲ್ಲೂ ನೀವು ಇದನ್ನು ಜಾರಿಗೆ ತಂದಿಲ್ಲ. ಮಂತ್ರಿಗಳಿಗೆ ಕೊಡುವ ಟಿ ಎ. ಡಿ.ಎ. ಇರಬಹುದು, ವಿಧಾನಸಭಾ ಕಾರ್ಯಕಲಾಪ ಇರಬಹುದು, ಯಾವುದೇ ಖರ್ಚಿನ ಬಾಬತ್ತಿನಲ್ಲೂ ಯಾವುದೇ ಉಳಿತಾಯ ಆಗಿಲ್ಲ.

ಕಳೆದ ಮೂರು ವರ್ಷಗಳಿಂದ ಪ್ರತಿ ತಿಂಗಳು ಪ್ರತಿ ವರ್ಷ ಮಂತ್ರಿಗಳು ೧೦ ಲಕ್ಷ ರೂಪಾಯಿಗಳ ಟಿ. ಎ. ಬಿಲ್‌ನಲ್ಲಿ ಖರ್ಚು ಮಾಡುತ್ತಿದ್ದ ನಾನು ಆದರೆ ಮಿತವ್ಯಯ ಜಾರಿಗೆ ಬಂದಿದ್ದರಿಂದ ಖರ್ಚನ್ನು ಈಗ ಬರೀ ಎರಡೂವರೆ ಲಕ್ಷ ರೂಪಾಯಿಗಳಿಗೆ ಇಳಿಸಿದ್ದೇನೆ ಎಂದು ಹೇಳಬಹುದಿತ್ತು. ಆದರೆ ಅದನ್ನು ಯಾರು ಹೇಳಲಿಲ್ಲ. ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡಿದಿರಿ. ಹಣಕಾಸಿನ ಪರಿಸ್ಥಿತಿ ಸರಿಯಾಗಿರದಿದ್ದರೂಸಹ ತಾವು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿದಿರಿ. ಏತಕ್ಕೆ ಮಾಡಿದಿರಿ? ಮಾನ್ಯ ಅಧ್ಯಕ್ಷರೇ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ತಾವು ಕ್ಯಾಬಿನೆಟ್ ಮಂತ್ರಿ ಸ್ಥಾನದಲ್ಲಿಟ್ಟಿದ್ದೀರಿ? ಅವರಲ್ಲಿ ಯಾರಾದರೂ ಮುಖ್ಯ ಮಂತ್ರಿಗಳಿಗೆ ಅರ್ಜಿ ಹಾಕಿಕೊಂಡಿದ್ದರೋ ನಮ್ಮನ್ನು ಕ್ಯಾಬಿನೆಟ್ ರ್‍ಯಾಂಕ್ ಮಂತ್ರಿ ದರ್ಜೆಯನ್ನಾಗಿ ಮಾಡಿ ಎಂದು? ಮತ್ತು ಸ್ಟೇಟ್ ಮಂತ್ರಿ ಪದವೀ ಕೊಡಿ ಎಂದು? ರಾಜ್ಯದ ೧೯ ಜಿಲ್ಲೆಗಳಲ್ಲಿ ೩೮ ಜನ ಕ್ಯಾಬಿನೆಟ್ ರ್‍ಯಾಂಕಿನ ಸದಸ್ಯರು ಇದ್ದಾರೆ. ಈ ಬಗ್ಗೆ ಅಂಕಿಅಂಶಗಳು ಎಷ್ಟಾಗುತ್ತದೆ ಎನ್ನುವುದನ್ನು ಏನಾದರೂ ಕೊಟ್ಟಿದ್ದೀರಾ? ಈ ಒಂದು ವ್ಯವಸ್ಥೆಯನ್ನು ಜಾರಿಗೆ ತಂದ ವೇಳೆ ಮಂಡಲ ಪಂಚಾಯಿತಿಗಳಲ್ಲಿ ಸುಮಾರು ೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರತಕ್ಕಂಥ ಮಂಡಲಗಳನ್ನು ಕನಿಷ್ಟ ಪಕ್ಷ ನೂರಾದರೂ ಇವೆಯೇ? ಖಂಡಿತ ಇಲ್ಲ. ಈ ವ್ಯವಸ್ಥೆ ಜಾರಿಗೆ ಬಂದು ಸುಮಾರು ೮ ತಿಂಗಳುಗಳಾದವು ಸ್ವಾಮಿ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ನಮ್ಮ ರಾಜ್ಯದಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲದಿರುವಾಗ ಏತಕ್ಕೆ ಇದನ್ನು ಮಾಡಬೇಕಾಗಿತ್ತು? ಗ್ರಾಮಾಂತರ ಪ್ರದೇಶಗಳಿಗೆ ರಾಜಕೀಯವನ್ನು ಪ್ರವೇಶ ಮಾಡಿಸಿದಿರಿ ಅಲ್ಲಿರತಕ್ಕಂಥ ಮಂಡಲ ಪಂಚಾಯಿತಿಯ ಪ್ರಧಾನರು ಏನು ಕೆಲಸ ಮಾಡಿದಿರಿ, ಎಂದರೆ ಏನು ಉತ್ತರ ಕೊಡಬೇಕು? ಮಂಡಲ ಪಂಚಾಯಿತಿಯ ಪ್ರಧಾನರಿಗೆ ೩೦೦ ರೂಪಾಯಿಗಳ ಸಂಬಳ ಕೊಡುತ್ತಿದ್ದೀರಿ. ನೀವು ಕೇಳಬಹುದು ನಿಮಗೆ ಮಾತ್ರ ಎಲ್ಲಾ ಸೌಲತ್ತುಗಳು ಬೇಕು ಅವರಿಗೆ ಯಾವ ಸೌಲತ್ತುಗಳು ಬೇಡವೇಎಂದು, ಬೇಡವೆಂದು ನಾನು ಹೇಳುವುದಿಲ್ಲ. ಯಾವಾಗ ಕೊಡಬೇಕು? ನೀವು ಈ ಒಂದು ವ್ಯವಸ್ಥೆಯನ್ನು ಒಂದು ಎಕ್ಸ್‌ಪೀರಿಮೆಂಟಲ್ ಆಗಿ ತಂದಿದ್ದೀರಿ. ಈ ವ್ಯವಸ್ಥೆ ಹೊಂದಿಕೊಂಡು ಚೆನ್ನಾಗಿ ಕೆಲಸಕಾರ್ಯಗಳು ನಡೆದು, ನಿಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ವೇಳೆ ಕೊಡಬಹುದಿತ್ತು. ಆದರೆ ತಾವು ಆ ರೀತಿ ಮಾಡಲಿಲ್ಲ, ತಾವು ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದೀರಿ ಅದೇನೆಂದರೆ, ಆ ಮಾತನ್ನು ತಾವೀಗ ಮರೆತಿದ್ದೀರಿ ಆ ಕಡೆ ತಮ್ಮ ಗಮನ ಕೊಡಲಿಲ್ಲ. ಈ ಬಗ್ಗೆ ಒಂದು ತೀರ್ಮಾನ ಮಾಡುವುದಕ್ಕೆ ತಮಗೆ ಕಳಕಳಿ ಇಲ್ಲ. ಮಾನ್ಯ ಅಬ್ದುಲ್ ನಜೀರ್‌ಸಾಬ್‌ರವರು ಈ ಒಂದು ಪ್ರಯೋಗದನ್ನು ಕಾರ್ಯರೂಪಕ್ಕೆ ತರುವಾಗ ನಾನು ಹೇಳಿದೆ, ಆಗ ನನ್ನ ಮಾತಿಗೆ ಅವರು ಬೆಲೆ ಕೊಡಲಿಲ್ಲ. ತಾವು ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ ಅದು ಈ ರೀತಿ ಇದೆ, ''ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬೆಳವಣಿಗೆಗೆ ನೆರವು ನೀಡುವುದಕ್ಕಾಗಿ ನನ್ನ ಸರ್ಕಾರವು ಅವುಗಳ ಕಾರ್ಯನಿರ್ವಹಣೆಯ ಬಗ್ಗೆ ಮೌಲ್ಯ ನಿರ್ಣಯ ಮಾಡಿ ಸುಧಾರಣಾ ಕ್ರಮಗಳನ್ನು ಆದಷ್ಟು ಶೀಘ್ರವಾಗಿ ಕೈಕೊಳ್ಳುವಂತೆ ಮಾಡಲು

ಒಂದು ಸ್ಥಾಯಿ ಆಡಳಿತ ಯಂತ್ರವನ್ನು ರಚಿಸಲು ಉದ್ದೇಶಿಸಿದೆ'' ಯಾವಾಗ? ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳನ್ನು ಬೈಯುವುದಕ್ಕೆ ಶುರು ಮಾಡಿದಾಗ ಮಾಡುತ್ತೀರಾ? ಈಗಲಾದರೂ ತಮ್ಮ ಉದ್ದೇಶ ಸಫಲವಾದರೆ ಸಾಕು. ಇರತಕ್ಕಂಥ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ತದನಂತರ ಬೇಕಾಗಿದ್ದರೆ ತಾವು ಅವರಿಗೆ ಎಲ್ಲಾ ರೀತಿಯ ಸೌಲತ್ತುಗಳನ್ನು ಕೊಟ್ಟಿದ್ದರೆ ನಾನು ಬೇಡವೆಂದು ಹೇಳುತ್ತಿರಲಿಲ್ಲ. ಮಂಡಲ ಪಂಚಾಯಿತಿ ಪ್ರಧಾನರು ಗೌರವದಿಂದ ಕೆಲಸ ಮಾಡಬೇಕಾಗಿದ್ದರೆ ಅವರು ತಮ್ಮ ಶರಟನ್ನು ಹಾಕಿಕೊಂಡು ಬೀದಿಯಲ್ಲಿ ಓಡಾಡಬೇಕಾಗಿದ್ದರೆ ಅವರಿಗೆ ಹಣ ಕೊಡಿ. ಒಳ್ಳೆಯ ಕೆಲಸಕಾರ್ಯಗಳು ಮಾಡಲಿ. ಮಂಡಲ ಪಂಚಾಯಿತಿ ವ್ಯವಸ್ಥೆ ಹೊಸದಾಗಿ ಬಂದಿದ್ದು ಯಾವುದೇ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿ ಜಾರಿಗೆ ತರಬೇಕಾದರೆ ಸ್ವಲ್ಪ ಸಮಯವಾಗುತ್ತದೆ. ಟೀಕೆ ಮಾಡುವುದು ಬಹಳ ಸುಲಭದ ಕೆಲಸ, ಆದರೆ ಅದನ್ನು ಜಾರಿಗೆ ತರುವುದು ಕಷ್ಟದ ಕೆಲಸವೆಂದು ನನಗೂ ಗೊತ್ತಿದೆ. ಆದರೆ ತಾವು ಅಧಿಕಾರಕ್ಕೆ ಬಂದು ೨-೩ ವರ್ಷಗಳ ಮೇಲಾಯಿತು ಈ ಬಗ್ಗೆ ಚಿಂತನೆ ಮಾಡಿ ಕಾರ್ಯರೂಪಕ್ಕೆ ತರುವಷ್ಟರಲ್ಲಿ ಎಲ್ಲಾ ಪ್ಲಾನ್‌ಗಳು ರೆಡಿಯಾಗಿ ಬೇಕಾಗಿತ್ತು. ಆಗ ಈ ಒಂದು ಕಾರ್ಯಕ್ರಮ ಜಾರಿಗೆ ತಂದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ತಾವು ಆ ರೀತಿ ಮಾಡಲಿಲ್ಲ, ಇವತ್ತು ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳು ಜನರ ಕೈಯಲ್ಲಿ ಬಹಿರಂಗವಾಗಿ ಬೈಯಿಸಿಕೊಳ್ಳತಕ್ಕಂಥ ಪರಿಸ್ಥಿತಿಗೆ ತರುತ್ತಿದ್ದೀರಿ. ಆದ್ದರಿಂದ ತಾವು ಈ ಬಗ್ಗೆ ಸ್ವಲ್ಪ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಸ್ವಾಮಿ. ನಮ್ಮ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಒಳ್ಳೆಯದನ್ನು ಮಾಡುತ್ತಾರೆಂದು ನಾನು ಭಾವಿಸಿದ್ದೆ. ಕಾರಣ ಅವರು ಹಿಂದೆ ಕಾಂಗ್ರೆಸ್‌ನಲ್ಲಿದ್ದರು, ಆಗ ಹೆಚ್ಚು ಅನುಭವ ಪಡೆದುಕೊಂಡಿರತಕ್ಕಂಥವರು ಶಕ್ತಿಯುಳ್ಳವರು, ಶಕ್ತಿಇಲ್ಲದವರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ ಅವರಿಗೆ ಅಪಾರ ಶಕ್ತಿ ಇದೆ, ಈ ರಾಜ್ಯದ ಬಗ್ಗೆ ಈ ದೇಶದ ಬಗ್ಗೆ ಏನಾಗುತ್ತಿದೆ ಎನ್ನುವ ಆತಂಕ, ಆಸೆ, ಅವರಲ್ಲಿದೆ. ಅಂತಹ ಒಂದು ಕೆಪಾಸಿಟಿ ಇದೆ ಅಂತಹವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ೫ ವರ್ಷಗಳಿಂದ ಈ ರಾಜ್ಯದಲ್ಲಿರುವ ಭ್ರಷ್ಟಾಚಾರದ ನಿವಾರಣೆ ಬಗ್ಗೆ ನಡೆಸಿರತಕ್ಕಂಥ ಕಾರ್ಯಕ್ರಮಗಳೇನು? ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಸಾರ್ವಜನಿಕರು ಬೇಡ. ಯಾವ ಸರ್ಕಾರಿ ಅಧಿಕಾರಿಗಳು ಮಾಡುತ್ತಿದ್ದಾರೆ ಆ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ? ಈ ಬಗ್ಗೆ ನಾನು ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ನಾನು ಸಾಮಾನ್ಯವಾಗಿ ಒಬ್ಬ ರೈತನ ಬಗ್ಗೆ ಬಡವನ ಬಗ್ಗೆ, ನಮ್ಮ ಹರಿಜನ ಮತ್ತು ಗಿರಿಜನ ಬಾಧುಗಳ ಬಗ್ಗೆ ಮಾತನಾಡುತ್ತೇನೆ ಸ್ವಾಮಿ ತಾವು ನ್ಯಾಯಬೆಲೆ ಅಂಗಡಿಗಳನ್ನು ಮಾಡಿದಿರಿ. ತುಂಬಾ ಸಂತೋಷ ಇವತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಏನು ನಡೆಯುತ್ತಿದೆ? ಇಲ್ಲಿ ಅಕ್ಕಿ ವಿತರಣೆ ಮಾಡುತ್ತಾರೆ ಎಣ್ಣೆ ವಿತರಣೆ ಮಾಡುತ್ತಾರೆ. ನಾನು ಈ ಬಗ್ಗೆ ಮೊನ್ನೆ ಜಿಲ್ಲಾ ಪರಿಷತ್ತಿನಲ್ಲಿ ಒಂದು ಪ್ರಶ್ನೆ ಕೇಳಿದೆ ಅದಕ್ಕೆ ಅಲ್ಲಿ ಸರಿಯಾದ ಉತ್ತರ ಕೊಡಲಿಲ್ಲ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು, ಯಾವ ಬಡವರಿಗೆ ಅನುಕೂಲವಾಗಲೆಂದು ನಾವು ಪಾಮೋಲಿನ್ ಎಣ್ಣೆಯನ್ನು ವಿತರಣೆ ಮಾಡುತ್ತೇವೆ. ಆ ಎಣ್ಣೆಗೆ ಒಂದು ಲೀಟರ್‌ಗೆ ೧೩ ರೂಪಾಯಿಗಳಂತೆ ವಿತರಣೆ ಮಾಡುತ್ತೇವೆ. ಕೊಬರಿ ಎಣ್ಣೆಗೆ ೩೦ ರೂಪಾಯಿಗಳಿದೆ ಒಳ್ಳೆ ಎಳ್ಳೆಣ್ಣೆಗೆ ೨೫ ರೂಪಾಯಿಗಳಿದೆ, ಈ ಎಣ್ಣೆಯನ್ನು ಕೊಂಡು ಬರವ ತಿನ್ನುವುದಕ್ಕೆ ಆಗುವುದಿಲ್ಲವೆಂದು ಹೇಳಿ ಈ ಪಾಮೋಲಿನ್ ಎಣ್ಣೆಯನ್ನು ನಾವು ನ್ಯಾಯಬೆಲೆ ಅಂಗಡಿಗಳ ಮೂಲಕ ಕೊಡುತ್ತಿದ್ದೇವೆ. ಆದರೆ ನಮ್ಮಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ, ದೇಮಲಾಪುರ, ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಇಲ್ಲಿ ಆಹಾರ ಇಲಾಖೆಯಿಂದ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಈ ಸಹಕಾರ ಸಂಘದವರು ಪಾಮೋಲಿನ್ ಎಣ್ಣೆಯನ್ನು ತಂದಿರುವುದಕ್ಕೆ ನನ್ನಲ್ಲಿ ಸರ್ಟಿಫಿಕೇಟ್ ಇದೆ. ಈ ಸಹಕಾರ ಸಂಘದವರು ಏಪ್ರಿಲ್ ತಿಂಗಳಲ್ಲಿ ೧೦೦ ಲೀಟರ್ ಪಾಮೋಲಿನ್ ಎಣ್ಣೆಯನ್ನು ತಂದಿದ್ದಾರೆ. ಮತ್ತೆ ಜೂನ್ ತಿಂಗಳಲ್ಲಿ ೧೦೫ ಲೀಟರ್ ಪಾಮೋಲಿನ್ ಎಣ್ಣೆಯನ್ನು ತಂದಿದ್ದಾರೆ. ಆದರೆ ಈ ಸಹಕಾರ ಸಂಘದಲ್ಲಿ ಏನು ನಡೆಯುತ್ತಿದೆ ಎಂದರೆ ಜಿಲ್ಲಾಧಿಕಾರಿಯವರ ಕಛೇರಿಯಿಂದ ತಂದಂಥ ಪಾಮೋಲಿನ್ ಎಣ್ಣೆಯನ್ನು ಸಾರ್ವಜನಿಕರ ತಿಳುವಳಿಕೆಗೆ ಬರದೆ ಮಾರಾಟ ಮಾಡಿಕೊಂಡಿದ್ದಾರೆ.

ದೇಮಲಾಪುರ ಸಹಕಾರ ಸಂಘದಲ್ಲಿ ತೆಗೆದುಕೊಂಡಿರುವ ಈ ಸರ್ಟಿಫೈಡ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ ತಾವು ನೋಡಿ. ಇದೇ ತರಹ ಇನ್ನೂ ಕೆಲವು ಉದಾಹರಣೆಗಳನ್ನು ಬೇಕಾದರೆ ಕೊಡುತ್ತೇನೆ, ಶಿವಮೊಗ್ಗ ಜಿಲ್ಲೆಗೆ ಇಬ್ಬರು ಹಿರಿಯ ಸಚಿವರು ಇದ್ದರೂ ಇಂಥ ಕೆಲಸಗಳು ನಡೆಯುತ್ತಿವೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ —ತಾಳೆ ಎಣ್ಣೆ, ಅಕ್ಕಿ ಮತ್ತು ಗೋಧಿ ಸರಬರಾಜು ಮಾಡುವ ಬಗ್ಗೆ ಪ್ರತಿಯೊಂದು ಮಂಡಲ ಮತ್ತು ಗ್ರಾಮಕ್ಕೆ ಎಷ್ಟು ಪ್ರಮಾಣದಲ್ಲಿ ಹಂಚಲಾಗಿದೆ ಎಂಬ ಬಗ್ಗೆ ಅಲಾಟ್‌ಮೆಂಟ್ ಪ್ರತಿಯನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಏನಾದರೂ ಈ ರೀತಿ ಅಕ್ರಮ ಗಳು ಕಂಡು ಬಂದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಮಾನ್ಯ ಯಡಿಯೂರಪ್ಪನವರಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್, ಯಡಿಯೂರಪ್ಪ.—ನಾನು ಇದನ್ನು ಹೇಳುವಂಥ ಪ್ರಯತ್ನ ಏಕೆ ಮಾಡಿದೆ ಎಂದರೆ, ಬಡವರನ್ನು ಗಮನದಲ್ಲಿಟ್ಟುಕೊಂಡು ಇಂಥ ಕಾರ್ಯಕ್ರಮಗಳನ್ನು ತಂದ ಮೇಲೆ, ಅವು ಪ್ರಾಮಾಣಿಕವಾಗಿ ನಡೆಯಬೇಕಲ್ಲವೆ ? ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾಪರಿಷತ್ತುಗಳಿಗೆ ನಮ್ಮ ರಾಜ್ಯದಲ್ಲಿ ಪ್ರತಿ ತಿಂಗಳೂ ೧೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದ್ದರು ಹಳ್ಳಿ ಗಳಲ್ಲಿ ಬಡವರು ಒಂದು ಹೊತ್ತಿನ ಗಂಜಿಗೂ ಕಷ್ಟಪಡುತ್ತಿದ್ದಾರೆ. ಸರ್ಕಾರಿ ನೌಕರರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಸಾರಿಗೆಗಳನ್ನು ಕೊಡುತ್ತಿರುವಾಗ, ಈ ಸರ್ಕಾರಿ ನೌಕರರುಗಳು ಬಡವರ ಹಿತಕ್ಕಾಗಿ ಏಕೆ ದುಡಿಯಬಾರದು. ಸರ್ಕಾರಿ ನೌಕರರುಗಳೇ ಶಾಮೀಲಾಗಿ ಮಾಡಬಾರದ್ದನ್ನು ಮಾಡಿದರೆ ಬಡ ಜನರಿಗೆ ಅನುಕೂಲ ಎಲ್ಲಿ ಸಿಗುತ್ತದೆ ಎಂಬುವುದಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಬಸವಣ್ಣಪ್ಪನವರು ಆಗಾಗ ನಮ್ಮ ಶಿಕಾರಿಪುರ ತಾಲ್ಲೂಕಿಗೆ ಬರುತ್ತಿರುತ್ತಾರೆ. ಅವರಿಗೂ ಶಿಕಾರಿಪುರ ತಾಲ್ಲೂಕಿನ ಬಗ್ಗೆ ಕಳಕಳಿ ಇದೆ. ಈ ಶಿಕಾರಿಪುರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಿಗೆ ವಿತರಣೆ ಮಾಡುವುದಕ್ಕೆ ಲೋಡ್‌ಗಟ್ಟಲೆ ಪಾಮೋಲಿನ್ ಎಣ್ಣೆ ಕಳುಹಿಸಿದರೆ ಅದನ್ನು ಅಕ್ರಮವಾಗಿ ಮಾರಾಟ ಮಾಡಿದ್ದಾರೆ. ಇದರ ಬಗ್ಗೆ ಮಾಹಿತಿ ಕೊಟ್ಟರೆ ಅವರುಗಳನ್ನು ಡಿಸ್‌ಮಿಸ್ ಮಾಡುವ ಧೈರ್ಯ ನಿಮಗೆ ಇದೆಯೇ ? ಯಾವ ಸಹಕಾರ ಸಂಘದವರು ಈ ಸರ್ಟಿಫೈಡ್ ಕಾಪಿಯನ್ನು ನನಗೆ ಕೊಟ್ಟಿದ್ದನೋ ಅವನ ಮೇಲೆಯೇ ನಿಮ್ಮ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ. ಅವನ ಸಹಕಾರ ಸಂಘವನ್ನು ಕ್ಯಾನ್ಸಲ್ ಮಾಡುತ್ತಾರೆ. ಮತ್ತು ಸರ್ಟಿಫೈಡ್ ಕಾಪಿಯನ್ನು ಏಕೆ ಕೊಟ್ಟೆ ಎಂದು ಬಯ್ಸಿಕೊಳ್ಳುವ ಆಗಿದೆ. ಈ ರೀತಿ ಬಡವರ ಬಗ್ಗೆ ಮಾಡಲಾದ ಕಾರ್ಯಕ್ರಮಗಳು ಬಡವರಿಗೆ ಸರಿಯಾಗಿ ತಲುಪುತ್ತಿಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಜಿಲ್ಲಾ ಪರಿಷತ್ತಿನಲ್ಲಿ ೩೮ ಜನ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಇದ್ದಾರೆ. ಇವರುಗಳಿಗೆಲ್ಲಾ ಕ್ಯಾಬಿನೆಟ್ ದರ್ಜೆಯ ಸ್ಥಾನ ಮಾನ ಕೊಟ್ಟಿದ್ದೀರಿ, ಬಂಗಲೆ, ಕಾರು, ಬಹುಪರಾಕ್ ಹೇಳುವುದಕ್ಕೆ ಪ್ರೈವೇಟ್ ಸೆಕ್ರೆಟರಿಗಳನ್ನು ಕೊಟ್ಟಿದ್ದೀರಿ. ಇದರ ಜೊತೆಗೆ ೩೫ ಸದಸ್ಯರಿರುವ ಮಂತ್ರಿಮಂಡಲವನ್ನು ರಚಿಸಿಕೊಂಡಿದ್ದೀರಿ, ಶಾಸಕರು ಎಷ್ಟು ಇರುವುದು ಎಂದರೆ ಬರೀ ೧೩೭ ಜನ ಮಾತ್ರ. ೧೩೭ ಜನ ಇರುವ ನಿಮ್ಮ ಪಕ್ಷಕ್ಕೆ ದೊಡ್ಡ ಮಂತ್ರಿಮಂಡಲವನ್ನು ರಚನೆ ಮಾಡಿದ್ದೀರಿ. ಇಷ್ಟೆಲ್ಲಾ ಮಾಡಿ ಇಡೀ ರಾಜ್ಯದಲ್ಲಿ ಇವರೆಲ್ಲಾ ಆನಂದದಿಂದ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಈ ತರಹ ಅನೇಕ ಭ್ರಷ್ಟಾಚಾರಗಳ ಬಗ್ಗೆ ಉದಾಹರಣೆ ಗಳನ್ನು ತಮಗೆ ನಾನು ಕೊಡಬಹುದು.

ಚೇರ್ಮನ್ (ಶ್ರೀ ಡಿ. ಟಿ. ಜಯಕುಮಾರ್‌ರವರು).—ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆ ಆಯಿತು. ಇನ್ನೂ ಎಷ್ಟು ನಿಮಿಷ ತಮಗೆ ಬೇಕು ?

ಶ್ರೀ ಬಿ. ಎಸ್ ಯಡಿಯೂರಪ್ಪ.—ನನಗೆ ಒಂದು ಗಂಟೆ ಬೇಕು ಸ್ವಾಮಿ. ಎಲ್ಲಾ ವಿಷಯಗಳನ್ನು ಒಂದೊಂದಾಗಿ ಹೇಳುತ್ತೇನೆ. ಜನತಾ ಸರ್ಕಾರದವರು ತಮ್ಮ ತಪ್ಪುಗಳನ್ನು ತಿದ್ದಿ ಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಚೇರ್ಮನ್.—ಮಾತನಾಡಿ.

ಶ್ರೀ ಎನ್. ಹೆಚ್. ಗೌಡ.—ಅವರಿಗೆ ಒಂದು ಗಂಟೆ ಕಾಲಾವಕಾಶವನ್ನು ಕೊಟ್ಟಿದ್ದೀರಿ ?

ಚೇರ್ಮನ್.—ಆದಷ್ಟು ಬೇಗ ಮುಗಿಸುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಸಾರ್ವಜನಿಕ ಉದ್ಯಮಗಳನ್ನು ಸರ್ಕಾರ ನಡೆಸುತ್ತಿದೆ. ಈ ಉದ್ಯಮಗಳು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವಂತೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು, ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯಿಂದ ಒಂದು ರಿಪೋರ್ಟನ್ನು ಕೊಟ್ಟಿದ್ದೇನೆ. ಏನೆಂದರೆ, "ಮೈಸೂರು ಲ್ಯಾಕ್ ಪೈಂಟ್ಸ್" ಕಂಪನಿಯು ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಒಂದು ವರ್ಷ ಅಥವ ಆರು ತಿಂಗಳ ಮಟ್ಟಿಗೆ

'ಬಸಪ್ಪನವರ್' ಎಂಬ ಒಬ್ಬ ಎಂ. ಡಿ. ಯನ್ನು ಅಲ್ಲಿಗೆ ಹಾಕಲಾಗಿತ್ತು. ಈ ಭೂಪ ಏನು ಮಾಡಿದ ಅಂದರೆ, ಈ ಮೈಸೂರು ಲ್ಯಾಕ್ ಎಂದು ಪೈಂಟ್ಸ್‌ನಲ್ಲಿ ತಯಾರಾಗತಕ್ಕಂಥ ಬಣ್ಣವನ್ನು ಇವೊತ್ತು ನಮ್ಮ ಕೆ.ಎಸ್.ಆರ್.ಟಿ.ಸಿ. ಹಾಗೂ ಬೇರೆ ಬೇರೆ ಸರಕಾರಿ ಉದ್ದಿಮೆಗಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅಲ್ಲಿ ಸೂಕ್ತ ರೀತಿಯಲ್ಲಿ ತಯಾರಿಕೆಯ ಕಾರ್ಯ ನಡೆಯುತ್ತಾ ಇಲ್ಲ. ಕಳೆದ ಹತ್ತು ವರ್ಷಗಳಿಂದ ಅಲ್ಲಿ ಕೇವಲ ಅಡ್ವರ್‌ಟೈಸ್‌ಮೆಂಟ್‌ಗಾಗಿ ಒಂದೂವರೆ ಲಕ್ಷ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುತ್ತಾ ಇದ್ದಾರೆ. ಈ ಅಧಿಕಾರಿ ಭೂಪ ಬಂದಮೇಲೆ ಆ ಖರ್ಚು ಆರು ತಿಂಗಳುಗಳಲ್ಲಿ ೧೫ ಲಕ್ಷ ರೂಪಾಯಿಗಳಿಗೆ ಏರಿದೆ. ಇದಕ್ಕಾಗಿ ಬೆಂಗಳೂರಿನಲ್ಲಿ ಒಂದು ಆಫೀಸ್ ಅದಕ್ಕೆ ೧೦–೧೨ ಸಾವಿರ ರೂಪಾಯಿಗಳ ನಿಯಮಿತ ಖರ್ಚು ಮಾಡುವ ವ್ಯವಸ್ಥೆ. ಹೀಗೆ ಇವರೆಲ್ಲಾ ಒಟ್ಟಾಗಿ ಅದನ್ನು ಜೇಬಿಪಾಲು ಮಾಡಿಬಿಟ್ಟಿದ್ದಾರೆ. ಈ ಅಲ್ಲಿಂದ ಆವನು ಹೊರಡತಕ್ಕಂಥ ಕೆಲಸ ಈಗ ನಡೆದಿದೆ.

ಈ ರೀತಿಯಾಗಿ ಯಾವುದೇ ಸಾರ್ವಜನಿಕ ಉದ್ದಿಮೆಗಳನ್ನು ತೆಗೆದುಕೊಂಡರೂ ಸಹ ಅಲ್ಲಿ ಬಂದಿರುವಂತಹ ಅಧಿಕಾರಿಗಳು ಅಲ್ಲಿನ ಸಂಪತ್ತನ್ನು ಲೂಟಿ ಮಾಡುತ್ತಾ ಇದ್ದಾರೆ. ಅಂಕಿ ಅಂಶಗಳ ಪ್ರಕಾರ ೧೮ ಸಾವಿರ ಕೋಟಿ ರೂಪಾಯಿಗಳನ್ನು ಇವೊತ್ತು ನಾವು ಇವುಗಳಲ್ಲಿ ಒಟ್ಟಿಗೆ ಇನ್ವೆಸ್‌ಮೆಂಟ್ ಮಾಡಿರಬಹುದು ಎಂದು ಕಾಣುತ್ತದೆ. ಅದು ಯಾವುದೇ ಇರಬಹುದು. ವಿ.ಎಸ್.ಐ.ಎಲ್. ಇರಬಹುದು, ಅಥವಾ ಇನ್ನಿತರ ಯಾವುದೇ ಪಬ್ಲಿಕ್ ಅಂಡರ್‌ಟೇಕಿಂಗ್ ಇರಬಹುದು. ನಾವು ಹಾಕಿರುವ ಹಣಕ್ಕೆ ಇದುವರೆಗೂ ನಾವು ಪಡೆದ ಲಾಭ ಎಷ್ಟು? ನಾವು ವಿನಿಯೋಗ ಮಾಡಿದ ಇಷ್ಟೊಂದು ದೊಡ್ಡ ಮೊತ್ತದ ಹಣಕ್ಕೆ ನಾವು ಕನಿಷ್ಟ ೧೦ ಪರ್ಸೆಂಟ್‌ನಷ್ಟು ಅಂದರೂ ಕೂಡ ೧,೫೦೦ ಕೋಟಿ ರೂಪಾಯಿಗಳಷ್ಟು ಲಾಭವನ್ನು ಗಳಿಸಿಕೊಳ್ಳಬೇಕಾಗಿತ್ತು. ಕೆ.ಎಸ್.ಆರ್.ಟಿ.ಸಿ. ಇದೆ. ಇದರ ಮೂಲಕ ಜನರ ಸೇವೆ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಿದ್ದೀರಿ. ಇನ್ನೊಂದು ಉದಾಹರಣೆ ಹೇಳುವುದಾದರೆ, ಸರಕಾರಿ ಸಾಬೂನು ಕಾರ್ಖಾನೆ. ಅಲ್ಲಿ ತಯಾರಾಗುತ್ತಿರುವ ಸಾಬೂನನ್ನು ಯಾರೂ ಕೊಳ್ಳುವುದಕ್ಕೆ ತಯಾರಿಲ್ಲ? ಮೈಸೂರು ಸ್ಯಾಂಡಲ್ ಸೋಪ್ ಯಾರಿಗೆ ಬೇಡವಾಗಿದೆ? ಅದಕ್ಕೆ ಬಹಳ ಬೇಡಿಕೆ ಇದೆ. ಆದರೂ ಕೂಡ ಅದರ ಪರಿಸ್ಥಿತಿ ಏನಾಗಿದೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ಓದುತ್ತೇನೆ—"ಕಂಪನಿಯ ವಸ್ತುಗಳು ಮಾರಾಟವಾಗದೆ ದಾಸ್ತಾನು ಆಗಿರುವ ಸುಮಾರು ೧೪ ಕೋಟಿ ರೂಪಾಯಿಗಳಷ್ಟು ಮೌಲ್ಯದ ಮಾರ್ಕೆಟಿಗೆ ಬಿಡಲು ಸಿದ್ಧಪಡಿಸಿದ ಸಾಬೂನು ಈ ಪರಿಸ್ಥಿತಿಗೆ ಕಾರಣ ಆಗಿರುತ್ತದೆ. ಈ ವರ್ಷದ ಮಾರಾಟದ ಬೆಲೆಗೆ ಹೋಲಿಸಿ ನೋಡಿದರೆ ದಾಸ್ತಾನು ಆಗಿರುವ ಸರಕು ಸುಮಾರು ೫ ತಿಂಗಳ ಮಾರಾಟಕ್ಕಿಂತಲೂ ಮಿಗಿದುದಾಗಿದೆ. ಈಗಾಗಲೇ ೫೫ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ನಷ್ಟವನ್ನು ಅನುಭವಿಸಿದ್ದು ದಿನನಿತ್ಯದ ಸರಕುಗಳ ತಯಾರಿಕೆಗಾಗಿ, ಬ್ಯಾಂಕ್‌ಗಳಿಂದ ೮ ಕೋಟಿ ರೂಪಾಯಿಗಳ ಸಾಲವನ್ನು ಪಡೆದಿದ್ದು, ಕಂಪನಿಯು ೧೪ ಕೋಟಿ ರೂಪಾಯಿಗಳಷ್ಟು ದಾಸ್ತಾನು ಮಾಡಿರುವುದು ತುಂಬಾ ಕಳವಳಕಾರಿಯಾಗಿದೆ"— ನಾನು ಇದನ್ನು ಏಕೆ ಹೇಳುತ್ತಾ ಇದ್ದೇನೆ ಎಂದರೆ, ಇವರು ಸಾಬೂನನ್ನು ಜನರು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದರೆ ಜನರು ಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಅವರೆ ಏಕೆ ಮಾರುತ್ತಾ ಇಲ್ಲ? ಅದನ್ನು ಬೇಕಾದರೆ ಸಿಕ್ ಇಂಡಸ್ಟ್ರೀ ಎಂದು ಮಾಡಿ, ಅದರಿಂದ ನನಗೆ ಭಯವೇನೂ ಇಲ್ಲ. ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ. ಆದರೆ ನಿಮ್ಮ ಬಗ್ಗೆ ಜನರಿಗೆ ವಿಶ್ವಾಸ ಉಳಿದುಕೊಳ್ಳುವಂತೆ ಮಾಡಿ. ಏನಾದರೂ ಮಾಟ ಈ ಕಾರ್ಖಾನೆಯನ್ನು ಟಾಟಾ, ಬಿರ್ಲಾ, ಗೋಡ್ರೆ ಮುಂತಾದವರಿಗೆ ಮಾರಾಟ ಮಾಡುತ್ತಾರೋ ಏನೋ ಎಂದು ಜನ ಸಂಶಯ ಪಡುವ ಹಾಗೆ ಮಾಡಬೇಡಿ, ೧೫ ಕೋಟಿ ರೂಪಾಯಿಗಳ ಸಾಬೂನು ಉಳಿದಿರುವುದು ನಿಜವಾದರೆ, ಅದಕ್ಕಾಗಿ ನಿಮ್ಮ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಿಗೆ ಸ್ವಲ್ಪವೂ ಜವಾಬ್ದಾರಿಯು ಇಲ್ಲವೆ? ಅವರು ಸಂಬಳ ಸಾರಿಗೆಯನ್ನು ಪಡೆಯುತ್ತಿಲ್ಲವೆ? ಅವರು ಕಾರಿನಲ್ಲಿ ಓಡಾಡಿಕೊಂಡು ಕಾಲ ಕಳೆಯುವುದಕ್ಕೆ ಮಾತ್ರ ಇದ್ದಾರೆಯೇ? ಸಾಬೂನನ್ನು ಖರ್ಚು ಮಾಡುವ ಬಗ್ಗೆ ಅವರು ಏಕೆ ಗಮನವನ್ನು ಹರಿಸಿಲ್ಲ? ಅವರು ಜನರಿಗೆ ಕೆಲಸ ಮಾಡುವುದಕ್ಕೆ ಎಂದು ನೇಮಿಸಲ್ಪಟ್ಟಿಲ್ಲವೆ? ಅವರಿಗೆ ಅಧಿಕಾರವನ್ನು ಕೊಟ್ಟ ನಿಮಗೆ ಅವರನ್ನು ಪ್ರಶ್ನೆ ಮಾಡುವಂತಹ ಅಧಿಕಾರ ಇಲ್ಲವೇ? ಈ ರೀತಿಯ ಒಂದು ವಿಚಿತ್ರವಾದಂಥ ಸನ್ನಿವೇಶ ಅಲ್ಲಿ ಒದಗಿ ಬಂದಿದೆ.

ಇನ್ನೊಂದು ವಿಚಾರ ಎಂದರೆ, ಬಹುಶಃ ಇದು ತಮಗೆ ಹಿಡಿಸದಂಥ ವಿಚಾರ ಆಗಿರಬಹುದು. ೧೦–೮–೮೭ರಂದು ನಡೆದ ಜನತಾ ಪಕ್ಷದ ಸಭೆಯಲ್ಲಿ ಮಾಜಿ ಸಚಿವರುಗಳಾದ ಶ್ರೀ ಬೈರೇಗೌಡರು

ಮತ್ತು ಶ್ರೀ ವರದೇಗೌಡರು, ಈ ಡಿಸ್ಟಿಲರಿಗಳಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳ ಟ್ಯಾಕ್ಸನ್ನು ತಪ್ಪಿಸಿದ್ದಾರೆ, ಅಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆಯುತ್ತಾದೆ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸಿದರು. ನಾನು ಇದನ್ನು ಏನೋ ಪ್ರಚಾರ ಗಿಟ್ಟಿಸುವ ದೃಷ್ಟಿಯಿಂದ ಇರಬಹುದು ಎಂದು ಅಂದುಕೊಂಡೆ. ಅದನ್ನು ಅನಂತರ ತಿಳಿದುಕೊಂಡಾಗ ನಿಮ್ಮ ಡಿಸ್ಟಿಲರಿಗಳಲ್ಲಿ ಪ್ರತಿಯೊಂದು ಕಡೆಯೂ ಈ ರೀತಿಯ ಭ್ರಷ್ಟಾಚಾರ ನಡೆಯುತ್ತಾ ಇರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ಖೋಡೆ ಡಿಸ್ಟಿಲರಿ. ಇಲ್ಲಿ ಒಂದು ಲೀಟರ್ ಸೆಕೆಂಡ್ಸ್ ವ್ಯವಹಾರ ಏನು ಅಂದರೆ, ಅವರು ಸವರನ್ ಬ್ರಾಂದಿ, ಫೈವಸ್ಟಾರ್ ಬ್ರಾಂದಿ ತಯಾರು ಮಾಡಿದರೆ, ಅದರಲ್ಲಿ ಲೀಟರ್‌ಗೆ ೮೦ ರೂಪಾಯಿಗಳು ಬೀಳುತ್ತದೆ. ಆದಕ್ಕೆ ಬಿಲ್ಲನ್ನು ಹಾಕಿದರೆ ಅದಕ್ಕೆ ಸುಮಾರು ೭೦೦-೭೫೦ ರೂಪಾಯಿಗಳವರೆಗೆ ಪರ್ ಲೀಟರ್ ಮಾಡುತ್ತಾರೆ. ಈ ಸೆಕೆಂಡ್ಸ್ ಅಂದರೆ, ೪೫೦ ರೂಪಾಯಿಗಳಿಗೆ ತೆಗೆದುಕೊಂಡು ಬಂದು, ಅಂಗಡಿಯಲ್ಲಿ ಇದನ್ನು ಮಾರುತ್ತಾ ಇದ್ದಾರೆ. ಇದರಿಂದ ಒಂದು ದಿವಸಕ್ಕೆ ಸರಕಾರಕ್ಕೆ ೩೦ ಲಕ್ಷ ರೂಪಾಯಿಗಳಿಗೂ ಹೆಚ್ಚು ಟ್ಯಾಕ್ಸನಲ್ಲಿ ಇವರು ಮೋಸ ಮಾಡುತ್ತಾ ಇದ್ದಾರೆ. ಇದೇ ರೀತಿಯಲ್ಲಿ ಅಮೃತ್ ಡಿಸ್ಟಿಲರೀಸ್, ಅವರು ೫ ಸಾವಿರ ಕೇಸ್‌ನ್ನು ಟೋಟಿ ಹಾಕಿ ಒಳಗಡೆ ವ್ಯವಹಾರ ಮಾಡಿದರೆ ಅವರು ಸಿಲ್ವರ್ ಕಪ್ ಬ್ರಾಂದಿಯನ್ನು ತಯಾರು ಮಾಡುತ್ತಾರೆ. ಅದನ್ನು ಸೆಕೆಂಡ್ಸ್ ಒಂದು ಲೀಟರ್‌ಗೆ ೩೫೦ ರಂತೆ ಮಾಡುತ್ತಾರೆ. ಇವರು ದಿನಕ್ಕೆ ಈ ರೀತಿ ೨ ಸಾವಿರ ಕೇಸ್‌ನ್ನು ಒಳಗಡೆ ವ್ಯವಹಾರ ಮಾಡುತ್ತಾ ಇದ್ದಾರೆ. ಅದೇ ರೀತಿಯಲ್ಲಿ ಬೆಂಗಳೂರು ಗ್ರೂಪ್ ವೈನ್ಸ್ ಅವರು ಒಂದು ಸಾವಿರ ಕೇಸ್‌ನ್ನು ಒಳಗಡೆ ವ್ಯವಹಾರ ಮಾಡುತ್ತಾ ಇದ್ದಾರೆ. ಸಪ್ತಗಿರಿ ಡಿಸ್ಟಿಲರೀಸ್ ಇವನೂ ಕೂಡ ಭಾರಿ ಮೋಸ ಮಾಡುತ್ತಾ ಇದ್ದಾರೆ.

ಈ ರೀತಿಯಲ್ಲಿ ಯಾರು ಯಾರು ಡಿಸ್ಟಿಲರಿಗಳನ್ನು ಮಾಡಿಕೊಂಡು ಬ್ರಾಂದಿ, ವಿಸ್ಕಿಗಳನ್ನು ತಯಾರು ಮಾಡುತ್ತಾರೋ, ಅವರು ಪ್ರತಿನಿತ್ಯವೂ ಲಕ್ಷಗಟ್ಟಲೆ ತೆರಿಗೆಯನ್ನು ಕೊಡದೆ ಮೋಸ ಮಾಡುತ್ತಾ ಇದ್ದಾರೆ. ನಾನು ಒಂದು ಮಾತನ್ನು ಎಕ್ಸೈಸ್ ಕಮಿಶನರ್‌ಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ, ರಾಜ್ಯದಲ್ಲಿರುವ ಇಂತಹ ಎಲ್ಲಾ ವ್ಯವಹಾರಗಳನ್ನು ನಿಮಗೆ ಬಂದ್ ಮಾಡುವುದಕ್ಕೆ ಆಗುವುದಿಲ್ಲವೇ? ಬೇಕಾದಷ್ಟು ಇಂತಹವುಗಳು ಇವೆ, ಅದು ಕಷ್ಟ ಸಾಧ್ಯವೂ ಆಗಿದೆ. ಯಾಕೆಂದರೆ ಅದು ಬ್ಲಡ್ ಕ್ಯಾನ್ಸರ್ ರೀತಿಯಲ್ಲಿ ರಕ್ತಗತವಾಗಿ ಹೋಗಿದೆ. ಆದರೂ ಕೂಡ ನಿಮ್ಮ ಪ್ರಯತ್ನ ಈ ದಿಸೆಯಲ್ಲಿ ಏನು? ಇಂತಹ ವ್ಯವಹಾರಗಳನ್ನು ನೋಡುವುದಕ್ಕಾಗಿ ೩-೪ ಸಾವಿರ ರೂಪಾಯಿಗಳ ಸಂಬಳವನ್ನು ಕೊಟ್ಟು ಇಟ್ಟಿರತಕ್ಕಂಥ ಅಧಿಕಾರಿಗಳು ಬೇಕಾದಷ್ಟು ಜನ ಇದ್ದಾರೆ. ಅವರೆಲ್ಲ ಏನು ಮಾಡುತ್ತಿದ್ದಾರೆ?

ಈ ರೀತಿ ಸೆಕೆಂಡ್ಸ್ ಹೊರಗಡೆ ಹೋಗತಕ್ಕಂಥದ್ದು ಕಣ್ಣಿಗೆ ಕಂಡ ತಕ್ಷಣ ಅದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡು, ಅದು ಆಗದ ಹಾಗೆ ನೋಡಿಕೊಂಡಿದ್ದರೆ ಸರಕಾರದ ಬೊಕ್ಕಸಕ್ಕೆ ಹಣ ಬರುತ್ತಿರಲಿಲ್ಲವೇ. ಆದರೆ ಆತ ಆ ರೀತಿ ಮಾಡಿಲ್ಲ. ಎಕ್ಸೈಸ್ ಕಮೀಷನರ್, ಎಕ್ಸೈಸ್ ಸೂಪರಿಂಟೆಂಡೆಂಟ್ ಇವರು ಬೇರೆ ಬೇರೆ ರೀತಿಯ ಅವ್ಯವಹಾರದಲ್ಲಿ ಪಾಲುಗೊಂಡಿದ್ದಾರೆಯೇ ? ಹಾಗಿದ್ದರೆ ಅಲ್ಲಿ ಬರುವಂತಹ ಪೇರು ಯಾರ್ಯಾರಿಗೆ ಬರುತ್ತದೆ ಎಂಬುದನ್ನು ಈ ರಾಜ್ಯದ ಜನತೆಗೆ ಇವತ್ತು ಹೇಳಿ? ಮಾನ್ಯ ಮೊಯಿಲಿಯವರ ಟೇಪ್ ಪ್ರಕರಣದ ಹಗರಣದ ಹಿನ್ನೆಲೆಯಲ್ಲಿ ಬೈರೇಗೌಡರು ಅವರನ್ನು ಮಂತ್ರಿಯನ್ನಾಗಿ ಮಾಡಿದ್ದೀರಿ. ಇವತ್ತು ಯಡಿಯೂರಪ್ಪ ಚಾರ್ಜ್ ಮಾಡುತ್ತಾನೆಂದು ಹೇಳಬಹುದಾಗಿತ್ತು. ಅವರು ಒಬ್ಬ ಪ್ರಮುಖ ಮಾಜಿ ಮಂತ್ರಿಗಳು, ನೀವು ಮಾಡಿದ್ದೆಲ್ಲ ಏನು ಎಂದು ಹೇಳಿದಾಗ ಅದನ್ನು ಸರಿಪಡಿಸುವುದರ ಬಗ್ಗೆ ನೀವು ಮಾಡಿದ್ದು ದು, ಏನು ? ಮಾರಂ ಚನ್ನಪಟ್ಟಣದ ಶಾಸಕರು ಆರೋಪ ಮಾಡಿದರು ಅವರ ಅಂಗಡಿಯನ್ನು ಮುಚ್ಚುವಂತಹ ಪ್ರಸಂಗ ನಡೆಯಿತು. ಇದರ ಬಗ್ಗೆ ಎರಡು ಮೂರು ಪತ್ರಿಕೆಯಲ್ಲಿ ಕೂಡ ಬಂತು ಇದನ್ನೆಲ್ಲಾ ನೋಡಿ ನಾವು ಅಂದುಕೊಂಡೆವು ಏನೋ ಕ್ರಾಂತಿಕಾರಿ ಕೆಲಸವಾಗುತ್ತದೆ ಎಂದು. ಆದರೆ ಇನ್ನೇನೂ ಸಾಧನೆಯಾಗಲಿಲ್ಲ, ಇಷ್ಟೆ, ಇದರ ಕಡೆಗೆ ಸರಕಾರದವರು ಸೀರಿಯಸ್ ಆಗಿ ಗಮನವನ್ನು ಕೊಟ್ಟು ಈ ಕೋಟ್ಯಾಂತರ ರೂಪಾಯಿ ವ್ಯವಹಾರ ಏನಿದೆ ಇದರ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕು. ಇನ್ನೊಂದು ವಿಷಯದ ಬಗ್ಗೆ ಹೇಳುತ್ತೇನೆ. ಎನ್.ಜಿ.ಇ.ಎಫ್, ನಲ್ಲಿನ ವ್ಯವಹಾರ ಹೇಗೆ ನಡೆಯುತ್ತಿದೆ ಎಂದರೆ ವೆಸ್ಟ್ ಜರ್ಮನಿ ಎನ್.ಜಿ.ಇ.ಎಫ್ (ಎಇಜಿ) ಇದರ ಜೊತೆಗೆ ಎನ್.ಜಿ.ಇ.ಎಫ್ ಅಗ್ರಿಮೆಂಟ್ ಮಾಡಿಕೊಂಡಿದೆ, ಅದರ ಪ್ರಕಾರ ಎ.ಇ.ಜಿ. ಯವರು ಏನೆಲ್ಲಾ ನಮ್ಮ ರಾಜ್ಯದಲ್ಲಿ ತಯಾರು ಮಾಡುತ್ತಾರೆ, ನಮ್ಮ ರಾಜ್ಯದಲ್ಲಿ ಏನೇನು ವ್ಯಾಪಾರ

ಮಾಡುತ್ತಾರೆ ಅದರಲ್ಲಿ ೫ ಪರ್ಸೆಂಟ್ ಕಮೀಷನ್ ಅನ್ನು ಅವರು ನಮಗೆ ಕೊಡಬೇಕು. ನಮಗೆ ಗೊತ್ತಿರುವ ಹಾಗೆ ದೆಹಲಿಯಲ್ಲಿ ಎನ್.ಜಿ.ಇ.ಎಫ್ ಆಫೀಸು ಇದೆ. ಈ ರೀತಿ ಅಗ್ರಿಮೆಂಟ್ ಆಗಿ ೫ ಪರ್ಸೆಂಟ್ ಕಮೀಷನ್ ಕೊಡಬೇಕೆಂದು ಆದ ಮೇಲೆ ಸಬ್‌ಮೆಷಿನ್‌ಗೆ ಬೇಕಾದಂತಹ ಟರ್ಪೆಂಡೋಸ್ ಅನ್ನು ಏನು ಸಪ್ಲೈ ಮಾಡಿದರು ಅದು ಸುಮಾರು ಒಂದು ಕೋಟಿ ೨೦ ಲಕ್ಷ ರೂಪಾಯಿನಿಂದ ೨೦ ಕೋಟಿ ರೂಪಾಯಿಂನವರೆಗೆ, ಆಗಿದೆ, ಅದನ್ನು ಎನ್.ಜಿ.ಇ ಎಫ್ ಮೂಲಕ ಏಕೆ ಮಾಡಲಿಲ್ಲ ? ಇದರ ಬಗ್ಗೆ ಪತ್ರಿಕೆಯಲ್ಲಿ ಕೂಡ ಬಂದಿದೆ. ರೋಸಸ್ ಎಂಟರ್‌ಪ್ರೈಸಸ್‌ನ ಜೆಜೋಡಿಯಾ ಅವರನ್ನು ಮಧ್ಯವರ್ತಿಯನ್ನಾಗಿ ಇಟ್ಟುಕೊಂಡು ಈ ವ್ಯವಹಾರ ನಡೆಯಿತು. ಸಂಬಂಧಪಟ್ಟ ಇಲಾಖೆ ಇದೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಎನ್.ಜಿ.ಇ.ಎಫ್ (ಎಇಜಿ)ಗೆ ಅಗ್ರಿಮೆಂಟ್ ಆಗಿದ್ದುದು ಹೌದೋ ಅಲ್ಲವೋ ? ಆ ರೀತಿಯ ವ್ಯವಹಾರವನ್ನು ಮಾಡುವುದಾದರೆ ತಮ್ಮ ಮೂಲಕ ಏಕೆ ನಡೆಯಲಿಲ್ಲ ಇದು ತಮ್ಮ ಗಮನಕ್ಕೆ ಬಂದಿದೆಯೇ ? ನಮಗೆ ಬರಬೇಕಾದಂತಹ ಕಮಿಷನ್ ೫ ಪರ್ಸೆಂಟ್ ಅಂದರೂ ಕೂಡ ೫ ಕೋಟಿ ರೂಪಾಯಿ ಬರಬೇಕಾಗಿತ್ತು. ಇದರ ಬಗ್ಗೆ ಪ್ರಜಾವಾಣಿಯಲ್ಲಿ ಆರೋಪ ಮಾಡಿದ್ದಾರೆ. ಈ ಅಗ್ರಿಮೆಂಟ್ ಅನ್ನು ಏನು ಮಾಡಿಕೊಂಡಿದ್ದೀರಿ ಇದರ ಮೂಲಕ ವ್ಯವಹಾರವನ್ನು ನಡೆಸುವುದನ್ನು ಬಿಟ್ಟು ಮಧ್ಯವರ್ತಿಗಳನ್ನು ಇಟ್ಟುಕೊಂಡು ವ್ಯವಹಾರ ಮಾಡುವ ಪ್ರಯತ್ನ ಏಕೆ ? ಕಂಡೀಷನ್ ಅನ್ನು ವಯೋಲೇಟ್ ಮಾಡುವ ಪ್ರಯತ್ನ ಏಕೆ ? ಇದರ ಬಗ್ಗೆ ಸೂಕ್ತ ಗಮನಹರಿಸಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿರುವಂತಹವರು ಷೇರ್‌ಗಳನ್ನು ಕೊಂಡುಕೊಳ್ಳುವುದಕ್ಕೆ ತಯಾರಿದ್ದರೂ ಕೂಡ ಅವನ ಜೊತೆಗೆ ಏಕೆ ವ್ಯವಹಾರವನ್ನು ಮಾಡಿದಿರಿ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕು. ಇನ್ನೂ ಅನೇಕ ಆರೋಪಗಳ ಎನ್.ಜಿ.ಇ.ಎಫ್. ಬಗ್ಗೆ ಇದೆ. ನಾನು ಅದರ ಒಂದು ಸ್ಯಾಂಪಲ್ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡಿದೆ. ಇನ್ನು ನಮ್ಮ ರಾಜ್ಯದ ರೈತರ ಬಗ್ಗೆ ಹೇಳುವುದಾದರೆ ಬೆಳೆ ವಿಮೆ ಯೋಜನೆಯ ಬಗ್ಗೆ ಸಾಕಷ್ಟು ಸಾರಿ ಇಲ್ಲಿ ಚರ್ಚೆ ಮಾಡಿದ್ದೇವೆ, ಇಲ್ಲಿ ಈಗ ಕಾಂಗ್ರೆಸ್ ಮಿತ್ರರಿದ್ದರೆ ಹೇಳುತ್ತಿದ್ದರು. ಬೆಳೆ ವಿಮೆಯನ್ನು ಜಾರಿಗೆ ತಂದ ಮೇಲೆ ಹಲವಾರು ಸಂದರ್ಭದಲ್ಲಿ ಭೀಕರ ಬರಗಾಲಕ್ಕೆ ತುತ್ತಾದಂತಹ ರೈತರಿಗೆ ಇದರಿಂದ ಅನುಕೂಲವಾಗಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಇವತ್ತು ಬರಗಾಲಕ್ಕೆ ತುತ್ತಾಗಿ ಅತಿವೃಷ್ಟಿ ಅನಾವೃಷ್ಟಿಗೊಳಗಾಗಿ ಇಡೀ ಒಂದು ತಾಲ್ಲೂಕಿನಲ್ಲಿ ಬೆಳೆ ಸಂಪೂರ್ಣವಾಗಿ ನಾಶವಾದರೆ ಬೆಳೆ ವಿಮೆ ಕೊಡುವಂತಹ ವ್ಯವಸ್ಥೆ, ಪದ್ಧತಿ ಇದ್ದರೂ ಕೂಡ ಪಂಪ್‌ಸೆಟ್ ಇರುವಂತಹ ರೈತ ಸಾಲ ತೆಗೆದುಕೊಳ್ಳುವುದಕ್ಕೆ ಹೋದರೂ ಕೂಡ ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಿಸಿ ಎಂದು ಹೇಳುತ್ತಾರೆ, ಮಾಡಿಸಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಇದು ಕಂಪಲ್ಸರಿ ಎಂದು ಹೇಳುವುದು ಬೇಡ. ಈ ಕಂಪಲ್ಸರಿಯಿಂದಾಗಿ ರೈತರಿಗೆ ಯಾವುದೇ ಸೌಲಭ್ಯ ಸಿಗುತ್ತಿಲ್ಲ. ನಮ್ಮ ಕಾಂಗ್ರೆಸ್ ಮಿತ್ರರು ಇಲ್ಲಿ ಈಗ ಇದ್ದಿದ್ದರೆ ಅವರಿಗೂ ಹೇಳಬಹುದಾಗಿತ್ತು. ಮಾನ್ಯ ರಾಜೀವಗಾಂಧಿಯವರಿಗೆ ಹೇಳಿ ಜನಾರ್ಧನ ಪೂಜಾರಿಯವರ ಮೂಲಕ ಸಾಲ ಮೇಳ ಮಾಡಿ ದೊಂಬರಾಟ ಮಾಡುವುದರ ಬದಲಾಗಿ ಸಾಯುವಂತಹ ರೈತರು ಯಾರಿದ್ದಾರೆ ಅವರಿಗೆ ಬೆಳೆ ವಿಮೆ ಸಿಗಬೇಕೆಂಬ ಕಳಕಳಿ ನಿಮಗೂ ಕೂಡ ಇದ್ದರೆ ಇವತ್ತು ಈ ಕಾನೂನನ್ನು ಬದಲಾವಣೆ ಮಾಡಿ ಕೊನೇ ಪಕ್ಷ ಒಂದು ಹಳ್ಳಿಯನ್ನು ಒಂದು ಯೂನಿಟ್ ಎಂದು ಮಾಡಬೇಕಲ್ಲವೇ ? ನಾನು ಸತ್ತರೆ ನನ್ನ ಇನ್ಶೂರೆನ್ಸ್ ಹೆಂಡತಿ ಮಕ್ಕಳಿಗೆ ಸಿಗುತ್ತದೆ. ಕ್ರಾಪ್ ಇನ್‌ಷ್ಯೂರೆನ್ಸ್ ಸಿಗಬೇಕೆಂದರೆ, ಇಡೀ ತಾಲ್ಲೂಕಿನಲ್ಲಿ ಎಲ್ಲರೂ ಸಾಯಬೇಕಾಗುತ್ತದೆ ಬೆಳೆಯೆಲ್ಲಾ ಸರ್ವನಾಶವಾಗಬೇಕು ಅಂತಹ ಪರಿಸ್ಥಿತಿ ಬರುವುದು ಬೇಡ,

೧—೦೦ ಪಿ. ಎಂ.

ಆದರೂ ಸಹಾ ರಾಜ್ಯ ಸರ್ಕಾರದಿಂದ ತಾವು ಮುಖ್ಯಮಂತ್ರಿಗಳಾಗಿ ಆಗಾಗ್ಗ ದೆಹಲಿಗೆ ಹೋಗುವಂಥ ಸಂದರ್ಭದಲ್ಲಿ ಈ ರಾಜ್ಯದ ರೈತರ ಬಗ್ಗೆ ತಮಗೆ ಕಳಕಳಿ ಇದ್ದರೆ ಈ ರೀತಿಯಲ್ಲಿ ನಾಚಿಕೆಗೆಟ್ಟ ಕಾನೂನನ್ನು ತರುವುದಕ್ಕೆ ಸಾಧ್ಯ ಇರುತ್ತಿರಲಿಲ್ಲ. ಈ ಬೆಲೆ ವಿಮೆ ಬಗ್ಗೆ ಆ ಬಡ ರೈತನಿಗೆ ಅನುಕೂಲ ಮಾಡಿಕೊಡಿ, ಆ ಬಡ ರೈತನಿಗೆ ಏನಾದರೂ ಸಹಾಯವಾಗುವ ರೀತಿಯಲ್ಲಿ ತಾವು ಏರ್ಪಾಡು ಮಾಡಲಿಕ್ಕೆ ಎಂದಾದರೂ ಆಗ್ರಹಮಾಡಿದ್ದೀರಾ? ಮುಂದೆ ಬರುವಂಥ ದಿವಸಗಳಲ್ಲಾದರೂ ಸಹಾ ಈ ಜನಕ್ಕೆ ಆ ಒಂದು ಸೌಲಭ್ಯ ಸಿಗುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೀರಾ? ಇಷ್ಟೇ ನಾನು ತಮ್ಮನ್ನು

ಕೇಳುವುದಕ್ಕೆ ಇಚ್ಛೆಪಡುವುದು. ಇಲ್ಲಿ ಸನ್ಮಾನ್ಯ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಇಲ್ಲ. ಇವತ್ತು ತಾವು ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ತಾಳಿ ಭಾಗ್ಯ ಕಾರ್ಯಕ್ರಮ, ಇದು ಒಂದು ಒಳ್ಳೆಯ ಕಾರ್ಯಕ್ರಮ. ನಾನು ಮೊನ್ನೆ ಸದನದಲ್ಲಿ ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ನನಗೆ ಸ್ಪಷ್ಟವಾಗಿ ಉತ್ತರ ಸಿಗಲಿಲ್ಲ. ಹರಿಜನ ಹೆಣ್ಣುಮಗಳೊಬ್ಬಳು ಅವಳ ಮದುವೆಯಾದಾಗ ಒಂದೆರಡು ಗ್ರಾಂ ಬಂಗಾರ ನೋಡುವ ಅವಕಾಶವಾದರೂ ಇದ್ದಿತ್ತು ಈ ಕಾರ್ಯಕ್ರಮದಡಿಯಲ್ಲಿ. ಇದು ನಿಜವಾಗಿಯೂ ಒಳ್ಳೆಯ ಯೋಜನೆ. ಆದರೆ ಬಂಗಾರದ ಬೆಲೆ ಜಾಸ್ತಿಯಾಯಿತು ಎಂದು ಈ ಕಾರ್ಯಕ್ರಮದಡಿಯಲ್ಲಿ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುವ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕತ್ತಿಗೆ ಕಟ್ಟಿಕೊಳ್ಳುವುದಕ್ಕೆ ಆಗುತ್ತದೆಯೇ? ಆ ಅರಿಸಿನಕೊಂಬಿನ ಜೊತೆಗೆ ಈ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕಟ್ಟಿಕೊಳ್ಳುವುದು. ಆ ಬಂಗಾರದ ಬದಲಿಗಾದರೂ ಬೇರೆ ಅನುಕೂಲವಾದರೂ ಆ ಜನಕ್ಕೆ ಮಾಡಿಕೊಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿ. ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು ಎಂದು ನಾನು ಕೇಳುತ್ತೇನೆ. ಇವತ್ತು ವಿದ್ಯಾ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳಿದ್ದೆ. ಏಡೆಡ್ ಸ್ಕೂಲ್ ಎಂದು ಏನು ಇವೆ, ಅಲ್ಲಿಗೆ ಯಾವ ವಿದ್ಯಾವಂತ ತರುಣ ಸರ್ಕಾರಿ ನೌಕರಿ ಸಿಗುತ್ತದೆ ಎಂದು ಬಂದಿದ್ದ. ಅವನಿಗೆ ೧೫೦—೨೦೦ ರೂಪಾಯಿಗಳ ಸಂಬಳ ಎಂದು ಕೊಡುತ್ತಿದ್ದರು, ಆ ವಿದ್ಯಾವಂತ ತರುಣ ಹೇಗೋ ನಾಳಿನ ಆಸೆಯನ್ನು ಇಟ್ಟುಕೊಂಡು ಅದರಲ್ಲೇ ಸಂಸಾರವನ್ನು ನೀಗಿಕೊಂಡು ಹೋಗುತ್ತಿದ್ದ. ಇವತ್ತಿನ ದಿವಸ ಪ್ರೈವೇಟ್ ಸ್ಕೂಲ್‌ಗಳನ್ನು ಪ್ರಾರಂಭ ಮಾಡಿರುವಂಥದ್ದೇ ದುಡ್ಡು ಮಾಡುವುದಕ್ಕೆ ಎಂಬುದು ನಮಗೂ ನಿಮಗೂ ಗೊತ್ತಿರುವ ಸಂಗತಿಯೇ ಆಗಿದೆ. ಆ ವಿದ್ಯಾವಂತ ತರುಣ ಏಳು ವರ್ಷವಾದರೂ ಆ ನಂತರ ಸಂಬಳ ಸಿಗುತ್ತದೆ ಎಂದು ಆ ರೀತಿ ಯೋಚನೆಯನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ೧೦೦ ರೂಪಾಯಿ ಸರ್ಕಾರದ ಬೊಕ್ಕಸದಿಂದ ದುಡ್ಡನ್ನು ಕೊಡುತ್ತಿದ್ದವರು ೭೫ಕ್ಕೆ ಈಗ ಇಳಿಸುವಂಥ ಪ್ರಯತ್ನ ಏನು ನೀವು ಮಾಡುತ್ತಿದ್ದೀರಿ, ಇದು ಸರಿಯೇ? ಏನು ಪ್ರೈವೇಟ್ ಸ್ಕೂಲ್‌ಗಳನ್ನು ನಡೆಸುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇವತ್ತಿನ ದಿವಸ ಆ ರೀತಿ ಕೊಟ್ಟಿರತಕ್ಕಂಥ ಎಲ್ಲಾ ಶಾಲೆಗಳನ್ನು ತಾವು ಹಿಂದಕ್ಕೆ ಪಡೆಯುವುದಕ್ಕೆ ಸಿದ್ಧರಿದ್ದೀರಾ? ಇದರ ಬಗ್ಗೆ ಸರಿಯಾದ ಗಮನವನ್ನು ಕೊಡಬೇಕು ಎಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅಗ್ರಿಕಲ್ಚರಲ್ ಮಿನಿಸ್ಟರ್ ಇದ್ದಾರೆ, ಯಾವ ರೈತರು ಬೆಳೆದಂಥ ಬೆಳೆಗಳು ಬೇರೆ ಬೇರೆ ರೋಗ ಬಂದು ಹಾಳಾಗುತ್ತಿದ್ದರೆ ಅಂಥ ಬೆಳೆಗಳಿಗೆ ೫೦ ಪರ್ಸೆಂಟ್ ಸಬ್ಸಿಡಿ ಎಂದು ಕೊಡುತ್ತಿದ್ದರು, ಆ ಸಬ್ಸಿಡಿ ಕೊಡುವ ಪ್ರಯತ್ನವೂ ಕೂಡಾ ತಪ್ಪಿಹೋಗಿದೆ. ಈ ರೀತಿಯಾಗಿ ನಮ್ಮ ಗ್ರಾಮಾಂತರ ಪ್ರದೇಶದಲ್ಲಿರುವ ರೈತನಿಗೆ ಒಂದಲ್ಲ ಒಂದು ರೀತಿಯಲ್ಲಿ ಅನ್ಯಾಯವಾಗಿದೆ. ಒಂದು ಕಡೆ ತಾಳಿಭಾಗ್ಯ, ಒಂದು ಕಡೆ ಹಸಿರುಕಾರ್ಡ್, ಒಂದು ಕಡೆ ವೃದ್ಧಾಪ್ಯವೇತನ, ಇನ್ನೊಂದು ಕಡೆ ವಿಧವಾ ವೇತನ. ಇವತ್ತು ಎಷ್ಟೋ ಜನ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತು ಕೊಳ್ಳುತ್ತಾರೆ. ಆ ಬಡಮಕ್ಕಳಿಗೆ ತಾವು ಏನು ಮಾಡಿದಿರಿ ಸ್ವಾಮಿ? ಹಳ್ಳಿಯ ಮಕ್ಕಳು, ಬಹಳ ಸಾರಿ ಫೇಲ್ ಆಗುತ್ತಾರೆ. ಅವರಿಗೆ ನೋಂದಣಿ ಫೀಸ್ ಎಷ್ಟು ಸ್ವಾಮಿ? ಐದು ರೂಪಾಯಿ ಇದ್ದದ್ದು ೫೦ ಮಾಡಿದ್ದೀರಿ. ಐದು ರೂಪಾಯಿ, ಐವತ್ತು ರೂಪಾಯಿ, ಇದು ಎಷ್ಟು ಪರ್ಸೆಂಟ್ ಜಾಸ್ತಿಯಾಯಿತು ಸ್ವಾಮಿ? ಪರೀಕ್ಷೆಯ ಅಂಕಪಟ್ಟಿಗೋಸ್ಕರ ೩೦ ಇದ್ದದ್ದು ೪೪ ರೂಪಾಯಿ. ನನಗೆ ಬಂದಿರುವ ಅಂಕ ಸರಿಯಿಲ್ಲ, ಮರು ಎಣಿಕೆ ಎಂದ ಮಾಡಿ ಎಂದು ಹೇಳಿದರೆ ಹತ್ತು ರೂಪಾಯಿ ಇದ್ದದ್ದು ೫೦ ರೂಪಾಯಿ. ಡಿಪ್ಲೊಮಾ ಸರ್ಟಿಫಿಕೇಟ್ ಬೇಕು ಎಂದು ಹೇಳಿದರೆ ೨೦ ರೂಪಾಯಿ ಇದ್ದದ್ದು ೪೦ ರೂಪಾಯಿ ಕಟ್ಟಬೇಕು. ಜೂನಿಯರ್ ಟೈಪರೈಟಿಂಗ್ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದರೆ ದುಡ್ಡನ್ನು ಜಾಸ್ತಿ ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಇದೇನು ಸ್ವಾಮಿ ಅನ್ಯಾಯ. ಬಡ ಮಕ್ಕಳು ಈ ರೀತಿ ಮಾಡಿದರೆ ಹೇಗೆ ಬದುಕುವುದಕ್ಕಾಗುತ್ತದೆ? ಒಂದು ಕಡೆಯಲ್ಲಿ ನೀವು ತಾಳಿಭಾಗ್ಯ, ಸೀರೆ, ಹಸಿರುಕಾರ್ಡ್ ಕೊಡುತ್ತೀರಿ, ಮತ್ತೊಂದು ಕಡೆ ಜೇಬಿಗೆ ಕತ್ತರಿ ಹಾಕುವುದು. ಈ ರೀತಿ ಮಾಡಿದರೆ ಸಾಮಾನ್ಯ ಜನರು ಹೇಗೆ ವಿದ್ಯಾಭ್ಯಾಸ ಮಾಡುವುದಕ್ಕಾಗುತ್ತದೆ? ಪಿ.ಹೆಚ್.ಡಿ ಮುಂತಾದವನ್ನು ಮಾಡುತ್ತಿದ್ದವರ ಮೇಲೆ ಫೀಜು ಜಾಸ್ತಿ ಮಾಡಿದರೆ ನಾವು ಕೇಳುವುದಿಲ್ಲ, ಅದರ ಬಗ್ಗೆ ನಮಗೆ ಚಿಂತೆ ಇಲ್ಲ. ಆದರೆ ಸಾಮಾನ್ಯವಾಗಿ, ಬಡವರ ಮಕ್ಕಳು, ಕಲಿಯುವ ಮಕ್ಕಳ ಮೇಲೆ ಈ ರೀತಿ ಫೀಜು ಜಾಸ್ತಿ ಮಾಡಿದರೆ ಕಷ್ಟವಾಗುತ್ತದೆ. ಒಬ್ಬ ಬಡ ರೈತ ತಾಲ್ಲೂಕು ಆಫೀಸಿಗೆ ಒಂದು ಅರ್ಜಿ ಹಾಕಿಕೊಳ್ಳಲಿಕ್ಕೆ ಬಂದರೆ ಮೊದಲು ಅರ್ಜಿ ಹಾಕಿಕೊಳ್ಳಬೇಕಾಗಿದ್ದರೆ ಒಂದು ರೂಪಾಯಿ ಇತ್ತು.

ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ತಮ್ಮ ಕಾಲದಲ್ಲಿ ಇದು ಆದದ್ದು ಇದು ಸರಿಯೇ ? ಬ್ರಿಟೀಷರ ಕಾಲದಲ್ಲಿ ಆದರೆ ಸರಿಯಾದುದೆಂದು ನಾನು ಒಪ್ಪಿಕೊಳ್ಳುತ್ತೇನೆ. ರೈತ, ಕೃಷಿ ಕಾರ್ಮಿಕ ತನಗೆ ಜಮೀನು ಬೇಕು, ವಿಧವಾ ವೇತನ ಬೇಕು ಎಂದು ಅರ್ಜಿ ಹಾಕಿದರೆ ಅವನು ಸ್ಟ್ಯಾಂಪ್ ಹಚ್ಚಬೇಕು. ಏಕೆ ಸ್ವಾಮಿ ಸ್ಟ್ಯಾಂಪ್ ಹಚ್ಚಬೇಕು ? ನೀವು ಕೆಲಸ ಮಾಡಿಕೊಟ್ಟ ಮೇಲೆ ಆತನ ಹತ್ತಿರ ೫ ರೂಪಾಯಿ ತೆಗೆದುಕೊಳ್ಳಿ. ಒಬ್ಬ ಬಡವನ ಹತ್ತಿರ ಸ್ಟ್ಯಾಂಪ್ ಫೀ ತೆಗೆದುಕೊಳ್ಳಬೇಡಿ. ಒಂದು ಅರ್ಜಿ ಎರಡು ರೂಪಾಯಿ. ಇದು ಫ್ರಂ ಆಂಡ್ ಟು ಎಂಟ್ರಿ ಆಗುವುದಿಲ್ಲ. ಇದರಿಂದ ಯಾವ ಕೆಲಸವು ಆಗುವುದಿಲ್ಲ. ಈ ರೀತಿ ಇರಬೇಕಾದರೆ ರೈತನಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಅಗತ್ಯವಾಗಿ ಬೇಕಾದ ಸ್ಟ್ಯಾಂಪ್ ಫೀ ಬೆಲೆಯನ್ನು ಒಂದು ರೂಪಾಯಿನಿಂದ ಎರಡು ರೂಪಾಯಿ ಮಾಡಿದ್ದೀರಿ. ಈ ರೀತಿ ಬಡವರ ರಕ್ತ ಹೀರುವಂತಹ ಕಾರ್ಯಕ್ರಮ ಮಾಡಬೇಡಿ. ಇಲ್ಲಿ ಎರಡು ರೂಪಾಯಿಗಳ ಪ್ರಶ್ನೆ ಅಲ್ಲ. ಆತನ ಕೆಲಸ ಮುಗಿದ ನಂತರ ನೀವು ನಿಬಂಧನೆ ಹಾಕಿ, ೫ ರೂಪಾಯಿಗಳ ಸ್ಟ್ಯಾಂಪ್ ಹಚ್ಚಿ ಎಂದು ಹೇಳಿ. ರೈತನು ತಾಲ್ಲೂಕು ಬೋರ್ಡ್ ಆಫೀಸಿಗೆ ಅರ್ಜಿ ಕೊಟ್ಟು ಎಷ್ಟು ಸಾರಿ ಕೂಲಿನಾಲಿ ಮಾಡುವುದನ್ನು ಬಿಟ್ಟು ಬರಬೇಕಾಗುತ್ತದೆ. ಬಡವ ಜಮೀನು ತನಗೆ ಬೇಕು ಎಂದು ೧೦ ಭಾರಿ ಬರಬೇಕಾಗುತ್ತದೆ. ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಈ ರೀತಿಯ ವ್ಯವಸ್ಥೆ ಬೇಡ. ಸರ್ಕಾರದವರು ಆದೇಶ ನೀಡಿದ ನಂತರ ರೈತ ತಾಲ್ಲೂಕು ಬೋರ್ಡ್ ಆಫೀಸಿಗೆ ಹೋದರೆ ಅಲ್ಲಿ ಒಂದು ತಿಂಗಳು ಬಿಟ್ಟು ಬಾ, ಆಮೇಲೆ ಬಾ, ಹೀಗೆ ಹತ್ತು ಸಲ ಆತನನ್ನು ತಿರುಗಾಡಿಸುತ್ತಾರೆ. ಐದು ನೂರು ರೂಪಾಯಿಗಳನ್ನು ಪಡೆಯಲು ಆತ ೨೫೦ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಈ ರೀತಿ ಆದರೆ ಬಡವ ಬದುಕುವುದಕ್ಕೆ ಹೇಗೆ ಸಾಧ್ಯ ? ಇನ್ನು ಸೈಟು ಕೊಡುವಂತಹ ಕಾರ್ಯಕ್ರಮ ಮುಂದಿನ ವರ್ಷ ಮಾರ್ಚ್ ಒಳಗೆ ಸೈಟು ಬಡವನಿಗೆ ಕೊಡಬೇಕೆಂದು ಹೇಳುತ್ತೀರಿ. ಏಕೆ ಬಡವನಿಗೆ ಸೈಟು ಕೊಡಬೇಕೆಂದು ನಿಮಗೆ ಜ್ಞಾಪಕಕ್ಕೆ ಬಂತು ? ಎಲೆಕ್ಷನ್ ಹತ್ತಿರ ಬರುತ್ತದೆ ಎಂದು ಅಲ್ಲವೇ ಕಳೆದ ವರ್ಷ ಎಷ್ಟೋ ಜನರಿಗೆ ಸೈಟುಗಳನ್ನು ಹಂಚಿದ್ದೀರಿ, ಈಗ ಏಕೆ ರೈತರ ಬಗ್ಗೆ ಕಳಕಳಿ. ಬಡವರಿಗೆ ಜನತಾ ಮನೆಗಳನ್ನು ಕಟ್ಟುವಂತಹ ವ್ಯವಸ್ಥೆ ಮಾಡಿದ್ದೀರಿ. ಹಳ್ಳಿ ಹಳ್ಳಿಯಲ್ಲಿ ಈ ಯೋಜನೆ ಜಾರಿ ಮಾಡಿದ್ದೀರಿ ಇನ್ನೂ ಪೂರ್ಣವಾಗಿದೆ. ಇರುವಂತಹ ಮನೆಗಳಿಗೆ ಸಬ್ಸಿಡಿಯನ್ನು ಕೊಡುವ ಪ್ರಯತ್ನ ಮಾಡಿ, ತಾಲ್ಲೂಕು ಬೋರ್ಡ್ ಮುಖಾಂತರ ಸರಿಯಾಗಿ ಮನೆಗಳನ್ನು ಕಟ್ಟುವಂತಹ ವ್ಯವಸ್ಥೆ ಮಾಡಿ. ಇದರ ಬಗೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿ. ಸನ್ಮಾನ್ಯ ಸಣ್ಣ ಉಳಿತಾಯ ಮಂತ್ರಿಗಳು ಇಲ್ಲಿ ಇಲ್ಲ. ಅವರು ನನ್ನ ಅರ್ಥದಲ್ಲಿ ಟೋಪಿ ಹಾಕಿದ್ದಾರೆ. ಇಡೀ ರಾಜ್ಯಕ್ಕೆ ಅನ್ವಯಿಸುವಂತಹ ಉಳಿತಾಯ ಯೋಜನೆ ಅವರು ಮಾಡಿದ್ದಾರೆ. ಬಜೆಟ್ ತಾಲ್ಲೂಕು ಎಂದು ಮಾಡಿ ಎಲ್ಲಾ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಜಾರಿ ಮಾಡಿದ್ದೀರಿ, ಏನು ಕಲ್ಪನೆಯಿಂದ ಮಾಡಿದ್ದೀರಿ ? ಯಾವ ತಾಲ್ಲೂಕಿನಲ್ಲಿ ಹೆಚ್ಚು ಹಣ ಸಂಗ್ರಹವನ್ನು ಮಾಡುತ್ತಾರೆ, ಅಲ್ಲಿ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿದ್ದೀರಿ. ಶಿಕಾರಿಪುರ ತಾಲ್ಲೂಕಿನಲ್ಲಿ ಒಂದೇ ಕಡೆ ಸುಮಾರು ೪೦ ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣ ಸಂಗ್ರಹಣೆ ಮಾಡಿದ್ದಾರೆ. ೩೫–೪೦ ಲಕ್ಷ ರೂಪಾಯಿ ಸಂಗ್ರಹ ಮಾಡಿದರೂ ಯಾವುದೇ ಒಂದು ಕೆಲಸವು ಆಗಿಲ್ಲ. ಚಿಕ್ಕಮಂಗಳೂರಿನಲ್ಲಿ ನೀರಾವರಿ ದುಡ್ಡು ಕೊಡುವುದನ್ನು ಬಿಟ್ಟರೆ ಬೇರೆ ಯಾವ ಕಡೆಯಲ್ಲಿ ಬಜೆಟ್ ಯೋಜನೆಯಲ್ಲಿ, ಸಣ್ಣ ಉಳಿತಾಯದ ಮೂಲದಿಂದ ಬಂದ ಹಣದಲ್ಲಿ ಯಾವ ಅನುಕೂಲ ಮಾಡಿ ಕೊಟ್ಟಿದ್ದೀರಿ ? ನಿಮಗೆ ಬರುವ ಆದಾಯದಲ್ಲಿ ಕಡಿಮೆ ಏನು ಆಗಿಲ್ಲ. ಸಣ್ಣ ಉಳಿತಾಯ ಯೋಜನೆಯಿಂದ ಸಾಕಷ್ಟು ಹಣ ಬರುತ್ತದೆ, ನೀವು ಅಧಿಕಾರಕ್ಕೆ ಬಂದ ಮೇಲೆ ಲೆಕ್ಕ ತೆಗೆದುಕೊಂಡರೆ ೧೯೮೪ರಲ್ಲಿ ೬೦ ಕೋಟಿ ರೂಪಾಯಿಗಳು ಸಣ್ಣ ಉಳಿತಾಯ ಯೋಜನೆಯಿಂದ ಸಂಗ್ರಹವಾಗಿದೆ. ೨೫ ಪರ್ಸೆಂಟ್ ಆಯಿತು. ೧೯೮೫ರಲ್ಲಿ ೧೬೦ ಕೋಟಿ ರೂಪಾಯಿಗಳು ೧೯೮೬ರಲ್ಲಿ ೧೭೭ ಕೋಟಿ ರೂಪಾಯಿಗಳು ೧೯೮೭ರ ಡಿಸೆಂಬರ್ ಹೊತ್ತಿಗೆ ೧೩೫ ಕೋಟಿ ರೂಪಾಯಿಗಳು ಬಂದಿದೆ, ಇನ್ನೂ ಬರುವುದಿದೆ. ಹೆಚ್ಚು ಉಳಿತಾಯ ಮಾಡಿ, ಎಂದು ಜನರಿಗೆ ಹೇಳಿದ್ದರಿಂದ ಅವರು ಕಷ್ಟದ ಪರಿಸ್ಥಿತಿಯಲ್ಲಿಯೂ ಉಳಿತಾಯ ಮಾಡಿದ್ದಾರೆ, ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ಹೋದ ವರ್ಷ ಬರಗಾಲ ಇದ್ದಾಗಲೂ ಸಹ, ಕಷ್ಟದ ಪರಿಸ್ಥಿತಿಯಲ್ಲಿದ್ದರೂ ಸಹ ಅಂತಹ ಸಂದರ್ಭದಲ್ಲಿಯೂ ಉಳಿತಾಯವನ್ನು ಮಾಡಿದ್ದಾರೆ. ಕಳೆದ ೫–೧೦ ವರ್ಷದಿಂದ ನಮ್ಮ ಶಿಕಾರಿಪುರದಿಂದ ಸರ್ಕಾರಕ್ಕೆ ಬರಬೇಕಾಗಿರುವುದು ೨೫% ಪರ್ಸೆಂಟ್ ಅದು ಬಂದಿದೆ. ಆದರೂ ಸಹ ನಿಮ್ಮ ಡಿವಿಜನಲ್ ಕಮೀಷನರ್‌ಗೆ ಹೆಚ್ಚು ಕಂದಾಯವನ್ನು ವಸೂಲು ಮಾಡಬೇಕೆಂದು ಸರ್ಕ್ಯುಲರ್ ಕಳಿಸಿದ್ದಾರೆ. ೫೦ ಪರ್ಸೆಂಟ್ ಟಾರ್ಗೆಟ್‌ನ್ನು ಫಿಕ್ಸ್ ಮಾಡಲಾಗಿದೆ. ೪೦ ಲಕ್ಷ ರೂಪಾಯಿಯನ್ನು ಸಣ್ಣ ಉಳಿತಾಯದಲ್ಲಿ ತೊಡಗಿಸಿದ್ದರೂ ಸಹ

ಬರಗಾಲದ ಸಮಯದಲ್ಲಿ ನೀರಾವರಿ ಮತ್ತು ಕಂದಾಯ ತೆರಿಗೆಯನ್ನು ವಸೂಲು ಮಾಡಿದ್ದಾರೆ. ಒಂದು ಕಡೆ ೧೪೫ ಹಳ್ಳಿಗಳು ಭೀಕರ ಬರಗಾಲಕ್ಕೆ ಒಳಗಾಗಿರುವಂತಹ ಪರಿಸ್ಥಿತಿಯಲ್ಲಿ ಅಧಿಕಾರಿಗಳಿಗೆ ಹೆಚ್ಚು ಕಂದಾಯವನ್ನು ವಸೂಲು ಮಾಡಲು ಆದೇಶ ನೀಡಲಾಗಿದೆ. ಇವರಿಗೆ ರೈತರ ಬಗ್ಗೆ ಮತ್ತು ಬಡವರ ಬಗ್ಗೆ ಹೆಚ್ಚಿನ ಕಳಕಳಿ ಇದ್ದಿದ್ದರೆ ಇಂತಹ ಸುತ್ತೋಲೆ ಏತಕ್ಕೆ ಹೋಗುತ್ತಿತ್ತು. ಈ ರೀತಿ ಮಾಡುವುದು ಸರಿಯೇ ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ? ಇಂತಹ ಕೆಲಸವನ್ನು ಮಾತ್ರ ಮಾಡಬಾರದೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ?

ಇನ್ನು ರೇಷ್ಮೆ ಉದ್ಯಮ ಮಾಡುತ್ತಿರುವ ಜನರ ಪೈಕಿ ಸುಮಾರು ೫ ಸಾವಿರ ಜನರು ತಮ್ಮ ಕಷ್ಟವನ್ನು ಹೇಳಿಕೊಳ್ಳಲು ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೆ ಕಾಲುನಡಿಗೆಯಲ್ಲಿ ಬರುತ್ತಿದ್ದಾರೆ. ಕಚ್ಚಾ ರೇಷ್ಮೆಯ ಬೆಲೆ ಜಾಸ್ತಿ. ಕೆ.ಜಿ.ಗೆ ೫೦೦ರಿಂದ ೬೦೦ ರೂಪಾಯಿಗಳವರೆಗೆ ಇದ್ದಿದ್ದು ಈಗ ೯೦೦ ರೂಪಾಯಿಗಳವರೆಗೆ ಜಾಸ್ತಿ ಆಗಿದೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದಿರುವ ಈ ಸಮಯದಲ್ಲಿ ಸರ್ಕಾರದವರು ಈ ಸಣ್ಣಪುಟ್ಟ ಕೈಗಾರಿಕೆಗಳನ್ನು ನಡೆಸುತ್ತಿರುವವರು ನೆಮ್ಮದಿಯಿಂದ ಜೀವನ ನಡೆಸಲು ಏತಕ್ಕೆ ಸೂಕ್ತ ವ್ಯವಸ್ಥೆ ಮಾಡಬಾರದು? ತಾವು ಸೂಕ್ತ ವ್ಯವಸ್ಥೆ ಮಾಡದಿದ್ದರೆ ಈ ಜನರೆಲ್ಲಾ ಪಟ್ಟಣಗಳಿಗೆ ವಲಸೆ ಬರುತ್ತಾರೆ. ಆಗ ಪಟ್ಟಣಗಳ ಗತಿ ಏನಾಗುತ್ತದೆಂಬುದನ್ನು ತಾವೇ ಯೋಚನೆ ಮಾಡಬೇಕು? ಮುಖ್ಯವಾಗಿ ಈಗ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾರೇಷ್ಮೆಯ ವಿತರಣೆ ಸರಿಯಾಗಿ ಆಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ನೋಡಬೇಕು. ಅವರ ಸಮಸ್ಯೆಗಳೇನೆಂಬುದನ್ನು ತಾವು ಕೇಳಿ ತಿಳಿದುಕೊಂಡು ಪರಿಹಾರ ಮಾರ್ಗವನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯವಲ್ಲವೇ?

ಶ್ರೀ ಕೆ.ಎಂ. ಮುನಿಯಪ್ಪ.—ರೇಷ್ಮೆ ಬೆಲೆ ಏರಿಕೆ ವಿಚಾರದಲ್ಲಿ ಈಗಾಗಲೇ ರಾಜ್ಯಮಟ್ಟದಲ್ಲಿರುವ ರೇಷ್ಮೆ ನೇಕಾರರ ಸಂಘದವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅವರ ಸಮಕ್ಷಮದಲ್ಲಿಯೇ ಮಾತುಕತೆ ನಡೆಸಿದ್ದಾರೆ. ಆ ಸಂದರ್ಭದಲ್ಲಿ ಈ ರಾಜ್ಯಮಟ್ಟದ ನೇಕಾರರ ಸಂಘದ ಪದಾಧಿಕಾರಿಗಳು ಮತ್ತು ದೊಡ್ಡಬಳ್ಳಾಪುರದವರು ಸಹ ಇದ್ದರು. ಈ ಬೆಲೆ ಇಳಿಸುವ ವಿಚಾರದಲ್ಲಿ ಏನಾದರೂ ಒಂದು ಪರಿಹಾರವನ್ನು ಕಲ್ಪಿಸಿಕೊಡಬೇಕೆಂದು ಅವರು ಕೇಳಿಕೊಂಡಾಗ ಈ ಬಗ್ಗೆ ಒಂದು ಕಮಿಟಿ ನೇಮಕ ಮಾಡಬೇಕೆಂದು ತೀರ್ಮಾನವಾಯಿತು. ಇದಕ್ಕೆ ಎಲ್ಲರೂ ಒಪ್ಪಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತುಂಬಾ ಸಂತೋಷ. ಮುಖ್ಯವಾಗಿ ಇಲ್ಲಿ ನಿಜವಾದ ಸಮಸ್ಯೆ ಏನಿದೆ, ಇದರ ಬಗ್ಗೆ ತಾವು ಗಮನ ಹರಿಸಬೇಕೆಂದು ಹೇಳುತ್ತಿದ್ದೇನೆ.

ಇನ್ನು ನನ್ನ ಕ್ಷೇತ್ರದಲ್ಲಿ ಕಲ್ಲುವಡ್ಡು ಯೋಜನೆಯನ್ನು ಕೈಕೊಳ್ಳಬೇಕೆಂದು ಕಳೆದ ನಾಲ್ಕು ವರ್ಷಗಳಲ್ಲಿ ನಾನು ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಹತ್ತಾರು ಸಲ ಭೇಟಿ ಮಾಡಿ ಕೇಳಿಕೊಂಡಿದ್ದೇನೆ. ಆದರೆ ಕೆಲಸ ಮಾತ್ರ ಆಗಲಿಲ್ಲ, ಇದಕ್ಕೆ ವಿಶ್ವಬ್ಯಾಂಕ್‌ನವರು ಹಣದ ಸಹಾಯ ನೀಡಲು ಒಪ್ಪಿಕೊಂಡಿದ್ದಾರೆ. ಈ ಯೋಜನೆಯಿಂದ ಸುಮಾರು ನಾಲ್ಕು ಸಾವಿರ ಎಕರೆಗಳಿಗೆ ನೀರಾವರಿ ಆಗುತ್ತದೆ. ೧೬ ಹಳ್ಳಿಗಳಲ್ಲಿರುವ ೮ ಸಾವಿರ ಕುಟುಂಬಗಳಿಗೆ ಇದರಿಂದ ಅನುಕೂಲವಾಗುತ್ತದೆ. ೧೯೮೨-೮೩ರಲ್ಲಿ ಈ ಬಗ್ಗೆ ಸರ್ವೆ ಮಾಡಿದಾಗ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಅರಣ್ಯ ಸಂಪತ್ತು ನಾಶವಾಗುತ್ತದೆಂದು ಅರಣ್ಯ ಇಲಾಖೆಯವರು ವರದಿ ಮಾಡಿದರು. ಮತ್ತೆ ೧೯೮೬-೮೭ರಲ್ಲಿ ಮತ್ತೆ ರೀ-ಸರ್ವೆ ನಡೆಸಿದಾಗ ಸುಮಾರು ೫೧ ಲಕ್ಷ ರೂಪಾಯಿಗಳಿಗೆ ಇದು ಇಳಿದಿದೆ. ಈ ಭಾಗದಿಂದ ಸುಮಾರು ೧೫-೨೦ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಶ್ರೀಗಂಧದ ಮರ ಕಳ್ಳಸಾಗಾಣಿಕೆ ಆಗಿದೆ. ಆದರೂ ಅಲ್ಲಿರುವ ಅರಣ್ಯ ಅಧಿಕಾರಿಗಳು ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದಾಗ ನಾವು ಅರಣ್ಯ ಅಧಿಕಾರಿಗಳಿಗೆ ಸರಿಯಾದ ಬುದ್ಧಿ ಕಲಿಸಬೇಕೆಂದು ಹೋರಾಟ ಮಾಡಿದೆವು. ಅಲ್ಲಿ ಬಗರ್ ಹುಕುಂ ಸಾಗುವಳಿ ಸಹ ನಡೆಯುತ್ತಿದೆ. ಈ ಕಲ್ಲುವಡ್ಡು ಯೋಜನೆ ಕೈಕೊಳ್ಳುವ ವಿಚಾರದಲ್ಲಿ ಸ್ಥಳ ಪರೀಕ್ಷೆ ಮಾಡಿ ಒಂದು ವರದಿ ಕಳುಹಿಸಿಕೊಡಿ ಎಂದು ಸರ್ಕಾರದವರು ಕೇಳಿದರೂ ಸಹ ಅಲ್ಲಿನ ಅರಣ್ಯ ಅಧಿಕಾರಿಗಳು ಅದರ ಕಡೆಗೆ ಗಮನ ಕೊಟ್ಟಿಲ್ಲ. ಒಂದು ವರದಿ ತಯಾರಿಸಿ ಕಳುಹಿಸಿಕೊಡಬೇಕೆಂಬ ಸೌಜನ್ಯವನ್ನೂ ಸಹ ಅವರು ತೋರಿಸುತ್ತಿಲ್ಲ. ಅಲ್ಲಿ ನಡೆಯುತ್ತಿರುವ ಶ್ರೀಗಂಧದ ಕಳ್ಳ ಸಾಗಾಣಿಕೆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಡಿ ಎಂದು ಮಾನ್ಯ ಅರಣ್ಯ ಸಚಿವರು ಹೇಳಿದರೆ ನಾನು ಏನನ್ನೂ ಮಾತನಾಡುವುದಿಲ್ಲ. ಆದರೆ ಕಲ್ಲುವಡ್ಡು ಯೋಜನೆ ಕೆಲಸ ಮಾತ್ರ ನಿಲ್ಲದಂತೆ ತಾವು ನೋಡಿಕೊಳ್ಳಬೇಕು. ನಾನು ಶಾಸಕನಾಗಿರುವವರೆಗೆ ಈ

ಯೋಜನೆಯ ಕೆಲಸ ಪ್ರಾರಂಭ ಮಾಡುವುದು ಬೇಡ ಎಂಬುದು ಸರ್ಕಾರದ ಉದ್ದೇಶವಾಗಿದ್ದರೆ ನಾನು ಈ ಜಾಗಕ್ಕೆ ರಾಜೀನಾಮೆ ಕೊಡಲು ಸಿದ್ಧವಾಗಿದ್ದೇನೆ. ಈಗಾಗಲೇ ೧೦-೧೫ಲಕ್ಷ ರೂಪಾಯಿಗಳಷ್ಟು ಕೆಲಸ ನಡೆದಿದೆ. ಆದರೆ ನಾನು ಎಂ.ಎಲ್.ಎ., ಆದಮೇಲೆ ಈ ಕೆಲಸ ಸ್ಥಗಿತಗೊಳ್ಳಲು ಕಾರಣವೇನು ? ಯಾವುದೇ ನೀರಾವರಿ ಯೋಜನೆ ಕೆಲಸ ಕೈಕೊಂಡಾಗ ೧೦೦-೧೫೦ ಎಕರೆಗಳಷ್ಟು ಪ್ರದೇಶ ಮುಳುಗಡೆ ಆಗುತ್ತದೆ ಇಷ್ಟು ಜಾಗ ಮುಳುಗಡೆಯಾದರೆ ನಮ್ಮಲ್ಲಿರುವಂತಹ ಸಿ ಅಂಡ್ ಡಿ ಲ್ಯಾಂಡ್‌ನ್ನು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೇವೆ. ನಮ್ಮಲ್ಲಿ ಸಾವಿರಾರು ಎಕರೆಗಳಷ್ಟು ಸಿ ಅಂಡ್ ಡಿ ಲ್ಯಾಂಡ್ ಇದೆ. ಆದ್ದರಿಂದ ಇದರ ಬಗ್ಗೆ ಕೂಡಲೇ ಗಮನ ಹರಿಸಬೇಕೆಂದು ಹೇಳುತ್ತೇನೆ.

† ಶ್ರೀ ಜಿ. ಎಸ್. ಬಾಗಲಕೋಟ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಎರಡು ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಒಂದು ನೀರಾವರಿಗೆ ಕಾಡನ್ನು ಬಿಡುಗಡೆ ಮಾಡಬೇಕು ಎನ್ನುವಂಥ ವಿಷಯ. ತಮಗೆ ಗೊತ್ತಿದೆ, ಕಾಡನ್ನು ಬಿಡುಗಡೆ ಮಾಡುವಂಥ ವಿಷಯ ನಮ್ಮ ಅಧೀನದಲ್ಲಿಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕು. ಎರಡನೆಯದಾಗಿ, ನಮ್ಮ ಅಧಿಕಾರಿಗಳು ಈ ಶ್ರೀಗಂಧವನ್ನು ರಕ್ಷಿಸುವಲ್ಲಿ ವಿಫಲರಾಗಿದ್ದಾರೆ ಎನ್ನುವಂಥ ಮಾತನ್ನು ಹೇಳಿದ್ದಾರೆ ಅದರ ಬಗ್ಗೆ ಅವರು ವಿವರನನ್ನು ಕೊಟ್ಟರೆ ನಿಶ್ಚಿತವಾಗಿಯೂ ಕೂಡ ಅವರ ಮೇಲೆ ಉಗ್ರಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಬಂದ ಮೇಲೆ ಮತ್ತು ಮಾನ್ಯ ಜೀವಿಜಯರವರು ಮಂತ್ರಿಗಳಾಗಿದ್ದಾಗಲೂ ಸಹ ಪ್ರಯತ್ನ ಮಾಡಲಿಲ್ಲ. ನಾನು ಆ ಮಾತನ್ನು ಹೇಳುವುದಿಲ. ಆದರೆ ಕಳ್ಳಸಾಗಾಣಿಕೆದಾರರ ಪ್ರಭಾವ ಎಷ್ಟೊಂದು ಹೆಚ್ಚಿದೆ, ನಮ್ಮ ಅಧಿಕಾರಿಗಳನ್ನು ಯಾವ ಮಟ್ಟಕ್ಕೆ ಬೇಕಾದರೂ ಸರಿಪಡಿಸುವಂಥ ಶಕ್ತಿ ನಮಗಿಂತ ನಿಮಗಿಂತ ಮೀರಿ ಅವರಿಗೆ ಇದೆ. ನನ್ನ ತಾಲ್ಲೂಕಿನಲ್ಲಿ ಶ್ರೀಗಂಧ ಬೆಳೆಯುವಂಥ ೧೦-೧೨ ಸಾವಿರ ಎಕರೆ ಇದ್ದಂಥ ಜಮೀನಿನಲ್ಲಿ......

ಶ್ರೀ ಬಿ. ಎ. ಜೀವಿಜಯ.—ಮೊದಲು ೧೦-೧೨ ಲಕ್ಷ ರೂಪಾಯಿಗಳ ಮಾಲನ್ನು ಹಿಡಿಯುತ್ತಾ ಇದ್ದರು. ಈಗ ಎರಡೂವರೆ, ಮೂರು ಕೋಟಿ ರೂಪಾಯಿಗಳಷ್ಟು ಮಾಲನ್ನು ಹಿಡಿಯುತ್ತಿದ್ದಾರೆ. ನಿರ್ಲಕ್ಷ್ಯಭಾವನೆಯಿಂದ ಈ ಇಲಾಖೆ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.—ಸನ್ಮಾನ್ಯ ಸದಸ್ಯರು ಹೇಳಿದಹಾಗೆ ಕಳ್ಳಸಾಗಾಣಿಕೆ ನಡೆಯುತ್ತಾ ಇತ್ತು. ಆದರೆ ಇವತ್ತು ಈ ಇಲಾಖೆ ಹೆಚ್ಚು ಚುರುಕಾಗಿದ್ದರಿಂದ ಈ ಕಳ ಸಾಗಾಣಿಕೆಯನ್ನು ತಡೆಯುವಲ್ಲಿ ಹೆಚ್ಚು ಪರಿಶ್ರಮಪಟ್ಟಿದ್ದರಿಂದ ಕಳೆದ ಏಳು-ಏಳೂವರೆ ತಿಂಗಳಲ್ಲಿ ಸುಮಾರು ೩ ಕೋಟಿ ರೂಪಾಯಿಗಳಷ್ಟು ಕಳ್ಳಸಾಗಾಣಿಕೆ ಮಾಲನ್ನು ಈ ಇಲಾಖೆ ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಗಳ ಸಹಕಾರದಿಂದ ಹಿಡಿಯಲಾಗಿದೆ. ಇದನ್ನು ಮಾನ್ಯ ಸದಸ್ಯರೂ ಕೂಡ ಒಪ್ಪಿಕೊಳ್ಳುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಮನಸ್ಸಿಗೆ ನೋವಾಗುವಂಥ ಸಂಗತಿ ಏನೆಂದರೆ, ಇಲ್ಲಿರುವಂಥ ಹಿರಿಯ ಸಚಿವರಿಗೆ ಇದರ ಬಗ್ಗೆ ಕಳಕಳಿ ಇಲ್ಲ ಎಂದಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿ ನಾನು ೨೦ ವರ್ಷಗಳಿಂದ ವಾಸ ಮಾಡುತ್ತಾ ಇದ್ದೇನೆ. ಚಂದ್ರಕಲಾ ಫಾರೆಸ್ಟ್ ಏನಿದೆ, ಎಲ್ಲಿ ಶ್ರೀಗಂಧ ಬೆಳೆಯುತ್ತದೆ, ಅಲ್ಲಿ ಒಂದು ಮರ ಕಡಿದರೆ ಸಹಜವಾಗಿ ೭-೮ ಗಿಡಗಳು ಹುಟ್ಟುತ್ತಿತ್ತು. ಅಲ್ಲಿಗೆ ಬಂದಂಥ ಅರಣ್ಯಾಧಿಕಾರಿ ಶ್ರೀಗಂಧ ಕಳ್ಳಸಾಗಾಣಿಕೆಯನ್ನು ನೋಡಿ ಶೂಟ್ ಮಾಡಿದ್ದುಂಟು ಸತ್ತವರನ್ನು ಬೆಂಕಿ ಹಚ್ಚಿ ಸುಟ್ಟರು. ಆದರೂ ಕಂಪ್ಲೇಂಟ್ ಕೊಡಲಿಲ್ಲ. ಇವತ್ತು ಏನಾಗಿದೆ ಎಂದರೆ ಸುಮಾರು ೧೦-೧೨ ಸಾವಿರ ಎಕರೆ ಇದ್ದಂಥ ಚಂದ್ರಕಲಾ ಫಾರೆಸ್ಟ್ ಏನಿತ್ತು ಅಲ್ಲಿ ಈಗ ಆನೆಗಳನ್ನು ತಂದು ಬಿಟ್ಟಿದ್ದಾರೆ. ಅಲ್ಲಿ ಒಂದು ಸಾವಿರ ಶ್ರೀಗಂಧದ ಮರ ಇದ್ದಂಥ ಕಡೆ ಈಗ ಒಂದು ಮರ ಇಲ್ಲ. ಕಳೆದ ಒಂದು ವರ್ಷದಿಂದ ಈ ಮರಗಳ ಬುಡದ ಬೇರನ್ನು ತೆಗೆಯುವಂಥ ಪ್ರಯತ್ನ ಮಾಡುತ್ತಾ ಇದ್ದಾರೆ. ಶಿಕಾರಿಪುರ ತಾಲ್ಲೂಕಿನಲ್ಲಿ ಆನೆಗಳನ್ನು ಈಗ ಕಾಯುವುದಕ್ಕೆ ತಂದಿದ್ದಾರೆ. ಮಾನ್ಯ ಅರಣ್ಯ ಸಚಿವರಿಗೆ ಗೊತ್ತಿದೆ, ನಾನೂ ನೋಡಿಕೊಂಡು ಬಂದಿದ್ದೇನೆ. ಕಳ್ಳಸಾಗಾಣಿಕೆಯನ್ನು ತಡೆಯುವುದಕ್ಕೋಸ್ಕರ ಅಧಿಕಾರಿಗಳು ರಾತ್ರಿ ಹೊತ್ತು ಆನೆಗಳನ್ನು ಬಿಡುತ್ತಾ ಇದ್ದಾರೆ. ಯಾವಾಗ ಶ್ರೀಗಂಧ ಕಳ್ಳಸಾಗಾಣಿಕೆಯಾಗಿ ಪೂರ್ತಿ ಖಾಲಿಯಾಗಿ ಬೇರು ಕಿತ್ತರು ಎಂದು ಕನ್‌ಫರ್ಮ್ ಆದಮೇಲೆ ಇದನ್ನು

ಮಾಡಿದ್ದಾರೆ. ನಾನು ಇದರ ಬಗ್ಗೆ ಆರೋಪ ಮಾಡುತ್ತಾ ಇಲ್ಲ. ಮಾನ್ಯ ಅರಣ್ಯ ಸಚಿವರ ಜೊತೆಯಲ್ಲಿ ಪರ್ಸನಲ್ಲಾಗಿ ಇದನ್ನು ಮಾತನಾಡಿದ್ದೇನೆ. ಮಾನ್ಯ ಜೀವಿಜಯರವರಿಗೂ ಹೇಳಿದ್ದೇನೆ. ೩ ಜನ ಬಂದು ಇನ್ಸ್‌ಪೆಕ್ಷನ್ ಮಾಡಿದರೆ ನಿಮ್ಮ ಅರಣ್ಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಿಲ್ಲ, ಷೂಟ್ ಮಾಡುತ್ತೀರಿ, ಬಿಡುವುದಿಲ್ಲ ನೀವು. ನಾನು ಮನಸ್ಸಿನೊಂದು ಈ ಮಾತನ್ನು ಹೇಳುತ್ತಾ ಇದ್ದೇನೆ. ಈ ರೀತಿ ಒಂದು ಅವ್ಯವಹಾರ ನಡೆಯುತ್ತಿದೆ. ಇನ್ನು ಮುಂದಾದರೂ ಇದನ್ನು ತಡೆಯುವಂಥ ಪ್ರಾಮಾಣಿಕವಾದ ಪ್ರಯತ್ನ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸಮಯವಿಲ್ಲ. ತಾವು ನನಗೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ಒಂದೇ ಒಂದು ವಿಷಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಮಾನ್ಯ ರಾಚಯ್ಯನವರೂ ಇದ್ದಾರೆ. ಶಹಾಪುರದ ವಲಗೇರಿ ಗ್ರಾಮದಲ್ಲಿ ಲಕ್ಷ್ಮಣನಾಯಕನ ಕೊಲೆಯಾಯಿತು. ನಾನು ಲಾ ಅಂಡ್ ಆರ್ಡರ್ ಬಗ್ಗೆ, ಕೊಲೆ ಬಗ್ಗೆ, ಹೆಚ್ಚು ಪ್ರಸ್ತಾಪ ಮಾಡಿ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಇಷ್ಟ ಪಡುವುದಿಲ್ಲ. ಒಂದೇ ಒಂದು ವಿನಂತಿ. ಈ ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲಿ ಕೊಲೆ, ಸುಲಿಗೆ ಆದಾಗ ತಕ್ಷಣ ಮಾನ್ಯ ಬಸವಣ್ಣಪ್ಪನವರು ಹೋಗಿ ಪರಿಹಾರ ಸೂಚಿಸಿ ಬರುತ್ತಾರೆ. ಪೋಲೀಸ್ ಸ್ಟೇಷನ್‌ನಲ್ಲಿ ಸತ್ತುಹೋದವರಿಗೆ ೧೦–೧೫ ಸಾವಿರ ಕೊಡುತ್ತೇವೆ ಎಂದು ಹೇಳಿದರು. ಶಿಕಾರಿಪುರದಲ್ಲಿ ಅಲ್ಪಸಂಖ್ಯಾತರು ಸತ್ತಾಗ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ದುಡ್ಡು ಕೊಡುತ್ತೇವೆ ಎಂದು ಹೇಳಿದರು. ಜನತಾ ಪಕ್ಷದ ಒಬ್ಬ ಲಕ್ಷ್ಮಣನಾಯಕ ಎಂಬ ಹಿಂದುಳಿದ ಜನಾಂಗದಿಂದ ಬಂದವನು, ತಾಂಡದಲ್ಲಿ ಒಬ್ಬ ಒಳ್ಳೆಯ ಯುವಕ, ಒಬ್ಬ ಶಾಸಕ ಆಗುವ ಮಟ್ಟಕ್ಕೆ ಏರುತ್ತಿದ್ದ, ವ್ಯವಸ್ಥಿತವಾಗಿ ಅವನ ಕೊಲೆ ಆಯಿತು. ಮಾನ್ಯ ಗೃಹಸಚಿವರು ಅಲ್ಲಿಗೆ ಹೋಗಿದ್ದರು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ನಾವು ತಂದೆವು. ಆ ಸ್ಥಳದಲ್ಲಿ ಮುಖ್ಯ ಮಂತ್ರಿಗಳ ನಿಧಿಯಿಂದ ೨೫ ಸಾವಿರ ಕೊಡುತ್ತೇವೆ ಎಂದು ಘೋಷಣೆ ಮಾಡುವಂಥ ಧಾರಾಳತನ ನಿಮಗೆ ಬರಲಿಲ್ಲ. ನಾವು ಈ ಸದನದಲ್ಲಿ ನಿಂತು ಇದನ್ನು ಕೇಳಬೇಕೇ. ನಿಮ್ಮ ಪಕ್ಷದ ಒಬ್ಬ ಜಿಲ್ಲಾಪರಿಷತ್ ಸದಸ್ಯನ ಕೊಲೆಯಾದರೆ ಅವನ ಕುಟುಂಬವರಿಗೆ ಸೌಜನ್ಯದಿಂದ ಪರಿಹಾರ ಕೊಡುವುದಕ್ಕೆ ನಿಮಗೆ ಆಗಲಿಲ್ಲ. ಈ ಪಾಪದ ಒಂದು ಫಲಕ್ಕೆ ಮುಂದೆ ನೀವು ತುತ್ತಾಗಬಹುದು. ಇಡೀ ಕರ್ನಾಟಕ ರಾಜ್ಯದ ಲಂಬಾಣಿ ಜನಾಂಗ ತಿರುಗಿ ಬೀಳುವ ಕಾಲ ಬರಬಹುದು. ಕೊನೆಯ ಪಕ್ಷ ಅವನ ಕುಟುಂಬದವರ ಮುಂದಿನ ವ್ಯವಸ್ಥೆಯ ದೃಷ್ಟಿಯಿಂದ ೨೫ ಸಾವಿರ ರೂಪಾಯಿಗಳ ಪರಿಹಾರವನ್ನು ತಾವು ಕೊಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳಬೇಕಾಗಿದೆ ಮಾನ್ಯ ಮುಖ್ಯಮಂತ್ರಿಯವರು ಇತ್ತೀಚೆಗೆ ಓಟಿನ ಆಸೆಗೋಸ್ಕರ, ಅಲ್ಪಸಂಖ್ಯಾತರ ಒಲುಮೆಯನ್ನು ಪಡೆಯುವ ಸಲುವಾಗಿ ಒಂದು ಮಾತು ಹೇಳಿದ್ದಾರೆ. ರಾಜ್ಯದಲ್ಲಿ ಮುಸ್ಲೀಮರು ಭಯಭೀತಿಯಿಂದ ಬದುಕುತ್ತಿದ್ದಾರೆ, ಅವರಿಗೆ ರಕ್ಷಣೆ ಬೇಕೆಂದು ಹೇಳಿದ್ದಾರೆ. ಇವೊತ್ತು ರಾಜ್ಯದಲ್ಲಿ ನಿಮ್ಮ ಸರ್ಕಾರ ಇದೆ. ಆ ರೀತಿಯ ವಾತಾವರಣ ಇದ್ದರೆ, ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಿ. ಅದನ್ನು ಬಿಟ್ಟು ತಾವು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಚಾರಕ್ಕಾಗಿ ಈ ರೀತಿ ಹೇಳುವುದು ಸರಿಯಲ್ಲ. ತಮಗೆ ಗೊತ್ತಿರುವ ಹಾಗೆ ಹಾಜ್ ಯಾತ್ರೆಗೆ ಹೋಗುವವರಿಗಾಗಿ ಕಲ್ಕತ್ತ ಮತ್ತು ಶ್ರೀನಗರಗಳಲ್ಲಿ ಭವನಗಳು ಇವೆ. ಅದೇ ರೀತಿಯ ಒಂದು ಭವನಕ್ಕಾಗಿ ೩೫ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇಲ್ಲಿ ಕ್ಯಾನ್ಸರ್ ಸಂಸ್ಥೆಗೆ ೧೦ ಲಕ್ಷ ಕೊಡುತ್ತೇವೆಂದು ವಾಗ್ದಾನ ಮಾಡಿ, ಇದುವರೆವಿಗೂ ಹಣ ಕೊಟ್ಟಿಲ್ಲ. ಆ ಬಗ್ಗೆ ಕೃಷ್ಣಬಾರ್ಗವರವರೇ ಹೇಳಿದ್ದಾರೆ. ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹಿಂದೂಗಳು ಪೂಜೆ ಮಾಡುವಂಥ ವಿಗ್ರಹಗಳನ್ನು ಹೊಡೆದು ಹಾಕುವಂಥ ಪ್ರಯತ್ನ ನಡೆಯಿತು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂಥ ಕೃತ್ಯ ನಡೆದಿದೆ. ಕೋಲಾರ ಜಿಲ್ಲೆ ಅಂತರಗಂಗೆ ಹತ್ತಿರ ನವಗ್ರಹಗಳನ್ನು ಹೊಡೆದುಹಾಕಲಾಗಿದೆ. ಪುರಾಣಪ್ರಸಿದ್ಧವಾದ ದೊಡ್ಡ ಹಿಂದೂ ದೇವಾಲಯಗಳು ಹಾಳಾಗುತ್ತಿದ್ದರೂ ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅಲ್ಪಸಂಖ್ಯಾತರಿಗೋಸ್ಕರ ಎಲ್ಲಾ ತರದ ಅನುಕೂಲಗಳನ್ನು ಮಾಡುವುದಕ್ಕೆ ಹೊರಟಿದ್ದೀರಿ ಹಿಂದೂಗಳು ಸಹ ಗೌರವದಿಂದ, ನೆಮ್ಮದಿಯಿಂದ ಜೀವನ ಮಾಡುವಂಥ ಒಂದು ವ್ಯವಸ್ಥೆಯನ್ನು ನೀವು ಮಾಡಬೇಕಾಗಿದೆ ಮಾನ್ಯ ಕಂದಾಯ ಸಚಿವರು ಇಲ್ಲಿ ಇಲ್ಲ ಎಷ್ಟು ದೇವಸ್ಥಾನಗಳನ್ನು ಕಟ್ಟುವುದಕ್ಕೆ, ಇರತಕ್ಕ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಣ ಖರ್ಚು ಮಾಡಿದ್ದೀರಿ ? ನಮ್ಮ ತಾಲ್ಲೂಕಿನಲ್ಲಿ ಸುಮಾರು ೩೫–೪೦ ಮಸೀದಿಗಳನ್ನು ಕಟ್ಟುತ್ತಿದ್ದಾರೆ. ಇರತಕ್ಕ ಮಸೀದಿಗಳ ರಿಪೇರಿ ಕೆಲಸ ಮಾಡುತ್ತಿದ್ದಾರೆ. ಪ್ರಸಿದ್ಧವಾದ ಹುಚ್ಚೂರಾಯ ದೇವಸ್ಥಾನದ

ತೇರಿನ ಗಾಲಿ ಮುರಿದುಹೋಗಿದೆ. ನಾನು ಅರಣ್ಯ ಅಧಿಕಾರಿಗಳಿಗೆ ರಿಕ್ವೆಸ್ಟ್ ಮಾಡಿಕೊಂಡು, ಒಂದು ಗಾಲಿಗೆ ಬೇಕಾದ ಸಾಮಾನುಗಳನ್ನು ತರಿಸಿ ಹಾಕಿದ್ದೆ. ಆದರೆ, ನಿಮ್ಮ ಅರಣ್ಯ ಅಧಿಕಾರಿಗಳು, ಅದನ್ನು ಸೀಸ್ ಮಾಡತಕ್ಕ ಪ್ರಯತ್ನ ಮಾಡಿದ್ದಾರೆ. ನಾನು ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಓಟಿಗೋಸ್ಕರ, ಅಲ್ಪಸಂಖ್ಯಾತರನ್ನು ತೃಪ್ತಿಪಡಿಸುವಂಥ ಕೆಲಸವನ್ನು ತಾವು ಮಾಡಬಾರದು. ಹಿಂದೂಗಳು ಬೀದಿಗಿಳಿಯುವಂಥ ಪರಿಸ್ಥಿತಿ ಬಂದೀತೆಂಬ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ತಮಗೆ ಕೊಡುತ್ತೇನೆ. ಶಹಾಪುರ ಲಕ್ಷ್ಮಣನಾಯಕನ ಕೊಲೆಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ೨೫ ಸಾವಿರ ರೂಪಾಯಿಗಳ ಘೋಷಣೆ ಮಾಡುತ್ತಾರೆಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಇವತ್ತು ರಾಜ್ಯದಲ್ಲಿ ಭೀಕರ ಬರಗಾಲ ಇರತಕ್ಕ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಮಿತ್ರರು ಯಾವುದೋ ಒಂದು ಒಣ ಪ್ರತಿಷ್ಠೆಗೆ ಒಳಗಾಗಿ ಹೊರಗಡೆ ಕುಳಿತಿದ್ದಾರೆ. ಅರಾಕ್ ಕಂಟ್ರಾಕ್ಟ್‌ಗಳಿಗೆ ಸಂಬಂಧಪಟ್ಟಂತೆ, ನಮ್ಮದು ಅದರಲ್ಲಿ ಪಾಲು ಇರಬಹುದೆಂಬ ಸಂಕೋಚ ಇಟ್ಟುಕೊಂಡು, ಯಾವ ಯಾವ ಮಂತ್ರಿಗಳ ಮಿಲಾಖೆಗೋ ಸಿಕ್ಕಿಕೊಂಡು, ಇವತ್ತು ಜನಗಳ ಸಮಸ್ಯೆಗಳ ಕಡೆ ಗಮನ ಕೊಡದೇ ಇರುವುದು ತುಂಬಾ ಬೇಸರದ ಸಂಗತಿಯಾಗಿದೆ. ನೀವೂ ಅವರೂ ಮಾತನಾಡಿಕೊಂಡು ಈ ರೀತಿ ಮಾಡುತ್ತಿದ್ದೀರೆಂಬ ಅನುಮಾನ ಕೂಡ ನಮಗೆ ಬರುತ್ತಿದೆ. ಜನಗಳ ಸಮಸ್ಯೆಗಳ ಕಡೆ ಗಮನ ಕೊಡದೇ ಒಣ ಪ್ರತಿಷ್ಠೆ ಮಾಡಬೇಕಾಗಿಲ್ಲ. ಇವತ್ತು ತಪ್ಪುಗಳು ಆಗಿದ್ದರೆ, ಅಧ್ಯಕ್ಷರು ಮತ್ತು ಸಭಾಪತಿಗಳ ಜೊತೆ ಮಾತನಾಡಿ ತಪ್ಪು ತಿದ್ದಿಕೊಂಡು, ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಕಾಂಗ್ರೆಸ್‌ನವರು ಜನಗಳ ಸಮಸ್ಯೆ ಬಗ್ಗೆ ಸದನದಲ್ಲಿ ಮಾತನಾಡಿದ್ದರೆ, ಒಳ್ಳೆಯ ಬೆಲೆ ಬರುತ್ತಿತ್ತು. ನಾನು ಮಾತನಾಡಿರತಕ್ಕ ಅನೇಕ ವಿಷಯಗಳಿಗೆ ಸರಿಯಾದ ಉತ್ತರ ಬರುವುದಿಲ್ಲ. ನಾನು ಒಬ್ಬನೇ ಇದ್ದೇನೆ ಎನ್ನುವುದು ಅವರಿಗೆ ಗೊತ್ತು, ರಾಜ್ಯದಲ್ಲಿ ಕಳೆದ ೮-೯ ತಿಂಗಳಿಂದ ಎಲ್ಲಾ ಕೆಲಸಗಳು ಸ್ಥಗಿತವಾಗಿ, ಜನರು ಕಣ್ಣೀರಲ್ಲಿ ಕೈತೊಳೆಯುವಂಥ ಸಂದರ್ಭದಲ್ಲಿ, ಕಾಂಗ್ರೆಸ್ ಮಿತ್ರರು ಒಣ ಪ್ರತಿಷ್ಠೆ ಮಾಡಿಕೊಂಡು ಈ ವಿಷಯವನ್ನು ತೀರಾ ದೂರಕ್ಕೆ ಎಳೆದುಕೊಂಡು ಹೋಗುವುದು ಸರಿಯಲ್ಲ. ಮೊನ್ನೆಯಲ್ಲಿ ವಿರೋಧ ಪಕ್ಷದ ನಾಯಕರನ್ನೇ ಸದನ ಮುಗಿಯುವರೆಗೆ ಸಸ್ಪೆಂಡ್ ಮಾಡಿದಂಥ ಪದ್ಧತಿ ಸರಿಯಲ್ಲ. ತಪ್ಪುಗಳು ಆಗಿದ್ದರೆ, ಸಭಾಪತಿಗಳ ಹತ್ತಿರ ಮಾತನಾಡಿ ಒಂದು ತೀರ್ಮಾನಕ್ಕೆ ಬರಬೇಕಾಗಿತ್ತು.

ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ದೊಡ್ಡವರಾಗುತ್ತಿದ್ದೀರಿ, ಜನಗಳ ಹಿತದೃಷ್ಟಿಯಿಂದ ಇದನ್ನು ನೀವು ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಹಿರಿಯ ಸಚಿವರಾಗಲಿ, ಈ ದಿಕ್ಕಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ, ಇದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾ, ಈಗಾಗಲೇ ಬರುವ ದಿವಸಗಳಲ್ಲಿ ರಾಜ್ಯದ ಜನತೆ ಜನತಾ ಪಕ್ಷದ ಮೇಲೆ ನಂಬಿಕೆಯನ್ನು ಇಟ್ಟುಕೊಂಡು ಏನು ಒಂದು ಬೆಂಬಲವನ್ನು ಕೊಟ್ಟರು ಈ ದೇಶದಲ್ಲಿ ಅವರು ಕಾಂಗ್ರೆಸ್ ಸರ್ಕಾರ ಎಲ್ಲೆಲ್ಲಿ ಇದೆ ಅದರ ಬಗ್ಗೆ ಧಿಕ್ಕಾರ ಹೇಳುತ್ತಿದ್ದಾರೆ. ಮುಂದೆ ಬರುವ ದಿವಸಗಳಲ್ಲಿ ಕಾಂಗ್ರೆಸ್ ಸರ್ಕಾರ ಇರತಕ್ಕ ಸಂದರ್ಭ ಇಲ್ಲ. ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರ ಬರುವಂಥ ಸೂಚನೆಗಳು ಇರುವಂಥ ಸಂದರ್ಭದಲ್ಲಿ ಸನ್ಮಾನ್ಯ ಹೆಗಡೆಯವರು, ಯಾವ ಜನತೆ ನಿಮ್ಮ ಮೇಲೆ ಪ್ರೀತಿ ಇಟ್ಟು, ಅಧಿಕಾರದಲ್ಲಿ ಕೂಡಿಸಿದರೋ, ಆ ಹಳ್ಳಿಯ ಜನತೆಯಲ್ಲಿರತಕ್ಕ ಭಾವನೆಗಳ ಬಗ್ಗೆ ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ತರಿಸಿಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡಬೇಕು. ಈ ಸರ್ಕಾರ ಬಂದ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ನಡೆದಿರುವುದರಿಂದ, ಅಲ್ಲಿ ಆಗಿರತಕ್ಕ ಅವ್ಯವಸ್ಥೆಯ ಲಾಭ ನಿಮಗೆ ಆಗುತ್ತದೆಂದು ಕಾಂಗ್ರೆಸ್ ಮಿತ್ರರು ಕಾದುಕೊಂಡು ಕುಳಿತಿರುವ ಸಂದರ್ಭದಲ್ಲಿ ಈಗಲಾದರೂ ರಾಜ್ಯದ ಜನತೆಯ ಹಿತದೃಷ್ಟಿಯಿಂದ ತಾವು ಸಮಾಲೋಚನೆ ಮಾಡಬೇಕಾಗುತ್ತದೆ. ತಾವು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಬೇರೆ ಬೇರೆ ರಾಜ್ಯಗಳಿಗೆ ಓಡಾಟ ಮಾಡಿದರೆ ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಜನಗಳ ಹಿತದೃಷ್ಟಿಯಿಂದ ತಾವು ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ. ಲೋಕಾಯುಕ್ತಕ್ಕೆ ಹಿರಿಯ ಸಚಿವರ ಬಗ್ಗೆ ದೂರು ಹೋಗಿದೆ. ನಾನು ಈ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ದೂರು ಹೋಗಿ ಸುಮಾರು ೭ ತಿಂಗಳು ಕಳೆದಿದ್ದರೂ ಸಹ ಅದರ ಬಗ್ಗೆ ಸರಿಯಾಗಿ ತೀರ್ಮಾನ ಬರುತ್ತಿಲ್ಲ ಎಂದರೆ ಇದನ್ನು ಏತಕ್ಕೆ ಮುಚ್ಚಿಟ್ಟಿದ್ದೀರಿ ? ವರದಿ ಏತಕ್ಕೆ ಬರುತ್ತಿಲ್ಲ ? ಸುಮಾರು ೭ ತಿಂಗಳು ಕಳೆದರೂ ಇನ್ನೂ ವರದಿ ಬರಲಿಲ್ಲ ಎಂದರೆ ಅರ್ಥ ಏನು ? ಆ ವರದಿ ಬರುವುದು ಎಷ್ಟು ನಿಧಾನವಾಗುತ್ತದೆಯೋ ಅಲ್ಲಿಯವರೆಗೆ ಇವರುಗಳ ಬಾಯಿಯನ್ನು ಮುಚ್ಚಬಹುದು ಎನ್ನುವ ತಂತ್ರವೋ ! ಅಥವಾ ವರದಿ

ಬಂದ ತಕ್ಷಣ ಮಾಡಿರತಕ್ಕ ಆರೋಪಗಳೆಲ್ಲಾ ಸಾಬೀತಾದರೆ ಅವರನ್ನು ಮನೆಗೆ ಕಳುಹಿಸಬೇಕಾಗುತ್ತದೆ ಎನ್ನುವ ತಂತ್ರದಿಂದಲೋ ನಿಧಾನವಾಗುತ್ತಿದೆ ಎನ್ನುವುದು ಕಂಡುಬರುತ್ತಿದೆ. ಆದುದರಿಂದ ಈ ಸದನಕ್ಕೆ ಆದಷ್ಟು ಬೇಗ ವರದಿಯನ್ನು ತರಿಸಿಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಇವೊತ್ತು ಮಂತ್ರಿ ಮಂಡಲದಲ್ಲಿ ಭಿನ್ನಾಭಿಪ್ರಾಯವಿದೆ ಎನ್ನುವಂಥದ್ದು ಇದೆ ದೇಶದ ರಾಜಕೀಯಕ್ಕೆ ಹೋಗುವ ಪ್ರಯತ್ನ ಮಾಡಿರುವ ಈ ಕಾಲದಲ್ಲಿ ನಿಮ್ಮ ಮಂತ್ರಿಗಳ ಜೊತೆ ಪರಸ್ಪರ ಒಳ್ಳೆಯ ಸಂಬಂಧ, ಇಟ್ಟುಕೊಂಡು ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ ಎನ್ನುವುದು ಬರಬಾರದು. ಜನತೆಯ ಹಿತದೃಷ್ಟಿಯಿಂದ ನಿಮ್ಮ ಸರ್ಕಾರ ಉಳಿಯಬೇಕೆಂದು ಸಲಹೆ ಕೊಡುತ್ತಿದ್ದೇನೆ. ಕಾಲ ಮಿಂಚಿದ ಮೇಲೆ ಚಿಂತನೆ ಮಾಡಿದರೆ ಇಂತಹ ಸದವಕಾಶ ನಿಮಗೆ ಸಿಕ್ಕುವುದಿಲ್ಲ. ದೇವರು ಮತ್ತು ಜನತೆ ಕೊಟ್ಟಿರುವ ಈ ಅವಕಾಶದಲ್ಲಿ ತಾವು ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ, ಈಗಲಾದರೂ ತಾವು ಈ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲ ಎಂದು ದೂರುವುದರಿಂದ ರೈತರಾಗಲಿ, ಕಾರ್ಮಿಕರಾಗಲಿ, ರಾಜ್ಯದ ಬೇರೆ ಯಾವುದೇ ಜನತೆಯಾಗಲಿ ತಮ್ಮನ್ನು ಕ್ಷಮಿಸುವುದಿಲ್ಲ. ಆದ್ದರಿಂದ, ರೈತರ ಬಗ್ಗೆ ಕಾರ್ಮಿಕರ ಬಗ್ಗೆ, ಹರಿಜನ ಗಿರಿಜನರ ಬಗ್ಗೆ ಚಿಂತನೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸ್ಪಷ್ಟವಾಗಿ ತಾವು ತಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ರೈತರು ಸುಸ್ತಿ ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳವಂತಾದ್ದು ಇರಬಹುದು, ಅಥವಾ ಎಲ್ಲದರ ಮೇಲೂ ಮನ್ನಾ ಮಾಡಿದ್ದೇವೆಂದು ಹೇಳಬಹುದು. ಇವೊತ್ತು ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀ ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಅದೇ ರೀತಿ ಜನರು ಯಾವುದೇ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿದ್ದರೂ, ಅಲ್ಲಿಯೂ ಸಹ ಆ ಜನರು ಬರಗಾಲಕ್ಕೆ ತುತ್ತಾಗಿದ್ದಾರೆ. ಅವರು ತೆಗೆದುಕೊಂಡಿರತಕ್ಕ ಸಾಲ ಸಹಕಾರ ಸಂಘದಿಂದಾಗಲಿ ಅಥವಾ ಬ್ಯಾಂಕುಗಳಿಂದಾಗಲಿ, ಎಲ್ಲಾ ಸಾಲಗಳನ್ನು ಮನ್ನಾ ಮಾಡಿ ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಹಣಕಾಸಿನ ತೊಂದರೆಗೆ ತಾವು ಸಿಕ್ಕಿಹಾಕಿಕೊಂಡಿದ್ದೀರಿ, ಆದರೂ ಸಹ ಈ ರಾಜ್ಯದ ಜನರ ಸಾಲದ ಬಗ್ಗೆ ಬಡ್ಡಿ ಮನ್ನಾ ಮಾಡಿ ಅದರಿಂದ ಜನರಿಗೆ ಅನುಕೂಲ ಆಗುವುದಾದರೆ ಅದಕ್ಕಿಂತಲೂ ಹೆಚ್ಚಿನ ಒಳ್ಳೆಯ ಕೆಲಸವನ್ನು ಇನ್ನೇನು ಸಾಧನೆ ಮಾಡಲಿಕ್ಕೆ ಆಗುವುದಿಲ್ಲ. ರೈತರನ್ನು ಉಳಿಸಲಿಕ್ಕೋಸ್ಕರ ರೈತರ ಸಾಲವನ್ನು ಮನ್ನಾ ಮಾಡಿ ಅವನಿಗೆ ಬೇಕಾದ ಸವಲತ್ತುಗಳನ್ನು ಕೊಡುವ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಅಂಕಿಅಂಶಗಳನ್ನು ಕೊಡದೇ ಅರ್ಥವಿಲ್ಲದ ಭಾಷಣವನ್ನು ಈ ಮೂಲಕ ಮಾಡಿದ್ದೀರಿ. ನಾಲ್ಕು ವರ್ಷಗಳಿಂದಲೂ ನಿಮ್ಮ ಬುದ್ಧಿವಂತಿಕೆಯನ್ನು ಖರ್ಚುಮಾಡಿ ಅಂಕಿಅಂಶಗಳನ್ನು ಕೊಡುತ್ತಿದ್ದವರು ಈಗ ಯಾವುದೇ ಅಂಕಿಅಂಶಗಳನ್ನು ಕೊಡದೇ, ಸುಮ್ಮನೆ ಸಾಂಪ್ರದಾಯಿಕ ಭಾಷಣವನ್ನು ಮಾಡಿಸಿದ್ದೀರಿಯೋ ಹೊರತು. ಇದರಲ್ಲಿ ಯಾವುದೇ ಸಂಗತಿಗಳು ಇಲ್ಲ ಮುಂದೆ ಏನು ಮಾಡುತ್ತೀರಿ ಎನ್ನುವಂಥದ್ದು ಇಲ್ಲ, ಹಿಂದೆ ತಾವು ಮಾಡುವಂಥದ್ದು ಏನಾಯಿತು ಎಂಬುದರ ಬಗ್ಗೆ ಒಂದು ಶಬ್ದ ಕೂಡ ಇಲ್ಲ. ಇದನ್ನು ನೋಡುವಂಥ ವಿಚಿತ್ರವಾದಂಥ ಪರಿಸ್ಥಿತಿ ರಾಜ್ಯದ ಜನತೆಗೆ ಬಂದಿದೆ. ಈ ಸಮಯದಲ್ಲಾದರೂ ಕೂಡ ಬರುವ ಹಣಕಾಸಿನ ಪರಿಸ್ಥಿತಿಯನ್ನು ಸರಿಯಾದ ರೀತಿಯನ್ನು ಉಪಯೋಗಿಸಿಕೊಂಡು ಅಗತ್ಯವಿರುವಂಥ ಕಡೆ ಖರ್ಚು ಮಾಡುವಂಥ ಪ್ರಯತ್ನವನ್ನು ಮಾಡಬೇಕು. ಇನ್ನು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಹೇಳಬೇಕೆಂದರೆ, ಇವೊತ್ತಿಗೂ ಅರೇಕ್, ಬ್ರಾಂದಿ, ವಿಸ್ಕಿ, ಮಾರಾಟಗಾರರಿಂದ ಸುಮಾರು ನೂರು ಕೋಟಿ ರೂಪಾಯಿಗಳಿಗೂ ಜಾಸ್ತಿ ಹಣ ಬರಬೇಕು. ಏತಕ್ಕೆ ಆ ಹಣ ಇದುವರೆಗೂ ವಸೂಲು ಆಗಲಿಲ್ಲ. ಸೇಲ್ಸ್ ಟ್ಯಾಕ್ಸ್‌ನಿಂದ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಬರಬೇಕು ಏತಕ್ಕೆ ಈ ಹಣ ವಸೂಲು ಆಗಲಿಲ್ಲ ? ಅಧಿಕಾರಿಗಳು ಏತಕ್ಕೆ ಈ ಕಡೆ ಗಮನ ಕೊಡಲಿಲ್ಲ. ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕಡೆ ಹೆಚ್ಚು ಗಮನ ಕೊಟ್ಟು ಮುಂದೆ ಈ ರಾಜ್ಯದ ಜನತೆ ನೆಮ್ಮದಿಯಿಂದ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಹೆಚ್ಚು ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೂ, ಸಮಯ ದಾನ ಕೊಟ್ಟಂಥ ಮಾನ್ಯ ಮುಖ್ಯಮಂತ್ರಿಗಳಿಗೂ ನನ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

೧-೩೦ ಪಿ. ಎಂ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾತನಾಡುವಾಗ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನಾನು ಉತ್ತರ ಕೊಡುವಾಗ ಆ ವಿಚಾರಗಳಿಗೂ ಮತ್ತು ಬೇರೆ ವಿಚಾರಗಳ ಬಗ್ಗೆಯೂ ಹೇಳುತ್ತೇನೆ. ಅವರು ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾ ಮಾಡುತ್ತಾ ಬಂದು ಕೊನೆಯಲ್ಲಿ ''ಮಂತ್ರಿಮಂಡಲದಲ್ಲಿ ಸಾಮರಸ್ಯ ಇಲ್ಲ, ಪರಸ್ಪರ ಒಳ್ಳೆಯ ಸಂಬಂಧ ಇಲ್ಲ'' ಎಂದು ಹೇಳಿದ್ದಾರೆ. ಆ ಒಂದು ಕಲ್ಪನೆ ಅವರ ತಲೆಯಲ್ಲಿ ಇದ್ದರೆ ಅದನ್ನು ಅವರು ದಯವಿಟ್ಟು ಅದನ್ನು ಅವರು ತೆಗೆದುಹಾಕಬೇಕು. ನಮ್ಮ ಮಂತ್ರಿ ಮಂಡಲದಲ್ಲಿ ಉತ್ತಮ ಸಾಮರಸ್ಯ, ಉತ್ತಮ ಸಂಬಂಧ ಇದೆ. ಇದಕ್ಕೆ ಅವರು ಚಿಂತೆ ಮಾಡಬೇಕಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಿಮ್ಮ ಬಗ್ಗೆ ನಾನು ಚಿಂತನೆಯನ್ನು ಮಾಡುತ್ತಿಲ್ಲ. ರಾಜ್ಯದ ಜನತೆಯ ಬಗ್ಗೆ ನಾನು ಚಿಂತನೆಯನ್ನು ಮಾಡುತ್ತಿದ್ದೇನೆ.

ಶ್ರೀ ಎನ್. ಹೆಚ್. ಗೌಡ (ಕುಮಟಾ).— ಮಾನ್ಯ ಸಭಾಧ್ಯಕ್ಷರೆ. ಕಳೆದ ೨೦ನೇ ತಾರೀಖಿನ ದಿವಸ ಉಭಯ ಸದನಗಳನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಅತ್ಯಂತ ಹಾರ್ದಿಕವಾಗಿ ಮತ್ತು ಗೌರವಪೂರ್ವಕವಾಗಿ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಇಲ್ಲಿಯವರೆಗೂ ಮಾತನಾಡಿದಂಥ ನಮ್ಮ ಪಕ್ಷದ ಮತ್ತು ವಿರೋಧಪಕ್ಷದ ಎಲ್ಲಾ ಮಿತ್ರರೂ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಎಷ್ಟೋ ಬಾರಿ ಗುಡುಗು, ಮಿಂಚು ಬಂದಾಗ ಇನ್ನೇನು ಮಳೆ ಬರುತ್ತದೆಂದು ನೋಡುತ್ತೇವೆ. ಆದರೆ ಕೆಲವು ಸಾರಿ ಮಳೆಯೇ ಬರುವುದಿಲ್ಲ. ಯಾವಾಗ ಮಳೆ ಬರುವುದಿಲ್ಲ, ಆಗ ಅದಕ್ಕೆ ಮುಂಚಿತವಾಗಿ ಬಂದಂಥ ಗುಡುಗು, ಮಿಂಚುಗಳೆಲ್ಲಾ ವ್ಯರ್ಥವಾದಂತಾಗುತ್ತದೆ, ಅದೇರೀತಿ ಇಲ್ಲಿ ಮಾತನಾಡಿದ ಅನೇಕ ಜನರ ಮಾತುಗಳೂ ಕೂಡ ವ್ಯರ್ಥವಾಗುತ್ತವೆ. ಕಾಲಹರಣಕ್ಕೆ ಆಸ್ಪದವಾಗುತ್ತವೆಯೇ ಹೊರತು ಅದರಿಂದ ಯಾವ ಫಲವೂ ಸಿಕ್ಕುವುದಿಲ್ಲವೆಂದು ನನ್ನ ಅನಿಸಿಕೆ. ೩ ವರ್ಷದ ಜನತಾಪಕ್ಷದ ಆಡಳಿತದ ಬಗ್ಗೆ ಅವರು ಹೇಳಿದರೆ, ಕಳೆದ ೩೫ ವರ್ಷದ ಕಾಂಗ್ರೆಸ್‌ನ ಆಡಳಿತದ ಸಿಂಹಾವಲೋಕನವನ್ನು ನಾನು ಮಾಡಬೇಕೆಂದು ಇದ್ದೇನೆ. ನಮಗೆ ಸ್ವಾತಂತ್ರ್ಯ ಬಂದಮೇಲೆ, ಪ್ರಜಾಪ್ರಭುತ್ವ ಪದ್ಧತಿಯನ್ನು ನಾವು ಜಾರಿಯಲ್ಲಿ ತಂದಮೇಲೆ ೩೫ ವರ್ಷಗಳಕಾಲ ಆಡಳಿತವನ್ನು ನಡೆಸಿದ ಕಾಂಗ್ರೆಸ್‌ನ ಆಡಳಿತದಿಂದ ಈ ದೇಶಕ್ಕೆ ಅಥವಾ ಈ ನಾಡಿಗೆ ಅಂದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಏನಾದರೂ ಪ್ರಯೋಜನ ಆಯಿತೆ ? ಎಂಬುದನ್ನು ನಾವು ವಿಚಾರ ಮಾಡುವುದಾದರೆ ಒಬ್ಬರೇ ಕೊಟ್ಟಿರುವ ವರದಿಯ ಪ್ರಕಾರ ಕಳೆದ ೩೫ ವರ್ಷಗಳ ಅವಧಿಯಲ್ಲಿ ಬಡವರು ಬಡವರಾಗುತ್ತಾ ಹೋದರೆ, ಶ್ರೀಮಂತರು ಶ್ರೀಮಂತರಾಗುತ್ತಾ ಹೋದರು. ಶ್ರೀಮಂತಿಕೆ ಮತ್ತು ಬಡತನದ ನಡುವೆ ಅಂತರ ಹೆಚ್ಚಾಯಿತೇ ವಿನಹ ಕಡಿಮೆ ಏನೂ ಆಗಿಲ್ಲ ಒಂದುಕಡೆ ಅವರು ಟಾಟಾ, ಬಿರ್ಲಾ ರೀತಿ ೭೦ ಜನರ ಒಂದು ದೊಡ್ಡ ತಂಡವನ್ನು ಬೆಳೆಸಿದರು ಮತ್ತು ಅವರ ಕೈಯಲ್ಲಿ ಇಡೀ ದೇಶದ ಜನತೆಯ ಜೀವನಾಡಿಯೇ ಸಿಕ್ಕುವಂತೆ ಮಾಡಿದರು. ಇನ್ನೊಂದುಕಡೆ ಹಾಜಿ ಮಸ್ತಾನ್, ಬಖಿಯಾರಂಥ ಕಳ್ಳಸಾಗಾಣಿಕೆದಾರರ ತಂಡಗಳು ಬೆಳೆದು ಬಂದವು, ರತನ್‌ಲಾಲ್ ಮುಂತಾದವರು ಪುಂಖಾನುಪುಂಖವಾಗಿ ಹಣ ಗಳಿಸುವಂಥ ಪ್ರಯತ್ನ ಮಾಡಿದರು. ಮತ್ತೊಂದುಕಡೆ ಶೇಕಡ ೮೦ರಷ್ಟು ಜನಸಾಮಾನ್ಯರು ಏನಿದ್ದಾರೆ ಅವರ ಪಾಡು ಏನಾಯಿತು? ಆ ಜನರು ಯಾರಾದರೂ ತಮ್ಮ ಜೀವನದಲ್ಲಿ ಬೆಳಕನ್ನು ಕಂಡರೆ? ಆ ಜನರ ಜೀವನ ಸುಖವಾಗಿರುವುದಕ್ಕೆ ಏನಾದರೂ ಅನುಕೂಲವನ್ನು ಮಾಡಿಕೊಟ್ಟರೆ? ಎಂದರೆ ಏನೂ ಇಲ್ಲ.

ಮಾನ್ಯ ಅಧ್ಯಕ್ಷರೆ, ದೇಶದಲ್ಲಿ ಒಂದುಕಡೆ ಒಂದು ಹೊತ್ತಿನ ತುತ್ತಿಗೂ ಗತಿ ಇಲ್ಲದಂಥ ಬಡ ಜನರು ಬೀದಿಯಲ್ಲಿ ಬಿದ್ದು ಸಂಕಟದಿಂದ ಹೊರಳಾಡುವಂಥ ದೃಶ್ಯವನ್ನು ನಾವು ಇಂದೂ ಕಾಣುತ್ತಿದ್ದೇವೆ ತುಂಬ ಖೇದದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ, ಒಂದು ತುತ್ತು ಅನ್ನವನ್ನು ಕೊಡುವಂಥ ದೇಶದ ಆರ್ಥಿಕ ಪ್ರಗತಿಯನ್ನು ಮಾಡಬೇಕಾದುದು ಆಡಳಿತಗಾರರ ಕರ್ತವ್ಯ ಮೂಲಭೂತವಾದ ಪ್ರಶ್ನೆ ಎಂದು ಹೇಳುತ್ತೇನೆ. ರಾಜಕೀಯ ಆಡಳಿತವೆನ್ನುವುದು ಕೇವಲ ಆಡಳಿತ ಮಾಡುವುದಕ್ಕಾಗಿಯಲ್ಲ. ಆಡಳಿತ ಜನಜೀವನದ ಪ್ರಗತಿಗಾಗಿ ಎನ್ನುವ ಪ್ರಶ್ನೆಯೇ ಹೊರತು ಕೇವಲ ಆಡಳಿತಕ್ಕಾಗಿಯಲ್ಲ. ಹಿಂದೆ ಯಾವರೀತಿ ಆಡಳಿತ ನಡೆಯಿತು ಎನ್ನುವುದನ್ನು ಹೇಳುವುದಾದರೆ ಹೇಗಾದರೂ ಮಾಡಿ

ಜನರ ಮತವನ್ನು ಗಿಟ್ಟಿಸಿ, ಐದು ವರ್ಷಗಳ ಕಾಲ ಜನರನ್ನು ಮೋಸ ಮಾಡಿ ಆಡಳಿತವನ್ನು ನಡೆಸಿ ಬಿಟ್ಟರೆ ತಮ್ಮ ಕರ್ತವ್ಯ ಮುಗಿಯಿತು ಎನ್ನುವ ಭಾವನೆಯಿಂದ ಈ ದೇಶದಲ್ಲಿ ಆಡಳಿತವನ್ನು ನಡೆಸಿದರು. ನಿಜವಾಗಿಯೂ ಹೀಗೆ ಆಗಬಾರದಾಗಿತ್ತು. ಸತ್ಯ ಎಂದಾದರೂ ಒಂದು ದಿವಸ ಹೊರ ಬೀಳುತ್ತದೆ. ಕೆಲವು ಕಾಲ ಎಲ್ಲರನ್ನು ವಂಚಿಸಬಹುದು, ಬಹಳ ಕಾಲ ಕೆಲವರನ್ನು ವಂಚಿಸಬಹುದು. ಆದರೆ ಎಲ್ಲ ಕಾಲದಲ್ಲೂ ಎಲ್ಲರನ್ನು ವಂಚಿಸಲು ಬರುವುದಿಲ್ಲ. ಯಾವ ಜನ ನಮ್ಮ ದೇಶದಲ್ಲಿ ಸುಖವಾಗಿ ಇರಬೇಕಾಗಿತ್ತೋ ಅಂಥ ಜನ ಈ ದೇಶದ ಬೆನ್ನೆಲುಬಾಗಿ ದುಡಿಯುತ್ತಿದ್ದಾರೆ. ಬೆನ್ನೆಲುಬಾಗಿ ಬೆವರನ್ನು ಮತ್ತು ರಕ್ತವನ್ನು ಹರಿಸುತ್ತಿದ್ದಾರೆ. ಅವರು ಪಡುವಂಥ ಪಾಡು ಏನು ಎನ್ನುವುದನ್ನು ಇನ್ನೂ ಇವರು ಅರ್ಥಮಾಡಿಕೊಂಡಿಲ್ಲ. ಸಾಮಾನ್ಯ ಕಾರ್ಮಿಕರ ಜೀವನ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಂಡಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ರಾಷ್ಟ್ರಕವಿ ಕೆ.ವಿ. ಪುಟ್ಟಪ್ಪನವರು ಒಂದು ಮಾತನ್ನು ಹೇಳಿದರು ಎಲ್ಲರಿಗೂ ಸಮಪಾಲು, ಎಲ್ಲರಿಗೂ ಸಮಬಾಳು ಎಂದು. ಎಲ್ಲರಿಗೂ ಸಮಪಾಲು, ಎಲ್ಲರಿಗೂ ಸಮಬಾಳು ಇದು ಎಷ್ಟು ಸುಂದರವಾದ ಕಲ್ಪನೆ. ಕವಿಯ ಈ ಸುಂದರ ಕಲ್ಪನಾ ಜೀವನ ಸೌಧ ನುಚ್ಚುನೂರಾಗಿ ಹೋಯಿತಲ್ಲ ಎನ್ನುವ ದುಃಖ ನಮಗಾಗುತ್ತದೆ. ಎಲ್ಲರಿಗೂ ಸಮಬಾಳು ಆದರೆ ಕೆಲವರ ಪರಿಸ್ಥಿತಿ ಏನಾಗಿದೆ ? ಕೆಲವು ವರ್ಷಗಳ ಹಿಂದೆ ನಾನು ಒಂದು ದೃಶ್ಯವನ್ನು ಕಂಡೆ. ಅದು ನೋಡಬಾರದ ದೃಶ್ಯ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಶಿರಾಳಿ ಎನ್ನುವ ಊರಿನಲ್ಲಿ ಸಾಮಾನ್ಯ ಚಿತ್ರ ಕಂಡುಬಂದುದು, ಅಲ್ಲಿ ಸಾಮಾನ್ಯವಾಗಿ ಜಾತ್ರೆಗೆ ಬಂದ ಜನರಿಗೆ ಭೋಜನಕೂಟ ನಡೆಯುತ್ತದೆ, ಆ ಭೋಜನಕೂಟವಾದಮೇಲೆ ಎಲ್ಲರೂ ಉಂಡ ಬಾಳೆಎಲೆಯನ್ನು ರಾಶಿ ರಾಶಿಯಾಗಿ ಬೀದಿಯ ಪಕ್ಕದಲ್ಲಿ ಹಾಕುತ್ತಾರೆ. ಆ ರಾಶಿಯ ಸುತ್ತಲೂ ನಮ್ಮ ಸಹೋದರ ಸಹೋದರಿಯರು ಕುಳಿತು ಎಂಜಲ ಬಾಳೆಎಲೆಗಳನ್ನು ಹಂಚಿಕೊಂಡು ಅದರಲ್ಲಿ ಅನ್ನದ ಅಗಳು ಇತರ ದೊರೆಯುವ ಪದಾರ್ಥಗಳನ್ನು ಒಟ್ಟುಗೂಡಿಸಿ, ಎಲ್ಲರೂ ಹಂಚಿಕೊಂಡು ಹೊಟ್ಟೆ ತುಂಬಿಕೊಂಡು ನಗುನಗುತ್ತಾ ಕೊತ್ತುಕೊಂಡು ಹೋಗುವಂಥ ದೃಶ್ಯ. ಮೂವತ್ತೈದು ವರ್ಷಗಳ ಕಾಲ ಆಡಳಿತವನ್ನು ಮಾಡಿದ ಪ್ರತಿಫಲವಾಗಿ ಈ ದೇಶಕ್ಕೆ ಕೊಟ್ಟಂಥ ಕಾಣಿಕೆ ಇದು. ಇನ್ನೊಂದು ಉದಾಹರಣೆಯನ್ನು ಕೊಡುವುದಾದರೆ ನಮ್ಮ ಊರು ಗೋಕರ್ಣ, ಬಿನ್ನಿಕೋಡ್ಲ ಎಂಬ ಊರಿನ ಸಮೀಪ ಒಂದು ಚಿಕ್ಕ ಊರಿನಲ್ಲಿ ಪರಿಶಿಷ್ಟ ಜನಾಂಗಕ್ಕೆ ಸೇರಿದಂಥ ಜನ ಅಲ್ಲಿ ವಾಸ ಮಾಡುತ್ತಿದ್ದಾರೆ ಮೊದಲನೆಯದಾಗಿ ಅವರಿಗೆ ಯಾವ ಒಂದು ಉದ್ಯೋಗವೂ ಇಲ್ಲ. ಅವರ ಜೀವನಕ್ಕೆ ಯಾವ ಆಧಾರವೂ ಇಲ್ಲ. ಯಾರ ಮನೆಯಲ್ಲಾದರೂ ಕೂಲಿ ಮಾಡಿಕೊಂಡು ಹೇಗೋ ಕಾಲ ಕಳೆದುಕೊಂಡಿರುತ್ತಾರೆ ಇವರಲ್ಲಿ ಹಲವಾರು ಜನರು ಉಪ್ಪನ್ನು ತಯಾರು ಮಾಡತಕ್ಕಂಥ ಸಾಣಿಕಟ್ಟೆಯ ಉಪ್ಪಿನ ಆಗರದಲ್ಲಿ ಕೆಲಸಮಾಡಿಕೊಂಡಿರುತ್ತಾರೆ. ಕೆಲಸ ಇಲ್ಲದ ಸಮಯದಲ್ಲಿ ಪಕ್ಕದ ಊರಾದ ಗೋವೆಗೆ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುವಂಥ ಪದ್ಧತಿ ಇರುತ್ತದೆ. ಮತ್ತೆ ಬರುತ್ತಾರೆ, ಇಂಥವರ ಜೀವನ ಏನಾಗಿದೆ ಎಂದರೆ ಇವರ ಜನಸಂಖ್ಯೆ ಬೆಳೆಯುವುದಕ್ಕೆ ಬರಲಾಗಿ ದಿನದಿನಕ್ಕೆ ಅದು ಸೊರಗಿಹೋಗುತ್ತಿದೆ. ಈ ಜನಾಂಗದ ಚಿಕ್ಕವಯಸ್ಸಿನ ಮಕ್ಕಳೂ ಕೂಡ ಯಾವವಿಧವಾದ ಸಹಾಯವನ್ನು ಹೊಂದಲು ಅವಕಾಶವಾಗಿಲ್ಲ. ಇತರೇ ಜನಾಂಗದವರು ಬೇಕಾದಷ್ಟು ಸಹಾಯವನ್ನು ಪಡೆದಿರುತ್ತಾರೆ. ಆದರೂ ಕೂಡ ದೊರೆಯದೆ ಇವರ ಪರಿಸ್ಥಿತಿ ಹಾಗೆಯೇ ಉಳಿದಿದೆ. ನಮ್ಮ ದೇಶದಲ್ಲಿ ಜಾತೀಯತೆಯ ಅರ್ಭುದ ಬೆಳೆದಿದೆ. ಈ ೩೫ ವರ್ಷಗಳ ಆಡಳಿತದ ಪ್ರತಿಫಲದಿಂದ ಬೆಳೆದಿರತಕ್ಕಂಥ ಜಾತೀಯ ಅರ್ಭುದ ನಿಜವಾಗಿಯೂ ದುಃಖಪಡುವಂತಾಗಿದೆ. ಇದು ಯಾವ ಹಂತದಲ್ಲಿ ಬೆಳೆದಿದೆ ಎನ್ನುವುದನ್ನು ಹೇಳುವುದಾದರೆ ನಮ್ಮ ಕನ್ನಡದ ಒಬ್ಬ ದೊಡ್ಡ ಕವಿ. ಅಕ್ಕುಂಡಿ ಎನ್ನುವವರು ಹೇಳುತ್ತಾರೆ ಅದು ನಾವು ಎನ್ನುವ ಕವನವನ್ನು ಬರೆಯುತ್ತಾ, ನಾವು ಎಂದರೆ ಎಷ್ಟು ದೊಡ್ಡ ಜನ ಅಂಥ ತಿಳಿದುಕೊಂಡಿದ್ದೇವೆ ಈ ದೇಶದಲ್ಲಿ ''ಭಾರತ ಮಾತೆಯ ಪುಣ್ಯದ ಉದರದಲ್ಲಿ ಬಂದವರು ನಾವು. ಗಂಗಾಮಾತೆಯ ಪುಣ್ಯ ನದಿಯಲಿ ಮಿಂದವರು ನಾವು ಇಂಥ ದೊಡ್ಡ ಜನ ನಾವು ಏನು ಮಾಡುತ್ತೇವೆಂದರೆ ಕಲಿತುದನ್ನೆಲ್ಲವನ್ನು ಒಮ್ಮಿಂದೊಮ್ಮೆಲೆ ಮರೆತವರು ನಾವು ಎಂದು ಅವರು ಬರೆಯುತ್ತಾರೆ''.

ಏನು ಬೇಕಾದುದು ಅದನ್ನು ಓದುತ್ತಾರೆ. ಪುಸ್ತಕ ಓದುತ್ತಾರೆ. ರಾಮಾಯಣ ಓದುತ್ತಾರೆ ಮಹಾಭಾರತ ಓದುತ್ತಾರೆ, ಭಗವದ್ಗೀತೆ ಓದುತ್ತಾರೆ, ಬೇಕಾದಷ್ಟು ಎಷ್ಟೋ ಸಿದ್ಧಾಂತಗಳನ್ನು ಪುಂಖಾನುಪುಂಖವಾಗಿ ಹೇಳುತ್ತಾ ಹೋಗಿ ಕೊನೆಗೆ ನಾವು ಮಾಡುವುದೇನೆಂದರೆ, ಒಬ್ಬ ಕವಿ ಹೇಳಿದ ಹಾಗೆ '' ಬೀದಿಯ ಕಲ್ಲಿಗೆ ಜಾತಿಯ ಕೊಡಲಿಯ ಮಸೆದವರು ನಾವು ''ಅಂದ ಹಾಗೆ ಆಗುತ್ತದೆ. ಬೀದಿಯ ಕಲ್ಲಿಗೆ ಜಾತಿಯ ಕೊಡಲಿಯನ್ನು ಮಸೆದು ಬೀದಿ ಬೀದಿಯಲ್ಲಿ ಜಾತಿಯತೆಯನ್ನು ಪ್ರತಿಪಾ

ಸುತ್ತಿರುತ್ತೇವೆ. ಈ ಹಂತಕ್ಕೆ ನಾವು ಮುಟ್ಟಿದ್ದೇವೆ. ರಾಜಕೀಯವಾಗಿ ಜಾತೀಯತೆ ಎದ್ದು ಕಾಣುತ್ತಿದೆ. ಅದು ಯಾವ ರೀತಿ ಬೆಳೆದಿದೆ ಎಂದರೆ ಅದೊಂದು ಅರ್ಬುದ ರೋಗವಾಗಿದೆ. ಒಮ್ಮೆ ಅರ್ಬುದ ರೋಗ ಮನುಷ್ಯರಿಗೆ ಬಂದ ಮೇಲೆ ಅದನ್ನು ಗುಣಪಡಿಸುವುದು ಹೇಗೆ ಕಷ್ಟವೋ ಹಾಗೆ ದೇಶದ ಜನತೆಯ ಜೀವನಾಡಿಯಲ್ಲಿ ಜಾತೀಯತೆಯ ಭಾವನೆ ಬೆಳೆದಿದೆ. ಈ ರೀತಿ ಜನಾಂಗ ಒಡೆದು ಸುಚ್ಚು ನೂರಾಗಿದೆ. ಇಂಥ ಪರಿಸ್ಥಿತಿಯು ನಿರ್ಮಾಣ ೩೫ ವರ್ಷಗಳ ಅವಧಿಯಲ್ಲಿ ಆಗಿದೆ. ಉತ್ತರ ಕನ್ನಡ ಜಿಲ್ಲೆಯ ದಿನಕರ ದೇಸಾಯಿಯವರು ನಮ್ಮ ರಾಜಕೀಯ ಗುರುಗಳು. ಅಲ್ಲದೆ ಅವರು ಒಬ್ಬ ದೊಡ್ಡ ಕವಿಗಳು ಕೂಡ ಹೌದು. ಅವರು ಉತ್ತರ ಕನ್ನಡ ಜಿಲ್ಲೆಯ ಪರಿಶಿಷ್ಟ ಜನಾಂಗಕ್ಕೆ ಸೇರಿದವರು ಜೀವನವನ್ನು ಕುರಿತು ಬರೆಯುತ್ತಾ ಹೀಗೆ ಹೇಳುತ್ತಾರೆ. 'ಹರಿಜನರು ಬೆಳಗಿನಿಂದ ಬೈಗಿನವರೆಗೆ ದುಡಿದರೂ ಹೊಟ್ಟೆಗೆ ಹಿಟ್ಟಿಲ್ಲದಂತಾಗಿದ್ದಾರೆ, ಎಂದು ಬರೆಯುತ್ತಾರೆ. ಆ ರೀತಿ ಆಗಿದೆ ನಮ್ಮ ದೇಶದ ಪರಿಸ್ಥಿತಿ. ತಿಪ್ಪೆಯಲ್ಲಿ ಬಿದ್ದಂತಹ ಕಾಳನ್ನು ತಿನ್ನು ಪರಿಸ್ಥಿತಿ ಬಂದಿದೆ. ಕೆಲವು ವರ್ಷಗಳ ಹಿಂದೆ ಮಂಗಳೂರಿನ ದೊಡ್ಡ ಹೋಟೆಲಿನ ಸಮೀಪದಲ್ಲಿ ನಿಂತು ನೋಡುತ್ತಿದ್ದೆವು. ಹೋಟೆಲಿನ ಒಳಗಿನಿಂದ ರಾಡಿ ನೀರು ಹರಿದು ಹೋಗುವಲ್ಲಿ ಏನಾದರೂ ರೊಟ್ಟಿ ಚೂರುಗಳು ಬರುತ್ತವೆಯೋ ಎಂದು ೨-೩ ಮಕ್ಕಳು ಕುತೂಹಲದಿಂದ ನೋಡುತ್ತಿದ್ದವು. ರೊಟ್ಟಿ ಚೂರು ಬಂದ ತಕ್ಷಣ ಅವುಗಳನ್ನು ಹಿಡಿದು ತಿನ್ನುವುದನ್ನು ನೋಡಿದರೆ ಯಾರಿಗೇ ತಾನೇ ವ್ಯಥೆಯಾಗುವುದಿಲ್ಲ. ಇಂಥ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಯಿತಲ್ಲ, ಇಂಥ ಪರಿಸ್ಥಿತಿಗೆ ನಮ್ಮ ಕರ್ನಾಟಕ ಬಂತಲ್ಲ ಎಂದು ನಮಗೆ ವ್ಯಥೆಯಾಗುತ್ತದೆ. ಈ ಬಗ್ಗೆ ಜನತೆ ಕೂಡ ವಿಚಾರ ಮಾಡುತ್ತದೆ. ಎಲ್ಲಾ ಕಾಲದಲ್ಲೂ ಜನರನ್ನು ಮೋಸ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈ ಉದಾಹರಣೆಗಳಿಂದ ಗೊತ್ತಾಗುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಿಂದ ಈ ಒಂದು ಮಾತನ್ನು ಓದಬಯಸುತ್ತೇನೆ,

"ಇಂದಿಗೆ ಸರಿಯಾಗಿ ಐದು ವರ್ಷಗಳ ಹಿಂದೆ ಕರ್ನಾಟಕ ಜನತೆ ತಮಗಾಗಿ ಒಂದು ಜವಾಬ್ದಾರಿಯುತ ಸ್ಪಂದನ ಶೀಲ ಹಾಗೂ ಸುಗಮ್ಯವಾದ ಇಂದಿನ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿತು."

ನಿಜವಾಗಿ ರಾಜ್ಯಪಾಲರ ಭಾಷಣದಲ್ಲಿ ಐದು ವರ್ಷಗಳ ಕಾಲದ ಪ್ರಗತಿಯ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಈ ಅವಧಿಯಲ್ಲಿ ನಾಡಿಗೆ ದುರ್ಭಿಕ್ಷೆ ಉಂಟಾಗಿದೆ. ಸರಿಯಾಗಿ ಮಳೆ ಇಲ್ಲದೆ ಜನ ಪ್ರಕೃತಿ ವಿಕೋಪಕ್ಕೆ ತುತ್ತಾದರು. ಜನರು ಅಷ್ಟೇ ಅಲ್ಲ, ಜಾನುವಾರುಗಳು ಕೂಡ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಬಳಲುವಂಥ ಪರಿಸ್ಥಿತಿ ಬಂತು ಎಂಬುದನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ಇಂಥ ಸ್ಥಿತಿ ಇರುವಾಗ, ನಾಡು ಪ್ರಕೃತಿ ವಿಕೋಪಕ್ಕೆ ಸಿಲುಕಿದಾಗ ಜನತೆ ಈ ಪಕ್ಷವನ್ನು ಆಡಳಿತಕ್ಕೆ ತರದೆ ಹೋಗಿದ್ದರೆ ಏನಾಗುತ್ತಿತ್ತೋ ಏನೋ ಎಂದು ಭೀತಿಯಾಗುತ್ತದೆ. ಐದು ವರ್ಷಗಳ ಅವಧಿಯಲ್ಲಿ ಜನತಾ ಪಕ್ಷ ಆಡಳಿತ ಮಾಡದಿದ್ದರೆ ಏನಾಗುತ್ತಿತ್ತು ಎಂದರೆ ೩೫ ವರ್ಷಗಳ ಅವಧಿಯಲ್ಲಿ ಸಂಪೂರ್ಣ ಬೆಂದು ಬೆಂಡಾಗಿ ಹೋಗಿದ್ದ ಜನರ ಜೀವನ ಇಷ್ಟು ಹೊತ್ತಿಗೆ ನಾಶವಾಗುತ್ತಿತ್ತು. ಜನರ ಜೀವನ ಹಾಗೆ ಆಗಬಾರದೆಂದು ವಿಚಾರ ಮಾಡಿದ ಬುದ್ಧಿವಂತ ಕರ್ನಾಟಕದ ಜನತೆ ಜವಾಬ್ದಾರಿಯುತವಾದ ಜನರ ಸಮಸ್ಯೆಗಳಿಗೆ ಸ್ಪಂದಿಸುವಂಥ ಜನರ ಸಮಸ್ಯೆಗಳನ್ನು ಅರಿತುಕೊಂಡು ಕಾರ್ಯಕ್ರಮಗಳನ್ನು ಕೈಗೊಳ್ಳುವಂಥ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿತು. ಈ ಸರ್ಕಾರ ೫ ವರ್ಷಗಳಲ್ಲಿ ಮಾಡಿದಂಥ ಸಾಧನೆ ಏನೆಂಬುದನ್ನು ನಾನು ಬಹಳ ವಿವರವಾಗಿ ಹೇಳದೆ ಇದ್ದರೂ ಕೂಡ ೨-೩ ಅಂಶಗಳನ್ನು ಕೊಡುತ್ತೇನೆ,

ಪ್ರಥಮವಾಗಿ ಗ್ರಾಮೀಣಾಭಿವೃದ್ಧಿ. ನಮ್ಮ ಸರ್ಕಾರದ ಉದ್ದೇಶವೇ ಇದು, ಗ್ರಾಮೀಣಾಭಿವೃದ್ಧಿ ಸರ್ಕಾರದ ಮುಖ್ಯ ಉದ್ದೇಶ ಎಂದು ೧೯೮೩ರ ಪ್ರಣಾಳಿಕೆಯಲ್ಲೇ ಇರುವುದನ್ನು ನೋಡುತ್ತೇವೆ. ಗ್ರಾಮೀಣಾಭಿವೃದ್ಧಿಯನ್ನು ಎಷ್ಟರಮಟ್ಟಿಗೆ ಸರ್ಕಾರ ಸಾಧಿಸಿದೆ ಎಂದರೆ ನಾನು ಮೊಟ್ಟಮೊದಲು ನೆನಪು ಮಾಡಿಕೊಳ್ಳುವಂಥದ್ದು ಹಸಿರು ಕಾರ್ಡಿನ ಕಾರ್ಯಕ್ರಮ. ಹಸಿರು ಕಾರ್ಡಿನ ಕಾರ್ಯಕ್ರಮ ಕ್ರಾಂತಿಕಾರಿಯಾದ ಕಾರ್ಯಕ್ರಮ ಎಂದು ಹೇಳಬಹುದು. ಹಸಿರು ಕಾರ್ಡಿನ ಕಾರ್ಯಕ್ರಮವನ್ನು ನಮ್ಮ ವಿರೋಧಿಗಳು ಟೀಕಿಸಿದ್ದುಂಟು. ಅವರು ಯಾವ ರೀತಿಯಿಂದ ಟೀಕಿಸುತ್ತಿದ್ದಾರೆ ನಮಗೆ ಗೊತ್ತಾಗುವುದಿಲ್ಲ. ಆದರೂ ಕರ್ನಾಟಕ ರಾಜ್ಯದಲ್ಲಿ ಎಷ್ಟು ಹಸಿರು ಕಾರ್ಡುಗಳನ್ನು ಕೊಟ್ಟಿದ್ದಾರೆ ಎಂಬುದನ್ನು ನೋಡಿದರೆ ೩೧,೯೩,೭೦೦ ಕುಟುಂಬಗಳು ಹಸಿರು ಕಾರ್ಡುಗಳನ್ನು ಪಡೆದುಕೊಂಡಿವೆ. ಹಸಿರು ಕಾರ್ಡುಗಳನ್ನು ಅವರು ಪಡೆದುಕೊಂಡಿರುವುದರಿಂದ ಅವರ ಜೀವನದಲ್ಲಿ ಉಸಿರಾಡುವಂಥ ವಾತಾವರಣ ನಿರ್ಮಾಣವಾಗಿದೆ, ಎರಡು ಹೊತ್ತು ಅನ್ನ ಊಟ ಮಾಡುವಂಥ

ಪರಿಸ್ಥಿತಿ ಅವರಿಗೆ ಒದಗಿದೆ. ವರ್ಷಕ್ಕೊಮ್ಮೆ ಒಳ್ಳೆಯ ಬಟ್ಟೆಯನ್ನು ತೊಟ್ಟುಕೊಳ್ಳುವಂಥ ಪರಿಸ್ಥಿತಿ ಅವರಿಗೆ ಒದಗಿದೆ. ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತಿದೆ. ಸಾವಿರ ೨೦ ಜನಸಂಖ್ಯೆಗಿಂತಲೂ ಕಡಿಮೆ ಜನಸಂಖ್ಯೆ ಇರುವಂಥ ಊರುಗಳಲ್ಲಿ ಹಸಿರು ಕಾರ್ಡನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಒಂದು ಮಾತನ್ನು ನಾನು ವಿನಮ್ರವಾಗಿ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ ಕೇವಲ ೨೦ ಸಾವಿರಕ್ಕಿಂತ ಕಡಿಮೆ ಇರುವ ಊರುಗಳಲ್ಲಿ ಮಾತ್ರ ಬಡವರು ಬದುಕುತ್ತಿಲ್ಲ. ಕಡುಬಡವರು ಎನ್ನುವವರು ೨೦ ಸಾವಿರಕ್ಕಿಂತಲೂ ಹೆಚ್ಚಿನ ಜನಸಂಖ್ಯೆ ಇರುವಂಥ ಊರುಗಳಲ್ಲೂ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ನಾನಿರುವಂಥ ಕುಮಟಾ ಪಟ್ಟಣದಲ್ಲಿ ೨೫ ಸಾವಿರ ಜನಸಂಖ್ಯೆ ಉಂಟು. ಆದರೆ ಅಲ್ಲಿ ಅಷ್ಟೇ ಕಡುಬಡವರ ಸಂಖ್ಯೆ ಇದೆ. ಬೆಂಗಳೂರಿನಂಥ ದೊಡ್ಡ ನಗರದಲ್ಲೂ ಕೂಡ ಕಡುಬಡವರು ಬೇಕಾದಷ್ಟಿದ್ದಾರೆ. ಬೀದಿಯಲ್ಲಿ ಅಲೆದಾಡುವಂಥ ಜನರಿದ್ದಾರೆ. ಅಂಥವರ ಸಲುವಾಗಿ ಕರುಣೆ ತೋರಿ ಜನ ಎಲ್ಲೇ ಇರಲಿ ಎಷ್ಟೇ ಸಂಖ್ಯೆ ಇರಲಿ ಕಡುಬಡವರನ್ನು ಗುರುತಿಸಿ ಅವರಿಗೆ ಹಸಿರು ಕಾರ್ಡ್ ಕೊಡುವಂಥ ಉಪಕಾರವನ್ನು ತಾವು ಮಾಡಬೇಕು. ಈ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ವಿನಮ್ರವಾಗಿ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ. ಎರಡನೆಯದು ಎಂದರೆ ಗ್ರಾಮೀಣ ಜನತೆಗೆ ನಾವು ವಿದ್ಯುತ್ ಒದಗಿಸಿದ್ದುದು. ಎಷ್ಟೋ ಕಾಲದಿಂದ ಶಿಲಾಯುಗದಂತೆ ಜೀವನ ಹಳ್ಳಿಯಲ್ಲಿ ನಡೆಯುತ್ತಿತ್ತು. ಇಂದೂ ಕೂಡ ಅನೇಕ ಬೆಟ್ಟದ ಸೀಮೆಯ ಊರುಗಳಲ್ಲಿ ಕಗ್ಗತ್ತಲೆಯಿದೆ. ಅವರಿಗೆ ಯಾವ ಆಧುನಿಕ ಸೌಕರ್ಯಗಳೂ ದೊರೆಯುವುದಿಲ್ಲ. ಆಧುನಿಕ ಸೌಕರ್ಯಗಳೆಲ್ಲಾ ಪಟ್ಟಣಗಳಿಗೆ ಮತ್ತು ನಗರಗಳಿಗೇ ಸೀಮಿತವಾಗಿ ಹೋಗಿದೆ. ನಿಜವಾಗಿ ನಮ್ಮ ದೇಶ, ಹಳ್ಳಿಗಳ ದೇಶ ಹಳ್ಳಿಯಲ್ಲಿ ನಮ್ಮ ನಾಡಿದೆ. ದೇಶ ಇದೆ. ಎಂಬ ಭಾವನೆ ಇರಬೇಕು. ಇದು ನಮಗೆ ಬರಬೇಕು. ಅಂಥ ಕಡೆ ಇದುವರೆಗೂ ವಿದ್ಯುತ್ ಪೂರೈಕೆ ಆಗಿಲ್ಲ. ೩೫ ವರ್ಷಗಳ ಕಾಲದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ಕೇವಲ ೬ ಸಾವಿರ ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಆಗಿತ್ತು ನಮ್ಮ ಕರ್ನಾಟಕದಲ್ಲಿ. ಇಷ್ಟು ಅಭಿವೃದ್ಧಿ ಮಾಡಿದರೆ ಸಾಕೆ ? ನೀವು ಏನು ಮಾಡಿದ್ದೀರಿ ಎಂದು ಕೇಳಿದರೆ ಸ್ಪಷ್ಟವಾಗಿ ಉತ್ತರ ಕೊಡುತ್ತೇವೆ. ೫ ವರ್ಷದ ಆಡಳಿತದಲ್ಲಿ ಜನತಾ ಸರ್ಕಾರ ೮ ಸಾವಿರ ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಮಾಡಿದೆ. ಅವರು ೩೫ ವರ್ಷದ ಆಡಳಿತದಲ್ಲಿ ೩ ಸಾವಿರ ಹಳ್ಳಿಗಳಿಗೆ ವಿದ್ಯುತ್ ಕೊಟ್ಟರೆ ನಮ್ಮ ಜನತಾ ಸರ್ಕಾರ ೮ ಸಾವಿರ ಹಳ್ಳಿಗಳಿಗೆ ೫ ವರ್ಷದಲ್ಲಿ ವಿದ್ಯುತ್ ಪೂರೈಸುವಂಥ ಕೆಲಸ ಮಾಡಿದೆ. ಇದು ನಿಜವಾಗಿಯೂ ಗಣನೀಯವಾದ ಒಂದು ಪ್ರಗತಿ ಎಂದು ಹೇಳಲಿಕ್ಕೆ ಸಂಶಯ ಪಡಬೇಕಾದ ಅಗತ್ಯ ಇಲ್ಲ. ಅಂತೆಯೇ ಕುಡಿಯುವ ನೀರಿನ ಪೂರೈಕೆ ಕೂಡ ೩ ಸಾವಿರ ಹಳ್ಳಿಗಳಿಗೆ ಆಗಿದೆ. ೨೪ ಲಕ್ಷ ಪಂಪ್‌ಸೆಟ್ಟುಗಳನ್ನು ರೈತರಿಗೆ ಒದಗಿಸಲಾಗಿದೆ, ಇದು ದೊಡ್ಡ ಕೆಲಸ. ರೈತರ ಕಡೆ ಸ್ವಲ್ಪವಾದರೂ ಗಮನ ಹರಿಸಿದಂಥ ಸರ್ಕಾರ ರೈತರ ಕೈವಾರಿಯಾಗಿ ಸರ್ಕಾರ ಈ ಕೆಲಸವನ್ನು ಅಂಥ ಕಷ್ಟದ ಪರಿಸ್ಥಿತಿಯಲ್ಲೂ ಕೂಡ ಬರಗಾಲದಂಥ ಭೀಕರ ಪರಿಸ್ಥಿತಿಯಲ್ಲಿ ಕೂಡ ೭೪ ಸಾವಿರ ಪಂಪುಸೆಟ್ಟುಗಳನ್ನು ೫ ವರ್ಷದ ಅವಧಿಯಲ್ಲಿ ರೈತರಿಗೆ ಪೂರೈಸಿದೆ ಅಂದರೆ ಇದು ನಿಜವಾಗಿಯೂ ಶ್ಲಾಘನೀಯವಾದ ವಿಷಯ.
ಇದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಸಮಾಜ ಕಲ್ಯಾಣವನ್ನು ಕುರಿತು ಬಹಳಷ್ಟು ಹೇಳಬೇಕಾದ ಅಗತ್ಯ ಇಲ್ಲ. ಏಕೆಂದರೆ ಆ ಬಗ್ಗೆ ಎಲ್ಲರೂ ಹೇಳಿದ್ದಾರೆ. ಆದರೂ ಕೂಡ ೫ ವರ್ಷದ ಅವಧಿಯಲ್ಲಿ ಸಮಾಜ ಕಲ್ಯಾಣದ ಒಂದು ಅಂಗವಾಗಿ ೨೫ ಲಕ್ಷ ಮಂದಿಗೆ ವೃದ್ಧಾಪ್ಯ ವೇತನವನ್ನು ೧೨ ಲಕ್ಷ ವಿಧವೆಯರಿಗೆ ಮಾಸಾಶನವನ್ನು ಕೊಟ್ಟಿದ್ದೇವೆ. ಕೃಷಿ ಕಾರ್ಮಿಕರಿಗೆ ಹೆರಿಗೆ ಭತ್ಯವನ್ನು ಕೊಟ್ಟಿದ್ದೇವೆ. ಅಂಗವಿಕಲರಿಗೆ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೇವೆ. ಇದೊಂದು ದೊಡ್ಡ ಕೆಲಸವೆಂದೇ ನಾವು ಗುರುತಿಸಬೇಕು. ರಷ್ಯಾದಂತಹ ದೇಶದಲ್ಲಿ ಇಂತಹ ಜನ ಸಿಕ್ಕಿದ ತಕ್ಷಣ, ಯಾರು ಜೀವನದಲ್ಲಿ ನಿರ್ಗತಿಕರು ಇದ್ದಾರೋ ಅಂತಹ ಜನರು ಕಂಡ ತಕ್ಷಣವೇ ಅವರಿಗೆ ಜೀವನವನ್ನು ಮಾಡುವಂತಹ ವ್ಯವಸ್ಥೆಯಾಗುತ್ತದೆ. ಹಾಗೆಯೇ ನಮ್ಮ ಕರ್ನಾಟಕದಂತಹ ರಾಜ್ಯದಲ್ಲೂ ಕೂಡ ಜನತಾ ಪಕ್ಷದ ೫ ವರ್ಷದ ಆಡಳಿತದಲ್ಲಿ ಯಾರು ಅಂಗವಿಕಲರು ಇದ್ದಾರೆ ಯಾರು ವಿಧವೆಯರಾಗಿ ಪರಿತಪಿಸುತ್ತಿದ್ದಾರೆ ಅಂತಹವರನ್ನು ಗುರುತಿಸಿ ಅವರಿಗೆ ಸಹಾಯ ಮಾಡಿದೆ, ಇದು ನಿಜವಾಗಿಯೂ ಹೊಗಳಬೇಕಾದ ವಿಷಯ.

ಇನ್ನು ರಾಜಕೀಯ ವಿಕೇಂದ್ರೀಕರಣದ ಬಗ್ಗೆ ಹೇಳುವುದಾದರೆ, ರಾಜಕೀಯ ವಿಕೇಂದ್ರೀಕರಣ ಕುರಿತು ಮಹಾತ್ಮ ಗಾಂಧೀಯವರು ಕಂಡ ಕನಸೆಂದು ಹೇಳಿಕೊಳ್ಳುತ್ತಾರೇ ಬಹಳ ಜನ ಬಂದರು. ಆದರೆ ಆ ಕನಸು ನನಸಾಗಲಿಲ್ಲ. ರಾಜಕೀಯ ವಿಕೇಂದ್ರೀಕರಣ ಕುರಿತು ಮಹಾತ್ಮ ಗಾಂಧೀಜಿಯವರು ಏನು ಹೇಳಿದರು ಎಂದರೆ, ಎಲ್ಲಿಯವರೆಗೆ ಹಳ್ಳಿಯ ಜನ ತಮ್ಮ ಆಡಳಿತದಲ್ಲಿ ಪಾಲುದಾರರಾಗುವುದಿಲ್ಲವೋ.

ಈ ದೇಶದ ಆಡಳಿತದಲ್ಲಿ ಪಾಲುದಾರರಾಗುವುದಿಲ್ಲವೋ ಅಲ್ಲಿಯವರೆಗೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಫಲ ದೊರಕುವುದಿಲ್ಲವೆಂದು ಹೇಳಿದರು. ಅದನ್ನು ನಮ್ಮ ಕರ್ನಾಟಕದಲ್ಲಿ ಇತ್ತೀಚಿಗೆ ಜಾರಿಗೆ ತರುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಮಂಡಲ್ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತಿನ ವ್ಯವಸ್ಥೆಯ ಮೂಲಕ ಈ ದಿವಸ ನಿಜವಾಗಿಯೂ ಹಳ್ಳಿಯ ಜನರ ಕೈಯಲ್ಲಿ ಆಡಳಿತ ಇದೆ. ಯಾವ ಜನ ನಮ್ಮ ಕೈಯಲ್ಲಿ ಅಧಿಕಾರವನ್ನು ಕೊಟ್ಟಿದ್ದರೋ, ಆ ಜನರ ಕೈಯಲ್ಲೇ ತಿರುಗಿ ಅಧಿಕಾರವನ್ನು ಕೊಡುವಂತಹ ಮಹತ್ ಕಾರ್ಯ ನಡೆದು ಹೋಗಿದೆ ಈ ಮಹತ ಕಾರ್ಯದ ಬಗ್ಗೆ ಪ್ರತಿಯೊಬ್ಬರಿಗೂ ಗೊತ್ತುಂಟು. ಇದರಲ್ಲರೂ ಜನವರಿ ೨೬ನೇ ತಾರೀಖು ಕರ್ನಾಟಕ ರಾಜಧಾನಿಯಾದ ಬೆಂಗಳೂರಿಗೆ ಬಂದು ಮಹೋತ್ಸವವನ್ನು ಕೂಡ ನಡೆಸಿದ್ದಾರೆ. ೫ ಲಕ್ಷ ಜನ ಇಲ್ಲಿಗೆ ಬಂದು ಇಲ್ಲಿ ಉತ್ಸವವನ್ನು ನೆರವೇರಿಸಿದ್ದಾರೆಂದರೆ, ಜನರಿಗೆ ಎಷ್ಟು ಸಂತೋಷವಾಗಿದೆ, ಜನರು ಈ ಸರ್ಕಾರದಲ್ಲಿ ಎಂತಹ ವಿಶ್ವಾಸ ಇಟ್ಟಿದ್ದಾರೆ ಎನ್ನುವುದು ನಮಗೆ ಗೋಚರವಾಗುತ್ತದೆ. ಆದರೆ ಈ ರಾಜಕೀಯ ವಿಕೇಂದ್ರೀಕರಣ ಮಾಡುವ ಒಂದು ದೊಡ್ಡ ಕೆಲಸ ನಡೆದು ಹೋಯಿತು. ಅಂದರೆ ಯುವಕರಿಗೆ ರಾಜಕೀಯದಲ್ಲಿ ಹೆಚ್ಚಿನ ಸ್ಥಾನ ಮಾನ ಕೊಟ್ಟಿದ್ದೇವೆ. ಇಂಗ್ಲೆಂಡ್ ನಂತಹ ದೇಶವಲ್ಲಿ ಪಾರ್ಲಿಮೆಂಟ್‌ಗೆ ಚುನಾವಣೆ ನಡೆಯುವ ಸಂದರ್ಭದಲ್ಲಿ ಕೂಡ ೧೮ ವರ್ಷ ವಯಸ್ಸಿನ ಯುವಕ ಯುವತಿಯರಿಗೆ ಮತದಾನದಲ್ಲಿ ಪಾಲುಗೊಳ್ಳುವ ಅವಕಾಶವನ್ನು ಅವರ ಸಂವಿಧಾನದಲ್ಲೇ ಮಾಡಿದ್ದಾರೆ. ಅದನ್ನೇ ಆಧಾರವಾಗಿಟ್ಟು ಕೊಂಡು ನಮ್ಮಲ್ಲೂ ಕೂಡ ಈಗಾಗಲೇ ಮಾಡಬೇಕಾಗಿತ್ತು. ಆ ಬಗ್ಗೆ ನಮ್ಮ ಸಂವಿಧಾನಕ್ಕೆ ತಿದ್ದುಪಡಿಯನ್ನು ತರಬೇಕಾಗಿತ್ತು. ಇಡೀ ರಾಷ್ಟ್ರದಲ್ಲಿ ೧೮ ವರ್ಷ ವಯಸ್ಸಿನ ಯುವಕ ಯುವತಿಯರಿಗೆ ರಾಜಕೀಯ ಹಕ್ಕು ಎಂದರೆ ಮತದಾನದ ಹಕ್ಕನ್ನು ಕೊಡಬೇಕಾಗಿತ್ತು, ಆದರೆ ಎಲ್ಲೂ ಆ ಕೆಲಸ ಇನ್ನೂ ನಡೆದಿಲ್ಲ. ಮೊಟ್ಟ ಮೊದಲ ಬಾರಿಗೆ ನಮ್ಮ ಕರ್ನಾಟಕದಲ್ಲಿ ೧೮ ವರ್ಷ ವಯಸ್ಸಿನ ಎಲ್ಲಾ ಯುವಕ ಯುವತಿಯರಿಗೆ ನಮ್ಮ ಆಡಳಿತದಲ್ಲಿ ಮತದಾನದ ಹಕ್ಕು ನೀಡುವ ಮೂಲಕ ಪಾಲುದಾರರನ್ನಾಗಿ ಮಾಡುವ ಪ್ರಯತ್ನವನ್ನು ಮಾಡಿದ್ದೇವೆ. ನಿಜವಾಗಿಯೂ ಭಾರತದ ಜನತೆಯ ದೃಷ್ಟಿಯನ್ನು ಇಟ್ಟು ಕೊಂಡು ಕರ್ನಾಟಕ ಆದರ್ಶವನ್ನು ಇತರೇ ರಾಜ್ಯಗಳಲ್ಲೂ ಕೂಡ ಅನುಸರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹಾರೈಸುತ್ತೇನೆ.

ಇನ್ನು ಭ್ರಷ್ಟಾಚಾರ ಕುರಿತು ಒಂದು ಮಾತು ಹೇಳಬೇಕು. ಆಡಳಿತವನ್ನು ಎಷ್ಟೇ ಚಿಜುವಿನಿಂದ ನಡೆಸಿದರೂ, ಭ್ರಷ್ಟಾಚಾರ ಹಾಗೂ ಲಂಚ ಗುಳಿತನ ನಮ್ಮನ್ನು ಸುತ್ತಿಕೊಂಡೇ ಹೊರಟಿದೆ. ಅದು ನಮ್ಮನ್ನು ನಿಜವಾಗಿಯೂ ದಿಕ್ಕು ಕೆಡಿಸುವ ಕೆಲಸವನ್ನು ಮಾಡಿದೆ. ಈ ಭ್ರಷ್ಟಾಚಾರ ಅಥವಾ ಲಂಚಗುಳಿತನ ಎನ್ನುವುದು ಏನಿದೆ, ಇದು ನಿಜವಾಗಿಯೂ ಪಾರ್ಥೇನಿಯಂ ಕಳೆ ಇದ್ದ ಹಾಗೆ. ಬಹಳ ದೊಡ್ಡದಾಗಿ ಪಾರ್ಥೇನಿಯಂ ಬೆಳೆದ ಹಾಗೆ ಇದು ಬೆಳೆದಿದೆ. ನಿಜವಾಗಿಯೂ ಇದನ್ನು ತೆಗೆಯುವ ಕೆಲಸ ಬಹಳ ಕಷ್ಟದ ಕೆಲಸ. ಏಕೆಂದರೆ ಇದರ ಬೀಜ ಎಲ್ಲೆಲ್ಲಿ ಸಿಡಿದು ಹೋಗಿರುತ್ತದೆಯೋ ಅಲ್ಲೆಲ್ಲಾ ಅದು ಹುಟ್ಟಿಕೊಂಡಿರುತ್ತದೆ. ರಕ್ತ ಬೀಜಾ ರಾಕ್ಷಸಿ ಅಂದ ಹಾಗೆ ರಕ್ತ ಎಲ್ಲಿ ಬೀಳುತ್ತದೆಯೋ ಅಲ್ಲೆಲ್ಲಾ ರಾಕ್ಷಸರು ಹುಟ್ಟಿಕೊಳ್ಳುತ್ತಿದ್ದರಂತೆ ಎಲ್ಲಿ ಮುಟ್ಟಿದರೂ ಇದು ಆವರಿಸಿಕೊಳ್ಳುತ್ತದೆ. ಯಾರೇ ಅದರ ಹತ್ತಿರ ಹೋದವರೂ ಅವರೂ ಕೂಡ ರೋಗವನ್ನು ಅನುಭವಿಸುವಂತಹ ಪರಿಸ್ಥಿತಿ ಬರುತ್ತದೆ ಸ್ವಲ್ಪ ಹೊತ್ತು ಆ ಹೂವನ್ನು ಮೂಗಿನ ಬಳಿ ಹಿಡಿದು ವಾಸನೆ ಸೇವಿಸಿದರೆ ಮೂಗಿನಿಂದ ರಕ್ತ ಬರುವುದಕ್ಕೆ ಪ್ರಾರಂಭವಾಗುತ್ತದೆ. ಈ ಪಾರ್ಥೇನಿಯಂ ಕರ್ನಾಟಕ ಅಷ್ಟೇ ಅಲ್ಲ ಇಡೀ ರಾಷ್ಟ್ರದಲ್ಲೇ ಪಸರಿಸಿರುವಂತೆ ಈ ಭ್ರಷ್ಟಾಚಾರನೂ ಪಸರಿಸಿದೆ. ಆದರೂ ಕೂಡಾ ಧೈರ್ಯವಾಗಿ ಇದನ್ನು ಹೋಗಲಾಡಿಸಲು ಪ್ರಯತ್ನಗಳು ನಡೆದಿವೆ. ಈ ಬಗ್ಗೆ ಇವೊತ್ತು ಲೋಕಾಯುಕ್ತ ಹಾಗೂ ಉಪಲೋಕಾಯುಕ್ತ ಸಂಸ್ಥೆಗಳು ಪ್ರಾರಂಭವಾಗಿವೆ ಎಲ್ಲಿಯವರೆಗೆ ನಮ್ಮ ಕಬಂದರ್ ಅಧಿಕಾರಿಗಳು ಇರುತ್ತಾರೋ ಅಲ್ಲಿಯವರೆಗೆ ಈ ಭ್ರಷ್ಟಾಚಾರ ಹೋಗುವುದಿಲ್ಲ. ಕಬಂದರ್‌ಗೆ ಕಣ್ಣು ಕಾಣಿಸುವುದಿಲ್ಲ, ಕಾಡಿನಲ್ಲಿ ತನ್ನ ಕೈ ಬೀಸಿ ತೋಳಿಗೆ ಯಾವುದೇ ಪ್ರಾಣಿ ಸಿಕ್ಕರೂ ಅದನ್ನು ಹಿಡಿದು ತಿನ್ನುವಂತೆ ಈ ಜನ ಅಂಗವಿಕಲ ಇರಲಿ, ವಿಧವೆ ಬರಲಿ, ಕಾರ್ಮಿಕ ಬರಲಿ ಅವರ ಕಷ್ಟ ಕಾರ್ಪಣ್ಯ ನೋಡದೇ ಲಂಚ ಸ್ವೀಕರಿಸುವ ಒಂದು ಭ್ರಷ್ಟಾಚಾರ ಇವರಲ್ಲಿ ಬೆಳೆದು ಬಂದಿದೆ. ಲಂಚದ ಭ್ರಷ್ಟಾಚಾರಕ್ಕೆ ಇಳಿಯುವ ಈ ಕಬಂದರರ ಸಂಹಾರ ಆಗಬೇಕು. ಈ ಬಗ್ಗೆ ಸರ್ಕಾರ ಆದಷ್ಟು ಹೆಚ್ಚಿನ ಗಮನ ಹರಿಸಿ ಒಂದು ಧೋರಣೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ನಮ್ಮ ಸರ್ಕಾರ ಇನ್ನೊಂದು ಆಶ್ವಾಸನೆಯನ್ನು ಕೊಟ್ಟಿದೆ. ಅದನ್ನು ಈಡೇರಿಸಿದರೆ ಕರ್ನಾಟಕದಲ್ಲಿ ಜನತಾ ಸರ್ಕಾರ ಶಾಶ್ವತವಾಗಿ ನೆಲೆಗೊಳ್ಳುತ್ತದೆ, ಹಾಗೂ ಆಳವಾಗಿ ಬೇರು ಬಿಟ್ಟು ಕೊಳ್ಳುವುದರಲ್ಲಿ ಸಂಶಯ ಇಲ್ಲ. ೧೯೮೫ರ ಮಾರ್ಚ

೩೧ ರೊಳಗೆ ಎಲ್ಲರಿಗೂ ಕೂಡಾ ನಾವು ವಸತಿ ಅನುಕೂಲಕ್ಕಾಗಿ ನಿವೇಶನವನ್ನು ಒದಗಿಸಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇವೆ. ಇದು ದೊಡ್ಡ ಪೌರುಷದ ಮಾತು. ನಮ್ಮಲ್ಲಿ ಅನೇಕ ಜನ ವಸತಿ ಹೀನರಾಗಿದ್ದಾರೆ. ಈ ರಾಷ್ಟ್ರದಲ್ಲಿ ಹುಟ್ಟಿದ ಜನರಿಗೆ ಉಳಿದುಕೊಳ್ಳುವುದಕ್ಕೆ ನೆಲೆ ಇಲ್ಲವೆಂದರೆ ಅದು ಹಾಸ್ಯಾಸ್ಪದವಾಗುತ್ತದೆ. ಯಾರು ಆಡಳಿತದಲ್ಲಿ ಕೇವಲ ಇತರರಿಗೆ ಬೆಂಬಲ ಕೊಡುವುದಕ್ಕೆ ಇದ್ದರು ಅಂತಹವರು ನಿಜವಾಗಿಯೂ ಈ ದೇಶದ ಆಡಳಿತದಲ್ಲಿ ತಮ್ಮ ಮನಸ್ಸನ್ನು ಹರಿಸಲಾರರು. ಎಲ್ಲಾ ಜನರಿಗೆ ೧೯೯೦ರ ಮಾರ್ಚಿ ೩೧ ರೊಳಗೆ ವಸತಿ ನಿವೇಶನ ಬಂದರೆ ನಿಜವಾಗಿಯೂ ಅದು ಸಮಾಧಾನಕರ ವಿಷಯ. ಹೀಗೆ ಮಾಡಿದರೆ ನಮ್ಮ ಕರ್ನಾಟಕ ರಾಜ್ಯ ಇತರ ರಾಜ್ಯಗಳಿಗೆ ಆದರ್ಶ ಮಾರ್ಗ ಹಾಕಿಕೊಟ್ಟ ಹಾಗಾಗುತ್ತದೆ, ಹಾಗೂ ಕೇಂದ್ರದ ಕಣ್ಣು ತೆರೆಸಿದ ಹಾಗೆ ಆಗುತ್ತದೆ. ಆ ದಿವಸ ಬೇಗ ಬರಲಿ ಎಂದು ಹೇಳುತ್ತೇನೆ. ನಾನು ಹೆಚ್ಚು ವಿಷಯ ಮಾತನಾಡುವುದಿಲ್ಲ. ಕಾರಣ, ಎಲ್ಲರೂ ಹೇಳಿದ್ದನ್ನೇ ಹೇಳುತ್ತಾರೆಂದು ಹೇಳಬಾರದು. ಆದರೂ ಕರ್ನಾಟಕದಲ್ಲಿ ಉಂಡುಟ್ಟು ಒಂದು ಸೂರಿನ ಕೆಳಗೆ ನೆಲೆಸುವ ಒಂದು ದಿನ ರಾಜ್ಯದ ಎಲ್ಲಾ ಜನರಿಗೂ ಬರಲಿ ಎಂದು ಹಾರೈಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಯು. ಭೂಪತಿ (ಸೊರಡೂರು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರು ಜಂಟೀ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ಕೆಲವು ವಿಚಾರಗಳನ್ನು ನಾನು ಈ ಸದನದ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ರಾಜ್ಯಪಾಲರು ಶಿಕ್ಷಣದ ಬಗ್ಗೆ ಹೇಳಬಹುದೆಂದು ನಾನು ಭಾವಿಸಿದ್ದೆ. ಆದರೆ ಶಿಕ್ಷಣದ ವಿಚಾರ ಕುರಿತು ವಿಶ್ವವಿದ್ಯಾನಿಲಯದ ಒಂದೇ ಒಂದು ಮಾತನ್ನು ಬಿಟ್ಟರೆ ಉಳಿದ ಯಾವ ಹೆಚ್ಚಿನ ವಿಚಾರವನ್ನೂ ಕೂಡಾ ಅವರು ಪ್ರಸ್ತಾಪ ಮಾಡಿಲ್ಲ.

೨-೦೦ ಪಿ. ಎಂ.

ಜೊತೆಗೆ ಪ್ರಾಥಮಿಕ ಶಾಲೆಗಳಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಿರುವುದನ್ನು ಬಿಟ್ಟರೆ ಹೆಚ್ಚಿನ ವಿಷಯಗಳನ್ನು ಗಂಭೀರವಾಗಿ ಅವರು ಇಲ್ಲಿ ಪ್ರಸ್ತಾಪ ಮಾಡಲಿಲ್ಲ. ಶಿಕ್ಷಣ ಎನ್ನತಕ್ಕದ್ದು ಮನುಷ್ಯನಿಗೆ ತನ್ನ ಸರ್ವಾಂಗೀಣ ಬೆಳವಣಿಗೆಗೆ ಮೂಲಭೂತವಾಗಿ ಬೇಕಾಗಿರತಕ್ಕ ವಿಚಾರ. ಈಗತಾನೇ ಬೆಳಿಗ್ಗೆ ಒಂದು ಪ್ರಶ್ನೆಯ ಆಧಾರದ ಮೇಲೆ ಚರ್ಚೆಯಾಯಿತು. ಪ್ರಾಥಮಿಕ ಶಾಲೆಗಳಲ್ಲಿ, ಮಾಧ್ಯಮಿಕ ಶಾಲೆಗಳಲ್ಲಿ ಮೂಲಭೂತವಾಗಿ ಕನಿಷ್ಟ ಸೌಕರ್ಯಗಳು ಕೂಡ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ಸರ್ಕಾರ ಕೊಡುವುದಕ್ಕೆ ಆಗಿಲ್ಲ, ಕೇವಲ ಕಟ್ಟಡಗಳನ್ನು ಮಾತ್ರ ಕಟ್ಟಿಸಿ ನಾವು ಶಾಲೆಯನ್ನು ನಡೆಸುತ್ತೇವೆಂದು ಹೇಳುತ್ತಿದ್ದಾರೆ. ಪರಿಸರ ಸರಿಯಾಗಿ ಇಲ್ಲದೇ ಇರುವಾಗ ಬರೀ ಪುಸ್ತಕಗಳಿಂದ ಅಕ್ಷರಗಳನ್ನು ಮಕ್ಕಳಿಗೆ ಕಲಿಸುವುದು ಅಷ್ಟು ಸುಲಭವಲ್ಲ. ಇನ್ನೂ ನಮ್ಮ ಶಿಕ್ಷಣ ಇಲಾಖೆಯವರು ತಂದಿರತಕ್ಕ ಪುಸ್ತಕಗಳಿಂದ ಶಿಕ್ಷಣ ಪ್ರಾರಂಭ ಮಾಡಿದರೆ ಏನೇನೂ ಆಗುವುದಿಲ್ಲ. ಒಂದನೆಯ ತರಗತಿ ಮತ್ತು ಎರಡನೇಯ ತರಗತಿಯ ಕನ್ನಡ ಪುಸ್ತಕಗಳು ಏನಿವೆ ಅವುಗಳನ್ನು ಕೇರಳ ರಾಜ್ಯದಲ್ಲಿ ಒಂದನೆಯ ಮತ್ತು ಎರಡನೆಯ ತರಗತಿಯ ಕನ್ನಡ ಪುಸ್ತಕಗಳು ಏನಿವೆ ಅವುಗಳಿಗೆ ಹೋಲಿಸಿ ನೋಡಿದರೆ ಕೇರಳ ರಾಜ್ಯದ ಕನ್ನಡ ಪುಸ್ತಕಗಳು ಕರ್ನಾಟಕ ರಾಜ್ಯದ ಒಂದು ಮತ್ತು ಎರಡನೆಯ ತರಗತಿಯ ಪುಸ್ತಕಗಗಳಿಂತ ಬಹಳ ಚೆನ್ನಾಗಿವೆ. ಅವು ವೈಜ್ಞಾನಿಕವಾಗಿ ಇವೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ವಿಚಾರ ಹಲವಾರು ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ತಾವುಗಳೆಲ್ಲ ಓದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ಪ್ರಾಥಮಿಕ ಹಂತದಲ್ಲಿ ೧ನೇ ತರಗತಿಯ ಮಕ್ಕಳಿಗೆ ವೈಜ್ಞಾನಿಕ ಶಿಕ್ಷಣ ಕೊಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಹೇಳಬೇಕಾಗಿದೆ. ಏಕೆಂದರೆ ಇವತ್ತು ರಾಷ್ಟ್ರದಲ್ಲಿ ರಾಷ್ಟ್ರೀಯ ಭಾವೈಕ್ಯತೆ, ಸಮಗ್ರತೆ ಇವುಗಳ ಬಗ್ಗೆ ಮಾತನಾಡುತ್ತೇವೆ. ಜೊತೆಗೆ ಇವತ್ತು ಕೋಮು ಗಲಭೆಗಳನ್ನು ಉಂಟುಮಾಡತಕ್ಕ ಕೋಮುವಾದಿ ಶಕ್ತಿಗಳು ರಾಷ್ಟ್ರವನ್ನು ಛಿದ್ರ-ಮಾಡಬೇಕೆಂದು ಪ್ರಯತ್ನ ಮಾಡುತ್ತಿವೆ, ಇಂತಹ ಸಂದರ್ಭದಲ್ಲಿ ಅವೈಜ್ಞಾನಿಕ ಧಾರ್ಮಿಕ ಭಾವನೆಯನ್ನು ಮಕ್ಕಳ ಮನಸ್ಸಿನಲ್ಲಿ ತುಂಬಿಸತಕ್ಕ ಶಿಕ್ಷಣವನ್ನು ನಮ್ಮ ರಾಜ್ಯದಲ್ಲಿ ಕೊಡುತ್ತಿದ್ದೇವೆ. ಉದಾಹರಣೆಗೆ ಒಂದೆರಡು ಮೂರು ಉದಾಹರಣೆಗಳನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮಲ್ಲಿ ಒಂದನೆಯ ತರಗತಿಯ ಮಕ್ಕಳಿಗೆ ನಾವು ಕಲಿಸುತ್ತಿರುವುದೇನು ? "ಇವನು ಗಣಪ, ಇವನು ಈಶ" ಎಂದು ಹೇಳಿಕೊಡುತ್ತೇವೆ. ಯಾವ ರಾಷ್ಟ್ರದಲ್ಲಿ ಜಾತ್ಯಾತೀತ ರಾಷ್ಟ್ರವೆಂದು ಸಂವಿಧಾನದಲ್ಲಿ ಬರೆದು

ಕೊಂಡು, ಯಾವ ರಾಷ್ಟ್ರದಲ್ಲಿ ಎಲ್ಲಾ ಧರ್ಮಗಳಿಗೆ ಸೇರಿರುವಂತಹ ವಿದ್ಯಾರ್ಥಿಗಳು ಇರುತ್ತಾರೆ. ಅವರು ಹಿಂದುಗಳು ಇರಬಹುದು, ಮುಸಲ್ಮಾನರು ಇರಬಹುದು, ಕ್ರಿಶ್ಚಿಯನ್ ಇರಬಹುದು, ಜೈನರು ಇರಬಹುದು, ಸಿಕ್ಕರು ಇರಬಹುದು ಬೇರೆ ಯಾವುದೇ ಧರ್ಮಕ್ಕೆ ಸೇರಿದವರು ಇರಬಹುದು, ಎಲ್ಲಾ ಧರ್ಮಗಳ ಅವರವರ ಧರ್ಮಗಳ ತಮ್ಮದೇ ಆದ ಕಲ್ಪನೆಯನ್ನು ಇಟ್ಟರತಕ್ಕ ಮಕ್ಕಳು ಒಂದೇ ಕೊಠಡಿಯಲ್ಲಿ ಕುಳಿತಿರುವಾಗ ಇಲ್ಲಿ ಒಂದು ಧರ್ಮದ ದೇವರ ಹೆಸರುಗಳನ್ನು ಪರಿಚಯ ಮಾಡಿ ಪಾಠಗಳನ್ನು ಹೇಳಿಕೊಡುತ್ತಾರೆ. ಈ ಒಂದು ಪದ್ಧತಿಯನ್ನು ಯಾರೂ ಬದಲಾವಣೆ ಮಾಡಲಿಲ್ಲ. ಎಳೆಯ ವಯಸ್ಸಿನ ಮಕ್ಕಳಲ್ಲಿ ಧಾರ್ಮಿಕ ಭಾವನೆಗಳು, ಮತೀಯ ಭಾವನೆಗಳು ಬೆಳೆದು ಅವರು ಮುಂದೆ ಅದೇರೀತಿ ಬೆಳೆಯುತ್ತಾರೆ. ಸಮಾಜ ಒಂದೇ, ದೇಶ ಒಂದೇ ಎನ್ನುವ ಕಲ್ಪನೆ ಬರುವುದಕ್ಕೆ ಸಾಧ್ಯವಿಲ್ಲ. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ ಉದ್ದೇಶ ಕೇರಳರಾಜ್ಯದಲ್ಲಿರತಕ್ಕ ಒಂದು ಮತ್ತು ಎರಡನೆಯ ತರಗತಿಯ ಮಕ್ಕಳಿಗೆ ಇಟ್ಟರತಕ್ಕ ಕನ್ನಡ ಪುಸ್ತಕವನ್ನು ಮಾದರಿಯನ್ನಾಗಿ ಇಟ್ಟು ಕೊಂಡು ಬರುವ ವರ್ಷಗಳಲ್ಲಿ ಪುಸ್ತಕಗಳನ್ನು ಅದೇರೀತಿ ತಯಾರಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಪ್ರಾಥಮಿಕಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರಬಾರದು. ಸರ್ಕಾರ ಹೇಳಿರುವ ಪ್ರಕಾರ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ ಗನಂಗುಣವಾಗಿ ಒಬ್ಬ ಶಿಕ್ಷಕನಿಗೆ ೪೦ ಜನ ವಿದ್ಯಾರ್ಥಿಗಳೆಂದು ಲೆಕ್ಕ ಹಿಡಿದರೂ ಕೂಡ ೮ ಸಾವಿರ ಜನ ಶಿಕ್ಷಕರು ನಮಗೆ ಬೇಕಾಗಿದೆ. ಈ ಎಂಟು ಸಾವಿರ ಶಿಕ್ಷಕರ ನೇಮಕಾತಿಯನ್ನು ಸರ್ಕಾರ ಎರಡು ವರ್ಷಗಳಿಂದ ಮಾಡುತ್ತೇವೆ ಮಾಡುತ್ತೇವೆ ಎಂದು ಹೇಳಿದರು. ಬರೀ ಡಿ.ಎಲ್ ಆರ್.ಸಿ. ಮಾಡುವುದರಲ್ಲೇ ಎರಡು ವರ್ಷ ಕಳೆಯಿತೇ ವಿನಹ ಇಲ್ಲಿಯವರೆಗೆ ಅವರನ್ನು ಆಯ್ಕೆ ಮಾಡಿಲ್ಲ, ಶಿಕ್ಷಕರ ನೇಮಕಾತಿಯನ್ನು ಮಾಡಿಲ್ಲ ಹೀಗಾಗಿ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಒಬ್ಬನೇ ಶಿಕ್ಷಕ ಸುಮಾರು ಒಂದು ಗಂಟೆಯಲ್ಲಿ ಇನ್ನೂರು ಮಂದಿ ವಿದ್ಯಾರ್ಥಿಗಳಿದ್ದರೆ ಅವರ ಹಾಜರಿ ಹಾಕುವುದಕ್ಕೆ ಹೆಚ್ಚಿನ ಟೈಮ್‌ನ್ನು ವ್ಯಯಂ ಮಾಡಬೇಕಾಗುತ್ತದೆ. ಪಾಠ ಹೇಳುವುದು ಬೇರೆ ಪ್ರಶ್ನೆ ಆಯಿತು. ಮತ್ತೊಂದು ಕಡೆ ಈ ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಪ್ರಾಥಮಿಕ ಶಾಲೆಗಳಲ್ಲಿ ೭ನೇ ಮತ್ತು ೭ನೇ ತರಗತಿಗೆ ವಿಜ್ಞಾನ ಪುಸ್ತಕಗಳನ್ನು ಸರ್ಕಾರ ಈಗ ತಂದಿಟ್ಟಿದೆ. ಅದರಲ್ಲಿರತಕ್ಕಂಥ ವಿಚಾರಗಳು ನಿಜವಾಗಿಯೂ ಕೂಡ, ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ. ಟಿಸಿಹೆಚ್ ಮಾಡಿರತಕ್ಕ ಶಿಕ್ಷಕರಿಗೆ ಸುಲಭವಾಗಿ ಅರ್ಥಮಾಡಿಕೊಳ್ಳತಕ್ಕಂಥ ವಿಚಾರಗಳು ಅಲ್ಲ. ಏಕೆಂದರೆ ೭ನೇ ತರಗತಿಯಲ್ಲಿ ಆಧುನಿಕ ಭೌತಶಾಸ್ತ್ರವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಾರೆ. ಆಧುನಿಕ ಭೌತಶಾಸ್ತ್ರವನ್ನು ಹೇಳಿಕೊಡತಕ್ಕಂಥ ಶಿಕ್ಷಕನೇ ಇದನ್ನು ಸರಿಯಾಗಿ ಓದಿರುವುದಿಲ್ಲ, ಅವರಿಗೆ ಸರಿಯಾದ ಟ್ರೈನಿಂಗ್ ಇಲ್ಲ. ಹುಡುಗರನ್ನು ದೊಡ್ಡಿಯಲ್ಲಿ ಕೂಡಿ ಹಾಕಿದ ಹಾಗೆ ಒಂದೇ ರೂಮಿನಲ್ಲಿ ೨೫೦ ವಿದ್ಯಾರ್ಥಿಗಳವರೆಗೆ ಕೂಡಿ ಹಾಕುತ್ತಾರೆ. ಜಾಗ ಇಲ್ಲದೇ ಇದ್ದರೆ ಹೊರಗಡೆ ಕೂಡಿಸುತ್ತಾರೆ. ಶಿಕ್ಷಣಕ್ಕೆ ಬೇಕಾದಂಥ ಒಳ್ಳೆಯ ಪರಿಸರವನ್ನು ಇವತ್ತಿನವರೆಗೂ ಈ ಶಾಲೆಗಳಲ್ಲಿ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಎಷ್ಟೋ ಕಡೆ ಶಾಲೆಗಳೇ ಇಲ್ಲ. ಸರ್ಕಾರ ಇದನ್ನು ಮಾಡಬೇಕಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಹೇಳುತ್ತಾರೆ ಎಂದು ನಾನು ಬಯಸಿದ್ದೆ. ಈ ಶಿಕ್ಷಕರ ನೇಮಕಾತಿಯನ್ನು ಅತಿಶೀಘ್ರವಾಗಿ ಮಾಡದೇಹೋದ ಪಕ್ಷದಲ್ಲಿ ಶಿಕ್ಷಣದ ಮಟ್ಟ ಪೂರಾ ಕೆಳಗಡೆಗೆ ಹೋಗುತ್ತದೆ. ಎಲ್ಲಿಯವರೆಗೆ ಕೆಳಗಡೆ ಹೋಗುತ್ತದೆ ಎಂದರೆ ರಾಜ್ಯದಲ್ಲಿ ಒಮ್ಮೆ ಎಸ್.ಎಸ್ ಎಲ್.ಸಿ. ಫಲಿತಾಂಶವನ್ನು ಪ್ರಕಟಿಸಿದಮೇಲೆ ನಮ್ಮ ರಾಜ್ಯದ ಫಲಿತಾಂಶ ಶೇಕಡ ೨೮ರಷ್ಟು ಬಂದಿದೆ, ರಾಜ್ಯದ ಮರ್ಯಾದೆ ಹೋಗುತ್ತದೆ ಎಂದು ಹೇಳಿ ಯಾವ ವಿದ್ಯಾರ್ಥಿಗಳು ಮೂರು ವಿಷಯಗಳಲ್ಲಿ ಫೇಲ್ ಆಗಿರುತ್ತಾರೆ ಅಂತಹವರಿಗೆ ೨೦ ಮಾರ್ಕ್ಸ್‌ನ್ನು ಸೇರಿಸಿದರೆ ಆತನನ್ನು ಪಾಸ್ ಮಾಡಬಹುದೆಂದು ಹೇಳಿ ೮-೮ ಮತ್ತು ೪ ಹೀಗೆ ಮೂರು ವಿಷಯಗಳಲ್ಲಿ ಕೊಟ್ಟು ೨ ಪರ್ಸೆಂಟ್‌ನಷ್ಟು ಫಲಿತಾಂಶ ಈ ರಾಜ್ಯದಲ್ಲಿ ಬಂದಿದೆಯೆಂದು ಕಾಲರನ್ನು ಎತ್ತಿ ಅಲುಗಾಡಿಸತಕ್ಕಂಥ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ ಇದಕ್ಕೆ ಕಾರಣ ಏನೆಂದರೆ ಶಿಕ್ಷಣ ಇಲಾಖೆಯವರು ಸಿಬ್ಬಂದಿಗೆ ಶಾಲೆಗೆ ಬೇಕಾದಂಥ ಸೌಕರ್ಯ ಸೌಲಭ್ಯಗಳನ್ನು ಕೊಡದೇ ಇರುವುದರಿಂದ ಶಿಕ್ಷಣ ಮಟ್ಟ ತೀರಾ ಕೆಳಗೆ ಹೋಗುತ್ತಿದೆ. ಅಂದರೆ ರಿಸಲ್ಟ್ ಕಡಿಮೆಯಾಯಿತು ಎಂದಲ್ಲ, ವಿದ್ಯಾರ್ಥಿಗಳ ಮನೋಭಾವನೆಯನ್ನು ಕೂಡ ವೈಜ್ಞಾನಿಕವಾಗಿ ಬೆಳೆಸುವುದಕ್ಕೆ ಸಾಧ್ಯವಾಗಿಲ್ಲ. ಈ ಸಂದರ್ಭದಲ್ಲಿ ತೀವ್ರ ಗಮನಕೊಟ್ಟು ಮುಂದಿನದಿನಗಳಲ್ಲಿ ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಜೂನಿಯರ್ ಕಾಲೇಜುಗಳ ಬಗ್ಗೆ ಹೇಳಬೇಕೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಮಾಡಿದ ರೇಡಿಯೋ ಭಾಷಣವನ್ನು ನಾನು ಕೇಳಿದೆ. ಆ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಾವು

ಸಾವಿರಾರು ಶಾಲೆಗಳನ್ನು ತೆರೆದಿದ್ದೇವೆ. ನೂರಾರು ಕಾಲೇಜುಗಳನ್ನು ತೆಗೆದಿದ್ದೇವೆ ಎಂದು. ಏನು ಪ್ರಯೋಜನ ? ನೂರಾರು ಕಾಲೇಜುಗಳನ್ನು, ಸಾವಿರಾರು ಶಾಲೆಗಳನ್ನು ಖಾಸಗಿ ಮಾಲೀಕರಿಗೆ ಗುತ್ತಿಗೆ ಮಾಡಿಕೊಂಡು ಲಾಭ ಮಾಡುವುದಕ್ಕೆ ಮಂಜೂರು ಮಾಡಿದ್ದಾರೆ ಅಷ್ಟೆ. ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲ ಏನೂ ಆಗಿಲ್ಲ. ಎಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆಯೋ ಅಲ್ಲಿ ಜೂನಿಯರ್ ಕಾಲೇಜುಗಳನ್ನು ಮಾಡಿ ಈಗ ವಿದ್ಯಾರ್ಥಿಗಳ ಕೊರತೆ ಇದೆ, ಅವುಗಳನ್ನು ಮುಚ್ಚುತ್ತೇವೆ ಎಂದು ಹೊರಟಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇರುವ ಕಡೆ ಖಾಸಗಿ ಶಾಲೆಗಳನ್ನು ಮಂಜೂರು ಮಾಡಿದ್ದಾರೆ. ವಿದ್ಯಾರ್ಥಿ ಸಂಖ್ಯೆ ಕಡಿಮೆ ಇರುವ ಕಡೆ ಸರ್ಕಾರಿ ಜೂನಿಯರ್ ಕಾಲೇಜುಗಳನ್ನು ಮಂಜೂರು ಮಾಡಿ ಈಗ ಅವುಗಳನ್ನು ಮುಚ್ಚುತ್ತೇವೆ ಎಂದು ಹೇಳಿ ಸುಮಾರು ೪೦ ಕಾಲೇಜುಗಳನ್ನು ಮುಚ್ಚಬೇಕೆಂದು ಕೆಲವು ದಿವಸಗಳ ಹಿಂದೆ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಓದಿದ್ದೆ. ಇವತ್ತು ಬೆಳಿಗ್ಗೆ ಕೂಡ ಮಾನ್ಯ ಮಂತ್ರಿಗಳಾದ ಜೀವರಾಜ ಆಳ್ವ ಅವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಎಲ್ಲಿ ದೂರಗಳು ಬರುತ್ತವೆಯೋ ಅಲ್ಲಿ ಪಾಲಿಟೆಕ್ನಿಕ್‌ಗಳನ್ನು ಮುಚ್ಚುತ್ತೇವೆ ಎಂದು. ಇದೇರೀತಿ ಜೂನಿಯರ್ ಕಾಲೇಜುಗಳ ಬಗ್ಗೆ ಹೇಳಿಕೆಯನ್ನು ಸನ್ಮಾನ್ಯ ಮಂತ್ರಿಗಳು ಹಿಂದೆ ಕೊಟ್ಟಿದ್ದರು. ಇಷ್ಟೇ ಅಲ್ಲದೆ ಪರಿಸ್ಥಿತಿ ಹೀಗಿರುವಾಗ. ಎಸ್.ಎಸ್.ಎಲ್.ಸಿ. ಫೀಸ್ ಬಗ್ಗೆ ಶ್ರೀ ಯಡಿಯೂರಪ್ಪನವರು ಹೇಳಿದ್ದಾರೆ. ನಾನು ಪುನಃ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಮತ್ತೊಮ್ಮೆ ಸರ್ಕಾರವನ್ನು ಒತ್ತಾಯ ಮಾಡುವುದು ಇಷ್ಟೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಹಂತದಲ್ಲಿ ಶಿಕ್ಷಣವನ್ನು ಉಚಿತವಾಗಿ, ಕಡ್ಡಾಯವಾಗಿ ಕೊಡಬೇಕೆಂದು ಇರುವಾಗ, ಈ ರೀತಿಯಾಗಿ ಎಸ್.ಎಸ್.ಎಲ್.ಸಿ. ಫೀಸ್‌ನ್ನು ಬಹಳ ಜಾಸ್ತಿ ಮಾಡಿದ್ದೀರಿ. ಇದು ವಿದ್ಯಾರ್ಥಿಗಳಿಗೆ ಭಾರ ಆಗುತ್ತದೆ. ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ಭಾರವಾಗುತ್ತದೆ. ಜಾಸ್ತಿ ಮಾಡಿರತಕ್ಕ ಫೀಸ್‌ನ್ನು ವಾಪಸ್ಸು ವಿದ್ಯಾರ್ಥಿಗಳಿಗೆ ಕೊಡಲು ಸರ್ಕಾರಿ ಆಜ್ಞೆಯನ್ನು ಹೊರಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಶಿಕ್ಷಣ ಸಂಸ್ಥೆಗಳಿಗೆ, ಕಾಲೇಜುಗಳಿಗೆ ಸ್ವಾಯತ್ತತೆ ಕೊಡುತ್ತೇವೆಂದು. ಇನ್ನೊಂದು ಪ್ರಸ್ತಾಪವನ್ನು ಕೆಲವು ದಿನಗಳ ಕೆಳಗೆ ಮಾಡಿದ್ದಾರೆ. ಅಂದರೆ ಅಟಾನಮಸ್ ಬಾಡಿಗಳನ್ನು ಅವರೇ ಸ್ವತಃ ನಡೆಸಬಹುದು ಸ್ವತಃ ಎಕ್ಸ್‌ಪ್ಲಾಯಿಟ್ ಮಾಡಿಕೊಳ್ಳಬಹುದು. ಇಂತಹದ್ದಕ್ಕೆ ಪ್ರೋತ್ಸಾಹವನ್ನು ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಪ್ರಾರಂಭ ಮಾಡಿದೆ. ಇದು ಅಪಾಯಕಾರಿ ಪದ್ಧತಿ. ಈಗಾಗಲೇ ಖಾಸಗಿ ಶಾಲೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲೆಗಳನ್ನು ನಡೆಸುತ್ತಿದ್ದು, ಅವರ ಲಕ್ಷಾಂತರ ರೂಪಾಯಿಗಳ, ಕೋಟ್ಯಾಂತರ ರೂಪಾಯಿಗಳ ಲಾಭ ಮಾಡಿಕೊಳ್ಳುತ್ತಿದ್ದಾರೆ. ಈ ಕಾಂಟ್ರಾಕ್ಟ್ ಈವರೆಗೆ ಪಿ.ಡಬ್ಲ್ಯು.ಡಿ. ಮತ್ತು ನೀರಾವರಿ ಇಲಾಖೆಗೆ ಮಾತ್ರ ಇತ್ತು. ಈಗ ಕಾಂಟ್ರಾಕ್ಟ್ ಎಂದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಒಂದು ಅಪ್ಲಿಕೇಷನ್ ಹಾಕಿಕೊಂಡು, ಅವನು ಒಂದು ಸ್ಕೂಲ್ ತೆಗೆದರೆ ಮುಗಿಯಿತು. ಇದು ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂಬುದಕ್ಕೆ ತಮ್ಮ ಮುಂದೆ ಅಂಕಿಅಂಶಗಳನ್ನೂ ಇಡುತ್ತೇನೆ. ಈ ರಾಜ್ಯದಲ್ಲಿ ಅನುದಾನ ಪಡೆಯುತಕ್ಕಂಥ ಖಾಸಗಿ ಪ್ರಾಥಮಿಕ ಶಾಲೆಗಳು ೨,೦೮೩ ಮಾಧ್ಯಮಿಕ ಶಾಲೆಗಳ ೧೭೭೩ ಇವೆ. ಇವು ಸರ್ಕಾರದಿಂದ ಅನುದಾನ ಪಡೆಯುತ್ತಿವೆ. ಈ ಶಾಲೆಗಳಲ್ಲಿ ಸರ್ಕಾರದಿಂದ ಕೊಡತಕ್ಕ ಸಹಾಯ, ಅನುದಾನ ಎಷ್ಟು ಎಂದರೆ, ಪ್ರಾಥಮಿಕ ಶಾಲೆಗಳಿಗೆ ಒಂದು ವರ್ಷಕ್ಕೆ ೨,೭೦೦ ಲಕ್ಷ ರೂಪಾಯಿಗಳು ಮಾಧ್ಯಮಿಕ ಶಾಲೆಗಳಿಗೆ ೫,೯೬ ಲಕ್ಷ ರೂಪಾಯಿಗಳು ಇಷ್ಟು ಕೋಟ್ಯಾಂತರ ರೂಪಾಯಿಗಳನ್ನು ಪ್ರಾಥಮಿಕ ಶಾಲೆಗಳನ್ನು ನಡೆಸತಕ್ಕಂಥ ಖಾಸಗಿ ಮಾಲೀಕರಿಗೆ ಕೊಡುತ್ತಿದ್ದಾರೆ. ಈಗ ಅಲ್ಲಿ ಏನು ಅವ್ಯವಹಾರ ನಡೆಯುತ್ತಿದೆ ಎಂದರೆ ಸಂವಿಧಾನದ ಪ್ರಕಾರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶೇಕಡ ೧೮ ರಷ್ಟು ನೇಮಕಾತಿಯನ್ನು ಕಾನೂನುಬದ್ಧವಾಗಿ ಮಾಡಬೇಕೆಂದು ಇದೆ. ಈ ನೇಮಕಾತಿಯ ಆದೇಶವನ್ನು ಸಂಪೂರ್ಣವಾಗಿ ಆ ಶಾಲೆಗಳಿಗೆ ತೂರಿ ಕಾನೂನು ಉಲ್ಲಂಘನೆ ಮಾಡಿ, ಸಂವಿಧಾನದ ನಿಯಮಾವಳಿಗಳನ್ನು ಮುರಿದು, ಈ ೧೮ ಪರ್ಸೆಂಟ್ ನೇಮಕಾತಿಯನ್ನು ಮಾಡದೇ, ತಮ್ಮದೇ ಶೈಲಿಯಲ್ಲಿ ಆಡಳಿತವನ್ನು ಈ ಖಾಸಗಿ ಸಂಸ್ಥೆಗಳು ನಡೆಸಿಕೊಂಡು ಬರುತ್ತಿವೆ. ಈ ಕಾನೂನನ್ನು ಎಷ್ಟು ಶಿಕ್ಷಣ ಸಂಸ್ಥೆಗಳು ಪಾಲನೆ ಮಾಡಿದ್ದಾರೆ, ಎಷ್ಟು ಸಂಸ್ಥೆಗಳು ವೈಲೇಟ್ ಮಾಡಿದ್ದಾರೆಂಬ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಹೋದ ವರ್ಷ ಈ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಈ ವರ್ಷ ಉತ್ತರ ಬಂದಿದೆ. ೫೩ ಶಾಲೆಗಳವರು ಈ ನಿಯಮವನ್ನು ಉಲ್ಲಂಘನೆ ಮಾಡಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ನಂತರ ತಪಾಸಣೆ ಮಾಡಿ ಇವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದೂ ಹೇಳಿದ್ದಾರೆ. ಇವರು ಕ್ರಮ ತೆಗೆದುಕೊಳ್ಳುವ ಭರವಸೆ ನನಗೆ

ಇಲ್ಲ. ಈಗಾಗಲೇ ಹಲವಾರು ಬಾರಿ ನಾನು ಈ ಪ್ರಶ್ನೆ ಮಾಡಿದ್ದೇನೆ. ಯಾವ ಶಿಕ್ಷಣ ಸಂಸ್ಥೆಗಳ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೆ ತಾಕತ್ತು ಇಲ್ಲ. ಇವರು ಈ ಶಿಕ್ಷಣ ಸಂಸ್ಥೆಗಳನ್ನು ಪಟ್ಟಭದ್ರ ಹಿತಾಸಕ್ತಿಗಳ ಕೈಗೆ ಕೊಟ್ಟಿದ್ದಾರೆ. ಇವರು ಸರ್ಕಾರಕ್ಕೆ ಬೆಂಬಲ ಕೊಡತಕ್ಕಂಥ ವ್ಯಕ್ತಿಗಳು. ಇವರ ಬಗ್ಗೆ ಸರ್ಕಾರ ಏನೂ ಮಾಡುವುದಿಲ್ಲ ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ. ಒಂದು ವೇಳೆ ಕ್ರಮ ತೆಗೆದುಕೊಳ್ಳುತ್ತೇವೆಂದು ತೋರಿಸಬೇಕಾದರೆ, ಕೆಲವೇ ದಿನಗಳಲ್ಲಿ ತಪಾಸಣೆಯನ್ನು ಪೂರ್ಣ ಮಾಡಿ, ಯಾವ ಯಾವ ಶಿಕ್ಷಣ ಸಂಸ್ಥೆಗಳು ಈ ೧೮ ಪರ್ಸೆಂಟ್ ನೇಮಕಾತಿಯನ್ನು ವೈಲೇಟ್ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇ ಆದರೆ, ನಮಗೆ ನಂಬಿಕೆ ಬರುತ್ತದೆ, ಅಲ್ಲಿಯವರೆಗೂ ಬರುವುದಿಲ್ಲ. ನನ್ನ ಸ್ವಂತ ಊರಿನಲ್ಲಿ ಒಂದು ಘಟನೆ ನಡೆಯಿತು. ನಾನು ಓದಿದ ಥ ಶಾಲೆ. ಯಾವ ಜಾತಿಗಾಗಲೀ, ಯಾವ ಕೋಮಿಗಾಗಲೀ ಸೇರಿದ ಶಾಲೆ ಅಲ್ಲ. ಸುತ್ತುಮುತ್ತಲಿರ ತಕ್ಕ ಎಲ್ಲಾ ಜನಗಳೂ ಸೇರಿಕೊಂಡು, ತೋರಣಗಲ್ ಎಜುಕೇಷನ್ ಸೊಸೈಟಿ ಎಂಬ ಹೆಸರಿನಲ್ಲಿ ಶಾಲೆಯಲ್ಲಿ ಪ್ರಾರಂಭ ಮಾಡಿದ್ದಾರೆ. ಈ ಸಂಸ್ಥೆಯು ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆ ಎಂಬ ಹೆಸರಿನಲ್ಲಿ ೧೯೬೫-೬೬ರಲ್ಲಿ ಪ್ರಾರಂಭ ಆಯಿತು. ಅಂದಿನಿಂದ, ಇವತ್ತಿನವರೆಗೆ ಒಬ್ಬ ಶಿಕ್ಷಕನಾಗಲೀ, ಒಬ್ಬ ಜವಾನನಾಗಲೀ, ಒಬ್ಬ ಗುಮಾಸ್ತನಾಗಲೀ ಹರಿಜನ ಗಿರಿಜನ ಪಂಗಡಕ್ಕೆ ಸೇರಿದವರು ಅಲ್ಲಿ ಒಬ್ಬ ಅಭ್ಯರ್ಥಿಯೂ ಇಲ್ಲ. ಅಲ್ಲಿಗೆ ನೂರಕ್ಕೆ ನೂರರಷ್ಟು ಅನುದಾನವನ್ನು ಕೊಡುತ್ತಿದ್ದಾರೆ. ಮೊನ್ನೆತಾನೆ ಕೆಲವು ಆಯ್ಕೆ ಮಾಡುವ ಕೇಸ ನಡೆಯಿತು. ಅದು ಅಧ್ಯಾಪಕರ ಹುದ್ದೆಗಳಿಗೆ. ಆವತ್ತು ನಾನು ಹೋಗಿದ್ದೆ. ನಾನು ಏಕೆ ಬಂದೆ ಎನ್ನುವ ಸಮಸ್ಯೆಯೂ ಅವರಲ್ಲಿ ಬಂತು. ನಾನು ಆ ದಿನ ಸುಮ್ಮನೇ ಹೋಗಿದ್ದೆ, ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ನೇಮಕ ಮಾಡಬೇಕಾದ ಎರಡು ಹುದ್ದೆಗಳಿಗೆ ಒಂದೇ ಕೋಮಿಗೆ ಸೇರಿದ ಅಭ್ಯರ್ಥಿಗಳನ್ನು ಹುಡುಕಿ ಅರ್ಜಿ ಹಾಕಿಸಿದ್ದಾರೆ. ಇವರು ಸಂದರ್ಶನವನ್ನು ಎಲ್ಲರಿಗೂ ಕಳುಹಿಸುತ್ತಾರೆ. ಆದರೆ ಎಸ್.ಸಿ. ಎಸ್.ಟಿ. ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದಿದ್ದರೆ, ಅವರಿಗೆ ಈಗ ಸಂದರ್ಶನ ಇಲ್ಲ ೨ ಗಂಟೆಗೆ ಬನ್ನಿ ಎಂದು ಹೇಳುತ್ತಾರೆ.

ಇಂಟರ್‌ವ್ಯೂ ಎರಡು ಘಂಟೆಯ ಮೇಲೆ ನಡೆಯುತ್ತದೆ, ಎರಡು ಘಂಟೆಯ ಮೇಲೆ ಬನ್ನಿ ಎಂದು ಹೇಳಿಕಳುಹಿಸಿಬಿಡುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಇಂಟರ್‌ವ್ಯೂ ಎರಡು ಘಂಟೆಯ ಮೇಲೆ ಎಂದು ಹೊರಗಡೆ ಹೋದಮೇಲೆ ಇವರು ೧೨ ಘಂಟೆಯ ಒಳಗೇ ಇಂಟರ್‌ವ್ಯೂ ಮುಗಿಸಿಬಿಡುತ್ತಾರೆ. ಅವರು ಬಂದು ಕೇಳಿದರೆ, ಇಂಟರ್‌ವ್ಯೂ ಆಗಿ ಹೋಯಿತು ನೀವು ಬರಲಿಲ್ಲ ಎಂದು ಹೇಳಿಬಿಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಎಲ್ಲಿ ಇದು ಆಗಿದ್ದುದು ?

ಶ್ರೀ ಎಂ. ಭೂಪತಿ.—ನನ್ನ ಸ್ವಂತ ಊರಾದ ತೋರಣಗಲ್‌ನಲ್ಲಿ. ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ. ಇನ್ನೂ ೫೨ ಶಾಲೆಗಳಲ್ಲಿ ಈ ರೀತಿ ಆಗಿದೆ ಎಂದು ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ಅವರು ಪ್ರಾಥಮಿಕ ಶಾಲೆಗಳ ಬಗ್ಗೆ ಉತ್ತರ ಕೊಟ್ಟಿದ್ದಾರೆ. ನಾನು ಹೇಳುತ್ತಿರುವುದು ಮಾಧ್ಯಮಿಕ ಶಾಲೆಯ ವಿಚಾರ. ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಇಂಟರ್‌ವ್ಯೂಗೆ ಬಂದರೂ ಕೂಡಾ ಇಂಟರ್‌ವ್ಯೂ ಆಗಿಹೋಯಿತು, ನಿಮ್ಮದು ಮುಗಿಯಿತು ಎಂದು ಹೇಳುತ್ತಾರೆ. ಇಲ್ಲ ಎಂದರೆ ಎಸ್.ಸಿ. ಎಸ್.ಟಿ. ಸೆಲ್‌ಗೆ ಹೋಗಿ ಅಲ್ಲಿ ಕೇಸ್ ವರ್ಕರ್ ಹಿಡಿದು ಕೊಂಡು ಅಲ್ಲಿಂದ ನಿಲ್ ರಿಪೋರ್ಟ್ ತರಿಸಿಕೊಂಡು ಬಿಡುತ್ತಾರೆ. ಪ್ರಾಜೆಕ್ಟ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗೆ ಇದನ್ನು ಕಳುಹಿಸುವುದಕ್ಕೇ ಹೋಗುವುದಿಲ್ಲ. ಅನೇಕ ರೀತಿಯ ಅವ್ಯವಹಾರಗಳನ್ನು ಮಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಅನ್ಯಾಯ ಮಾಡುತ್ತಿರತಕ್ಕ ಇಲಾಖೆ ಎಂದರೆ ಶಿಕ್ಷಣ ಇಲಾಖೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದರ ಬಗ್ಗೆ ಗೌರ್ನರ್ ಭಾಷಣದಲ್ಲಿ ಕಾಣಬಹುದು ಎಂದರು ಯೋಚನೆ ಮಾಡಿದ್ದೇ, ಆದರೆ ಕಾಣಲಿಲ್ಲ.

ಮಾನ್ಯ ಅಧ್ಯಕ್ಷಣಿಯವರೇ, ನನ್ನ ಪ್ರಾದೇಶಿಕ ಅಸಮಾನತೆ ಬಗ್ಗೆ ಹೇಳಬೇಕಾದರೆ, ಈ ಸರಕಾರ ದವರು ಒಂದು ಜಿಲ್ಲೆಗೆ ಒಂದು ಯೂನಿವರ್ಸಿಟಿ ಕೊಟ್ಟರೂ ಕೊಡಬಹುದು. ಮೆಡಿಕಲ್ ಕಾಲೇಜ್ ಎಂಜಿನಿಯರಿಂಗ್ ಕಾಲೇಜುಗಳನ್ನು ಮಂಜೂರು ಮಾಡುತ್ತಿರುವುದನ್ನು ನೋಡಿದರೆ. ಒಂದೊಂದು ಜಿಲ್ಲೆಗೆ ಒಂದೊಂದು ಯೂನಿವರ್ಸಿಟಿ ಇರಲಿ ಎಂಬ ಪಾಲಿಸಿಯನ್ನು ಈ ಸರ್ಕಾರದವರು ಮಾಡಬಹುದು ಅದರಲ್ಲಿ ಅನುಮಾನವಿಲ್ಲ ಮಾಡಬಹುದೆಂದು ನನಗನ್ನಿಸುತ್ತದೆ. ಗುಲಬರ್ಗಾ ಯೂನಿವರ್ಸಿಟಿ ಇದೆ. ನಾನೂ ಅದರ ವಿದ್ಯಾರ್ಥಿ. ಮೊದಲು ಕರ್ನಾಟಕ ಯೂನಿವರ್ಸಿಟಿಯಲ್ಲಿದ್ದೆ, ನನ್ನ ಡಿಗ್ರಿ ಮುಗಿಯಿ

ವುದರೊಳಗೆ ಗುಲಬರ್ಗಾ ಯುನಿವರ್ಸಿಟಿ ಬಂತು. ಅಲ್ಲಿ ಬಿ.ಎ.ಎಂ.ಎಸ್. ಕೋರ್ಸ್ ಇದೆ, ಅದು ಎಂ.ಬಿ.ಬಿ.ಎಸ್.ಗೆ ಈಕ್ವಲೆಂಟ್. ಕಳೆದ ವರ್ಷ ಕೆ.ಪಿ.ಎಸ್.ಸಿ ಯವರು ಬಿ.ಎ.ಎಂ.ಎಸ್. ಅಭ್ಯರ್ಥಿಗಳನ್ನು ಡಾಕ್ಟರ್ ಹುದ್ದೆಗೆ ಆಯ್ಕೆ ಮಾಡಿದರು. ಅದರಲ್ಲಿ ೭೨ ಪೋಸ್ಟ್ ಇತ್ತು. ೭೨ ಪೋಸ್ಟ್‌ನಲ್ಲಿ ಕೆಲವು ರಿಸರ್ವೇಷನ್ ಇದೆ ಉಳಿದಿದ್ದು ಜನರಲ್ ಮೆರಿಟ್. ಗುಲ್ಬರ್ಗಾ ಯುನಿವರ್ಸಿಟಿಯಿಂದ ಕಳೆದ ಹತ್ತು ವರ್ಷಗಳಲ್ಲಿ ಒಂದರಿಂದ ೧೧ನೇ ರ್‍ಯಾಂಕ್ ಪಡೆದಿರತಕ್ಕಂಥ ಒಬ್ಬ ವಿದ್ಯಾರ್ಥಿಯಾಗಲೀ, ವಿದ್ಯಾರ್ಥಿನಿಯಾಗಲೀ ಕೆ.ಪಿ.ಎಸ್.ಸಿ. ಯಿಂದ ಜನರಲ್ ಸೆಲೆಕ್ಷನ್ ಹುದ್ದೆಗೆ ಒಬ್ಬರೂ ಆಯ್ಕೆ ಆಗಿಲ್ಲ. ನಾನು ಇದರ ಬಗ್ಗೆ ಸರಕಾರಕ್ಕೆ ಪ್ರಶ್ನೆ ಕೇಳಿದ್ದೆ. ಸರಕಾರವೂ ಈ ಅಂಶವನ್ನು ಒಪ್ಪಿಕೊಂಡಿತ್ತು. ಈ ವಿಶ್ವವಿದ್ಯಾನಿಲಯಗಳ ಮಧ್ಯೆ ಜನರಲ್ ಮೆರಿಟ್ ಮಾರ್ಕ್ಸ್ ಕೊಡತಕ್ಕಂಥಾದ್ದರಲ್ಲಿ ಬಹಳ ಅಂತರ ಇದೆ. ಗುಲಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಮೊದಲನೇ ರ್‍ಯಾಂಕ್ ಬಂದಂಥ ವಿದ್ಯಾರ್ಥಿ ೬೦ ಪರ್ಸೆಂಟ್‌ಗಿಂತ ಮೇಲೆ ಹೋಗ ವುದಿಲ್ಲ, ಅದೇ ಬೇರೆ ಕಡೆ ಆದರೆ ಮೊದಲನೇ ರ್‍ಯಾಂಕ್ ವಿದ್ಯಾರ್ಥಿ ೭೦_೭೨ ಪರ್ಸೆಂಟ್ ಗಳಿಸಿರುತ್ತಾನೆ. ಗುಲಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಮೊದಲನೇ ರ್‍ಯಾಂಕ್ ತೆಗೆದುಕೊಂಡಿದ್ದರೂ ಕೂಡಾ, ಅವನು ಇಲ್ಲಿ ಕಾಂಪಿಟ್ ಮಾಡಬೇಕಾದರೆ, ಓರಲ್ ಇಂಟರ್‌ವ್ಯೂನಲ್ಲಿ ಅವನು ೫೦ಕ್ಕೆ ೩೫ ಕ್ಕಿಂತ ಹೆಚ್ಚು ಮಾರ್ಕ್ಸ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ನನ್ನ ಹೆಂಡತಿಯ ವಿಚಾರವನ್ನೇ ಹೇಳುತ್ತೇನೆ. ಬೇರೆಯವರದ್ದು ಬೇಕಾಗಿಲ್ಲ. ನನ್ನ ಹೆಂಡತಿ ಬಿ.ಎಂ ಎಂ.ಎಸ್. ಸ್ಟೂಡೆಂಟ್ ಮೂರನೇ ರ್‍ಯಾಂಕ್ ಬಂದಿದ್ದಾಳೆ. ಕೆ.ಪಿ.ಎಸ್.ಸಿ ಯಿಂದ ಕಾಲ್‌–ಫಾರ್ ಆದ ಹುದ್ದೆಗೆ ಅರ್ಜಿ ಹಾಕಿದಳು, ಇಂಟರ್‌ವ್ಯೂ ಕೂಡಾ ಬಂತು. ಇಂಟರ್‌ವ್ಯೂಗೆ ಹೋದಾಗ ೩೫ ಮಾರ್ಕ್ಸ್‌ಗೆ, ೩೩.೩ ಮಾರ್ಕ್ಸ್ ಬಂತು, ಇದು ಮ್ಯಾಕ್ಸಿಮಮ್ ಅದಕ್ಕಿಂತ ಹೆಚ್ಚು ಮಾರ್ಕ್ಸ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. By answering all qu-stion in oral Interview ಇಷ್ಟು ಮಾರ್ಕ್ಸ್ ತೆಗೆದುಕೊಂಡಳು. ಇಂಟರ್‌ವ್ಯೂ ಮುಗಿದಮೇಲೆ ಸಾಯಂಕಾಲ ನಾನು ಕೆ.ಪಿ.ಎಸ್.ಸಿ. ಚೇರ್ಮನ್‌ರವರನ್ನು ಭೇಟಿಯಾದೆ. ಏನು ಬಂದಿದ್ದರಲ್ಲಾ ಎಂದರು. ಈ ರೀತಿ ನನ್ನ ಹೆಂಡತಿಯ ಇಂಟರ್‌ವ್ಯೂ ಇತ್ತು ಬಂದಿದ್ದೆ ಎಂದೆ, ಅದಕ್ಕೆ ಅವರು ಮೊದಲೇ ಹೇಳಬಹುದಾಗಿತ್ತಲ್ಲ ಎಂದರು. ಇಲ್ಲ ಇಂಟರ್‌ವ್ಯೂ ಆಗಿಹೋಯಿತು. ಮಾರ್ಕ್ಸ್ ಕೂಡಾ ಅನೌನ್ಸ್ ಆಗಿದೆ, ೩೩.೩ ಪರ್ಸೆಂಟ್ ಬಂದಿದೆ ಎಂದು ಹೇಳಿದೆ. ಅದಕ್ಕೆ ಅವರು ಸೆಲೆಕ್ಟ್ ಆಗುತ್ತದೆ ಎಂದು ಹೇಳಿದರು. ನಾನು ಆಗುವುದಿಲ್ಲ ಎಂದು ಹೇಳಿದೆ. ಏತಕ್ಕೆ ಆಗುವುದಿಲ್ಲ ಎಂದರು. ಗುಲಬರ್ಗಾ ಯುನಿವರ್ಸಿಟಿ ರ್‍ಯಾಂಕ್ ಪರ್ಸೆಂಟೇಜ್ ಬಹಳ ಕಡಿಮೆ ಇದೆ, ನನ್ನ ಹೆಂಡತಿ ಇರಲಿ, ಗುಲಬರ್ಗಾ ಯುನಿವರ್ಸಿಟಿಯಿಂದ ಬಿ.ಎ.ಎಂ.ಎಸ್. ರ್‍ಯಾಂಕ್ ಬಂದಿರತಕ್ಕಂಥ ಒಬ್ಬ ವಿದ್ಯಾರ್ಥಿಯೂ ಕೂಡಾ ಜನರಲ್ ಮೆರಿಟ್‌ನಲ್ಲಿ ಸೆಲೆಕ್ಷನ್ ಆಗುವುದು ಸಾಧ್ಯವಿಲ್ಲ, ಪ್ರಾಂತೀಯ ಅಸಮಾನತೆಯನ್ನು ತೆಗೆಯದೇ ಹೋದರೆ, ಆ ಕಡೆಯವರಿಗೆ ಭವಿಷ್ಯ ಇಲ್ಲ, ಉದ್ಯೋಗ ಸಿಗುವ ಸಾಧ್ಯತೆ ಇಲ್ಲ ಎಂದು ಹೇಳಿದೆ ಅದೇ ರೀತಿ ಆಯಿತು. ಈ ಪ್ರಾದೇಶಿಕ ಅಸಮಾನತೆಯ ಬಗ್ಗೆ ಸದನದ ಸಮಿತಿಯನ್ನೂ ಸಹ ಮಾಡಿದ್ದಾರೆ. ಈ ರೀಜನಲ್ ಇಂಬ್ಯಾಲೆನ್ಸ್ ಮೇಲೆ ಕಮಿಟಿ ಮಾಡಿದ್ದಾರೆ. ಅದು ತನ್ನ ಇಂಟೀರಿಯಂ ರಿಪೋರ್ಟ್ ಸಹ ಕೊಟ್ಟಿದೆ. ಅದರ ಅಂಕಿ ಅಂಶಗಳನ್ನು ನೋಡಿದರೂ ಕೂಡಾ, ಗುಲಬರ್ಗಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಯಾವುದೇ ಹುದ್ದೆಗೆ ಅರ್ಜಿ ಹಾಕಿದರೂ ಸರಿಯಾಗಿ ಆಯ್ಕೆ ಆಗುವುದಿಲ್ಲ. ಒಂದು ಕಡೆ ೧೫೦ ಹುದ್ದೆಗಳು ಇದ್ದರೆ, ಗುಲಬರ್ಗಾ ಡಿವಿಜನ್‌ನಿಂದ ೫ ಜನರೂ ಕೂಡಾ ಸೆಲೆಕ್ಷನ್ ಆಗುವುದಿಲ್ಲ. ಆದರೆ ಏನೋ ಒಂದೊಂದು ಸಲ ಅಪರೂಪಕ್ಕೆ ೮–೧೦ ಜನ ಸೆಲೆಕ್ಷನ್ ಆಗಿರುವುದೂ ಉಂಟು. ಈ ಅಸಮಾನತೆಯನ್ನು ಹೋಗಲಾಡಿಸದೇ ಹೋದರೆ, ಗುಲಬರ್ಗಾ ವಿಭಾಗದವರಿಗೆ, ಗುಲಬರ್ಗಾ ಯುನಿವರ್ಸಿಟಿಯ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗುತ್ತದೆ. ಆ ಭಾಗದ ವಿದ್ಯಾರ್ಥಿಗಳು ಸರ್ಕಾರಿ ನೌಕರಿಯ ಕನಸನ್ನು ಕನಸಾಗಿಯೇ ಇಟ್ಟುಕೊಳ್ಳಬೇಕಾಗುತ್ತದೆ. ನನಸಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ.

ಇಷ್ಟೇ ಅಲ್ಲದೆ ಕ್ಯಾಲೆಂಡರ್ ಆಫ್ ಇಯರ್ ಗುಲ್ಬರ್ಗ ಯುನಿವರ್ಸಿಟಿಯಲ್ಲಿ ಜೂನ್ ತಿಂಗಳಲ್ಲಿ ಪ್ರಾರಂಭವಾದರೆ ಬೆಂಗಳೂರು ಯುನಿವರ್ಸಿಟಿಯಲ್ಲಿ ಇನ್ನೊಂದು ೪ ತಿಂಗಳು ಬಿಟ್ಟು ಪ್ರಾರಂಭವಾಗುತ್ತದೆ. ಬಿ.ಎ. ಮಾಡಿರತಕ್ಕಂಥ ಒಬ್ಬ ಹುಡುಗ, ಗುಲ್ಬರ್ಗ ಯುನಿವರ್ಸಿಟಿಯಿಂದ ಬೆಂಗಳೂರು ಯುನಿವರ್ಸಿಟಿಯಲ್ಲಿ ಎಂ.ಎ ಗೆ ಸೇರಿಕೊಳ್ಳಬೇಕೆಂದರೆ ಅರ್ಧ ಕ್ಯಾಲೆಂಡರ್ ಇಯರ್ ಆಗಿದೆ ಎಂದು ಹೇಳುತ್ತಾರೆ. ಆ ಹುಡುಗ ಬೇರೆ ಕಡೆ ಹೋಗುವುದಕ್ಕೆ ಸಾಧ್ಯವಿಲ್ಲ, ಎಂ.ಎ. ಮಾಡುವುದಕೂ ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯಗಳ ಮಧ್ಯೆ ಈ ಕ್ಯಾಲೆಂಡರ್ ಆಫ್ ಇಯರ್

ಪ್ರಾರಂಭ ಮಾಡತಕ್ಕಂಥ ರೀತಿ ಏನಿದೆ ಇವನ್ನು ಶಿಕ್ಷಣ ಇಲಾಖೆಯವರು ಬದಲಾವಣೆ ಮಾಡುವುದು ಅವಶ್ಯಕವಾಗಿದೆ. ಈ ವಿಚಾರವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿಗೆ ಮಾತನಾಡಬಹು ದೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅವರು ಒಂದೇ ಒಂದು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ, ಅದೇನೆಂದರೆ ಶಿವಮೊಗ್ಗ ಜಿಲ್ಲೆಯ ಕುವೆಂಪು ವಿಶ್ವವಿದ್ಯಾನಿಲಯದ ಬಗ್ಗೆ. ಅದು ಬಿಟ್ಟು ಉಳಿದಿದ್ದು ಏನೇನೂ ಇಲ್ಲ. ಶಿಕ್ಷಣ ಮಧ್ಯಮದಲ್ಲಿ, ಸಮಗ್ರವಾದಂಥ ಬದಲಾವಣೆಯಾಗಬೇಕು. ಶಿಕ್ಷಣ ಪದ್ಧತಿಯಲ್ಲಿ ಸಮಗ್ರವಾದ ಬದಲಾವಣೆಯಾಗಬೇಕು. ಈ ದಿಸೆಯಲ್ಲಿ ಜಾರಿಗೆ ತರತಕ್ಕಂಥ ಅವಶ್ಯಕತೆಗಳ ಬಗ್ಗೆ ಸರ್ಕಾರದವರು ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ ಕೃಷಿ ಉತ್ಪನ್ನಗಳ ಅವಶ್ಯಕತೆ ಎಷ್ಟಿದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಒಂದು ಬೆಳೆಯನ್ನು ಇಂಟರ್‌ಡ್ಯೂಸ್ ಮಾಡಿದರು ಆ ಬೆಳೆಯಾವುದೆಂದರೆ ಸೂರ್ಯಕಾಂತಿ. ಇದನ್ನು ರಾಜ್ಯದಲ್ಲಿ ನೂರಕ್ಕೆ ೯೦ರಷ್ಟು ಜನ ಬಿತ್ತನೆ ಮಾಡಿದರು. ಅವರಲ್ಲಿ ನಾನು ಒಬ್ಬ, ಇದು ಒಂದು ರೀತಿ ಕಮರ್ಷಿಯಲ್ ಕ್ರಾಪ್. ಹಣ ಬರುತ್ತದೆ, ಹಣ ಬಂದಾಗ ಮುಂದೆ ಚೆನ್ನಾಗಿ ವ್ಯವಸಾಯ ಮಾಡಿಕೊಳ್ಳಬಹುದು ಎನ್ನುವ ಭಾವನೆಯಿಂದ ಹೆಚ್ಚಾಗಿ ಜನ ಬಿತ್ತನೆ ಮಾಡಿದರು. ಈ ಬಗ್ಗೆ ಪ್ರಚಾರ ಕೂಡ ಸಾಕಷ್ಟು ನಡೆಯಿತು. ಒಂದು ಎಕರೆಗೆ ಸುಮಾರು ಎಂಟು ಕ್ವಿಂಟಾಲ್ ಸೂರ್ಯಕಾಂತಿ ಬರುತ್ತದೆ. ರೈತರಿಗೆ ಅನುಕೂಲವಾಗುತ್ತದೆ ಎಂದು. ಇದನ್ನು ಕೇಳಿ ರೈತರು ಈ ಬೆಳೆ ಬೆಳೆಯೋಣ, ಹಣ ಬರುತ್ತದೆ ನಮಗೆ ಒಳ್ಳೆಯ ರೇಟ್ ಸಿಗುತ್ತದೆ ಒಂದು ನಾಲ್ಕು ಕಾಸು ಸಿಗುತ್ತದೆಂದು. ಪ್ರಾರಂಭ ಮಾಡಿದರೆ ಇದರ ಇಳುವರಿ ಎಷ್ಟಾಗುತ್ತದೆ ಎಂದು ಸರ್ಕಾರವೇ ಒಂದು ಅಂದಾಜು ಮಾಡಿತ್ತು. ಆದರೆ ಈ ಬೆಳೆಯನ್ನು ಸುಮಾರು ೧೧.೩೩ ಲಕ್ಷ ಹೆಕ್ಟೇರ್‌ಗಳಲ್ಲಿ ನಮ್ಮ ರಾಜ್ಯದಲ್ಲಿ ಬಿತ್ತಲಾಗಿತ್ತು. ಸರ್ಕಾರ ಅಂದಾಜು ಮಾಡಿದ್ದಂತಹ ಉತ್ಪಾದನೆ ಬರಲಿಲ್ಲ. ಇಲ್ಲಿ ಬಂದಂತಹ ಉತ್ಪಾದನೆ ೪.೩೭ ಲಕ್ಷ ಟನ್. ಎಷ್ಟು ಟನ್ ಉತ್ಪಾದನೆ ಬರಬೇಕಾಗಿತ್ತೋ ಅಷ್ಟು ಉತ್ಪಾದನೆ ಬರಲಿಲ್ಲ ಕಾರಣ ಬೆಳೆ ಸರಿಯಾಗಿ ಆಗಲಿಲ್ಲ. ಏತಕ್ಕೆ ಸರ್ಕಾರದವರು ಇಂತಹ ಬೆಳೆಯನ್ನು ಇಂಟರ್‌ಡ್ಯೂಸ್ ಮಾಡಿದರು? ಜನರಿಗೆ ಅನ್ಯಾಯವಾದರೆ ಯಾರನ್ನು ಕೇಳುವಂತಿಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ರೀಸರ್ಚ್‌ನವರನ್ನು ಕೇಳಿದರೆ ನಮಗೆ ಗೊತ್ತಿಲ್ಲ ನಾವು ನಮ್ಮಲ್ಲಿ ರೀಸರ್ಚ್ ಮಾಡಿ ನೋಡಿದಾಗ ಚೆನ್ನಾಗಿ ಬಂದಿದೆ ನಿಮ್ಮದೆ ಏನೋ ಮಿಸ್ಟೇಕ್ ಇರಬೇಕೆಂದು ಹೇಳುತ್ತಾರೆ. ನೀವು ಹೇಳಿರುವ ಪ್ರಕಾರ ಒಂದು ಎಕರೆಗೆ ೮ ಕ್ವಿಂಟಾಲ್ ಇಳುವರಿ ಬರುತ್ತದೆಂದು ಹೇಳಿದ್ದೀರಿ. ಆದರೆ ೮ ಕ್ವಿಂಟಾಲ್ ಬಿಡಿ ೮ ಎಕರೆಯಲ್ಲಿ ಎಷ್ಟು ಇಳುವರಿ ಬಂದಿದೆ ಗೊತ್ತು ಒಂದೂಮುಕ್ಕಾಲು ಕ್ವಿಂಟಾಲ್. ಅದೂ ನನ್ನ ಸ್ವಂತ ಜಮೀನಿನಲ್ಲಿ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಷ್ಟವಾಗಿರುವುದೂ ನಿಜ. ಬೀಜದ ಗುಣಮಟ್ಟ ಕಡಿಮೆಯಾಗಿದೆಯೋ, ಕೃಷಿ ಮಾಡುವ ವಿಧಾನದಿಂದ ತೊಂದರೆ ಯಾಗಿದೆಯೋ ಗೊತ್ತಿಲ್ಲ. ಬಿತ್ತನೆ ಮಾಡುವ ಮುಂಚಿತವಾಗಿ ಮಳೆ ಬಂದಿದೆ. ಆದ್ದರಿಂದ ತೊಂದರೆ ಯಾಯಿತು. ರೇನ್ಸ್ ಬಂದಿದ್ದರಿಂದ ಬೆಳೆ ಸ್ವಲ್ಪ ಹಾಳಾಯಿತು.

ಶ್ರೀ ಯು. ಭೂಪತಿ – ಮಾನ್ಯ ಸಚಿವರು ಹೇಳಿರತಕ್ಕಂಥ ಕಾರಣವನ್ನು ನಾನು ಕೆಲವು ಜನ ರೈತರ ವಿಚಾರದಲ್ಲಿ ಒಪ್ಪಿಕೊಳ್ಳುತ್ತೇನೆ. ಆದರೆ ಎಲ್ಲಾ ಕಡೆ ನಷ್ಟವಾಗಿದೆಯಲ್ಲ. ಕೆಲವು ಕಡೆ ಮಳೆ ಜಾಸ್ತಿಯಾಗಿರಬಹುದು. ಮಳೆ ಜಾಸ್ತಿಯಾದಾಗ ಪರಾಗಸ್ಪರ್ಶವಾಗಿ ಬೀಜ ಕೂಡ ಕೊಳ್ಳುವುದಕ್ಕೆ ಆಗದಿದ್ದರೆ ಇಳುವರಿ ಬರುವುದಿಲ್ಲ. ಆದರೆ ನೂರಕ್ಕೆ ನೂರರಷ್ಟು ಅದೇ ರೀತಿ ಆಗುವುದಕ್ಕೆ ಸಾಧ್ಯವಿಲ್ಲ. ಟೋಟಲ್ ಫೇಲ್ಯೂರ್ ಆಗುವುದಿಲ್ಲ ಈಗ ಇಡೀ ರಾಜ್ಯದಲ್ಲಿ ನಷ್ಟವಾಗಿದೆ. ಒಂದೊಂದು ಸೆಲೆಕ್ಟೆಡ್ ಕೇಸಿನಲ್ಲಾಗಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ತಾವು ಈ ಬಗ್ಗೆ ನನಗೆ ಅಧ್ಯಯನ ಮಾಡಿ ಹೇಳಿ ಈಗಲೇ ಹೇಳಬೇಕೆಂದೇನೂ ಇಲ್ಲ. ಆದರೆ ಈ ವಿಷಯವನ್ನು ತಾವು ಗಂಭೀರವಾಗಿ ಪರಿಗಣಿಸಬೇಕು. ಇಲ್ಲದಿದ್ದರೆ ಇಡೀ ನಾಲ್ಕು ತಾಲ್ಲೂಕಿಗೆ ತೊಂದರೆಯಾಗುತ್ತದೆ. ಇದು ಆಲ್ ಸೀಜನ್ ಕ್ರಾಪ್, ಇದಕ್ಕೆ ಔಷಧಿ ಅವಶ್ಯಕತೆ ಇಲ್ಲ. ಇಂತಹ ಕ್ರಾಪ್ ಅನ್ನು ಅಂದರೆ ಮೈಕ್ರೋ ಸೀಡ್ಸ್‌ನ್ನು ಸರ್ಕಾರದವರು ಸರ್ಟಿಫೈಡ್ ಮಾಡಿಲ್ಲ. ಪ್ರವೇಟ್ ಕಂಪನಿಯವರು ಮಹಾರಾಷ್ಟ್ರದಿಂದ ಬಂದು ಇಲ್ಲಿ ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ.' ಒಂದು ಕೆ.ಜಿ.ಗೆ ಬ್ಲಾಕ್‌ನಲ್ಲಿ ಸುಮಾರು ೮೦೦ ರೂಪಾಯಿಗಳು.

ರೈತರು ಅಂಥ ಬೀಜವನ್ನೇ ತೆಗೆದುಕೊಂಡು ಬಿತ್ತಿದ್ದಾರೆ. ಈ ಸೂರ್ಯಕಾಂತಿ ಬೀಜವನ್ನು ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದುದನ್ನು ನೀವು ಕಂಟ್ರೋಲ್ ಮಾಡಿದಿರಾ ? ನೀವು ಕಂಟ್ರೋಲ್ ಮಾಡಬೇಕಾದರೆ ಸೆಂಟ್ರಲ್‌ನಲ್ಲಿ ಆಕ್ಟ್ ಆಗಬೇಕು. ನಿಮ್ಮ ಎಮ್ಮೆಂಗೇ ಸೀಡ್ಸನ್ನು ಬ್ಲಾಕ್‌ನಲ್ಲಿ ಮಾರಾಟ ಮಾಡಿದರೂ ನಿಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಆಫೀಸರ್‌ಗಳು ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇನ್ನು ಹತ್ತಿ ಬೆಳೆ ಬಗ್ಗೆ ಹೇಳಬಹುದಾದರೆ, ಒಂದು ಎಕರೆಗೆ ೨೦ ಕ್ವಿಂಟಾಲ್ ಹತ್ತಿಯನ್ನು ತೆಗೆಯುವ ಹಾಗಿದ್ದರೂ, ಈ ವರ್ಷ ಒಂದು ಎಕರೆಯಲ್ಲಿ ಮೂರು, ನಾಲ್ಕು ಕ್ವಿಂಟಾಲ್ ಇಳುವರಿ ಬಂದಿದೆ. ಇದಕ್ಕೆ ಕಾರಣ ರೈತರುಗಳಿಗೆ ಸರಿಯಾದ ಹತ್ತಿ ಬೀಜ ಸಿಕ್ಕಿಲ್ಲ

ಶ್ರೀ ಆರ್. ವಿ. ದೇಶಪಾಂಡೆ.—ಎಲ್ಲೋ ಒಂದು ಕಡೆ ಮೂರು ನಾಲ್ಕು ಕ್ವಿಂಟಾಲ್ ಇಳುವರಿ ಬಂದಿರಬಹುದು. ಆವರೇಜ್ ಹತ್ತು, ಹನ್ನೆರಡು ಕ್ವಿಂಟಾಲ್ ಇಳುವರಿ ಬಂದಿದೆ

ಶ್ರೀ ಯು. ಭೂಪತಿ.—ಬಳ್ಳಾರಿಯಲ್ಲಿ ರೈತರುಗಳಿಗೆ ಸರಿಯಾದ ಹೈಬ್ರೀಡ್ ಬೀಜಗಳು ಸಿಕ್ಕಲಿಲ್ಲ,

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷಣೀಯವರೇ, ಈ ವರ್ಷ ನಾವು ಸೂರ್ಯಕಾಂತಿ ಬೆಳೆಯನ್ನು ಬೆಳೆದು ಬಹಳ ಸಂತೋಷವಾಗಿದೆ, ಪ್ರತಿ ವರ್ಷ ಹತ್ತಿ ಬೆಳೆಯನ್ನು ಹಾಕಿ ನಮ್ಮ ಕಡೆ ರೈತರುಗಳು ಕೆಲವರು ಪಾಪರ್ ಆಗಿದ್ದರು. ದುರಾದೃಷ್ಟವಶಾತ್ ಈ ವರ್ಷ ಹೆಚ್ಚು ಮಳೆ ಬಿದ್ದಿದ್ದರಿಂದ ಸೂರ್ಯಕಾಂತಿ ಬೆಳೆಯು ನಿರೀಕ್ಷಿಸಿದ ಮಟ್ಟದಲ್ಲಿ ಆಗಲಿಲ್ಲ. ಸೂರ್ಯಕಾಂತಿ ಬೆಳೆಯು ಬಹಳ ಉತ್ತಮವಾದ ಬೆಳೆ. ಒಂದು ಎಕರೆಗೆ ಮೂರು ಕ್ವಿಂಟಾಲ್ ಬಂದರೂ ಏನೂ ಮೋಸ ಆಗುವುದಿಲ್ಲ, ಒಂದು ಕ್ವಿಂಟಾಲ್‌ಗೆ ಐನೂರು ರೂಪಾಯಿಗಳು ಅಂದರೂ ಒಂದೂವರೆ ಸಾವಿರ ರೂಪಾಯಿಗಳು ಬಂದ ಹಾಗೆ ಆಗುತ್ತದೆ. ನಾನು ಗುಲ್ಬರ್ಗಾ, ಬೆಳಗಾಂ, ಚಿತ್ರದುರ್ಗ ಮುಂತಾದ ಕಡೆ ಈ ಸೂರ್ಯಕಾಂತಿ ಬೆಳೆದಿರುವ ಫೀಲ್ಡ್‌ಗೆ ಹೋಗಿ ನೋಡಿಕೊಂಡು ಬಂದಿದ್ದೇನೆ, ಈ ವರ್ಷ ಬೆಳೆ ಕಡಿಮೆ ಆಗಿದೆ ಎಂದು ನಿರಾಶೆಯಾಗಬೇಕಾದುದೇನು ಇಲ್ಲ, ಅಷ್ಟಕ್ಕೆ ಈ ಬೆಳೆಯನ್ನು ಬಿಡುವ ಅವಶ್ಯಕತೆ ಇಲ್ಲ

ಶ್ರೀ ಯು. ಭೂಪತಿ.—ಈ ವರ್ಷ ನಮ್ಮ ರಾಜ್ಯದಲ್ಲಿ ೧೧.೭ ಲಕ್ಷ ಹೆಕ್ಟೇರ್‌ನಲ್ಲಿ ಸೂರ್ಯಕಾಂತಿಯನ್ನು ಬೆಳೆದಿದ್ದರೆ, ಅದರಲ್ಲಿ ೩ ಲಕ್ಷ ಚಿಲ್ಲರೆ ಹೆಕ್ಟೇರ್ ಭೂಮಿಯಲ್ಲಿ ಬೆಳೆದಿರುವ ಸೂರ್ಯಕಾಂತಿ ಬೆಳೆ ನಷ್ಟವಾಗಿದೆ. ಅಂದರೆ, ಆವರೇಜ್ ಉತ್ಪಾದನೆ ಕಡಿಮೆ ಬಂದಿದೆಯೆಂದಾಯಿತು. ಈ ಬೆಳೆಯನ್ನು ರೈತರುಗಳು ಕೈ ಬಿಡಬೇಕೆಂದು ನಾನು ಹೇಳುತ್ತಿಲ್ಲ ಎಣ್ಣೆ ಕಾಳುಗಳ ಉತ್ಪಾದನೆ ಬಹಳ ಅವಶ್ಯಕವಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಹೆಚ್ಚು ಇಳುವರಿ ಬರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿದ್ದೀರಾ ? ಈ ವರ್ಷ ಈ ಬೆಳೆಯನ್ನು ನಂಬಿಕೊಂಡು ಲಾಸ್ ಮಾಡಿಕೊಂಡಿರುವ ಜನರಿಗೆ ಪರಿಹಾರ ಕೊಡದಿದ್ದರೆ ಅವರು ಮಾಡಿಕೊಂಡಿರುವ ಸಾಲಗಳನ್ನು ತೀರಿಸುವುದಕ್ಕಾಗುವುದಿಲ್ಲ,

ಶ್ರೀ. ಆರ್, ವಿ, ದೇಶಪಾಂಡೆ.—ನಮ್ಮ ರಾಜ್ಯದಲ್ಲಿ ಸೂರ್ಯಕಾಂತಿ ಬೆಳೆಯ ಇಳುವರಿ ಕಡಿಮೆಯಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ, ನಮ್ಮ ಇಲಾಖೆಯವರು ಎಲ್ಲೆಲ್ಲಿ ಕಡಿಮೆ ಇಳುವರಿ ಬಂದಿದೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ. ಅದರ ರಿಸಲ್ಟ್ ಬಂದ ನಂತರ ರೈತರಿಗೆ ಏನು ಸಹಾಯ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ನೋಡೋಣ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಸಚಿವರೇ ಈ ಮೊದಲು ಕೊಟ್ಟಿದ್ದ ಅಂಕಿ ಅಂಶಗಳಿಂದ ನಾನು ಮಾತನಾಡಿದ್ದೇನೆ. ಬೆಳೆ ನಷ್ಟ ಮಾಡಿಕೊಂಡವರಿಗೆ ಇನ್‌ಷೂರೆನ್ಸ್ ಕೊಡುವುದಕ್ಕೆ ತಾವು ಯೋಚನೆ ಮಾಡಬೇಕು. ಸಮಗ್ರ ಬೆಳೆವಿಮಾ ಯೋಜನೆಯಂತೆ, ಕಳೆದ ೫ ವರ್ಷಗಳಲ್ಲಿ ಬಂದಿರುವ ಆವರೇಜ್ ಇಳುವರಿಯಲ್ಲಿ ಶೇಕಡ ೮೦ ಕ್ಕಿಂತ ಕಡಿಮೆ ಇಳುವರಿ ಬಂದರೆ ಇನ್‌ಶೂರೆನ್ಸ್ ಕೊಡಬೇಕಾಗುತ್ತದೆ ಆದರೆ, ಈ ೫ ವರ್ಷಗಳಲ್ಲಿ ಸೂರ್ಯಕಾಂತಿ ಬೆಳೆಯನ್ನು ರೈತರು ಹೆಚ್ಚಿಗೆ ಹಾಕಿಲ್ಲ. ಸರ್ವೇಸಾಮಾನ್ಯವಾಗಿ ರೈತರುಗಳು ಹತ್ತಿಯನ್ನೇ ಬೆಳೆಯುತ್ತಿದ್ದರು.

ಶ್ರೀ ಆರ್. ವಿ. ದೇಶಪಾಂಡೆ.—ಬಹಳ ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಹೆಚ್ಚಿನ ರೀತಿಯಲ್ಲಿ ಸೂರ್ಯಕಾಂತಿಯನ್ನು ಬೆಳೆಯುತ್ತಿದ್ದಾರೆ. ಅದರ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ಕೊಡುತ್ತೇನೆ,

ಶ್ರೀ ಯು. ಭೂಪತಿ.—ಸ್ಟ್ಯಾಟಿಸ್ಟಿಕ್ಸ್ ನಿಮ್ಮ ಹತ್ತಿರ ಇದೆ. ಇಲ್ಲವೆಂದು ಹೇಳುವುದಿಲ್ಲ. ನನ್ನ ಅಪೀಲ್ ಇಷ್ಟೆ, ಸೂರ್ಯಕಾಂತಿ ಬೆಳೆಯನ್ನು ಬೆಳೆದಿದ್ದಾರೆ.

೨-೩೦ ಪಿ. ಎಂ.

ಬೇಕಾದ ಅಂಕಿ ಅಂಶಗಳು ತಪ್ಪಾಗಿರಬಹುದು. ಆದರೆ ನನ್ನ ಅಪೀಲ್ ಇಷ್ಟೇ. ಐದು ವರ್ಷಗಳಲ್ಲಿ ನಾವೇನು ಸೂರ್ಯಕಾಂತಿ ಬೆಳೆಯನ್ನು ಬೆಳೆದಿದ್ದೇವೆ, ಈ ವರ್ಷ ರಾಜ್ಯದಲ್ಲಿ ಎಷ್ಟು ಹೆಕ್ಟೇರ್‌ಗಳಲ್ಲಿ ಸೂರ್ಯಕಾಂತಿ ಬೆಳೆದಿದ್ದೇವೆ ಎಂದು ನೋಡಿದರೆ ಅದರಲ್ಲಿ ಗೊತ್ತಾಗುತ್ತದೆ. This is being increased in five years. This year it has gone to the maximum extent. If you adopt five years threshold. 80% of the peasants will not get Insurance. ಆದ್ದರಿಂದ ಅದನ್ನು ಮಾಡಬೇಕಾಗಿಲ್ಲ ಎಂದು ನನ್ನ ಅಭಿಪ್ರಾಯ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಆದರಿಂದ ರೈತರಿಗೆ ತೊಂದರೆಯಾಗುತ್ತದೆ. ಇದಕ್ಕಾಗಿ ಸಮಗ್ರ ವಿಮಾ ಯೋಜನೆ ಇಲ್ಲದಿದ್ದರೆ ಅನುಕೂಲವಾಗುವುದಿಲ್ಲ ಎಂದು ಹೇಳ ಬಯಸುತ್ತೇನೆ,

SRI S REVANASIDDAIAH.—It is only crop loan Insurance and not comprehensive crop insurance. ತಾವೂ ಹೇಳುತ್ತಾ ಇದ್ದೀರಿ. ಮಾನ್ಯ ಮಂತ್ರಿಯವರೂ ಕೂಡ ಇದು ಹೇಳುತ್ತಾ ಇದ್ದಾರೆ. ಇದರ ಲಾಭ ರೈತರಿಗೆ ಸಿಗುತ್ತಾ ಇಲ್ಲ. ನಮ್ಮ ಹಾಗೂ ಇತರ ಕಡೆಗಳಲ್ಲಿ ಗುರೆಳ್ಳು ಬೆಳೆಯುತ್ತಾರೆ. ಆದರೆ ದಾಖಲೆಯಲ್ಲಿನ ಹೆಸರು ಮಾತ್ರ ಬೇರೆ ಇರುತ್ತದೆ. ನಾವು ಈ ಬಗ್ಗೆ ರಿಕಾರ್ಡ್‌ನ್ನು ನೋಡಿದಾಗ, ಬ್ಯಾಂಕ್‌ಗಳಲ್ಲಿ ಸೊಸೈಟಿಗಳಲ್ಲಿ ಬೇರೆ ಬೇರೆ ಹೆಸರನ್ನು ಕೊಡುತ್ತಾರೆ. They are not eligible for any Insurance even under the Crop Insruance. It will be abused not even to the extent of 10%. ಆದುದರಿಂದ ಎಲ್ಲರಿಗೂ ಇದರ ಲಾಭ ಬರುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಕ್ರಾಪ್ ಲೋನ್ ಇನ್‌ಶೂರೆನ್ಸ್ ಸ್ಕೀಮ್ ಏನಿದೆ, ಅದರಲ್ಲಿ ಸಹಕಾರಿ ಇಲಾಖೆ ಇರಬಹುದು, ವಾಣಿಜ್ಯ ಬ್ಯಾಂಕ್‌ಗಳು ಇರಬಹುದು, ಅಥವಾ ಗ್ರಾಮೀಣ ಬ್ಯಾಂಕುಗಳು ಇರಬಹುದು. ಈ ಸಂಸ್ಥೆಗಳಿಂದ ರೈತರುಗಳು ಏನು ಸಾಲ ಪಡೆದುಕೊಂಡಿದ್ದಾರೆ ಅವರಿಗೆ ಲಾಭ ಆಗುವುದಕ್ಕೆ ಸಾಧ್ಯವಿದೆ. ೧೦ ಪರ್ಸೆಂಟ್ ಕೂಡ ಆಗಿಲ್ಲ ಎಂದು ಹೇಳುವುದು ಸರಿಯಲ್ಲ. ಕ್ರಾಪ್ ಲೋನ್ ಇನ್‌ಶೂರೆನ್ಸ್ ಬಗ್ಗೆ ಸಾಕಷ್ಟು ದೂರುಗಳು ಇವೆ. ಅದೇ ರೀತಿಯಲ್ಲಿ ಅವಧಿಯ ವಿಚಾರದಲ್ಲಿ ೫ ವರ್ಷಗಳು ಇದ್ದುದನ್ನು ೩ ವರ್ಷ ಮಾಡಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಕೇಂದ್ರ ಸರಕಾರದವರಿಗೆ ಬರೆದು ಒತ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಯು. ಭೂಪತಿ.—ಯಾವುದೇ ಬೆಳೆಯನ್ನು ಜನಪ್ರಿಯವಾಗಿ ಮಾಡುವಾಗ ಸಾಕಷ್ಟು ಮುಂಜಾಗ್ರತೆ ತೆಗೆದುಕೊಳ್ಳಲಿ ಎಂಬ ಕಾರಣಕ್ಕಾಗಿ ನಾನು ಈ ವಿಚಾರವನ್ನು ಇಷ್ಟು ವಿವರವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಇನ್ನು ಕೃಷಿ ಇಲಾಖೆಯಲ್ಲಿ ರಿಸರ್ಚ್ ಸೆಂಟರ್‌ಗಳು ಇವೆ. ನಾನು ಆ ಕೇಂದ್ರಗಳನ್ನು ನೋಡಿದ್ದೇನೆ. ಅಲ್ಲಿ ವಿಜ್ಞಾನಿಗಳಿಗೆ ಕೊಟ್ಟಿರುವ ಸವಲತ್ತುಗಳು ಸಾಲದು. ಯಾರು ಈ ಕೃಷಿ ಕ್ಷೇತ್ರಕ್ಕೆ ತಮ್ಮ ಸಂಶೋಧನೆಯಿಂದ ಸಹಾಯ ಮಾಡಿ, ಹೊಸ ಹೊಸ ತಳಿಯ ಬೀಜಗಳನ್ನು ಕಂಡುಹಿಡಿಯಬೇಕಾಗಿದೆಯೋ, ಅಂತಹವರಿಗೆ ಗುಮಾಸ್ತರಿಗೆ ಕೊಟ್ಟ ಸವಲತ್ತುಗಳನ್ನು ಕೊಟ್ಟಹಾಗೆ ಮಾಡುತ್ತಾರೆ. ಅವರನ್ನು ಇಷ್ಟು ಕಡಿಮೆ ಸವಲತ್ತುಗಳನ್ನು ಕೊಟ್ಟು ಉತ್ತೇಜಿಸುವುದರಲ್ಲಿ ಪ್ರಯೋಜನವಿಲ್ಲ. ಆ ಒಂದು ಅವರ ಕೆಲಸದ ಮಹತ್ವದ ದೃಷ್ಟಿಯಿಂದ ಅವರನ್ನು ನೋಡಿದರೆ ಅವರಿಗೆ ಬೇಕಾದಂತಹ ಇನ್‌ಫ್ರಾಸ್ಟ್ರಕ್ಚರ್ಸ್ ಸಾಲದು. ಅವರಿಗೆ ಎಲ್ಲಾ ಅನುಕೂಲತೆಗಳನ್ನು ಮತ್ತು ಸೂಕ್ತ ಸೌಲಭ್ಯಗಳನ್ನು ಸರಕಾರದವರು ಒದಗಿಸಿಕೊಟ್ಟು ಅವರಿಂದ ಇನ್ನು ಹೆಚ್ಚಿನ ಉಪಯುಕ್ತತೆಯನ್ನು ಪಡೆಯಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಸರಕಾರ ತನ್ನ ಐದು ವರ್ಷಗಳ ಸಾಧನೆಯ ಕುರಿತು ಒಂದು ಜನೋತ್ಸವವನ್ನು ಮಾಡಿದರು......

ಶ್ರೀ ಆರ್. ಎಲ್. ಜಾಲಪ್ಪ.—ಸರಕಾರದವರು ಮಾಡಿಲ್ಲ. ಜನತಾ ಪಕ್ಷದವರು ಮಾಡಿದ ಜನೋತ್ಸವ ಅದು.

ಶ್ರೀ ಎಂ. ಎಸ್. ಕೃಷ್ಣನ್.—ಸರಕಾರದ ಸಹಾಯದಿಂದ ಮಾಡಿದರು......

ಶ್ರೀ ಯು. ಭೂಪತಿ.—ಈಗ ಸರಕಾರದಲ್ಲಿರುವುದು ಒಂದೇ ಒಂದು ಪಕ್ಷ ಅಲ್ಲವೆ ? ಬೇರೆ ಪಕ್ಷಗಳು ಇಲ್ಲದ ಕಾರಣ ಜನತಾ ಪಕ್ಷದ ಸರಕಾರದ ಜನೋತ್ಸವ ಇದು.

ಶ್ರೀ ಎಂ ಎಸ್. ಕೃಷ್ಣನ್.—ಜನತಾ ಸರಕಾರದ ಸಹಾಯದಿಂದ ನಡೆದ ಅದನ್ನು ಜನೋತ್ಸವ ಎಂದು ಹೇಳಬಹುದೆ ?

ಶ್ರೀ ಎಂ. ಚಂದ್ರಶೇಖರ್.—ಈ ರೀತಿ ವೆಸ್ಟ್ ಬೆಂಗಾಲ್‌ನಲ್ಲಿ ಒಂದು ದೊಡ್ಡ ಪ್ರಮಾಣದ ಉತ್ಸವವನ್ನು ಮಾಡಿದ್ದಾರೆ. ಅದಕ್ಕೆ ಏನು ಹೇಳುತ್ತೀರಿ ? ಇದೂ ಕೂಡ ಪಕ್ಷದ ವತಿಯಿಂದ ಆಗಿದೆಯೋ ? ಅಲ್ಲೂ ಕೂಡ ಸರಕಾರ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಅದು ಬರೀ ಗಲ್ಕತ್ತಕ್ಕೆ ಮಾತ್ರ ಬರಲಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.—ಅವರೂ ಕೂಡ ನೇರವಾಗಿ ಆ ಪಕ್ಷಕ್ಕೆ ಸೇರಿದವರು. ಅಲ್ಲಿ ಜನೋತ್ಸವ ನಡೆಯಲಿಲ್ಲ. ಒಂದೊಂದು ಜಿಲ್ಲೆಯೊಳಗೆ ಒಬ್ಬರು ಬಂದು ಕೈ ಹಿಡಿದುಕೊಂಡು ನಿಂತುಕೊಂಡರು ನಿಮಗೆ ಗೊತ್ತಿದೆ ಇವತ್ತು ನಮ್ಮ ಪಾರ್ಟಿಯವರು ಹೇಗಿದ್ದಾರೆ ಎಂದು ನೀವೂ ಕೂಡ ಕೈ ಹಿಡಿದುಕೊಂಡು ನಿಂತುಕೊಳ್ಳಿ ನೋಡೋಣ ಕರ್ನಾಟಕ ರಾಜ್ಯದಲ್ಲಿ ಏನಾಗುತ್ತದೆ ಎಂದು.

ಶ್ರೀ ಯು. ಭೂಪತಿ.—ಇದು ಜನೋತ್ಸವ ಅಲ್ಲ, ಒಂದು ಜಾತ್ರೆಯ ರೀತಿಯಲ್ಲಿ ಇತ್ತು. ಆ ರೀತಿ ಮಾಡಿ ಇವನ್ನು ಕೈ ಬಿಟ್ಟರು. ಇದನ್ನು ಮಾಡಿದ್ದೀರಿ ಇದನ್ನು ಮಾಡಬಾರದಾಗಿತ್ತು ಎಂಬ ಪ್ರಶ್ನೆ ಅಲ್ಲ. ನಮ್ಮ ಸಾಧನೆಗಳ ಬಗ್ಗೆ ಕೇಳಿಕೊಳ್ಳುವುದಕ್ಕೆ ಒಂದು ವೇದಿಕೆ ಬೇಕು ಆ ವೇದಿಕೆಯನ್ನು ನಾವು ರೂಪಿಸಿಕೊಳ್ಳಬೇಕು. ವಿರೋಧ ಪಕ್ಷಗಳ ನಾಯಕರನ್ನು ಬೇರೆ ಬೇರೆ ಕಡೆಯಿಂದ ಕರೆಯಿಸಬೇಕು ರಾಷ್ಟ್ರದಲ್ಲಿ ಕಾಂಗ್ರೆಸ್ ಸರಕಾರಕ್ಕೆ ಪರ್ಯಾಯವಾಗಿ ಒಂದನ್ನು ಹುಡುಕಬೇಕಾದ ಪರಿಸ್ಥಿತಿ ಇವತ್ತು ರಾಷ್ಟ್ರದಲ್ಲಿ ನಿರ್ಮಾಣವಾಗಿದೆ ಅದಕ್ಕಾಗಿ ಈ ಕಾರ್ಯಕ್ರಮಗಳು ನಡೆಯಬೇಕು ಆದರೆ ಈ ರೀತಿಯಲ್ಲಿ ಅಲ್ಲ. ಲಕ್ಷಾಂತರ ಜನರನ್ನು ಕರೆಯಿಸಿದರು ಕರೆಯಿಸಿ ಅವರಿಗೆ ಊಟ ಸಿಕ್ಕಿತೋ ಇಲ್ಲವೋ ಅದು ಒಂದು ವಿಚಾರ, ಕೊನೆಗೆ ಬಂದವರ ಬ್ಯಾಗ್ ಒಂದು ಕಡೆ ಬಸ್ ಒಂದು ಕಡೆ ಇದರ ಜೊತೆಗೆ ಬೇರೆ ಬೇರೆ ಭಾಷೆಯಲ್ಲಿ ಭಾಷಣ. ಬಡವರಿಗೆ, ಬಂದ ಜನರಿಗೆ ಅದು ಅರ್ಥವಾಗಲಿಲ್ಲ. ನಮ್ಮ ಜಿಲ್ಲೆಯಲ್ಲಿನ ಮಂಡಲ ಪಂಚಾಯತಿಯ ಪ್ರಧಾನರು ಬಂದು ಹೇಳಿದರು ನನ್ನ ಬ್ಯಾಗ್ ಇಟ್ಟಿದ್ದೆ ಬಸ್‌ನಲ್ಲಿ ಬಸ್ ಇಲ್ಲ ಹೋಯಿತು, ನನ್ನ ಬ್ಯಾಗ್ ಹೋಯಿತು ಎಂದು ಹೇಳಿದರು ನಾನು ಹೇಳಿದೆ ಹೋಗಲಿ ಬಿಡಿ ಚಿಂತೆ ಮಾಡಬೇಡಿ ಎಂದು. ಈ ರೀತಿ ಮಾಡುವುದರ ಬದಲಾಗಿ ಅಧಿಕಾರ ವಿಕೇಂದ್ರೀಕರಣ ಮಾಡಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳನ್ನು ಹೊಸದಾಗಿ ಈ ರಾಜ್ಯದಲ್ಲಿ ಏನು ಜಾರಿಗೆ ಬಂದಿದೆ ಆ ವ್ಯವಸ್ಥೆಯ ಬಗ್ಗೆ ತೀವ್ರವಾಗಿ ಚರ್ಚೆ ಮಾಡುವುದಕ್ಕೆ ಅಥವಾ ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ತಮ್ಮ ಪಾತ್ರವನ್ನು ವಿವರವಾಗಿ ಚರ್ಚೆ ಮಾಡುವುದಕ್ಕೆ ಮತ್ತು ಸರಿಯಾದಂತಹ ವ್ಯವಸ್ಥಿತ ವಾದಂತಹ ಸಮ್ಮೇಳನವನ್ನು ಮಾಡಬಹುದಾಗಿತ್ತು. ಸಮ್ಮೇಳನವನ್ನು ಮಾಡುವುದು ಹೇಗೆ ಏನು ಎಂಬುದನ್ನು ನಾವು ಅವರಿಗೆ ಹೇಳಿಕೊಡಬೇಕಾಗಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಸಮ್ಮೇಳನಗಳಿಗೆ ಹೋಗಿ ಉದ್ಘಾಟನೆ ಮಾಡಿ ಬಂದಿದ್ದಾರೆ ಅವರಿಗೆ ಹೇಳಿಕೊಡಬೇಕಾಗಿಲ್ಲ ಅಲ್ಲಿ ಬೇರೆ ಬೇರೆ ವಿಷಯಗಳನ್ನು ಚರ್ಚೆ ಮಾಡಿದಾಗ ಹಿಂದೆ ಮಾಡಿದಂತಹ ತಪ್ಪುಗಳನ್ನಾಗಲೀ ನಾವು ಮಾಡಿರತಕ್ಕಂತಹ ಕೆಲಸಗಳ ಬಗ್ಗೆಯೇ ಆಗಲೀ, ಮುಂದೆ ಕಾರ್ಯಕ್ರಮವನ್ನು ರೂಪಿಸಿಕೊಂಡರೆ ಅದರ ಪ್ರಕಾರ ನಡೆಯುವುದಕ್ಕೆ ಹೇಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಅಲ್ಲಿ ಚರ್ಚೆ ಮಾಡಬಹುದು, ಆದರೆ ಈ ರೀತಿ ಜಾತ್ರೆ ಮಾಡಿ ನಾಲ್ಕು ಜನರು ಭಾಷಣ ಮಾಡುವುದರಿಂದ ಪರಿಣಾಮಕಾರಿಯಾಗುವುದಿಲ್ಲ. ನ್ಯಾಷನಲ್ ಇಷ್ಯೂ, ಸ್ಟೇಟ್ ಇಷ್ಯೂ ಏನು ಇದೆ ಅದರ ಬಗ್ಗೆ ಚರ್ಚೆ ಮಾಡಿ ಅದನ್ನು ಯಾವ ರೀತಿ ಜಾರಿಗೆ ತರಬೇಕೆಂಬ ಬಗ್ಗೆ ಚರ್ಚೆ ಮಾಡಿದ್ದರೆ, ರಾಷ್ಟ್ರದ ರಾಜಕಾರಣದಲ್ಲಿ ಬದಲಾವಣೆಯನ್ನು ತರುವುದಕ್ಕೆ ಅನುಕೂಲವಾಗುತ್ತದೆ. ಅದು ವ್ಯವಸ್ಥಿತವಾದಂತಹ ಸಮ್ಮೇಳನವಾಗುತ್ತದೆ. ಇಲ್ಲದಿದ್ದರೆ ಜಾತ್ರೆಯಾಗುತ್ತದೆ ಎಂದು ಹೇಳುತ್ತಾ ಅದನ್ನು ಅಲ್ಲಿಗೇ ಕೈ ಬಿಡುತ್ತೇವೆ. ಕೋಟಿಗಟ್ಟಲೆ ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಲಕ್ಷಗಳನ್ನು ಖರ್ಚು ಮಾಡಿದೆವೆಂದು ಹೇಳುತ್ತಾರೆ ಆದರೆ ಕೋಟಿಗಟ್ಟಲೆ ಖರ್ಚಾಗಿದೆ ಎಂದು ನಾವು ಕೇಳಿದ್ದೇವೆ. ಅದರ ವಿಚಾರ ಇರಲಿ...

ಶ್ರೀ ಎಂ. ಎಸ್. ಕೃಷ್ಣನ್.—ಕಮ್ಯೂನಿಸ್ಟ್ ಕಲ್ಚರ್ ಬಗ್ಗೆ ಹೇಳುತ್ತಾರೆ ಅವರಲ್ಲಿ ಕಮ್ಯೂನಿಸ್ಟ್ ಬರುವುದಕ್ಕೆ ಹೇಗೆ ಸಾಧ್ಯ ? ಮಾನ್ಯ ಜಾಲಪ್ಪನವರು ಇನ್ನು ಕೆಲವರು ಏನೋ ಸ್ವಲ್ಪ ಅಂಟಿಕೊಂಡಿರಬಹುದು. ಮಾನ್ಯ ಏಕಾಂತಯ್ಯನವರಿಗೆ ಹೇಗೆ ಸಾಧ್ಯ ? ಒಬ್ಬೊಬ್ಬರಿಗೆ ಒಂದೊಂದು ರೀತಿ ಇರುತ್ತದೆ.

ಶ್ರೀ ಯು. ಭೂಪತಿ.—ಜಿಲ್ಲಾ ಪರಿಷತ್ ಮಂಡಲ ಪಂಚಾಯತಿಗಳ ವ್ಯವಸ್ಥೆಗಳಿಗೆ ಡೀ-ಸೆಂಟ್ರಲೈಸೇಷನ್ ಆಫ್ ಪವರ್ ಏನಿದೆ ಇದು ಬೇಕು ಎಂದು ಹೇಳತಕ್ಕಂತಹ ಜನವೇ ನಾವು. ಅದನ್ನು ಬೇಡವೆಂದು ಹೇಳತಕ್ಕಂತಹ ಜನ ನಾವು ಅಲ್ಲ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಜಿಲ್ಲಾ ಪರಿಷತ್‌ಗಳು, ಮಂಡಲ ಪಂಚಾಯತಿಗಳ ಚುನಾವಣೆಯಾಗುವುದಕ್ಕೆ ಮುಂಚಿತವಾಗಿ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಿಕೊಳ್ಳದೇ ಚುನಾವಣೆ ಮಾಡಿ ಅಧಿಕಾರವನ್ನು ಕೊಟ್ಟಿದ್ದೇವೆ. ಇವತ್ತು ಮಂಡಲ ಪಂಚಾಯತಿಗಳಿಗೆ ಹೋದರೆ ಒಬ್ಬನೇ ಒಬ್ಬ ಕಾರ್ಯದರ್ಶಿ ಇರುತ್ತಾನೆ ಅವನನ್ನು ಬಿಟ್ಟರೆ ಬೇರೊಬ್ಬ ಅಲ್ಲಿ ಇಲ್ಲ.

ಒಂದು ವಾರದಲ್ಲಿ ಕನಿಷ್ಠಪಕ್ಷ ನಾಲ್ಕು ದಿವಸ ಐದು ದಿವಸದವರೆಗೂ ತಾಲ್ಲೂಕು ಕೇಂದ್ರಕ್ಕೆ ಹೋಗುತ್ತಾರೆ, ಒಂದು ದಿವಸ ಟ್ರೆಜರಿಗೋ, ಇನ್ನೊಂದು ದಿವಸ ಬಿ. ಡಿ. ಓ. ಹತ್ತಿರವೋ, ಇನ್ನೊಂದು ದಿವಸ ತಾಲ್ಲೂಕು ಆಫೀಸಿಗೋ ಹೋಗುತ್ತಾರೆ. ಆಗ ಜನ ಯಾರಾದರೂ ಒಂದು ಅರ್ಜಿಯನ್ನು ಕೊಡಬೇಕು ಎಂದರೆ ಆಗ ಮಂಡಲ ಪಂಚಾಯಿತಿಗಳು ಬೀಗ. ಆಗ ಅಲ್ಲಿ ಯಾರೂ ಇರುವುದಿಲ್ಲ. ಮಂಡಲ ಪಂಚಾಯಿತಿಯವರು ಅಕಸ್ಮಾತ್ ಒಬ್ಬ ಜವಾನ ಬೇಕು, ಕಸ ಗುಡಿಸುವವನು ಬೇಕು, ಅವನನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕೆಂದರೆ ಅವಕ್ಕೆ ಅವರಿಗೆ ಪವರ್ಸ್ ಇಲ್ಲ ಅದಕ್ಕಾಗಿ ಒಂದು ಸುತ್ತೋಲೆಯನ್ನು ಹೊರಡಿಸಲಾಗಿದೆ, ಜಿಲ್ಲಾ ಪರಿಷತ್ತಿನ ಪರವಾನಿಗೆ ಇಲ್ಲದೆ ಯಾವುದೇ ಅಪಾಯಿಂಟ್‌ಮೆಂಟನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು. ಸರ್ಕಾರದ ಕೆಲಸ ಚೆನ್ನಾಗಿ ನಡೆಯಬೇಕು, ಅದಕ್ಕಾಗಿ ಕೆಲವು ಅಪಾಯಿಂಟ್‌ಮೆಂಟನ್ನು ಮಾಡಿಕೊಳ್ಳಬೇಕೆಂದರೆ ಜಿಲ್ಲಾ ಪರಿಷತ್ತಿನ ಪರವಾನಿಗೆಯನ್ನು ಪಡೆಯಬೇಕು. ಜಿಲ್ಲಾ ಪರಿಷತ್ತಿನಲ್ಲಿ ಕೇಳಿದರೆ ನಾವು ಸರ್ಕಾರಕ್ಕೆ ಪ್ರಪೋಸಲ್ಲನ್ನು ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಅಧಿಕಾರ ವಿಕೇಂದ್ರೀಕರಣ ಎಂದು ಒಂದು ಕಡೆ ಹೆಸರು ಮತ್ತೊಂದು ಕಡೆ ಮೂಗುದಾಣ. ಹಸುಗೆ ಮೂಗುದಾರ ಹಾಕಿ ಎಳೆದರೆ ಅದು ಎಳೆದ ಹಾಗೆ ಬರುತ್ತದೆ ಇವತ್ತು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಇದೇ ರೀತಿಯಲ್ಲಿ ಆಗಿದೆ. ಜವಾನನನ್ನು ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅಧಿಕಾರ ಇಲ್ಲ ಇಂದಿರಾ ವಿಕಾಸ ಪತ್ರ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳ ಬಗ್ಗೆಯಂತೂ ಹೇಳುವ ಹಾಗೆ ಇಲ್ಲ. ಒಂದು ಮಂಡಲ ಪಂಚಾಯಿತಿಯ ಅಡಿಯಲ್ಲಿ ೧೫-೨೦ ಹಳ್ಳಿಗಳು ಬರುತ್ತವೆ ಕೆಲವು ಹಳ್ಳಿಗಳಲ್ಲಿ "ಮಿನಿ ವಾಟರ್ ಸ್ಕೀಮ್" ಎಂದು ಇದೆ, ಅಲ್ಲಿ ಒಬ್ಬರು ಪಂಪ್ ಆಪರೇಟರ್ ಇರಲೇಬೇಕಾಗುತ್ತದೆ. ಅವನನ್ನು ಹಳ್ಳಿಯ ಪಂಚಾಯಿತಿಯಲ್ಲಿಯೇ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಪಂಪ್ ಆಪರೇಟರ್ ಸಂಬಳ ಎಷ್ಟು ಎಂದು ಕೇಳಿದರೆ ತಿಂಗಳಿಗೆ ೬೦ ರೂಪಾಯಿ, ೭೦ ರೂಪಾಯಿ ಇಲ್ಲ ೮೦ ರೂಪಾಯಿ. ಈ ೨೦ ನೇ ಶತಮಾನದಲ್ಲೂ ಕೂಡಾ ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿಗಳ ಅಧಿಕಾರದ ಅಡಿಯೊಳಗೆ ೭೦-೮೦ ರೂಪಾಯಿ ಸಂಬಳ ಪಡೆದುಕೊಳ್ಳುವವರು ಇದ್ದಾರೆ, ಮಿನಿಮಮ್ ವೇಜಸ್ ಆಕ್ಟ್ ಎಂದು ಇದೆ, ಅದು ಏನು ಹೇಳುತ್ತದೆ ಎಂದರೆ ಪ್ರತಿಯೊಬ್ಬ ನೌಕರನಿಗೂ ಕಡಿಮೆ ಎಂದರೆ ಹನ್ನೆರಡು ರೂಪಾಯಿಗಳನ್ನು ಒಂದು ದಿನಕ್ಕೆ ಕೊಡಬೇಕು ಎಂದು ಹೇಳುತ್ತದೆ. It is a Central Act ಈ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಇದನ್ನು ಜಾರಿಗೆ ಕೊಡಬೇಕಾಗುತ್ತದೆ. ಅವರು ಏನು ಹೇಳುತ್ತಾರೆಂದರೆ ಜಿಲ್ಲಾ ಪರಿಷತ್ತು ಕಾಯ್ದೆಯೊಳಗೆ ಒಂದು ಪ್ರಾವಿಷನ್ ಇದೆ, ಆ ಪ್ರಾವಿಷನ್ ಏನು ಹೇಳುತ್ತದೆ ಎಂದರೆ 'Mandal panchayats can maintain their existing servants with the existing remuneration.'' ಅದರ ಪ್ರಕಾರ ೬೦ ಇದ್ದರೆ ೬೦ ರೂಪಾಯಿಯನ್ನು ಕೊಡಬೇಕಾಗುತ್ತದೆ. ೩೦ ರೂಪಾಯಿ ಇದ್ದರೆ ಮೂವತ್ತು ರೂಪಾಯಿಯನ್ನೇ ಕೊಡಬೇಕಾಗುತ್ತದೆ. ಮಿನಿಮಮ್ ವೇಜಸ್ ಬಗ್ಗೆ ನಾವು ಮಾತನಾಡುವುದಿಲ್ಲ ಎಂದು ಹೇಳಿದ್ದಾರೆ. ಕಾಯ್ದೆಯಲ್ಲಿರತಕ್ಕಂಥ ನಿರ್ಣಯ ಏನು ಇದೆ. ಅಲ್ಲಿ ಕನಿಷ್ಟ ಕೂಲಿಯನ್ನು ಜಾರಿಗೆ ಮಾಡದೇ ಆ ರೀತಿಯಲ್ಲಿ ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿಗಳು ಈ ರೀತಿ ಮಾಡುತ್ತಿದ್ದಾರೆ. ಆ ವೇಜಸ್ ಆಕ್ಟ್ ಪ್ರಕಾರ ಕೂಲಿಯನ್ನು

ಕೊಡಬೇಕಾಗುತ್ತದೆ. ಆ ರೀತಿಯಲ್ಲಿ ಕೊಡದಿದ್ದರೆ ಅದು ಕಾನೂನು ಪ್ರಕಾರ ತಪ್ಪಾಗುತ್ತದೆ. ಅದು ಮಾಡುವುದನ್ನು ಬಿಟ್ಟು, ಅದನ್ನು ಡಿಫೆಂಡ್ ಮಾಡಿಕೊಂಡು, ಪ್ರಾವಿಷನ್ ಇದೆ. ಅದರ ಪ್ರಕಾರ ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ. ಇದನ್ನು ನಾನು ಕಾರ್ಮಿಕ ಸಚಿವರಿಗೂ ಹೇಳಿದ್ದೇನೆ. ಈ ಕಾನೂನನ್ನು ಈ ರೀತಿಯಲ್ಲಿ ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ, ಸ್ವಾಮಿ. ಆದ್ದರಿಂದ ಈ ಕಾನೂನು ಬಗ್ಗೆ ಅಮೆಂಡ್‌ಮೆಂಟ್ ತರುವುದಕ್ಕೆ ಏನಾದರೂ ಇದ್ದರೆ ಅಧಿಕಾರಿಗಳಿಗೆ ಹೇಳಿ ಪ್ರೊಪೋಸಲ್ಸನ್ನು ಕಳುಹಿಸಿ ಎಂದು ಹೇಳಿದ್ದ. ಇದನ್ನು ಲೇಬರ್ ಡಿಪಾರ್ಟ್‌ಮೆಂಟ್ ಕನ್‌ಸಲ್‌ಟೇಟೀವ್ ಕಮಿಟಿಯಲ್ಲಿ ಕೂಡಾ ಪ್ರಸ್ತಾಪ ಮಾಡಿದ್ದೇವೆ. ಕಾಯ್ದೆ ಪ್ರಕಾರ ಕೆಲವು ತಪ್ಪುಗಳಿಂದಾಗಿ ಮಿನಿಮಮ್ ವೇಜಸ್ ಆಕ್ಟನ್ನು ಜಾರಿಗೆ ಕೊಡದೇ ಇರುವುದಕ್ಕಾಗುತ್ತದೆಯೋ ? ಈಗಲೂ ತಿಂಗಳಿಗೆ ಅರವತ್ತು ರೂಪಾಯಿ ಸಂಬಳ ಕೊಟ್ಟು ಅವರನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಆದ್ದರಿಂದ ಆ ಪ್ರಾವಿಷನನ್ನು ಬದಲಾವಣೆ ಮಾಡಿದರೆ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್, ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯಿತಿಯ ಕಾಯಿದೆಯಲ್ಲಿ ಏನು ಇದ್ದರೂ ಸಹಾ ಮಿನಿಮಮ್ ವೇಜಸ್ ಆಕ್ಟ್ ಏನು ಇದೆ. ಅದರ ಪ್ರಕಾರ ಅವರಿಗೆ ಸಂಬಳವನ್ನು ಕೊಡಬೇಕಾಗುತ್ತದೆ. ಇದು ಯಾವುದಕ್ಕೂ ಸಂಬಂಧ ಇಲ್ಲ, ರಾಜ್ಯಸರ್ಕಾರಕ್ಕೂ ಸಂಬಂಧ ಇಲ್ಲ. ಈ ರೀತಿಯಲ್ಲಿ ಮಿನಿಮಮ್ ವೇಜಸ್ ಆಕ್ಟ್ ಇದ್ದು ಈ ರೀತಿ ಮಾಡುವುದು ಒಳ್ಳೆಯದಲ್ಲ. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕು. ಇದರ ಬಗ್ಗೆ ತಾವು ಏನಾದರೂ ಹೇಳಬೇಕು. ಈ ಮಿನಿಮಮ್ ವೇಜಸ್ ಆಕ್ಟನ್ನು ತಂದಿರಬೇಕಾದರೆ ಇದನ್ನು ತಾವು ನಿಷ್ಕರ್ಷೆ ಮಾಡಿ ಜಾರಿಗೆ ತರುವಂತೆ ಮಾಡಬೇಕು. ಇದರ ಬಗ್ಗೆ ಏನೋ ರೂಲ್ಸ್ ಏನೋ ಮಾಡಿ ಕಡಿಮೆ ಮಾಡುವುದು ಎಂದರೆ which prevails over which ? The Minimum Wages Act prevails over the rest because it is the Central Act and you have to pay. ಈ ರೀತಿ ಕಡಿಮೆ ಕೊಡುವುದನ್ನು ತಾವು ತಪ್ಪಿಸಬೇಕು.

ಶ್ರೀ ಎಸ್. ಕೆ. ಕಾಂತಾ.—ಇದು ಸೆಂಟ್ರಲ್ ಆಕ್ಟ್ ಆಗಿರುವುದರಿಂದ ಇದು ಜಿಲ್ಲಾ ಪರಿಷತ್ತಿನ ಆಕ್ಟ್‌ನಲ್ಲಿ ಬರುವುದಿಲ್ಲ. ಮಿನಿಮಮ್ ವೇಜನ್ನು ಇಂಪ್ಲಿಮೆಂಟ್ ಮಾಡಬೇಕು. ಅದು ಯಾರೇ ಇರಲಿ ಮಿನಿಮಮ್ ವೇಜಸನ್ನು ಜಾರಿಗೆ ತಂದಮೇಲೆ ಅದನ್ನು ಕೊಡಲೇಬೇಕಾಗುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಮಂತ್ರಿಯವರು ಮಿನಿಮಮ್ ವೇಜಸ್ ಆಕ್ಟನ್ನು ಜಾರಿಗೆ ತರಬೇಕು ಎಂದು ಹೇಳಿದರು,

ಶ್ರೀ ಎಸ್. ಕೆ. ಕಾಂತಾ.—ಅದು ಎಲ್ಲೇ ಇರಲಿ, ಅಂತಹ ನಿರ್ದಿಷ್ಟ ಪ್ರಕರಣಗಳು ಏನಾದರೂ ಇದ್ದರೆ ಅದನ್ನು ತಂದುಕೊಡಿ, ಅದನ್ನು ಮಾಡುತ್ತೇನೆ.

ಶ್ರೀ ಯು. ಭೂಪತಿ.—ಅವರು ಪಾಪ ಹೊಸದಾಗಿ ಬಂದಿರತಕ್ಕ ಮಂಡಲ್ ಪಂಚಾಯ್ತಿಯ ಹೊಸ ವ್ಯವಸ್ಥೆ ಒಳಗೆ ಇದ್ದು ಅವರು ಇನ್ನೂ ಆರ್ಗನೈಸ್ಡ್ ಅಲ್ಲ, ಅನ್ ಆರ್ಗನೈಸ್ಡ್ ಆಗಿ ಅಲ್ಲಲ್ಲೇ ಉಳಿದಿದ್ದಾರೆ ಆರ್ಗನೈಸ್ಡ್ ಆಗಿದ್ದರೆ ನಿಮ್ಮ ಪ್ರಕಾರ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಪ್ರಕಾರ ಏನಾದರೂ ನಾವು ಡಿಸ್ಪ್ಯೂಟ್ಸ್ ಮಾಡಿ, ಕನ್ಸಿಲಿಯೇಷನ್ ಹಾಕಿ ಏನಾದರೂ ಮಾಡಿಸುತ್ತಾ ಇದ್ದೆವು. ನೀವು ಕಾರ್ಮಿಕ ಇಲಾಖೆಯಿಂದ ಒಂದು ಕಾಮನ್ ಸರ್ಕ್ಯುಲರ್ ಹೊರಡಿಸಿದರೆ ಒಳ್ಳೆಯದು ಎಜಂಕೇಟ್ ಮಾಡುವುದಕ್ಕೆ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯದರ್ಶಿಯವರಿಗೆ ನಿಮ್ಮ ಇಲಾಖೆಯ ವತಿಯಿಂದ ಒಂದು ಪತ್ರ ಬರೆದು ಮಂಡಲ್ ಪಂಚಾಯತಿಯಲ್ಲಿ ಕನಿಷ್ಠ ವೇತನದ ಕೂಲಿ ಕೊಡುತ್ತಾರೆಂದು ತಿಳಿದು ಬಂದಿದೆ. ನೀವು ಅದನ್ನು ಜಾರಿ ಮಾಡಬೇಕು ಎಂದು ಒಂದು ಪತ್ರ ಬರೆದರೆ ನಿಯಮಾವಳಿಯ ಪ್ರಕಾರ ಯಾವುದು ಅಡ್ಡ ಬರುತ್ತದೆ ಅದನ್ನು ನೀವು ಕೋಟ್ ಮಾಡಿ ಬರೆದರೆ ಅನುಕೂಲವಾಗುತ್ತದೆ.

ಶ್ರೀ ಎಸ್. ಕೆ. ಕಾಂತಾ.—ಎಲ್ಲಾ ಜಿಲ್ಲಾ ಪರಿಷತ್‌ಗೂ ನೋಟಿಫೈ ಮಾಡಿದ್ದೇವೆ. ೭.೮೦ ೨.೦೦–೯.೮೦ ಮಿನಿಮಂ ವೇಜಸ್ ಕೊಡಬೇಕು ಎಂದು ಮಾಡಿದ್ದೇವೆ. ಎನ್. ಆರ್. ಇ ಪಿ. ನಲ್ಲಿ ಈಗಾಗಲೇ ನೋಟಿಫಿಕೇಷನ್ ಕೊಟ್ಟಿದ್ದೇವೆ. ಎಲ್ಲಾ ಜಿಲ್ಲಾ ಪರಿಷತ್‌ಗೂ ಮತ್ತು ಸಂಬಂಧಪಟ್ಟವರಿಗೆ ಕೊಟ್ಟಿದ್ದೇವೆ ಅದನ್ನು ಕೊಡುತ್ತಿದ್ದಾರೆ, ಎಲ್ಲಿ ಕೊಡಂತಾ ಇಲ್ಲ ಎಂದು ಹೇಳಿದರೆ ಅದನ್ನು ಪರಿಶೀಲಿಸುತ್ತೇನೆ. ಎಲ್ಲಾ ಕಡೆ ಕೊಡುತ್ತಿದ್ದಾರೆ. ಮಿನಿಮಮ್ ವೇಜಸ್‌ನಿಂದ ಸಂಪೂರ್ಣವಾಗಿ ಆ ಜನರಿಗೆ ಲಾಭವಾಗಿ ಆಗುತ್ತಾ ಇದೆ.

ಶ್ರೀ ಯು. ಭೂಪತಿ.—ಬರೀ ೯.೮೦ ಕೊಡುತ್ತಾ ಇರುವುದು, ೧೨.೮೦ ಕೊಡುತ್ತಾ ಇಲ್ಲ. ಯಾವ ಇಲಾಖೆಯಿಂದಲೂ ಈ ರೀತಿ ಕೊಡುತ್ತಾ ಇಲ್ಲ.

ಶ್ರೀ ಎಸ್. ಕೆ. ಕಾಂತ.—೭.೮೦ ಕೊಡುತ್ತಾ ಇದ್ದಾರೆ. ಬಿ.ಡಿ.ಎ ನವರೂ ೨ ರೂಪಾಯಿ ಇನ್ ಕ್ರೀಸ್ ಮಾಡಿದ ಮೇಲೆ ೯.೮೦ ಕೊಡಬೇಕೆಂದು ಗವರ್ನಮೆಂಟ್ ನೋಟಿಫಿಕೇಷನ್ ಇದೆ. ಅವರಿಗೆ ಕೊಟ್ಟಿದ್ದಾರೆ.

ಶ್ರೀ ಯು. ಭೂಪತಿ.—ಎನ್. ಆರ್. ಇ. ಪಿ. ಕೆಲಸವನ್ನು ಮಾಡಿಸುವಾಗ ೯.೮೦ ಕೊಡುತ್ತಾ ಇದ್ದಾರೆಂದು ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ತಮಗೆ ಹೇಳಿದರೆ ನೀವು ಕಾರ್ಮಿಕ ಇಲಾಖೆಯ ಗಮನಕ್ಕೆ ತನ್ನಿ ಅದನ್ನು ಜಾರಿ ಮಾಡುತ್ತೇವೆಂದು ಹೇಳುತ್ತೀರಿ. ಉದಾಹರಣೆಗೆ ಗುಲ್ಬರ್ಗಾದಲ್ಲಿ ಹೈದರಾಬಾದ್ ಕರ್ನಾಟಕ ಪಿ. ಡಬ್ಲ್ಯು. ಡಿ. ಗ್ಯಾಂಗ್ ವರ್ಕರ್ಸ್‌ಗೆ ಇವೊತ್ತಿನ ದಿವಸ ಕನಿಷ್ಟ ಕೂಲಿ ಕೊಡಬೇಕೆಂದು ಕೋರ್ಟ್ ತೀರ್ಮಾನ ಆಗಿದೆ. ಕೋರ್ಟ್ ತೀರ್ಮಾನವಾಗಿದ್ದರೂ ಹೈದರಾಬಾದ್ ಕರ್ನಾಟಕದ ಆ ಭಾಗದಲ್ಲಿ ಪಿ.ಡಬ್ಲ್ಯು.ಡಿ ಯವರು ಇದುವರೆಗೂ ಆ ರೀತಿ ದಿನಕೂಲಿ ಕೊಟ್ಟಿಲ್ಲ. ಮಾನ್ಯ ದೇವೇಗೌಡರು ಅದನ್ನು ಇತ್ಯರ್ಥ ಮಾಡಿಲ್ಲ, ಅದೂ ಇನ್ನೂ ಜಾರಿಗೆ ಬಂದಿಲ್ಲ. ನಾವು ದೇವೇಗೌಡರನ್ನು ಹಿಡಿಯೋಣವೋ, ಪಿ ಡಬ್ಲ್ಯು. ಡಿ. ಇಂಜಿನಿಯರ್‌ರವರನ್ನು ಹಿಡಿಯೋಣವೋ, ಶ್ರೀ ಕಾಂತಾರವರನ್ನು ಹಿಡಿಯೋಣವೋ ಗೊತ್ತಿಲ್ಲ.

ಶ್ರೀ ಯು. ಭೂಪತಿ.—ಕನಿಷ್ಟ ಕೂಲಿ ವೇತನಕ್ಕೆ ಸಂಬಂಧಪಟ್ಟಂತೆ ಬಹಳ ದೊಡ್ಡ ಗೊಂದಲ ಇದೆ. ಅವರೇನೂ ಪ್ರಯತ್ನ ಮಾಡಿಲ್ಲವೆಂದು ನಾನು ಹೇಳುತ್ತಾ ಇಲ್ಲ. ಶ್ರೀ ಕಾಂತಾರವರು ಪ್ರಯತ್ನ ಮಾಡುತ್ತಾ ಇದ್ದಾರೆ, ಅಥವಾ ಮಾಡುತ್ತಾ ಇಲ್ಲ ಎಂದು ಆಪಾದನೆ ಮಾಡುತ್ತಾ ಇಲ್ಲ. ಹಾಗೆ ಹೇಳಿದರೆ ತಪ್ಪಾಗುತ್ತದೆ, ಆದರೆ ಇನ್ನೂ ಅವರು ಪ್ರಯತ್ನ ಮಾಡಬೇಕು. ಅವರು ಇಲಾಖಾ ಮಂತ್ರಿಗಳಾದ ಮೇಲೆ ಎಲ್ಲಾ ಇಲಾಖೆಗೆ ಪತ್ರ ಬರೆದು ಕನಿಷ್ಟ ಕೂಲಿ ಜಾರಿ ಮಾಡಿ. ಇಲ್ಲದಿದ್ದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಬರೆದಾಗಲೇ ಬಹಳ ದೊಡ್ಡ ಗೊಂದಲ ಆಗಿದೆ. ಅದು ಎಲ್ಲೆಲ್ಲಿಗೋ ಹೋಗಬಹುದೆಂದು ತಿಳಿದುಕೊಂಡಿದ್ದೆವು, ಅದು ಮುಂದಕ್ಕೆ ಹೋಗದೆ ನಿಂತಿದೆ, ಹೋಗುವುದು ಬೇಡ. ಮಾನ್ಯ ಅಧ್ಯಕ್ಷಣಿಯವರೇ, ಮೊನ್ನೆ ಜನೋತ್ಸವದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಅನೌನ್ಸ್‌ಮೆಂಟ್ ಮಾಡಿದರು. ರೈತರ ಬೆಳೆ ಸಾಲದ ಮೇಲೆ ಮತ್ತು ಸಾಲಗಳ ಮೇಲೆ ಇರತಕ್ಕ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂದರು. ಚಕ್ರ ಬಡ್ಡಿಯನ್ನೂ ಮನ್ನಾ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಕೆಲವು ಪತ್ರಿಕೆಗಳಲ್ಲಿ ಬಂತು. ಎರಡನ್ನೂ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆಂದು ಮಾನ್ಯ ವೆಂಕಟರಾಮಯ್ಯನವರು ಹೇಳುತ್ತಿದ್ದಾರೆ. ನಾನು ಎರಡು ಪತ್ರಿಕೆಗಳಲ್ಲಿ ಬೇರೆ ಬೇರೆ ಅಭಿಪ್ರಾಯವನ್ನು ಓದಿದೆ. ಇದರಲ್ಲಿ ಒಂದು ಕಾಲಾವಕಾಶವನ್ನು ನಿಗದಿ ಮಾಡಿದ್ದಾರೆ. ೧೯೮೮ರ ಜೂನ್ ಒಳಗಾಗಿ, ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಪ್ರಕಾರ ೧೯೮೯ ಜೂನ್ ಒಳಗಾಗಿ ಯಾರು ಒಂದು ಕಂತಿನಲ್ಲಿ ಸಾಲವನ್ನು ಪೂರ್ತಿಯಾಗಿ ಪಾವತಿ ಮಾಡುತ್ತಾರೆ ಅಂಥವರಿಗೆ ಸಾಲದ ಬಡ್ಡಿ ಮನ್ನಾ ಮಾಡುವುದು ಸಾಧ್ಯ. ಇದು ಸ್ವಲ್ಪ ಮಟ್ಟಿಗೆ ಕಷ್ಟವಾಗುತ್ತದೆ. ಏಕೆಂದರೆ ರೈತರು ಏನು ಸಾಲ ಪಡೆದು ಕೊಂಡಿದ್ದಾರೆ. ತಾವು ಈ ರೀತಿಯ ಅನೌನ್ಸ್‌ಮೆಂಟ್ ಮಾಡಿದ್ದುದು ಕಳೆದ ತಿಂಗಳು ಅನೌನ್ಸ್‌ಮೆಂಟ್ ಮಾಡಿದ ಕೆಲವೇ ತಿಂಗಳಲ್ಲಿ ೫ ಸಾವಿರ, ೮ ಸಾವಿರ, ೧೦ ಸಾವಿರ, ೧೫ ಸಾವಿರ ಬಾಕಿ ಇರುವಂತಹ ರೈತರು ಒಂದೇ ಕಂತಿನಲ್ಲಿ ಎಲ್ಲಾ ಸಾಲವನ್ನು ಕೊಡಬೇಕೆಂದರೆ ಅವರು ಏನು ಮಾಡುತ್ತಾರೆ ? ಮಾರ್ವಾಡಿ ಹತ್ತಿರ ಹೋಗಿ ಸಾಲ ತೆಗೆದುಕೊಂಡು ಬರುತ್ತಾರೆ. ಚಕ್ರ ಬಡ್ಡಿಯನ್ನು ನೀವು ಮನ್ನಾ ಮಾಡುತ್ತೇವೆಂದು ಹೇಳಿದ್ದರಿಂದ ಬೇರೆ ಕಡೆ ಅವರು ಬಡ್ಡಿ ಕೊಟ್ಟು ಸಾಲ ತೆಗೆದುಕೊಂಡು ಬರುತ್ತಾರೆ. ಹೀಗೆ ಇನ್ನೊಂದು ಕಡೆ ಸಾಲ ತೆಗೆದುಕೊಂಡು ಬಂದು ಇಲ್ಲಿ ಸಾಲ ತೀರಿಸುವಂತಹ ಪರಿಸ್ಥಿತಿ ರೈತರಿಗೆ ಬರುತ್ತದೆ. ಅದನ್ನು ಮಾಡುವ ಬದಲಿಗೆ ಈಗ ತಾವು ಏನು ಕನ್ಸೆಷನ್ ಕೊಡಬೇಕೆಂದು ಯೋಚನೆ ಮಾಡಿದ್ದೀರೋ ಅದರ ಜೊತೆಗೆ ಕೊನೆಗೆ ಎರಡು ಅಥವಾ ಮೂರು ಕಂತುಗಳ ರೂಪದಲ್ಲಿ ನೀವು ಸಾಲವನ್ನು ತೀರಿಸಿ ಎಂದು ನಿಗದಿ ಮಾಡಿ ನಾವು ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದರೆ ಸ್ವಲ್ಪ ರೈತರಿಗೆ ಅನುಕೂಲವಾಗುತ್ತದೆ. ಈ ಅನೌನ್ಸ್‌ಮೆಂಟ್ ಮಾಡುವ ಜೊತೆಗೆ ಇನ್ನೊಂದು ಕ್ಲಾರಿಫಿಕೇಷನ್ ಬೇಕು. ಮಾನ್ಯ ಬೊಮ್ಮಾಯಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ನಾವು ಬರೀ ಸುಸ್ತಿ

ಬಡ್ಡಿಯನ್ನು ಮನ್ನಾ ಮಾಡುತ್ತೇವೆ, ಚಕ್ರ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿಲ್ಲ ಎಂದು ಹೇಳಿದ್ದಾರೆ.

ಈ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಆಗಿದೆ. ಆದ್ದರಿಂದ ಮಾನ್ಯ ಸಹಕಾರ ಸಚಿವರು ಇದನ್ನು ೨-೩ ಕಂತುಗಳಲ್ಲಿ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸಹಕಾರ ಸಚಿವರು ಯಾವಾಗಲೂ ರೈತರ ಪರವಾಗಿ ಮಾತನಾಡುತ್ತಾರೆ. ಆದ್ದರಿಂದ ಅವರು ಇದಕ್ಕೆ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಇದಕ್ಕೆ ತಾವು ಅವಕಾಶ **ಮಾಡಿಕೊಟ್ಟರೆ** ಮುಂದಿನ ವರ್ಷ ರೈತರು ಒಳ್ಳೆಯ ಬೆಳೆಯನ್ನು ಬೆಳೆಯಲು ಅವಕಾಶವಾಗುತ್ತದೆ. ಸಾಲದ ಕಂತುಗಳನ್ನು ಕಟ್ಟಲು ಅವಕಾಶ ಮಾಡಿಕೊಟ್ಟರೆ ಸಾವಿರಾರು ಜನ ರೈತರಿಗೆ ಅನುಕೂಲವಾಗುತ್ತದೆ.

ಇನ್ನು ನಮ್ಮ ರಾಜ್ಯದ ಕೈಗಾರಿಕೆಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚು ಪ್ರಸ್ತಾಪ ಮಾಡಿಲ್ಲ. "ನನ್ನ ಸರ್ಕಾರವು ೧೯೮೩ ರಲ್ಲಿ ರೂಪಿಸಿದ ಕೈಗಾರಿಕಾ ನೀತಿಯನ್ನು ನವೋತ್ಸಾಹದಿಂದ ಕಾರ್ಯಗತಗೊಳಿಸಲಾಗುತ್ತದೆ" ಎಂದು ಮಾತ್ರ ಹೇಳಿದ್ದಾರೆ. ೧೯೮೩ ರಲ್ಲಿ ಇವರು ಒಂದು ತಿಂಗಳಿಗೆ ಒಂದು ಸಾವಿರ **ಕೈಗಾರಿಕೆಗಳನ್ನು** ಪ್ರಾರಂಭ ಮಾಡುತ್ತೇವೆಂದು ಘೋಷಣೆ ಮಾಡಿದ್ದರು. ಮೊನ್ನೆ ಹುಬ್ಬಳ್ಳಿಯಲ್ಲಿಯೂ ಸಹ ಇದೇ ಮಾತನ್ನು ಹೇಳಿದ್ದಾರೆ. ಆದರೆ ಅವರ ಪ್ರಕಾರ ಇವರು ನಡೆದುಕೊಂಡಿದ್ದಾರೆಯೇ ಎಂಬುದು ಇಲ್ಲಿರುವ ಪ್ರಶ್ನೆ? ಈಗ ಸ್ವಯಂ ಉದ್ಯೋಗ ಯೋಜನೆಯ ಅನ್ವಯದ ಅಡಿಯಲ್ಲಿ ನಿರುದ್ಯೋಗಿ ಯುವಕರಿಗೆ ೨೫ ರಿಂದ ೩೦ ಸಾವಿರ ರೂಪಾಯಿಗಳವರೆಗೆ ಸಾಲ ಸಿಗುತ್ತದೆ. ಈ ಸಾಲ ತೆಗೆದುಕೊಂಡು ಉದ್ಯೋಗ ಪ್ರಾರಂಭ ಮಾಡಿರುವಂತಹ ಅಭ್ಯರ್ಥಿಗಳ ಲೆಕ್ಕವನ್ನು ಸಹ, ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡುವ ಲೆಕ್ಕದಲ್ಲಿ ಸೇರಿಸಿದ್ದಾರೆ. ಮತ್ತೆ ಇವರು ತಾವು ಅಧಿಕಾರಕ್ಕೆ ಬಂದರೆ ಮನೆಗೆ ಒಂದು **ಉದ್ಯೋಗ** ಕೊಡುತ್ತೇವೆ ಎಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿದ್ದರು. ಇವರು **ಅಧಿಕಾರಕ್ಕೆ** ಬಂದಮೇಲೆ ಈ ಬಗ್ಗೆ ಕೊಟ್ಟ ಮಾತನ್ನು ಅಥವಾ ಜನತೆಗೆ ಕೊಟ್ಟ ವಚನವನ್ನು ಈಡೇರಿಸಿದ್ದಾರೆಯೇ ಎಂಬುದನ್ನು ನಾವು ನೋಡಬೇಕಾಗಿದೆ? ಮುಖ್ಯವಾಗಿ ಇವರು ತಿಂಗಳಿಗೆ ಒಂದು ಸಾವಿರದಂತೆ **ಕೈಗಾರಿಕೆಗಳನ್ನು** ಪ್ರಾರಂಭ ಮಾಡಲು ಅನುಮತಿ ಕೊಟ್ಟಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಒಂದು ಕಮಿಟಿಯನ್ನು ನೇಮಕ ಮಾಡಬೇಕು. ಆ ಕಮಿಟಿಯವರು ಇದನ್ನು ಪರಿಶೀಲನೆ ಮಾಡಿ ವರದಿ ಕೊಟ್ಟ ಮೇಲೆ ಇವರು ಕೊಟ್ಟಿರುವ ಅಂಕಿ ಅಂಶಗಳು ಸರಿಯೇ ಅಥವಾ ಸುಳ್ಳೇ ಎಂಬುದು ಸಾಬೀತಾಗುತ್ತದೆ. ಈಗ ಸ್ವಯಂ ಉದ್ಯೋಗ ಯೋಜನೆಯ ಅಡಿಯಲ್ಲಿ ಪ್ರಾರಂಭವಾದಂಥ ಕೈಗಾರಿಕೆಗಳ ಪೈಕಿ ಶೇಕಡಾ ೬೦ ರಷ್ಟು ಬಂದ್ ಆಗುತ್ತಿವೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ನಾನು ಉಪ್ಪನ್ನು ತಯಾರು ಮಾಡಲು ಕೈಗಾರಿಕೆ ಇಲಾಖೆಯಿಂದ ಸಾಲ ತೆಗೆದುಕೊಳ್ಳುತ್ತೇನೆ. ನಂತರ ಉಪ್ಪನ್ನು ತಯಾರು ಮಾಡಲು ಆಗತಕ್ಕಂಥ ಖರ್ಚು ಮತ್ತು ಇನ್ನಿತರ ವೆಚ್ಚಗಳನ್ನೆಲ್ಲಾ ಸೇರಿಸಿ ಕೆ. ಜಿ. ಗೆ ಎರಡು ರೂಪಾಯಿಗಳ ಪ್ರಕಾರ ಮಾರಾಟ ಮಾಡಲು ಉಪ್ಪಿನ ಪಾಕೇಟ್‌ಗಳನ್ನು ಬಿಡುಗಡೆ ಮಾಡುತ್ತೇನೆ. ಆದರೆ ಅದೇ ಕಾಲಕ್ಕೆ ಟಾಟಾ ಕಂಪನಿಯವರು ಸಹ ಕೆ. ಜಿ. ಗೆ ಎರಡು ರೂಪಾಯಿಗಳ ದರದಲ್ಲಿ ಉಪ್ಪಿನ ಪಾಕೇಟ‌ಗಳನ್ನು ಬಿಡುಗಡೆ ಮಾಡುತ್ತಾರೆ ಮತ್ತು ಟಿ. ವಿ. ಮೂಲಕ ತಮ್ಮ ಕಂಪನಿ "ಉಪ್ಪನೇ ಕೊಳ್ಳಬೇಕೆಂದು ಜಾಹೀರಾತನ್ನು ನೀಡುತ್ತಾರೆ. ಇದನ್ನು ನೋಡಿದ ಗೃಹಿಣಿಯರು ತಮ್ಮ ಮನೆಯವರಿಗೆ ಟಾಟಾ ಕಂಪನಿ ಸಾಲ್ಟ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆಯೇ ಹೊರತು ಭೂಪತಿ ಕೈಗಾರಿಕೆಯ ಸಾಲ್ಟನ್ನು ತೆಗೆದುಕೊಂಡು ಬನ್ನಿ ಎಂದು ಹೇಳುವುದಿಲ್ಲ. ಇದರಿಂದ ನನ್ನಂತಹ ಯುವಕರು ಪ್ರಾರಂಭ ಮಾಡಿದ ಕೈಗಾರಿಕೆಗಳು ನಷ್ಟಕ್ಕೆ ಸಿಲುಕಿ ಬಂದ್ ಆಗುತ್ತಿವೆ. ಆದ್ದರಿಂದ ಇದರ ಕಡೆಗೂ ಸರ್ಕಾರ ಗಮನ ಕೊಡಬೇಕಾಗುತ್ತದೆ. ಒಂದು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಅನುಮತಿ ನೀಡಿದ್ದೇವೆ ಎಂದು ಹೇಳುವುದಕ್ಕೆ ಬದಲು, ಅವುಗಳ ಪೈಕಿ ಎಷ್ಟು ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತಿವೆ ಎಷ್ಟು ಬಂದ್ ಆಗಿವೆ ಎಂಬುದರ ಬಗ್ಗೆಯೂ ಸಹ ನೀವು ಮಾಹಿತಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಇದರ ಒಂದು ಸಮಿತಿಗಾಗಿ ಈ ಒಂದು ಸದನದ [illegible] ಸಮಿತಿಯನ್ನಾಗಲೀ ರಚಿಸಬೇಕು. ಆಗ ನೀವು ೧೯೮೩ ರಲ್ಲಿ ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಏನು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಿರಿ [illegible] ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ತಿಳಿದುಬರುತ್ತದೆ. ನೀವು ಯಾವಾಗಲೂ ಗಾಂಧಿ ವಾದವನ್ನು ಹೇಳು

ತ್ತೀರಿ. ಆದರೆ ನಡೆದು ಕೊಳ್ಳುತ್ತಿರುವುದು ಸೇಂದಿ ಹಾದ. ಸಣ್ಣ ಸಣ್ಣ ಕೈಗಾರಿಕೆಗಳಿಗೆ ಮತ್ತು ಕಾಟೇಜ್ ಇಂಡಸ್ಟ್ರಿಗಳಿಗೆ ಹೆಚ್ಚಿನ ಆದ್ಯತೆ ಕೊಡಲಾಗುವುದೆಂದು ನೀವು ೧೯೫೬ ರಲ್ಲಿ ಒಂದು ನಿರ್ಣಯವನ್ನು ಮಾಡಿದಿರಿ. ಆದರೆ ಇವುಗಳ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ? ಇವೊತ್ತು ಕೈಮಗ್ಗದ ಇಂಡಸ್ಟ್ರಿಗಳಲ್ಲಿ ತೊಡಗಿರುವವರ ಮೈಮೇಲೆ ಗಾಂಧಿ ಮೈಮೇಲೆ ಇದ್ದಷ್ಟು ಪುಡಗೋಸಿ ಬಿಟ್ಟ ಸಹ ಇಲ್ಲದಂತೆ ಆಗಿವೆ, ಕಳೆದ ವರ್ಷ ಮಾನ್ಯ ಜೀವಿಜಯಾ ಅವರು ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಸರ್ಕಾರದಿಂದ ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟು ಬಾಕಿಯನ್ನು ಕೊಡಬೇಕಾಗಿದೆ, ಇನ್ನೂ ಕೊಟ್ಟಿಲ್ಲ ಎಂದು ಹೇಳಿದ್ದರು. ಈ ರೀತಿ ಸರ್ಕಾರವೇ ಬಾಕಿ ಇಟ್ಟುಕೊಂಡರೆ ಕೈಮಗ್ಗದ ಕೈಗಾರಿಕೆಗಳು ಮುಂದುವರೆಯುವುದಾದರೂ ಹೇಗೆ ? ಇವೊತ್ತು ಈ ಕ್ಷೇತ್ರದಲ್ಲಿ ಜನರು ಕೆಲಸ ಇಲ್ಲದೆ ಬಹಳ ತೊಂದರೆಯಲ್ಲಿದ್ದಾರೆ. ಇದೇ ಕಾರಣದಿಂದ ಅವರು ಮೆರವಣಿಗೆಯಲ್ಲಿ ಬಂದು ಸರ್ಕಾರಕ್ಕೆ ಮನವಿ ಸಹ ಕೊಟ್ಟಿದ್ದಾರೆ. ಅವರು ಸಣ್ಣ ಕೈಗಾರಿಕೆಗಳಿಗೆ ಮತ್ತು ಕಾಟೇಜ್ ಇಂಡಸ್ಟ್ರಿಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆ ಎಂದು ಹೇಳಿದ ಮಾತು ವಿಫಲವಾಗಿದೆ. ಈ ಬಗ್ಗೆ ಪುನರ್ವಿಮರ್ಶೆಗಳು ಮಾಡುವಂತಹ ಕೆಲಸವನ್ನು ಸರ್ಕಾರ ಇನ್ನೂವರೆಗೆ ಮಾಡಿಲ್ಲ ಮತ್ತೆ ದೊಡ್ಡ ಇಂಡಸ್ಟ್ರಿಗಳಂ ಬಂದರೆ, ಇದರ ಕಥೆಯನ್ನು ಹೇಳುವುದಕ್ಕಾಗುವುದಿಲ್ಲ. ಇವೊತ್ತು ೬ ಸಾವಿರ ಕೈಗಾರಿಕೆಗಳು ಬಂದ್ ಆಗಿವೆ. ಖಾಸಗಿ ವಲಯವನ್ನೇ ತೆಗೆದುಕೊಳ್ಳಲಿ, ಸಹಕಾರಿ ವಲಯವನ್ನೇ ತೆಗೆದುಕೊಳ್ಳಲಿ, ಎಲ್ಲ ಕಡೆಯೂ ಕೈಗಾರಿಕೆಗಳು ಬಂದ್ ಆಗುತ್ತಿವೆ. ಮಾನ್ಯ ಜೆ. ಎಚ್. ಪಟೇಲ್ ಅವರು Minister for Industries..... ...ಆಗುತ್ತಾರೆಂದು ನಾವು ತಿಳಿದಿದ್ದೆವು ಆದರೆ ಅವರು Minister for Liquidation of Industries ಆಗಿದ್ದಾರೆ.

ಅದರ ಬಗ್ಗೆ ಕೇಳಿದರೆ ಏನೋ ಉತ್ತರ ಕೊಡುತ್ತಾರೆ, ಮೈಗೆ ಎಣ್ಣೆ ಹಚ್ಚಿಕೊಂಡು ಕುಸ್ತಿ ಮಾಡುದವರು ಜಾರಿಕೊಂಡ ರೀತಿ ಜಾರಿಕೊಳ್ಳುತ್ತಾರೆ. ನೇರವಾಗಿ ನಾನು ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಮಾತು ಅವರಿಂದ ಇಲ್ಲ. ಯಾವುದಾದರೂ ಒಂದು ತೆಗೆದುಕೊಳ್ಳಿ. ಒಂದು ತೆಗೆದುಕೊಂಡರೆ, ಓಲ್ಡ್ ಟೆಕ್ನಾಲಜಿ, ಔಟ್ ಡೇಟೆಡ್ ಟೆಕ್ನಾಲಜಿ ಫೇಲಾಗುತ್ತದೆ, ಅದು ಆಗುವುದಿಲ್ಲ. ಮತ್ತೊಂದು ಅಡ್ವಾನ್ಸ್ ಟೆಕ್ನಾಲಜಿ ಇರುವುದನ್ನು ತೆಗೆದುಕೊಂಡರೆ ಇಲ್ಲ, ಇಲ್ಲ ಮ್ಯಾನೇಜಿಂಗ್ ಡೈರೆಕ್ಟರಿಗೆ ಗೊತ್ತಿಲ್ಲ, ಅವನು ಎಲ್ಲೋ ಹೋಗಿದ್ದಾನೆ ಎಂದು ಹೇಳುತ್ತಾರೆ. ಈ ಕೈಗಾರಿಕೆಗಳ ಬಗ್ಗೆ ಇವರು ಏಕೆ ಕಾಳಜಿ ವಹಿಸುವುದಿಲ್ಲ ಎನ್ನುವುದಕ್ಕೆ ಒಂದು ಉದಾಹರಣೆ ತಮಗೆ ಕೊಡುತ್ತೇನೆ. ಬೆಂಗಳೂರಿನಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಫ್ಯಾಕ್ಟರಿ ಇದೆ. ಈ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಕೈಗಾರಿಕೆ ರಾಜ್ಯಕ್ಕೆ ಒಂದು ಪ್ರತಿಷ್ಠಿತವಾದಂಥ ಕೈಗಾರಿಕೆ. ಬಹಳ ವರ್ಷಗಳ ಕೆಳಗೆ ಪ್ರಾರಂಭವಾದಂಥ ಒಂದು ಕೈಗಾರಿಕೆ, ಈ ಕೈಗಾರಿಕೆಗೆ ತನ್ನದೇ ಆದಂಥ ಪ್ರತಿಷ್ಠೆ ಇದೆ. ಆ ಒಂದು ಕೈಗಾರಿಕೆಯಲ್ಲಿ ಬಂದಂಥ ಉತ್ಪಾದನೆಯನ್ನು ಮಾರಾಟ ಮಾಡುವುದ , ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೆ ಇವರು ಹೋಲ್‌ಸೇಲ್ ಆಗಿ ಕೊಟ್ಟುಬಿಟ್ಟಿದ್ದಾರೆ. ಪಾಪ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ರವರಿಗೆ ಬಹಳ ಕೆಲಸ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಫ್ಯಾಕ್ಟರಿಯಿಂದ ಬಂದಂಥ ಮೈಸೂರು ಸ್ಯಾಂಡಲ್ ಸೋಪ್ ಬಗ್ಗೆಯಾಗಲಿ, ಇನ್ನೊಂದರ ಬಗ್ಗೆಯಾಗಲಿ ಕಾಳಜಿ ಮಾಡುವುದಕ್ಕೆ ಅವರಿಗೆ ಟೈಂ ಇಲ್ಲ ಅಲ್ಲಿ ಸಂತೂರು ಸೋಪ್ ಬಗ್ಗೆ ಅಡ್ವರ್‌ಟೈಸ್‌ಮೆಂಟ್ ಬರುತ್ತದೆ ಅವರಿಗೆ ಎಂ.ಎಸ್.ಐ.ಎಲ್. ನವರಿಗೂ ಏನು ಅರೇಂಜ್‌ಮೆಂಟ್ ಇದೆಯೋ ಗೊತ್ತಿಲ್ಲ. ಮೈಸೂರು ಸ್ಯಾಂಡಲ್ ಸೋಪ್ ಬಗ್ಗೆ ಅಡ್ವರ್‌ಟೈಸ್‌ಮೆಂಟ್ ಬರುವುದಿಲ್ಲ. ಸುಮಾರು ೧೯ ಕೋಟಿ ರೂಪಾಯಿಗಳ ಉತ್ಪನ್ನ ಆ ಫ್ಯಾಕ್ಟರಿಯಲ್ಲಿ ಹಾಗೇ ಉಳಿದಿದೆ ಎಂದು ಕೇಳಿದ್ದೇನೆ. ಕೊನೆಗೆ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಸರ್ಕಾರಕ್ಕೆ ಒಂದು ನೋಟ್ ಕಳಿಸಿ, ಪತ್ರ ಬರೆದಿದ್ದಾರೆ. ಇಂತಹ ಬದಲಾವಣೆಗಳನ್ನು ತರಬೇಕಾಗುತ್ತದೆ, ಹಾಗಾದರೆ ಫ್ಯಾಕ್ಟರಿಯನ್ನು ಉಳಿಸಿಕೊಳ್ಳಬಹುದು, ಇಲ್ಲದೇ ಹೋದರೆ ಕೆಲವು ದಿನಗಳಲ್ಲಿ ಫ್ಯಾಕ್ಟರಿ ಮುಚ್ಚಿಕೊಂಡು ಹೋಗುತ್ತದೆ. ಮುಚ್ಚಿಕೊಂಡು ಹೋಗುವುದನ್ನು ತಪ್ಪಿಸಬೇಕಾದರೆ ಇಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಪತ್ರ ಬರೆದರೆ ನಮ್ಮ ಜೆ. ಹೆಚ್. ಪಟೇಲರಿಗೆ ಆ ಪತ್ರದ ಬಗ್ಗೆ ಗಮನವೇ ಇಲ್ಲ. I think he personally wants to see that the factory is closed gradualy, ಡೈರೆಕ್ಟಾಗಿ ಫ್ಯಾಕ್ಟರಿ ಮುಚ್ಚಿಕೊಂಡು ಹೋಗಲಿ ಎಂದು ಹೇಳುವುದಿಲ್ಲ. ಬ್ಯಾಕ್‌ಡೋರ್‌ನಿಂದ ಫ್ಯಾಕ್ಟರಿ ಹೇಗಾದರೂ ಮುಚ್ಚಿಕೊಂಡು ಹೋಗುತ್ತದೆ, ಪ್ರೈವೇಟ್‌ನವರು ನಾಳೆ ಬಂದು ಖರೀದಿ ಮಾಡುತ್ತಾರೆ ಎಂದು ಇರಬಹುದು, ಮುಂದೆ ಒಳ್ಳೆಯ ಭವಿಷ್ಯ ಇರತಕ್ಕಂಥ ಫ್ಯಾಕ್ಟರಿ ಅದು. ನಾಳೆ ಪ್ರೈವೇಟ್‌ನವರಿಗೆ

ಖರೀದಿ ಮಾಡುವುದಕ್ಕೆ ಕಾರಣ ಏನೆಂದರೆ, ಫ್ಯಾಕ್ಟರಿ ಎಲ್ಲಾ ಮುಚ್ಚಿಕೊಂಡು ಹೋಯಿತು ಬೇರೆ ಯವರಿಗೆ ಮಾರಿಬಿಡುತ್ತೇವೆ ಎಂದು ಹೇಳುತ್ತಾರೆ. ಕೋ-ಆಪರೇಟೀವ್ ಸೆಕ್ಟರಿನಲ್ಲಿ ಇರತಕ್ಕಂಥ ಸ್ಪಿನ್ನಿಂಗ್ ಮಿಲ್ಸ್ ಮುಚ್ಚಿಕೊಂಡು ಹೋಗುತ್ತವೆ. ಆದರೆ ಜೆ. ಹೆಚ್. ಪಟೇಲರು ಕೋ-ಆಪರೇಟೀವ್ ಸೆಕ್ಟರಿನಲ್ಲಿ ಸ್ಪಿನ್ನಿಂಗ್ ಮಿಲ್ ತೆಗೆಯುತ್ತಾರೆ. ಇಂಡಸ್ಟ್ರೀಸ್ ಮಿನಿಸ್ಟರಿಗೆ ಮುಚ್ಚಿರುವ ಇಂಡಸ್ಟ್ರೀಸ್ ಬಗ್ಗೆ ಕಾಳಜಿ ಇಲ್ಲ, ಅದು ನಷ್ಟವಾಗುತ್ತದೆ. ಆದರೆ ಅದೇ ಕ್ಷೇತ್ರದಲ್ಲಿ ಅದೇ ರೀತಿ ಕೈಗಾರಿಕೆಯನ್ನು ಅವರು ಸ್ವಂತದಲ್ಲಿ ತೆಗೆಯುತ್ತಾರೆ. ಅದು ಲಾಭವಾಗುತ್ತದೆ. ಇವರ ಈ ರೀತಿ ನಮಗೆ ಅರ್ಥವಾಗುವು ದಿಲ್ಲ. ೧೯೮೩ರಲ್ಲಿ ನೀವು ಮಾಡಿರುವಂಥ ರೆಸಲ್ಯೂಷನ್, ನೀವು ನಡೆದುಕೊಂಡಿರತಕ್ಕಂಥ ರೀತಿ It is a total failure on the part of the Government with regard to industries. ಸರ್ಕಾರ ಕೈಗಾರಿಕೆಗಳ ವಿಷಯವನ್ನು ಗಂಭೀರವಾಗಿ ತಾವು ಪರಿಗಣನೆ ಮಾಡಲಿಲ್ಲ ಎಂದು ನಾನು ಗಂಭೀರವಾಗಿ ಆಪಾದನೆ ಮಾಡಬೇಕಾಗಿದೆ. ಮಾನ್ಯ ಜೆ. ಹೆಚ್. ಪಟೇಲರು ಮತ್ತು ಸರ್ಕಾರ ಸಂಪೂರ್ಣವಾಗಿ ಇದರ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ, ಹೊತ್ತುಕೊಂಡು ಇದನ್ನು ಸರಿ ಮಾಡಬೇಕಾದಂಥ ಪ್ರಯತ್ನವನ್ನು ಅವರು ಮಾಡಬೇಕಾಗಿದೆ. ಈ ವಿಚಾರವಾಗಿ ಮಾನ್ಯ ರಾಜ್ಯಪಾಲರು ಏನೇನೂ ಹೇಳಲಿಲ್ಲ. ೧೯೮೩ರಲ್ಲಿ ರೆಸಲ್ಯೂಷನ್ ಮಾಡಿದ್ದೇವೆ ಎನ್ನುವುದು ಬಿಟ್ಟರೆ ಬೇರೆ ಯಾವ ಮಾತನ್ನೂ ಈ ವಿಚಾರವಾಗಿ ತಮ್ಮ ಭಾಷಣದಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡಲಿಲ್ಲ. ಇನ್ನು ಬೇರೆ ಬರಬೇಕಾದಂಥ ಕೈಗಾರಿಕೆಗಳು. ಈ ವಿದ್ಯುಚ್ಛಕ್ತಿ ಕೊರತೆಯಿಂದಾಗಿ ನಾವು ಸೂಪರ್ ಥರ್ಮಲ್ ಪ್ಲಾಂಟ್ ಮಾಡಬೇಕಾಗುತ್ತದೆ. ಹೈಡ್ರೊ ಎಲೆಕ್ಟ್ರಿಕ್ ಪ್ಲಾಂಟ್ ಮೇಲೆ ನಂಬಿಕೊಂಡು ಇದ್ದರೆ ಪ್ರಯೋಜನ ಆಗುವುದಿಲ್ಲ ಎಂದು ಕಳೆದ ವರ್ಷ ಹೇಳಿದ್ದಾರೆ. ಈ ವರ್ಷ ಡೀಸಲ್ ಪ್ಲಾಂಟ್ ಕೆಲವೆಲ್ಲಾ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದಾರೆ. ಬಳ್ಳಾರಿ-ಹೊಸಪೇಟೆ ಮಧ್ಯದಲ್ಲಿ ತೋರಣಗಲ್‌ನಲ್ಲಿ ಕೋಲ್ ಥರ್ಮಲ್ ಪ್ಲಾಂಟ್ ಮಾಡುತ್ತೇವೆ ಎಂದು ಒಂದು ತಿಂಗಳ ಹಿಂದೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಜೆ. ಹೆಚ್. ಪಟೇಲರ ಸ್ಟೇಟ್‌ಮೆಂಟ್ ಓದಿದೆ. ಆ ಕೋಲ್ ಥರ್ಮಲ್ ಪ್ಲಾಂಟ್ ಮಾಡುವುದಕ್ಕೆ ಜಾಗ ಯಾವುದು ಅಂದರೆ ವಿಜಯನಗರ ಸ್ಟೀಲ್ ಪ್ಲಾಂಟ್ ಏರಿಯಾ ಜಾಗ ಏನಿದೆ ಅದೇ ಜಾಗ. ಬೇರೆ ಜಾಗ ಏನಲ್ಲ. ಈ ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ೧೯೮೩ರಲ್ಲಿ ನಾವೆಲ್ಲಾ ಸೈಕಲ್ ತುಳಿದುಕೊಂಡು ಬೆಂಗಳೂರಿಗೆ ಬಂದಿದ್ದೆವು. ಆಗ ನಾವು ಎಂ ಎಲ್. ಎ. ಆಗಿರಲಿಲ್ಲ. ಒಂದೂವರೆ ಸಾವಿರ ಜನ ಬೆಂಗಳೂರಿಗೆ ಬಂದಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಬಹಿರಂಗ ಸಭೆ ಯಲ್ಲಿ ಭಾಷಣ ಮಾಡಿ ಆಶ್ವಾಸನೆ ಕೊಟ್ಟಿದ್ದರು. ನಾನು ಆಲ್ ಪಾರ್ಟಿ ಡೆಲಿಗೇಷನ್‌ನನ್ನು ಪ್ರೈಂ ಮಿನಿಸ್ಟರ್ ಹತ್ತಿರ ಕಳಿಸುತ್ತೇನೆ, ಒಂದು ವೇಳೆ ಅವರು ಒಪ್ಪಲಿಲ್ಲ ಎಂದರೆ ಒಂದು ದಿವಸ ಕರ್ನಾಟಕ ಬಂದ್‌ಗೆ ಕರೆ ಕೊಡುವುದಕ್ಕೆ ತಯಾರಿದ್ದೇನೆ ಎಂದು ಆಶ್ವಾಸನೆ ಕೊಟ್ಟರು. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಎನ್. ಟಿ. ರಾಮರಾವ್‌ರವರ ಸರ್ಕಾರ ಉರುಳಿಕೊಂಡು ಹೋಯಿತು. ಆಗ ಕರ್ನಾಟಕ ರಾಜ್ಯದಲ್ಲಿ ಒಂದು ದಿವಸ ಬಂದ್‌ಗೆ ಕರೆ ಕೊಟ್ಟರು. ಆ ಸಂದರ್ಭದಲ್ಲಿ ನಾವು ಅವರಿಗೆ ಬೆಂಬಲ ಕೊಟ್ಟೆವು. ಎಲ್ಲಾ ವಿರೋಧಪಕ್ಷಗಳು, ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ ಎಂದು, ಕೇಂದ್ರದ ನೀತಿಯನ್ನು ವಿರೋಧಮಾಡಿ, ಸರ್ಕಾರ ಉರುಳಿಕೊಂಡು ಹೋಗುವುದು ತಪ್ಪು ಎಂದು ರಾಷ್ಟ್ರಾದ್ಯಂತ ಚಳುವಳಿ ಮಾಡಿದ್ದಾರೆ, ಅಲ್ಲಿ ಸರ್ಕಾರ ಉರುಳಿಕೊಂಡು ಹೋಯಿತು ಎನ್ನುವ ಕಾರಣಕ್ಕೆ ಈ ಸರ್ಕಾರ ಒಂದು ದಿವಸ ಬಂದ್‌ಗೆ ಕರೆಕೊಟ್ಟಿತು. ವಿಜಯನಗರದ ಉಕ್ಕಿನ ಕಾರ್ಖಾನೆಯ ವಿಚಾರವಾಗಿ ನಾನು ಬಂದ್‌ಗೆ ಕರೆ ಕೊಡುತ್ತೇನೆ, ಆಲ್ ಪಾರ್ಟಿ ಡೆಲಿಗೇಷನ್ ಪ್ರೈಂ ಮಿನಿಸ್ಟರ್ ಹತ್ತಿರ ಕಳಿಸುತ್ತೇನೆ ಎಂದು ಹೇಳಿದವರು ಇಲ್ಲಿಯವರೆಗೆ ಒಂದು ಪ್ರಯತ್ನ ಕೂಡ ಮಾಡಲಿಲ್ಲ. ಈ ಬಗ್ಗೆ ನಾನು ಪತ್ರ ಬರೆದಿದ್ದೇನೆ ಮಾತನಾಡಿದ್ದೇನೆ. ಇದು ೩ನೇ ಸಲವೋ, ೪ನೇ ಸಲವೋ ನಾನು ಈ ಬಗ್ಗೆ ಮಾತನಾಡುತ್ತಾ ಇರುವುದು.

೩-೦೦ ಪಿ ಎಂ.

ಬಹಿರಂಗವಾಗಿ ಇದು ತಮಗೆ ಇಷ್ಟವಿಲ್ಲ ಎಂದು ಹೇಳಿಬಿಡಿ. ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಆಸಕ್ತಿ ಇಲ್ಲ ಕೇಂದ್ರಕ್ಕೆ ಬಿಟ್ಟಿದ್ದೇವೆಂದು ಹೇಳಿಬಿಡಿ. ನಾವು ಕೇಂದ್ರದ ಹತ್ತಿರವೇ ನೋಡಿ ಕೊಳ್ಳುತ್ತೇವೆ. ನಿಮ್ಮ ಸರ್ಕಾರ ಮಾಡಬಹುದೆಂದು ಆಸೆ ಇಟ್ಟುಕೊಂಡಿದ್ದೆವು ಆ ಆಸೆ ಜಾರಿಗೆ ಬರಲಿಲ್ಲ. ಈ ಕಾರ್ಖಾನೆಗೋಸ್ಕರ ಒಂದು ಸಾವಿರ ಎಕರೆ ಜಮೀನು ತೆಗೆದುಕೊಳ್ಳುವ ಪ್ರಯತ್ನ ಮಾಡಿ ಈಗಾಗಲೇ ೮೦೦ ಎಕರೆಯನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಈಗ ಅಲ್ಲಿ ಕೋಲ್ ಥರ್ಮಲ್ ಪ್ಲಾಂಟ್

ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ನಮ್ಮಲ್ಲಿ ವಿದ್ಯುಚ್ಛಕ್ತಿ ಅಭಾವ ಇದೆ, ಈ ರೀತಿಯ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಬರಬೇಕಾಗಿದೆ. ಕೇಂದ್ರಸರ್ಕಾರಕ್ಕೆ ಪ್ರೊಪೋಸಲ್ ಕಳುಹಿಸಿ, ಈ ರೀತಿಯ ಹೇಳಿಕೆ ಕೊಟ್ಟು ಸುಮ್ಮನೆ ಇದ್ದರೆ ಆಗುವುದಿಲ್ಲ. ಹೆಚ್ಚಿನ ಒತ್ತಡವನ್ನು ಕೇಂದ್ರಸರ್ಕಾರದ ಮೇಲೆ ತರಬೇಕಾಗುತ್ತದೆ. ಅಲ್ಲಿ ಎಲ್ಲಾ ರೀತಿಯ ಇನ್‌ಫ್ರಾಸ್ಟ್ರಕ್ಚರ್ ಅನುಕೂಲ ಇದೆ. ಮದ್ರಾಸ್‌ನಿಂದ ಕೋಲ್ ತರುವುದಕ್ಕೆ ರೈಲ್ವೆ ಲೈನ್ ಇದೆ. ಹೊಸಪೇಟೆ ಮತ್ತು ಬಳ್ಳಾರಿಯಿಂದ ವ್ಯಾಗನ್ನುಗಳು ಮದ್ರಾಸ್‌ಗೆ ಹೋಗುತ್ತವೆ. ಅಲ್ಲಿಂದ ಕಲ್ಲಿದ್ದಲು ತರಬಹುದು. ನೀರಿನ ಅನುಕೂಲಕ್ಕಾಗಿ ಟಿ.ಬಿ. ಡ್ಯಾಂ ಇದೆ. ಭೂಮಿ ಇದೆ ಅಲ್ಲಿ ಅನಾನುಕೂಲದ ಪ್ರಶ್ನೆಯೇ ಇಲ್ಲ. ಮಾನ್ಯ ಜೆ.ಹೆಚ್. ಪಟೇಲರು ಕೋಲ್ ಥರ್ಮಲ್ ಪ್ಲಾಂಟ್ ಮಾಡುತ್ತೇವೆಂದು ಹೇಳಿರುವ ಹೇಳಿಕೆಯನ್ನು ಓದಿದ್ದೇನೆ. ಇದು ಆದಷ್ಟು ಶೀಘ್ರವಾಗಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಬಹಳ ಶಾಂತವಾಗಿದೆಯೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ೧೯೮೩ಕ್ಕೆ ಹಿಂದಿನ ೫ ವರ್ಷಗಳು. ೧೯೮೩ರ ನಂತರ ೫ ವರ್ಷಗಳನ್ನು ಈಚೆಗೆ ಹೋಲಿಸಿದರೆ, ಈ ೫ ವರ್ಷಗಳಲ್ಲಿ ಗಲಭೆಗಳು ಆಗಿವೆ, ಗೋಲಿಬಾರ್ ಆಗಿವೆ ಅದರ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಹೀಗಿದ್ದರೂ ಆದರೂ ರಾಜ್ಯದಲ್ಲಿ ಕಾನೂನು ಪರಿಸ್ಥಿತಿ ಶಾಂತವಾಗಿದೆಯೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇವೊತ್ತು ಡಕಾಯತಿ, ರಾಬರಿ ನಡೆದುಕೊಂಡು ಹೋಗುತ್ತಿವೆ. ಅವರೇ ಡಕಾಯತಿ ಮಾಡುವುದನ್ನು ಬೇಸರದಿಂದ ಕೈಬಿಡಬೇಕಾಗಿದೆಯೇ ಹೊರತು, ಸರ್ಕಾರದವರು ಅದನ್ನು ಹತ್ತಿಕ್ಕಲಿಕ್ಕೆ ಪ್ರಯತ್ನ ಮಾಡಿಲ್ಲ. ನನ್ನ ಊರಿನ ಪಕ್ಕದ ಹಳ್ಳಿಯಲ್ಲಿ ದರೋಡೆ ನಡೆಯಿತು. ಬಸ್ಸಿನಲ್ಲಿ ಹೋಗುತ್ತಿದ್ದವರನ್ನು, ರಸ್ತೆಗೆ ಕಲ್ಲುಗಳನ್ನು ಅಡ್ಡ ಹಾಕಿ, ಅವರಲ್ಲಿದ್ದ ವಸ್ತುಗಳನ್ನೆಲ್ಲಾ ದೋಚಿಕೊಂಡು ಹೋದರು. ಅವರು ಬಂದೂಕು ಹಿಡಿದಿರಲಿಲ್ಲ, ಕತ್ತಿ ಹಿಡಿದಿರಲಿಲ್ಲ. ಪಕ್ಕದಲ್ಲಿ ಕಟ್ಟಿಗೆಗಳನ್ನು ಮುರಿದುಕೊಂಡು ಬಂದು ಎಲ್ಲರನ್ನು ಹೆದರಿಸಿ ದೋಚಿಕೊಂಡು ಹೋದರು. ಇಂಥವರನ್ನು ಪೋಲೀಸಿನವರು ಬಿಟ್ಟು ಬಳ್ಳಾರಿಯ ಹತ್ತಿರ ಕೂಲಿ ಮಾಡುವಂಥ ಒಬ್ಬ ಹರಿಜನ ವ್ಯಕ್ತಿ, ಕಟ್ಟಿಗೆ ಕಡಿದು ಜೀವನ ಮಾಡುವಂಥ ಒಬ್ಬ ವ್ಯಕ್ತಿ ಕೊಡಲಿಯನ್ನು ಕೈನಲ್ಲಿ ಹಿಡಿದುಕೊಂಡು ಕೂಲಿ ಕೆಲಸ ಮುಗಿಸಿಕೊಂಡು ತನ್ನೂರಿಗೆ ಬರುವುದಕ್ಕಾಗಿ ಲಾರಿ ನಿಲ್ಲಿಸಿದ್ದಾನೆ. ಲಾರಿಯಲ್ಲಿದ್ದ ಒಬ್ಬ ಕಾನ್‌ಸ್ಟೇಬಲ್ ಆತನ ಮೇಲೆ ಫೈರ್ ಮಾಡಿದ್ದಾನೆ. ಇದು ಡಕಾಯಿತರನ್ನು ಕೊಲೆ ಮಾಡಿದ್ದಾರೆಂದು ಸುದ್ದಿ ಬಂತು, ಮಾನ್ಯ ಜಾಲಪ್ಪನವರು ಪೋಲೀಸ್ ಕಾನ್‌ಸ್ಟೇಬಲ್‌ಗೆ ಪ್ರೈಸ್ ಕೊಡುತ್ತೇವೆಂದು ಹೇಳಿದರು. ಇದೇ ಪೋಲೀಸ್ ಕಾನ್‌ಸ್ಟೇಬಲ್ ಹೊಸಕೋಟೆಯಲ್ಲಿ ಈತನ ಎದುರುಗಡೆಯೇ ಡಕಾಯಿತರು ಕಿಟಕಿಯನ್ನು ಮುರಿಯುತ್ತಿದ್ದರೂ, ಈತನ ಕೈನಲ್ಲಿ ಗನ್ ಇದ್ದರೂ ಫೈರ್ ಮಾಡಿಲ್ಲ. ಪಾಪ, ಕಟ್ಟಿಗೆ ಕಡಿದು ಜೀವನ ಮಾಡುತ್ತಿದ್ದ ಒಬ್ಬ ವ್ಯಕ್ತಿಯ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ. ಅಲ್ಲಿನ ಉಪಾಧ್ಯಕ್ಷರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಇದರ ಬಗ್ಗೆ ತನಿಖೆ ಮಾಡಿಸಿ ಎಂದು ಕೇಳಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಈ ವಿಚಾರವನ್ನು ನಾನು ನಿನ್ನೆ ಬೆಳಿಗ್ಗೆ ನೋಡಿದ ತಕ್ಷಣ, ಸೀನಿಯರ್ ಸಿ.ಓ.ಡಿ. ಆಫೀಸರ್ ಒಬ್ಬರನ್ನು ಕಳುಹಿಸಿದ್ದೇನೆ. ಅವರು ಕೂಡ ಅವರಿವರು ಹೇಳಿದ್ದನ್ನು ಕೇಳಿಕೊಂಡು ಹೇಳುತ್ತಿದ್ದಾರೆ. ನಾನು ಹಾಗೆ ಮಾಡಿದ್ದು ನಿಜ. ಸಿ.ಓ.ಡಿ. ರಿಪೋರ್ಟ್ ಬರಲಿ, ಇದರ ಬಗ್ಗೆ ಮಾತನಾಡೋಣ.

ಶ್ರೀ ಯು. ಭೂಪತಿ.—ನಾನು ಪತ್ರಿಕೆಯಲ್ಲಿ ಓದಿದ್ದು ಅದನ್ನು ಹೇಳಿದ್ದೇನೆ. ಬಳ್ಳಾರಿ ಜಿಲ್ಲೆಯ ಉಪಾಧ್ಯಕ್ಷರು ಇಲ್ಲಿಗೆ ಬಂದಿದ್ದಾರೆ. ಈ ಗಲಭೆಯ ಬಗ್ಗೆ ವಿಚಾರ ಮಾಡಲಿಕ್ಕೆ ಬಂದಿರಬೇಕೆಂದು ಕಾಣುತ್ತದೆ. ಇನ್ನು ಮೊನ್ನೆ ತಾನೆ ನನ್ನ ಸ್ವಂತ ಕ್ಷೇತ್ರದಲ್ಲಿ ನಡೆದಂಥ ದೊಡ್ಡ ಗಲಭೆಯ ಬಗ್ಗೆ ಹೇಳಬೇಕೆಂದರೆ, ವೀರೇಶ್ ಎನ್ನತಕ್ಕ ವ್ಯಕ್ತಿ ಕಳ್ಳತನ ಮಾಡಿದ್ದಾನೆ ಎಂದು ನಾಯಿಗಳನ್ನು ಕರೆದುಕೊಂಡು ಬಂದರು. ಆ ನಾಯಿ ಮೂಸಿ ನೋಡಿಕೊಂಡು ಬಂದು ವೀರೇಶ್ ಎನ್ನುವವನಿಗೆ ಮೂಸಿ ನೋಡಿದಾಗ ಅವನನ್ನು ಹಿಡಿದುಕೊಂಡರು. ಆ ನಾಯಿ ಬಂದಾಗ ಮೊದಲು ಮೂಸಿ ನೋಡಿದಂಥ ವ್ಯಕ್ತಿಯನ್ನು ಹಿಡಿಯಲಿಲ್ಲ ಎನ್ನುವ ವಿಚಾರ ಇದೆ. ವೀರೇಶ್ ಎನ್ನತಕ್ಕ ಲಾರಿ ಡ್ರೈವರ್ ಹಿಡಿದುಕೊಂಡು ಅವನಿಗೆ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಚೆನ್ನಾಗಿ ಜಜ್ಜಿಸಿದ್ದಾರೆ. ಪೋಲೀಸಿನವರಿಗೆ ಸ್ಟೇಷನ್‌ಗೆ ಕರೆದುಕೊಂಡು ಹೋದಮೇಲೆ ಅವನಿಗೆ ಹೊಡೆಯಲಿಲ್ಲ ಎಂದರೆ ಅವರ ಮರ್ಯಾದೆ ಹೋಗುತ್ತದೆ. ಕಳ್ಳತನ ಮಾಡಿದ್ದಾನೆ ಎನ್ನುವ ಆಪಾದನೆ ಇದ್ದರೆ ಮುಗಿಯಿತು ಅವನ ಕತೆ. ಅನಂತರ ಅವನಿಗೆ

ಪೋಲೀಸ್ ಸ್ಟೇಷನ್‌ನಿಂದ ಬಿಟ್ಟಿದ್ದಾರೆ, ಒಂದು ದಿವಸ ಗ್ಯಾಪ್ ಆದನಂತರ ಮೂರು ದಿವಸ ಬೆಳಿಗ್ಗೆ ಆತ ಸತ್ತು ಹೋದ. ಆತ ಸತ್ತು ಹೋದಮೇಲೆ ಗಲಾಟೆ ಪ್ರಾರಂಭವಾಯಿತು. ಎರಡು ಗಂಟೆಗೆ ನಾನು ಸಂಡೂರಿಗೆ ಹೋಗಿದ್ದೆ. ಆಸ್ಪತ್ರೆಯಲ್ಲಿ ಹೆಣ ಇತ್ತು. ಅಲ್ಲಿ ಎಸ್.ಪಿ. ಅವರನ್ನು ನಡೆದುಕೊಂಡು ಬರಬೇಕೆಂದು ಒತ್ತಾಯ ಮಾಡುತ್ತಿದ್ದರು. ನಾನು ಸಹ ಅವರ ಜೊತೆ ಹೋಗಿ ಡೆಡ್‌ಬಾಡಿಯನ್ನು ರಕ್ತ ಹರಿಯುವಂಥ ಕಲೆಗಳು ಇರಲಿಲ್ಲ, ಆದರೆ ಕೆಲವು ಕಲೆಗಳು ಮಾತ್ರ ಇರುವುದು ಕಂಡುಬಂತು, ಅಲ್ಲಿ ಜನರಿಗೆ ಸಮಾಧಾನ ಮಾಡಲಿಕ್ಕೆ ನನ್ನ ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡಿದೆ. ಇದು ಪೋಸ್ಟ್ ಮಾರ್ಟಂ ಆಗಲಿ. ಅನಂತರ ನೋಡೋಣ ಎಂದು ಹೇಳಿದರೂ ಸಹ ಅಲ್ಲಿರತಕ್ಕ ಡಾಕ್ಟರ್ ಮೇಲೆ ಜನಗಳಿಗೆ ನಂಬಿಕೆ ಇಲ್ಲದೆ, ಬೇರೆ ಕಡೆಯಿಂದ ಡಾಕ್ಟರ್ ಕರೆಯಿಸಿ ಪೋಸ್ಟ್‌ಮಾರ್ಟಂ ಮಾಡಬೇಕೆಂದು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ನಾನು ಅಲ್ಲಿದ್ದ ಎಸ್.ಪಿ. ಅವರನ್ನು ಕುರಿತು, ಇಲ್ಲಿ ಗಲಾಟೆ ಆಗುವ ಸೂಚನೆ ಇದ್ದರೆ ತಮಗೆ ಯಾರು ಯಾರು ಅನುಮಾನ ಇದ್ದಾರೆ ಅವರಿಗೆ ಮೊದಲೇ ದಸ್ತಗಿರಿ ಮಾಡಿ, ಇಲ್ಲದೇ ಇದ್ದರೆ ರಾತ್ರಿ ಆದಮೇಲೆ ಗಲಾಟೆ ಆಗುವ ಸಂದರ್ಭ ಇದೆ ಎಂದು ಹೇಳಿದೆ. ಅಲ್ಲಿಯ ಜನಗಳ ಡಿಮ್ಯಾಂಡ್ ಏನಿತ್ತು ಅಂದರೆ ಅವರ ಡಿಮ್ಯಾಂಡ್ ಅಂತಹ ದೊಡ್ಡ ಡಿಮ್ಯಾಂಡ್ ಆಗಿರಲಿಲ್ಲ. ನಮ್ಮ ವೀರೇಶ್‌ನನ್ನು ಹಿಡಿದು ಒಳಗೆ ಹಾಕಿ ಅವನು ಸಾಯುವಂತೆ ಮಾಡಿದಂಥ ಹೆಡ್ ಕಾನ್‌ಸ್ಟೇಬಲ್ ಭೈರಪ್ಪ ಎನ್ನುವವನಿಗೆ ಸಸ್ಪೆಂಡ್ ಮಾಡಿ ಎಂದು ಹೇಳಿದರು. ಆಗ ನಾನು ಎಸ್.ಪಿ. ಅವರಿಗೆ ಇದು ಏನು ಬಹಳ ದೊಡ್ಡ ವಿಚಾರ ಅಲ್ಲ. ನೀವು ಮೊದಲು ಅವನಿಗೆ ಸಸ್ಪೆಂಡ್ ಮಾಡಿ ಅನಂತರ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಇದ್ದೇ ಇರುತ್ತದೆ, ಈ ಗಲಾಟೆ ಅವಾಯ್ಡ್ ಮಾಡಲಿಕ್ಕೆ ಅವನಿಗೆ ಸಸ್ಪೆಂಡ್ ಮಾಡಿ ಎಂದು ಹೇಳಿದೆ. ಆಗ ಅವರು ಡಿ.ಐ.ಜಿ. ಬರುತ್ತಿದ್ದಾರೆ ಎಂದು ಹೇಳುವಷ್ಟರಲ್ಲಿ ಎರಡು ಬಸ್ಸುಗಳಿಗೆ ಬೆಂಕಿ ಹಚ್ಚಿದರು, ಒಂದು ಸೀಮೆಎಣ್ಣೆ ಅಂಗಡಿಗೆ ಬೆಂಕಿ ಹಚ್ಚಿದರು. ಗಲಭೆ ನಡೆಯತಕ್ಕ ಪ್ರದೇಶದಲ್ಲಿ ಪೋಲೀಸ್ ಇಲಾಖೆಯವರು ಸರಿಯಾದ ರೀತಿಯಲ್ಲಿ ಮಾಡದೇ ಇರುವುದರಿಂದ, ಜನಜೀವನ ಅಸ್ತವ್ಯಸ್ತವಾಗುತ್ತದೆ, ಗೋಲಿಬಾರ್ ಮಾಡಬೇಕಾಗುತ್ತದೆ, ಅದರಿಂದ ಲಕ್ಷಾಂತರ ರೂಪಾಯಿಗಳ ಸಾರ್ವಜನಿಕರ ಆಸ್ತಿಪಾಸ್ತಿ ನಷ್ಟವಾಗುತ್ತದೆ. ಅಲ್ಲಿ ಏನಾದರೂ ಗುಂಡು ಹಾರಿಸಿದ್ದರೆ ಹೆಣಗಳ ರಾಶಿ ಬೀಳುತ್ತಿತ್ತು. ಈ ತರಹದ ಘಟನೆಗಳು ಆಗುವುದನ್ನೇ ಗೂಂಡಾಗಳು, ಪಿಕ್‌ಪ್ಯಾಕೆಟರ್ಸ್ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಿಕ್ಕೆ ಕಾಯುತ್ತಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಪೋಲೀಸ್ ಇಲಾಖೆಯವರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡು ಕರ್ತವ್ಯ ನಿರ್ವಹಿಸಿ ಕೆಲಸ ಮಾಡಿದರೆ ಇಂತಹ ಪರಿಸ್ಥಿತಿ ಉದ್ಭವವಾಗುವುದಿಲ್ಲ. ಈ ತರಹದ ಗಲಭೆಗಳು ರಾಜ್ಯದಲ್ಲಿ ಹೇರಾರು ನಡೆದಿವೆ. ಈ ವಿಚಾರದಲ್ಲಿ ಮಾನ್ಯ ಸಚಿವರಿಗೂ ನಾನು ತಿಳಿಸಿ ಹೇಳಿದ್ದೇನೆ ಅಲ್ಲದೆ ಪತ್ರವನ್ನು ಕೂಡ ಬರೆದಿದ್ದೇನೆ. ನಾನು ಸಚಿವರಿಗೆ ಪತ್ರ ಬರೆದು ಇದನ್ನು ಸಿಓಡಿ ಗೆ ರೆಫರ್ ಮಾಡಿ ಎಂದು ಕೇಳಿದ್ದಕ್ಕೆ ಇನ್ನೂ ನನಗೆ ಉತ್ತರ ಬಂದಿಲ್ಲ. ಅದರ ಬಗ್ಗೆ ಏನು ಮಾಡಿದ್ದಾರೆಂದು ಗೊತ್ತಿಲ್ಲ. ಅಲ್ಲಿಯ ಪೋಲೀಸಿನವರ ಹೇಳಿಕೆ ಪ್ರಕಾರ ಸಿಓಡಿ ಗೆ ಇದು ರೆಫರ್ ಆಗಿಲ್ಲ, ಏನು ಮಾಡುತ್ತಾರೆಂದು ಇವೊತ್ತಿನವರೆಗೂ ನಮಗೆ ಗೊತ್ತಾಗಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ವೀರೇಶ್‌ನನ್ನು ಪೋಲೀಸಿನವರು ಸ್ಟೇಷನ್‌ಗೆ ಕರೆದುಕೊಂಡು ಹೋದರು ಎನ್ನುವಂಥ ವಿಚಾರವನ್ನು ಮಾನ್ಯ ಸದಸ್ಯರು ತಿಳಿಸಿದರು. ಇವೊತ್ತು ಪೋಲೀಸರು ನಾಯಿಗಳನ್ನು ಕರೆದುಕೊಂಡು ಹೋಗಿ ಡಿಟೆಕ್ಟ್ ಮಾಡಿಸುವುದು ಒಂದು ಉತ್ತಮವಾದ ಮಾರ್ಗ ಎಂದು ಮಾಡಿದ್ದಾರೆ. ಅದನ್ನು ನಾವು ಮೊದಲಿನಿಂದಲೂ ಅನುಸರಿಸಿಕೊಂಡು ಬರುತ್ತಿದ್ದೇವೆ. ಅದು ಬೇಡ ಇದು ಬೇಡ ಎಂದು ಬೇರೆ ಯಾವ ಮಾರ್ಗದಿಂದ ಕಳ್ಳರನ್ನು ಹಿಡಿಯಬೇಕು ಎನ್ನುವುದನ್ನು ಮಾನ್ಯ ಸದಸ್ಯರೇ ಹೇಳಲಿ ? ಇನ್‌ಸಿಡೆಂಟ್ ಆದತಕ್ಷಣ ಒಂದೆರಡು ಗಂಟೆಯಲ್ಲಿಯೇ ನಾಯಿಯನ್ನು ಕರೆದುಕೊಂಡು ಹೋಗಿ ಡಿಟೆಕ್ಟ್ ಮಾಡುವುದರಿಂದ ಸಕ್ಸಸ್‌ಫುಲ್ ಆಗಿರುವುದು ನಮಗೆ ಕಂಡುಬರುತ್ತಿದೆ. ಆ ಪ್ರಕಾರ ನಾಯಿಯನ್ನು ಕರೆದುಕೊಂಡು ಹೋದಾಗ ಆ ನಾಯಿ ಅವನ ಮನೆಯ ಬಾಗಿಲಿಗೆ ಹೋಗಿದೆ. ಪೋಲೀಸಿನವರೇನು ಆ ನಾಯಿಯನ್ನು ಅವನ ಮನೆಯ ಬಾಗಿಲಿಗೆ ಎಳೆದುಕೊಂಡು ಹೋಗಲಿಲ್ಲ. ಅನಂತರ ಅವನಿಗೆ ಕರೆದುಕೊಂಡು ಹೋಗಿ ಎನ್‌ಕ್ವಯರಿ ಮಾಡಿ ಬಿಟ್ಟುಬಿಟ್ಟಿದ್ದಾರೆ. ಆತ ಎರಡು ಮೂರು ದಿವಸಗಳಲ್ಲಿಯೇ ಸತ್ತುಹೋಗಿದ್ದಾನೆ. ಪೋಸ್ಟ್ ಮಾರ್ಟಮ್ ಪ್ರಕಾರ ಆತ ವಿಷ ಕುಡಿದು ಸತ್ತಿರಬೇಕೆಂದು ಕಾಣುತ್ತದೆ, ಅದು ಸರಿಯಾಗಿ ನನಗೆ ನೆನಪು ಇಲ್ಲ.

ಅವರು ನನಗೆ ಒಂದು ಮಾತನ್ನು ಹೇಳಿದರು. ಬಹುಶಃ ಅಲ್ಲಿ ಪೋಲೀಸರು ಸರಿಯಾದ ಮುಂಜಾಗರೂಕತಾ ಕ್ರಮವನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದರೆ ಅವರು ನಿಮ್ಮ ಮೇಲೆ ನಂಬಿಕೆ

ಯನ್ನು ಇಟ್ಟುಕೊಂಡು, ಶಾಸಕರು ಹೇಗಿದ್ದರೂ ನಮಗೆ ಇದ್ದಾರೆಂದು ನಿಮ್ಮ ಮೇಲೆ ಸಂಬಿಕೆಯನ್ನು ಇಟ್ಟುಕೊಂಡಿದ್ದರು. ಆದರೆ ನೀವು ಇದನ್ನು ಸರಿಪಡಿಸದೆ ಬಳ್ಳಾರಿಗೆ ಹೋಗಿಬಿಟ್ಟಿರಿ. ಇನ್ನು ಆ ಊರಿನಲ್ಲಿ ಗಲಾಟೆ ಆದಾಗ ಯಾರೂ ಕೂಡ ಸಾಯಲಿಲ್ಲ ಎಂದು ತಾವು ಹೇಳಿದಿರಿ. ನಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ಅದಕ್ಕೆ ಕೆಲವು ಮೆಥಡ್ಸ್ ಇವೆ. ಅದರ ಪ್ರಕಾರ ನಾವು ಹೋಗಬೇಕಾಗುತ್ತದೆ. ಅಥವಾ ಆ ಮೆಥಡ್ಸ್ ಬೇಡವೆಂದು ಹೇಳುವುದಾದರೆ ಬೇರೆ ಮೆಥಡ್ಸ್ ಏನಾದರೂ ಇದ್ದರೆ ದಯವಿಟ್ಟು ಹೇಳಿ. ಕೆಲವು ಕೇಸುಗಳಲ್ಲಿ ಡಿಟೆಕ್ಟ್ ಮಾಡುವಾಗ ಕೆಲವು ಲೋಪದೋಷಗಳಾಗುತ್ತವೆ. ತಾವು ಅದನ್ನೇ ದೊಡ್ಡದಾಗಿ ಮಾಡಿಕೊಂಡು ಹೇಳುವುದಾದರೆ ನಮಗೆ ಬಹಳ ಕಷ್ಟವಾಗುತ್ತದೆ. ಪ್ರತಿಯೊಂದಕ್ಕೂ ಸಿಒಡಿ, ಸಿಬಿಐ ಎಂದು ತಾವು ಹೇಳುತ್ತಾ ಹೋದರೆ ಪೋಲೀಸರೂ ಕೂಡ ಸರಿಯಾಗಿ ದಕ್ಷತೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದೆಲ್ಲಾ ನಮಗೇಕೆ ಬೇಕು ಹೇಗೋ ೩೦ ದಿವಸ ಕಾಲ ಕಳೆದು ಸಂಬಳ ಎಣಿಸಿಕೊಂಡು ಹೋಗೋಣ ಎನ್ನುವ ಮನೋಭಾವನೆಯನ್ನು ಅವರು ತಾಳುತ್ತಾರೆ. ಮೊನ್ನೆ ಶಿವಮೊಗ್ಗದಲ್ಲಿ ಒಂದು ಇನ್ಸಿಡೆಂಟ್ ನಡೆಯಿತು. ಅದರ ಬಗ್ಗೆ ನೀವು ಕ್ರಮ ತೆಗೆದುಕೊಳಿ ಎಂದು ಹೇಳಿದರೆ ನಾವು ಕ್ರಮ ತೆಗೆದುಕೊಳ್ಳಬಹುದು.......

ಶ್ರೀ ಯು. ಭೂಪತಿ.—ವೀರೇಶನ ಪತ್ನಿ ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಅದನ್ನು ಅವರು ತೆಗೆದುಕೊಳ್ಳಲಿಲ್ಲ. ಆ ಕೇಸ್ ರಿಜಿಸ್ಟರ್ ಆಗಿಲ್ಲ. ತಾವು ಬೇಕಾದರೆ ತರಿಸಿಕೊಂಡು ನೋಡಿ. ಡಿವೈಎಸ್‌ಪಿ ಗೆ ಹೋಗಿ ದೂರು ಕೊಟ್ಟಿದ್ದಾರೆ. ಕೇಸ್ ರಿಜಿಸ್ಟರ್ ಮಾಡಿಕೊಂಡಿಲ್ಲ. ಆ ಪೋಲೀಸ್ ಕಾನ್ಸ್‌ಟೇಬಲ್‌ನ್ನು ಪೆಂಡಿಂಗ್ ಎನ್‌ಕ್ವಯಿರಿ ಎಂದು ಮಾಡಿ ಅವನನ್ನು ಸಸ್ಪೆಂಡ್ ಮಾಡಿ ಎಂದರೆ ಅದನ್ನೂ ಮಾಡಿಲ್ಲ.

ಮಾನ್ಯ ಸಭಾಧ್ಯಕ್ಷರೆ, ನಾಯಿಯನ್ನು ಹಿಡಿದುಕೊಂಡು ಬಂದು ಅಪರಾಧಿಯನ್ನು ಪತ್ತೆಮಾಡುತ್ತೇವೆಂದು ಹೇಳುವುದು ಪೂರ್ಣವಾಗಿ ಸರಿಯಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನನ್ನ ಊರಿನ ಪಕ್ಕದಲ್ಲಿ ಒಂದು ಬಸ್ಸನ್ನು ನಿಲ್ಲಿಸಿ ಒಂದು ದರೋಡೆ ನಡೆಯಿತು. ಕೆಲವರಿಗೆ ಏಟುಗಳು ಬಿದ್ದುವು. ಇನ್ನು ಕೆಲವರು ತಲೆಗೆ ಹೊಡೆಸಿಕೊಂಡಿದ್ದವರನ್ನು ಆಸ್ಪತ್ರೆಗೆ ತಂದು ಅವರಿಗೆ ನನ್ನ ಹೆಂಡತಿ ಶುಶ್ರೂಷೆ ಮಾಡಬೇಕಾಯಿತು. ನೀವು ಅಲ್ಲಿ ಹೋಗಿ ನೀವು ಇಲ್ಲಿ ಹೋಗಿ ಎಂದು ಬಂದ ಬಂದವರಿಗೆಲ್ಲಾ ಹೇಳಿದ್ದಾಯಿತು. ಅದರ ಮಾರನೆಯ ದಿವಸ ಬೆಳಗ್ಗೆ ಬಸ್ ನಿಲ್ಲಿಸಿ ದರೋಡೆ ಆಗಿದ್ದ ಜಾಗಕ್ಕೆ ಪೋಲೀಸರು ನಾಯಿಯನ್ನು ಹಿಡಿದುಕೊಂಡು ಬಂದರು. ನಾನೂ ಕೂಡ ಅಲ್ಲಿಗೆ ಹೋಗಿದ್ದೆ. ಅಲ್ಲಿಗೆ ಸಬ್‌ಇನ್ಸ್‌ಪೆಕ್ಟರ್‌ರವರೂ ಇನ್ನೂ ಹಲವಾರು ಪೋಲೀಸ್‌ನವರೂ ಬಂದಿದ್ದರು. ಅವರು ಆ ನಾಯಿಯನ್ನು ಹಿಡಿದುಕೊಂಡು ಅಲ್ಲೆಲ್ಲಾ ಸುತ್ತಾಡಿ ಕೊನೆಗೆ ಆ ನಾಯಿಯನ್ನು ಬಿಟ್ಟರು. ಆ ನಾಯಿ ಅಲ್ಲೆಲ್ಲಾ ಸುತ್ತಾಡಿ ಕೊನೆಗೆ ನನ್ನ ಕಾರ್‌ನಲ್ಲಿ ಬಂದು ಕುಳಿತುಕೊಂಡಿತು. ಆಗ ನನಗೆ ಇದೇನಪ್ಪಾ ಹೀಗಾಯ್ತಲ್ಲಾ ಎಂದು ಹೆದರಿಕೆ ಆಯಿತು. ಹಾಗಾದರೆ ನಾನು ದರೋಡೆ ಮಾಡಿದ್ದೇನೆಯೇ? ಹೀಗೆ ಕೆಲವು ಸಂದರ್ಭಗಳಲ್ಲಿ ತಪ್ಪುಗಳಾಗುತ್ತವೆ..........

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಸ್ವಾಮಿ, ತಾವು ಇದುವರೆಗೆ ಸುಮಾರು ೩-೪ ಉದಾಹರಣೆಗಳನ್ನು ಕೊಟ್ಟಿರಿ. ಅವೆಲ್ಲವೂ ಕೂಡ ನಮ್ಮ ಊರಿನ ಪಕ್ಕದಲ್ಲೇ ಆದುವು ಎಂದು ಹೇಳಿದಿರಿ.....

ಶ್ರೀ ಯು. ಭೂಪತಿ.—ಹೌದು, ನನ್ನ ಮನೆಯ ಪಕ್ಕದ ಮನೆಯಲ್ಲೂ ಕಳ್ಳತನ ಮಾಡಿದ್ದಾರೆ. ಆದರೆ ನನ್ನ ಮನೆಯಲ್ಲಿ ಮಾತ್ರ ಕಳ್ಳತನ ಮಾಡಿಲ್ಲ. ಏಕೆಂದರೆ ನನ್ನ ಮನೆಯಲ್ಲಿ ಎಷ್ಟು ಹಣ ಇರಬಹುದೆಂದು ಆ ಕಳ್ಳರಿಗೂ ಗೊತ್ತಿದೆ,

ಮಾನ್ಯ ಅಧ್ಯಕ್ಷರೆ, ಈ ವಿಚಾರ ಹಾಗಿರಲಿ. ಇನ್ನು ವೀರೇಶನ ಹೆಂಡತಿಗೆ ೩ ಜನ ಮಕ್ಕಳಿದ್ದಾರೆ. ಆಕೆ ಗರ್ಭಿಣಿ. ಅವಳು ಈಗ ಕಷ್ಟದಲಿದ್ದಾಳೆ, ಅವಳಿಗೆ ಪರಿಹಾರವನ್ನು ಕೊಡಿ ಎಂದರೆ ಇದುವರೆಗೂ ಕೊಟ್ಟಿಲ್ಲ. ಮಾನ್ಯ ಗೃಹ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಅವರ ಫಂಡ್‌ನಿಂದಲಾದರೂ ಆಕೆಗೆ ಪರಿಹಾರವನ್ನು ಸಾಕಷ್ಟು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಇದನ್ನು ತಾವು ಸಿ.ಒ.ಡಿ.ಗೂ ರೆಫರ್ ಮಾಡಬೇಕು. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವಂತೆ ಇಡೀ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಂಪೂರ್ಣವಾಗಿ ಚೆನ್ನಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನನಗೆ ತಿಳಿದಂತೆ ಗೋಲಿಬಾರ್, ಲಾಠಿಛಾರ್ಜ್‌ಗಳು ರಾಜ್ಯದಲ್ಲಿ ಬಹಳ ಕಡೆ ನಡೆದಿವೆ.

ಆದೇ ರೀತಿ ಕೋಮು ಗಲಭೆ ಕೂಡ ನಡೆದಿದೆ. ಆದರೆ ಅದನ್ನೆಲ್ಲಾ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿಲ್ಲ. ಕೋಮು ಸೌಹಾರ್ದ ಚೆನ್ನಾಗಿದೆಯೆಂದು ಹೇಳಿದ್ದಾರೆ. ನಾವು ಬೆಂಡಿಗೇರಿಯಲ್ಲಿ ನಡೆದಂಥ ಪ್ರಕರಣವನ್ನೂ ಕೂಡ ನೋಡಿದ್ದೇವೆ. ಆದ್ದರಿಂದ ನಾನು ಇದನ್ನೆಲ್ಲಾ ಹೇಳಬೇಕಾಯಿತು.

ಇನ್ನು ಸಾಮಾನ್ಯ ಜನರ ಮೇಲೆ ಹೊರೆಯನ್ನು ಹಾಕತಕ್ಕ ಪ್ರಯತ್ನವನ್ನು ನಮ್ಮ ರಾಜ್ಯ ಸರ್ಕಾರ ಏನು ಮಾಡಿದೆ ಎಂದರೆ, ನ್ಯಾಯಬೆಲೆ ಅಂಗಡಿಗಳಿಗೆ ಹಸಿರು ಮತ್ತು ಕೆಂಪು ಪಡಿತರ ಚೀಟಿಗಳನ್ನು ಕೊಟ್ಟಿದೆ,

ಕೆಂಪು ಕಾರ್ಡನ್ನು ಪಡೆದಿರುವ ಜನರಿಗೆ ಕೊಡುವ ಅಕ್ಕಿ. ಗೋಧಿಯ ಬೆಲೆಯನ್ನೂ ಕೂಡ ಜಾಸ್ತಿ ಮಾಡಿದ್ದಾರೆ. ಏತಕ್ಕೆ ಬೆಲೆಯನ್ನು ಜಾಸ್ತಿ ಮಾಡಬೇಕಾಗಿತ್ತು? ೪೦ ಪೈಸೆ ೨೩ ಪೈಸೆಯನ್ನು ಜಾಸ್ತಿ ಮಾಡುವ ಬದಲಾಗಿ ಸರ್ಕಾರವೇ ಸಬ್‌ಸಿಡಿಯನ್ನು ಕೊಡಬಹುದಾಗಿತ್ತು

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರವೇ ಮೂರು ಬಾರಿ ಬೆಲೆಯನ್ನು ಹೆಚ್ಚಿಸಿರುವುದು ಮಾನ್ಯ ಶಾಸಕರಿಗೂ ಗೊತ್ತಿರುತ್ತದೆ ಗೋಧಿ ಮತ್ತು ಅಕ್ಕಿಯ ಬೆಲೆಯನ್ನು ಜಾಸ್ತಿ ಮಾಡಿರುತ್ತಾರೆ. ಕೇಂದ್ರ ಸರ್ಕಾರದವರು ಎಷ್ಟು ಜಾಸ್ತಿ ಮಾಡಿರುತ್ತಾರೋ ಅಷ್ಟು ಮಾತ್ರ ನಾವೂ ಕೂಡ ಹೆಚ್ಚಿಸಿರುತ್ತೇವೆ. ಕೇಂದ್ರ ಸರ್ಕಾರದವರು ಹಸಿರುಕಾರ್ಡ್ ಮುಖಾಂತರ ಹಂಚಲು ಕೊಟ್ಟಿರುವ ಅಕ್ಕಿಗೆ ೩೦-೪೦ ಕೋಟಿ ರೂಪಾಯಿಗಳವರೆಗೆ ಸಬ್‌ಸಿಡಿಯನ್ನು ಕೊಡುತ್ತಿರುವುದು ತಮ್ಮಗೆ ಗೊತ್ತಿರುವ ವಿಷಯ. ಈ ರೀತಿ ಎಲ್ಲರಿಗೂ ಕೊಡಬೇಕೆಂದರೆ ನೂರಾರು ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ತಾವು ಹಣಕಾಸಿನ ಬಗ್ಗೆ ಯಾಪತಿಗೆಯ ಸಲಹೆಯನ್ನು ಕೊಡುತ್ತೀರೋ ಕೊಡಿ.

ಶ್ರೀ ಯು. ಭೂಪತಿ, ಜೀವನಾವಶ್ಯಕವಾದ ವಸ್ತುಗಳಾದ ಅಕ್ಕಿ ಮತ್ತು ಗೋಧಿಗೆ ಸಬ್‌ಸಿಡಿ ಕೊಡಬೇಕಾದದ್ದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ ಕೇಂದ್ರ ಸರ್ಕಾರದವರು ಬೆಲೆಯನ್ನು ಜಾಸ್ತಿ ಮಾಡಿದ್ದರ ಬಗ್ಗೆ ಒಂದು ರೆಸಲ್ಯೂಷನ್ ಕೂಡ ತಂದಿದ್ದಾರೆ ಅದರ ಬಗ್ಗೆ ತಾವು ಅನುಮಾನಪಡಬೇಕಾಗಿಲ್ಲ. ಬೇರೇಯವರಿಗೆ ಹಾಕಿ, ದೊಡ್ಡ ದೊಡ್ಡ ಮಾಲೀಕರ ಮೇಲೆ, ಕೈಗಾರಿಕೋದ್ಯಮಿಗಳ ಮೇಲೆ ತೆರಿಗೆಗಳ ಮೂಲಕ ಹಣವನ್ನು ವಸೂಲು ಮಾಡಿ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಹಸಿರು ಕಾರ್ಡನ್ನು ೨೦ ಸಾವಿರ ಜನರಿಗೆ ವಿಸ್ತರಿಸಬೇಕು ಎನ್ನುವ ಭಾವನೆಯಲ್ಲಿ ಸರ್ಕಾರದವರು ಯಾವರೀತಿ ಮಾಡಬೇಕು ಎನ್ನುವ ಬಗ್ಗೆ ಚಿಂತನೆ ಮಾಡುತ್ತಿದೆ.

ಶ್ರೀ ಯು. ಭೂಪತಿ. ಹಸಿರು ಕಾರ್ಡಿನ ಬಗ್ಗೆ ತಮಗೆ ಅನುಭವ ಇರುವಹಾಗೆ ಇದು ಎಲ್ಲಿಯವರೆಗೆ ಹೋಗಿದೆ ಎಂದರೆ, ಬಳ್ಳಾರಿಯಲ್ಲಿ ಇಂಡೋ ಸೋವಿಯತ್ ಕಲ್ಚರಲ್ ಸೊಸೈಟಿಯವರು ಒಂದು ಸಮ್ಮೇಳನವನ್ನು ಮಾಡಿದರು, ಆ ಸಂದರ್ಭದಲ್ಲಿ ಒಂದು ಬಹಿರಂಗ ಸಭೆಯನ್ನು ಕರೆಯಲಾಗಿತ್ತು. ಆ ಸಭೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ ಈ ಕಲ್ಚರಲ್ ಪ್ರೋಗ್ರಾಮ್ ಬಗ್ಗೆ ರೈತರು ಯಾರಾದರೂ ಮಾತನಾಡಬೇಕೆನ್ನುವರಿದ್ದರೆ ಬನ್ನಿ, ಮಾತನಾಡಿ ಎಂದು ಕರೆದಾಗ, ಒಬ್ಬ ರೈತಬಂದು ನಮಗೆ ಹಸಿರು ಕಾರ್ಡನ್ನು ಕೊಟ್ಟಿಲ್ಲ. ಹಸಿರು ಕಾರ್ಡನ್ನು ಕೊಡಬೇಕೆಂದು ಕೇಳಿದನು ಆ ದೇಶದ ಪ್ರಧಾನಮಂತ್ರಿಯವರೇ ಬಂದು ಭಾಷಣ ಮಾಡಿದ್ದರು. ಮೊದಲು ಅರ್ಜಿ ಬರುತ್ತಿತ್ತು. ಹಸಿರು ಕಾರ್ಡನ್ನು ಕೊಡಿಸಿ ಎಂದು, ಕಾರ್ಡಿನ ಬೇಡಿಕೆ ಅಲ್ಲಿಯವರೆಗೂ ಹೋಗಿದೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಹಸಿರು ಕಾರ್ಡನ್ನು ಜನತೆ ಆ ಮಟ್ಟದಲ್ಲಿ ಮೆಚ್ಚಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು ಬಳ್ಳಾರಿಗೆ ಬಂದಂಥ ಸಂದರ್ಭದಲ್ಲಿ ಅವರೊಡನೆ ಚರ್ಚೆ ಮಾಡಿದೆ ಅವರು ಒಂದು ಆವರೇಜ್ ಫಿಕ್ಸ್ ಮಾಡಿದ್ದೇವೆಂದು ಹೇಳಿದರು, ಒಂದು ತಾಲ್ಲೂಕಿಗೆ ೫೦ ಪರ್ಸೆಂಟ್ ಫಿಕ್ಸ್ ಮಾಡಿದ್ದೇವೆ, ಅಷ್ಟೇ ಕೊಡಬೇಕು. ಅದಕ್ಕಿಂತ ಜಾಸ್ತಿ ಕೊಡುತ್ತಿಲ್ಲವೆಂದು ಹೇಳಿದರು ಮಾನ್ಯ ಸಚಿವ ಆದ ಎಂ. ಪಿ. ಪ್ರಕಾಶ್‌ರವರು ನಮ್ಮ ಜಿಲ್ಲೆಗೆ ಬಂದಾಗ ಹೇಳಿದರು, ಜಿಲ್ಲಾ ಪರಿಷತ್ ಮೆಂಬರ್‌ಗಳೂ ಕೂಡ ಹಸಿರು ಕಾರ್ಡು ಕೊಡುವುದು ಜಾಸ್ತಿಯಾಗಲಿದೆ ಎಂದು ಹೇಳುತ್ತಿದ್ದಾರೆ. ಇದರಿಂದ ನಮ್ಮ ಜವಾಬ್ದಾರಿಯೂ ಕೂಡ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಿದೆ. ೫೫ ಪರ್ಸೆಂಟ್ ಜನರು ಬಿಲೋದಿ ಪಾವರ್ಟಿ ಇರುವವರಿಗೆ ಹಸಿರು ಕಾರ್ಡನ್ನು

ಕೊಟ್ಟಿದ್ದೇವೆಂದು ಸರ್ಕಾರದವರು ಐಡೆಂಟಿಫೈ ಮಾಡಿ ಸೆಂಟ್ರಲ್ ಗೌರ್ನಮೆಂಟ್ ಪ್ಲಾನಿಂಗ್ ಕಮೀಷನ್ ಮುಂದೆ ಹೋದಮೇಲೆ ಅವರು ಪ್ರೋಗ್ರಾಂ ಪ್ರಕಾರ ೬೦-೭೦ ಪರ್ಸೆಂಟ್ ಬಿಲೋ ದಿ ಪಾವರ್ಟಿ ಅಷ್ಟು ಹಸಿರು ಕಾರ್ಡನ್ನು ಕೊಡಬೇಕೆಂದು ಹೇಳಿರುತ್ತಾರೆ. ಆ ಮಾತನ್ನು ತಾವು ಹೇಳುವಂತೆಯೇ ಇಲ್ಲ,

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಹೇಳಿದಂತೆ ಅಧಿಕೃತವಾಗಿ ವಿಷಯ ಬಂದರೆ ಸರ್ಕಾರದವರು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಇಲ್ಲಿ ಏನಾಗಿದೆ ಎಂದರೆ ಈ ಸ್ಕೀಮ್‌ನಲ್ಲಿ ಹಸಿರು ಕಾರ್ಡುಗಳನ್ನು ಕೊಡುವುದಕ್ಕೆ ಶಾಸಕರಾಗಲಿ, ಮಂಡಲ್ ಪಂಚಾಯತ್ ಅವರಾಗಲಿ ನಿರ್ದಿಷ್ಟವಾಗಿ ಹೇಳುವುದಕ್ಕೆ ತಯಾರಾಗಿಲ್ಲ ಯಾರು ವಂಚಿತರಾಗಿದ್ದಾರೆ ಅವರಿಗೆ ನಾವು ಹಸಿರು ಕಾರ್ಡನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಅವರನ್ನು ಕಂಡುಹಿಡಿದು ಹೇಳಲಿ.

ಶ್ರೀ ಯು. ಭೂಪತಿ.—ಶಾಸಕರು ಈಗ ನೇರವಾಗಿ ಯಾವುದನ್ನೂ ಹೇಳುವುದು ಕಷ್ಟ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಬಂದ ಮೇಲೆ ಇಂಥ ಪರಿಸ್ಥಿತಿ ಉಂಟಾಗಿದೆ. ಏಕೆಂದರೆ ನಾವು ಒಂದು ರೀತಿ ಸೂಪರ್‌ವೈಸರ್ ಆಗಿದ್ದೇವೆ ಏನು ಸಮಾಚಾರ ಎಂದು ಕೇಳುವುದು, ಬರುವುದು ಅಷ್ಟೇ ಆಗಿದೆ ನಮ್ಮ ಕೆಲಸ. ಅಲ್ಲಿ ನಮಗೆ ಶಾಸಕರಾಗಿ ಕೆಲಸ ಮಾಡುವಷ್ಟು ಸೌಕರ್ಯ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ನಮಗೆ ಸಂಬಳ, ಭತ್ಯಗಳನ್ನು ಜಾಸ್ತಿ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ನಾನಂತೂ ಜಾಸ್ತಿ ಕೊಡಿ ಎಂಬು ಕೇಳುವುದೂ ಇಲ್ಲ. ಅವಶ್ಯಕತೆ ಇದ್ದಲ್ಲಿ ಒಂದು ಸಾವಿರ ರೂಪಾಯಿ ಕೊಡಿ ಸಾಕು.

(ಶ್ರೀ ಎಂ. ಎಸ್. ನಾರಾಯಣರಾವ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ತಮಗೆ ಮಹಾರಾಷ್ಟ್ರದ ವಿಚಾರ ಗೊತ್ತಿರಬಹುದು ಅಲ್ಲಿ ತಿಂಗಳಲ್ಲಿ ಹತ್ತು ದಿವಸ ಒಬ್ಬ ಶಾಸಕರಿಗೆ ಸರ್ಕಾರದ ಯಾವುದಾದರೂ ಒಂದು ಇಲಾಖೆಯ ವಾಹನವನ್ನು ಅಲಾಟ್ ಮಾಡಬೇಕೆಂದು ಸರ್ಕಾರ ಆಜ್ಞೆ ಮಾಡಿದೆ. ಅದರ ಪ್ರಕಾರ ಮಾಡುತ್ತಾರೆ. ನಮ್ಮಲ್ಲಿ ಸರ್ಕಾರ ಡೈರೆಕ್ಷನ್ ಕೊಟ್ಟಿದೆ ಅಧ್ಯಕ್ಷರು ಪತ್ರ ಕೊಟ್ಟಿದ್ದಾರೆ-ನೀವು ಬಿಡಿಓ ಜೀಪನ್ನು ಉಪಯೋಗಿಸಬಹುದು ಎಂದು. ಆದರೆ ಅವರು ೫ ದಿವಸ ಎನ್. ಎಸ್. ಸಿ., ೫ ದಿವಸ ಇಂದಿರಾ ವಿಕಾಸ ಪತ್ರ, ಹತ್ತು ದಿವಸ ಫ್ಯಾಮಿಲಿ ಪ್ಲಾನಿಂಗ್ ರಜಾ ಹೋಗುವುದು ಇತ್ಯಾದಿಗಳನ್ನು ಮಾಡುವುದಕ್ಕೆ ಸರಿ ಹೋಗುತ್ತದೆ. ನಮಗಂತೂ ವೆಹಿಕಲ್ಸ್ ಸಿಗುವುದಿಲ್ಲ. ಸರ್ಕಾರ ಆಜ್ಞೆ ಮಾಡಿದ್ದರೂ ಯಾವ ವಾಹನಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ ಮಹಾರಾಷ್ಟ್ರದಲ್ಲಿ ಯಾವ ರೀತಿ ಇದೆ ಎಂದರೆ ಅಲ್ಲಿ ಅದಕ್ಕೆಲ್ಲಾ ತಹಶೀಲ್ದಾರರೇ ಜವಾಬ್ದಾರರು. ಅಲ್ಲಿನ ನನ್ನ ಸ್ನೇಹಿತರೊಬ್ಬರು ತೋಟಗಾರಿಕೆ ಇಲಾಖೆಯ ಜೀಪನ್ನು ತೆಗೆದುಕೊಂಡು ಬಂದಿದ್ದರು. ನೀವು ಏಕೆ ಇದನ್ನು ತಂದಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು. ಅವರವರ ಕ್ಷೇತ್ರದಲ್ಲಿ ೮೦೦ ಕಿಲೋ ಮೀಟರ್‌ವರೆಗೆ ಟೂರ್ ಮಾಡುವುದಕ್ಕೆ ಯಾವುದಾದರೂ ಒಂದು ಇಲಾಖೆಯ ಜೀಪನ್ನು ಶಾಸಕರಿಗೆ ಅಲಾಟ್ ಮಾಡುತ್ತಾರೆ ಎಂದು; ೮೦೦ ಕಿಲೋ ಮೀಟರ್ ಮೇಲೆ ಆದರೆ ಚಾರ್ಜ್ ಕೊಡಬೇಕು. ಕೆಲವು ರಾಜ್ಯಗಳಲ್ಲಿ ಶಾಸಕರಿಗೆ ಕ್ಲರ್ಕ್-ಕಂ-ಟೈಪಿಸ್ಟ್ ಇಟ್ಟುಕೊಳ್ಳುವುದಕ್ಕೆ ಕನ್‌ಸಾಲಿಡೇಟೆಡ್ ಆಗಿ ೮೦೦ ರೂಪಾಯಿಗಳನ್ನು ಕೊಡುತ್ತಾರೆ ಅವರು ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳಬಹುದು ಆದರೆ ಇಲ್ಲಿ ನಮಗೆ ಬರುವಂಥ ಅರ್ಜಿಗಳಿಗೆ ಮನವಿಗಳಿಗೆ ಉತ್ತರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವೇ ಪೋಸ್ಟ್‌ಮ್ಯಾನ್ ಆಗಿದ್ದೇವೆ. ನಮಗೆ ಅಷ್ಟೊಂದು ಪತ್ರಗಳು, ಮನವಿಗಳು ಬರುತ್ತಿರುತ್ತವೆ. ಇತರ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ಸೌಲಭ್ಯಗಳನ್ನು ಸೃಷ್ಟಿ ಮಾಡಿದರೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ನಡುವೆ ಹಾಗೂ ತಾಲ್ಲೂಕು ಪಂಚಾಯಿತಿ ಸಮಿತಿಯ ಅಧ್ಯಕ್ಷರುಗಳಾಗಿ ಕಾರ್ಯ ನಿರ್ವಹಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ ; ಇಲ್ಲದಿದ್ದರೆ ಆಗುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಇನ್ನು ನೈಸರ್ಗಿಕ ವಿಕೋಪಗಳ ಪರಿಹಾರದ ಬಗ್ಗೆ ಹೇಳುವುದಾದರೆ, ನ್ಯಾಚುರಲ್ ಕೆಲಾಮಿಟೀಸ್ ಕಾಂಪನಸೇಷನ್ ನಮಗೆ ಕೊಟ್ಟಿರತಕ್ಕದ್ದು ಬಹಳ ಕಡಿಮೆ, ಆ ಬಗ್ಗೆ ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಜಮಾ ಖರ್ಚು ೬ ತಿಂಗಳ ಅವಧಿಯಲ್ಲಿ ಆಗಿದೆ ಎಂಬ ವಿವರಗಳನ್ನು ಮಾನ್ಯ ಅಧ್ಯಕ್ಷರು ನಮಗೆ ತರಿಸಿಕೊಟ್ಟಿದ್ದಾರೆ. ನ್ಯಾಚುರಲ್ ಕೆಲಾಮಿಟಿ ಸಲುವಾಗಿ ಬಜೆಟ್ಟಿನಲ್ಲಿ ಇಟ್ಟಿರುವ ಹಣ ೬೪೦ ಲಕ್ಷ ರೂಪಾಯಿಗಳಾದರೆ ೬ ತಿಂಗಳ ಅವಧಿಯಲ್ಲಿ ಇವರು ಖರ್ಚು ಮಾಡಿರುವುದು ೨೨೦ ಲಕ್ಷ ರೂಪಾಯಿಗಳು ಮಾತ್ರ. ನಾನು ನಿನ್ನೆ ಒಂದು ಪ್ರಶ್ನೆ ಕೇಳಿದ್ದೆ. ನಮ್ಮ ಸಂಡೂರು ತಾಲ್ಲೂಕಿನಲ್ಲಿ ಅಕ್ಟೋಬರ್ ತಿಂಗಳಲ್ಲಿ

ವಿಪರೀತ ಮಳೆಯಾಗಿ ಒಬ್ಬ ಸತ್ತಿದ್ದಾನೆ, ಕಬ್ಬಿಣದ ಅದಿರು ತುಂಬಿದ್ದ ಲಾರಿ ಮಗುಚಿ ಬಿದ್ದಿದೆ, ಮತ್ತು ಬೆಳೆ ಎಲ್ಲಾ ನಾಶವಾಗಿದೆ. ಹೀಗಾಗಿ ಒಟ್ಟು ಒಂದು ಲಕ್ಷದ ೨೦ ಸಾವಿರ ರೂಪಾಯಿ ನಷ್ಟವಾಗಿದ್ದರೆ ಮಾನ್ಯ ಕಂದಾಯ ಸಚಿವರು ೮೫೦೦ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ನಷ್ಟದ ಮೊತ್ತಕ್ಕೂ ಪರಿಹಾರದ ಮೊತ್ತಕ್ಕೂ ಸಂಬಂಧವಿಲ್ಲ ದಂತಾಗಿದೆ. ಈ ಹೆಡ್ ಕೆಳಗೆ ಇಷ್ಟೊಂದು ಹಣ ಇಟ್ಟುಕೊಂಡಿದ್ದರೂ ಏತಕ್ಕೆ ನೊಂದವರಿಗೆ ಕೊಡುವುದಕ್ಕಾಗುತ್ತಿಲ್ಲ ? ರೈತರಿಗೆ ಅನ್ಯಾಯವಾಗಿದೆ, ಮಳೆ ಬೆಳೆ ಇಲ್ಲದೆ ತೊಂದರೆ ಆಗಿದೆ ಪರಿಹಾರ ಕೊಡಿ ಎಂದರೆ ಹಣ ಇಲ್ಲ ಎನ್ನುತ್ತಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ನಮ್ಮ ಸಿಟ್ಟಿಂಗ್ ಫೀ ಮತ್ತು ಊರಿಗೆ ಹೋಗುವುದಕ್ಕೆ ಬರುವುದಕ್ಕೆ ಎನ್. ಎಸ್. ಸಿ. ಕೊಡದಿದ್ದರೆ ಪರವಾಗಿಲ್ಲ. ಇಲ್ಲದಿದ್ದರೆ ಹೋಟೆಲಿಗೂ ಎನ್. ಎಸ್. ಸಿ.ಯನ್ನೇ ಕೊಡಬೇಕಾಗುತ್ತದೆ. ಅದನ್ನೂ ಕೊಡುತ್ತಾರೋ ಏನೋ ವೀರಣ್ಣನವರು ಮನಸ್ಸು ಮಾಡಿದರೆ. ಅರಿಯರ್ಸ್ ಎಲ್ಲಾ ಎನ್ ಎಸ್. ಸಿ ಆಗಿದೆ. ಇನ್ನು ಮೇಲೆ ಅದೇ ಕರೆನ್ಸಿ ಆಗಿ ಬಿಡುತ್ತದೆ ಅದರ ಬಗ್ಗೆ ಈಗ ವಿವರಕ್ಕೆ ಹೋಗುವುದಿಲ್ಲ. ಈ ರೀತಿ ಅಲಾಟ್‌ಮೆಂಟ್ ಆಗಿದ್ದರೂ ಖರ್ಚು ಮಾಡದೆ ಉಳಿಸಿಕೊಂಡಿರತಕ್ಕ ಹಣವನ್ನು ಅವಶ್ಯಕತೆ ಬಿದ್ದ ಸಂದರ್ಭದಲ್ಲಿ ಖರ್ಚು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಜಿಲ್ಲಾಧಿಕಾರಿಗಳಿಗೆ ೮೦೦ ರೂಪಾಯಿಗಳ ವರೆಗೆ ಪರಿಹಾರ ಕೊಡುವುದಕ್ಕೆ ಅಧಿಕಾರ ಇದೆ. ಲಕ್ಷಾಂತರ ರೂಪಾಯಿ ನಷ್ಟವಾದರೂ ಅವರು ಕೊಡತಕ್ಕ ಪರಿಹಾರ ೮೦೦ ರೂಪಾಯಿಗಳು ಮಾತ್ರ.

ನನ್ನ ಕ್ಷೇತ್ರದಲ್ಲಿ ಅದೇ ತಿಂಗಳಲ್ಲಿ ಒಂದು ಗುಡಿಸಲಿಗೆ ಅಕಸ್ಮಾತ್ ಬೆಂಕಿ ಬಿದ್ದು ಗಂಡ ಹೆಂಡತಿ ಇಬ್ಬರೂ ಸತ್ತು ಹೋದರು ಅವರ ಕುಟುಂಬಕ್ಕೆ ಪರಿಹಾರ ಕೊಡಿ ಎಂದು ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ. ಅದಕ್ಕೆ ೫ ಸಾವಿರ ರೂಪಾಯಿ ಮಂಜೂರು ಮಾಡಿದ್ದೇವೆ ಎಂದು ನಿನ್ನೆ ನನಗೆ ಉತ್ತರ ಬಂದಿದೆ. ಕೆಲವು ಮುಖ್ಯವಾದ ಘಟನೆಗಳು ನಡೆದಾಗ ಅಕಸ್ಮಾತ್ ಮಳೆಯಿಂದ ನಷ್ಟ ಆದರೆ ಈ ಹೆಡ್‌ನಲ್ಲಿ ಹಣ ಇಟ್ಟುಕೊಂಡು ಏತಕ್ಕೆ ಪರಿಹಾರ ಮಂಜೂರು ಮಾಡುವುದಿಲ್ಲ? ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವ ೫೦೦ ರೂಪಾಯಿಗಳ ಅಧಿಕಾರವನ್ನು ಜಾಸ್ತಿ ಮಾಡಿ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಎಲ್ಲಾ ರೈತರೂ ವಿಧಾನಸೌಧಕ್ಕೆ ಅರ್ಜಿ ತೆಗೆದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲೇ ಇರುವ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗುತ್ತಾರೆ. ಐದಾರು ಸಾವಿರ ರೂಪಾಯಿ ಮಂಜೂರು ಮಾಡುತಕ್ಕ ಅಧಿಕಾರ ಅವರಿಗಿದ್ದರೆ ಅವರೇ ಕೊಡುತ್ತಾರೆ. ಅದು ಇಲ್ಲಿಯವರೆಗೆ ಸರ್ಕಾರಕ್ಕೆ ಬರಬೇಕಾದ ಅಗತ್ಯ ಇಲ್ಲ, ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕಾಯಬೇಕಾದ ಅವಶ್ಯಕತೆ ಇಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಮಂಜೂರು ಮಾಡುವುದಕ್ಕೆ ಇರುವ ಅಧಿಕಾರವನ್ನು ಜಾಸ್ತಿ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಹೆಂಡ ಕುಡಿಸುವ ಬಗ್ಗೆ ದಲಿತ ಸಂಘರ್ಷ ಸಮಿತಿಯವರು ಪ್ರತಿಭಟನೆ ಮಾಡಿದರು, ಹೆಂಡ ಬೇಡ. ಭೂಮಿ ಕೊಡಿ. ಎಂದು ಪ್ರತಿಭಟನೆ ಮಾಡಿದರು. ಏಕೆಂದರೆ ಈಗ ಕುಡಿಸುತ್ತಿರುವುದು ಈಚಲು ಗಿಡದ ಹೆಂಡ ಅಲ್ಲ, ಕ್ಲೋರಲ್ ಹೈಡ್ರೇಟ್. ಮೊನ್ನೆ ಜೆ. ಎಚ್. ಪಟೇಲ್ ಅವರು ಇದರ ಬಗ್ಗೆ ಸುದೀರ್ಘವಾಗಿ ದೊಡ್ಡ ಭಾಷಣ ಮಾಡಿದರು. ಅವರ ಭಾಷಣವನ್ನು ನಾನು ಪೂರ್ಣವಾಗಿ ಕೇಳಿದೆ.

ಒಬ್ಬ ಮಾನ್ಯ ಸದಸ್ಯರು.—ಅದರಿಂದ ಪರಿವರ್ತನೆ ಆಗಿದ್ದೀರಾ?

ಶ್ರೀ ಯಂ. ಭೂಪತಿ.—ಪರಿವರ್ತನೆ ನಾನು ಆಗಬೇಕಾಗಿಲ್ಲ. ಅವರು ಆಗಬೇಕು ಏಕೆಂದರೆ ಅವರು ಒಂದು ಮಾತು ಹೇಳಿದರು. ಇಡೀ ಪ್ರಪಂಚದಲ್ಲಿ ಯಾವುದೇ ದೇಶ, ಯಾವುದೇ ರಾಜ್ಯ ಸಂಪೂರ್ಣವಾಗಿ ಲಿಕ್ಕರ್ ತೆಗೆದುಹಾಕಿ ಆಡಳಿತ ಮಾಡಿಲ್ಲ. ಆ ರೀತಿ ಮಾಡುವುದಕ್ಕೆ ಸಾಧ್ಯ ಇಲ್ಲವೊ ಎಂದು. ಗುಜರಾತಿನಲ್ಲಿ ತೆಗೆದುಹಾಕಿದ್ದಾರೆ. ಅವರು ಹೇಗೆ ಸರ್ಕಾರ ನಡೆಸುತ್ತಿದ್ದಾರೆ ? ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತದೆ ಎಂಬ ಒಂದೇ ಅಭಿಪ್ರಾಯ ಅವರಿಗಿದೆ. ಈ ಆದಾಯವನ್ನು ಶ್ರೀಮಂತರು ಕೊಡುತ್ತಿಲ್ಲ. ಒಬ್ಬ ಹಮಾಲಿ, ಕೃಷಿ ಕಾರ್ಮಿಕ, ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕ ನಾಲ್ಕನೇ ದರ್ಜೆ ಕಾರ್ಮಿಕ ಅವನು ಹೆಂಡ ಸಾರಾಯಿ ಕುಡಿಯುತ್ತಾನೆ. ಎಷ್ಟೇ ಸಮಾಜಕಲ್ಯಾಣ ಕಾರ್ಯಕ್ರಮ ಮಾಡಿ ಪರಿಶಿಷ್ಟ ಜಾತಿ ಮತ್ತು ವರ್ಗಗಳು ಮತ್ತು ಹಿಂದುಳಿದವರ್ಗಗಳಿಗೆ ಆಂಟಿ ಪಾವರ್ಟಿ ಪ್ರೋಗ್ರಾಂ ಮಾಡಿದರೂ ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ಹೆಂಡ ಸಾರಾಯಿ ಮೂಲಕ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಜನರಲ್ಲಿ ಆದಾಯ ಕಡಿಮೆಯಾಗಿ ಪರ್ಚೇಸಿಂಗ್ ಕೆಪಾಸಿಟಿಯು ತುಂಬ ಕಡಿಮೆಯಾಗುತ್ತದೆ. ಬಡತನ ಜಾಸ್ತಿಯಾಗುತ್ತದೆ. ಗಂಡ ದುಡಿದಿದ್ದನ್ನು

ಸಾರಾಯಿ ಅಂಗಡಿಗೆ ಕೊಟ್ಟರೆ ಹೆಂಡತಿ ದುಡಿದದ್ದನ್ನು ಅಂಗಡಿಗೆ ಕೊಟ್ಟು ಸಾಮಾನು ತರಬೇಕಾಗಿದೆ. ಹೆಂಡ ಸಾರಾಯಿಯಿಂದಾಗಿ ಕುಟುಂಬಗಳಲ್ಲಿ ಕಲುಷಿತ ವಾತಾವರಣ ನಿರ್ಮಾಣವಾಗಿ ವೈಮನಸ್ಸು ಕೂಡ ಜಾಸ್ತಿಯಾಗಿದೆ. ಇದನ್ನು ಕಂಟ್ರೋಲ್ ಮಾಡಬೇಕು. ಅದು ಬಿಟ್ಟು ನಿರುದ್ಯೋಗಿಗಳು ಅರ್ಜಿ ಹಾಕಿದ್ದರು, ಆದ್ದರಿಂದ ಜಾಸ್ತಿ ಅಂಗಡಿಗಳನ್ನು ಕೊಟ್ಟೆವು ಎಂದು ಹೇಳುವುದು ಸರಿಯಲ್ಲ. ಒಂದು ಪರ್ಸೆಂಟ್ ಮಾತ್ರ ಅಂಗಡಿಗಳು ಜಾಸ್ತಿಯಾಗಿರಬಹುದು ಎಂದು ಹೇಳಿದ್ದಾರೆ. ಒಂದು ಪರ್ಸೆಂಟ್ ಅಲ್ಲ, ೨೦-೩೦ ಪರ್ಸೆಂಟ್ ಜಾಸ್ತಿಯಾಗಿದೆ. ಅಂಕಿ ಅಂಶಗಳನ್ನು ಬೇಕಾದರೆ ನೋಡಿ. ಸರ್ಕಾರದವರು ಒಂದು ಕಡೆ ಜನರಿಗೆ ನೀರು ಕೊಟ್ಟಿದ್ದಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಬೋರ್‌ವೆಲ್‌ಗಳನ್ನು ತೆಗೆಸಿ ನೀರು ಕೊಟ್ಟಿದ್ದಾರೆ. ಆದರೆ ಅದಕ್ಕಿಂತ ಜಾಸ್ತಿ ಹೆಂಡ ಸಾರಾಯಿ ಕೊಟ್ಟಿದ್ದಾರೆ. ನೀರಿಗಿಂತ ಜಾಸ್ತಿ ಹೆಂಡ ಸಾರಾಯಿ ಕೊಟ್ಟಿದ್ದಾರೆ. ಬೋರ್‌ವೆಲ್ ಕೆಟ್ಟಿದೆ, ನೀರು ಬರುವುದಿಲ್ಲ ಎಂದು ಹೇಳಿದರೆ, ಇಂಜಿನಿಯರ್ ಬಂದು ರಿಪೇರಿ ಮಾಡುವುದಕ್ಕೆ ೧೦ ದಿವಸ ಬೇಕು. ಆದರೆ ಹೆಂಡ ಸಾರಾಯಿ ಮಾತ್ರ ತಕ್ಷಣ ಬರುತ್ತದೆ. ಹೆಂಡ ಸಾರಾಯಿ ಬರದೇ ಇರುವ ಹಳ್ಳಿ ಈ ರಾಜ್ಯದಲ್ಲಿ ಒಂದೂ ಇಲ್ಲ. ೧೦,೧೨,೧೪ ವರ್ಷದ ಕೂಲಿ ಮಾಡತಕ್ಕ ಸಣ್ಣ ಸಣ್ಣ ಹುಡುಗರಿಗೆ, ಯುವಕರಿಗೆ ಈ ಚಟ ದೊಡ್ಡ ಮಟ್ಟದಲ್ಲಿ ಅಂಟಿಕೊಂಡಿದೆ, ಅವರು ಸಂಪೂರ್ಣವಾಗಿ ಕೆಡುತ್ತಿದ್ದಾರೆ. ಈ ದಿಕ್ಕಿನಲ್ಲಿ ಬದಲಾವಣೆಗೆ ಯೋಚನೆ ಮಾಡಬೇಕು. ಎಸ್.ಎಸ್.ಎಲ್.ಸಿ. ಓದಿದ ನಿರುದ್ಯೋಗಿಗಳು ಎಷ್ಟು ಜನ ಅರ್ಜಿಗಳನ್ನು ಹಾಕಿ ಕೊಂಡಿದ್ದರು ? ೧೯೮೩ ರಿಂದ ಎಷ್ಟು ಜನರಿಗೆ ಪರವಾನಗಿ ಕೊಟ್ಟಿದ್ದಾರೆ ಎಂದು ತಿಳಿಸಿದರೆ ಇದು ನಿರುದ್ಯೋಗಿಗಳಿಗೆ ಅನುಕೂಲವಾಗತಕ್ಕ ಯೋಜನೆ ಆಗಿದೆ ಎಂದು ಅರ್ಥವಾಗುತ್ತದೆ. ನಾವು ಅದನ್ನು ತಿಳಿದುಕೊಳ್ಳುವುದಕ್ಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಸುಮ್ಮನೆ ಈ ತರಹ ಮಾತುಗಳನ್ನು ಹೇಳುವುದನ್ನು ಬಿಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಭ್ರಷ್ಟಾಚಾರ ಎಂಬುದು ಈವತ್ತಿನ ದಿವಸದ ವಿಷಯವೇ ಅಲ್ಲ. ಮಾನ್ಯ ಎಂ. ಎಸ್. ಕೃಷ್ಣನ್ ಅವರು ಈ ಬಗ್ಗೆ ಮಾತನಾಡಿದರು. ಭ್ರಷ್ಟಾಚಾರ ಎಂಬುದು ಇಷ್ಟೇನೇ ಅಲ್ಲ ಎನ್ನುವ ಪರಿಸ್ಥಿತಿಯಾಗಿದೆ. ಏಕೆಂದರೆ ಬೋಫೋರ್ಸ್ ಪ್ರಕರಣದಲ್ಲಿ ೫೦-೬೦ ಕೋಟಿ ರೂಪಾಯಿಗಳ ಕಮಿಷನ್, ಲಂಚ ತೆಗೆದುಕೊಂಡಿದ್ದಾರೆ. ಇಡೀ ದೇಶದಲ್ಲಿ ನಮ್ಮ ಪಾರ್ಟಿ ಯವರು ಬೇರೆಯವರು ಎಲ್ಲರೂ ಸೇರಿ ೧೦ ಲಕ್ಷ ಜನ ಪ್ರದರ್ಶನ ಮಾಡಿದ್ದೇವೆ. ಇದರಿಂದ ಈ ದೇಶದಲ್ಲಿ ಮಾನ್ಯತೆ ಸಿಕ್ಕುತ್ತದೆಂದು ನಾವು ಅಂದುಕೊಂಡಿಲ್ಲ. ಆದರೆ ಇದನ್ನು ಕೈಬಿಡುವುದಕ್ಕೂ ಆಗುವುದಿಲ್ಲ. ಭ್ರಷ್ಟಾಚಾರದ ಬಗ್ಗೆ ಪ್ರಾಮಾಣಿಕವಾಗಿ ಯೋಚನೆ ಮಾಡಬೇಕು. ಮೊನ್ನೆ ಲೋಕಾ ಯುಕ್ತರ ಬಗ್ಗೆ ಚರ್ಚೆ ಆಯಿತು. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಅದು ತಪ್ಪಾಗುತ್ತದೆ. ಈ ಮನೆಯ ಸದಸ್ಯರು ಮಂತ್ರಿಗಳು ಮತ್ತು ಶಾಸಕರ ಪ್ರಾಪರ್ಟಿ ಡಿಕ್ಲೇರೆಷನನ್ನು ಪ್ರತಿ ವರ್ಷ ಕೊಡುತ್ತೇವೆ ಲೋಕಾಯುಕ್ತರಿಗೆ. ನಾನು ಪ್ರಾಪರ್ಟಿ ಡಿಕ್ಲೇರೇಷನ್ ಕೊಡುವುದನ್ನು ಮರೆತಿದ್ದೆ. ಆದ್ದರಿಂದ ಮಾರನೇ ದಿನ ಪೇಪರ್‌ನಲ್ಲಿ ನನ್ನ ಹೆಸರು ಬಂತು ಕೊಟ್ಟಿಲ್ಲ ಎಂದು. ನಾನು ಲೋಕಾಯುಕ್ತ ಆಫೀಸಿಗೆ ಹೋಗಿ ರಿಜಿಸ್ಟ್ರಾರ್ ಹತ್ತಿರ ನಾನು ಪ್ರಾಪರ್ಟಿ ಡಿಕ್ಲರೇಷನ್ ಮಾಡಿಲ್ಲ. ಈಗ ಕೊಡಬಹುದೆ ಎಂದು ಕೇಳಿದೆ.

೩-೩೦ ಪಿ. ಎಂ.

ನಂತರ ಅಲ್ಲೇ ಅದರ ಡೀಟೈಲ್ಸ್ ತೆಗೆದುಕೊಂಡು ಅಲ್ಲೇ ಬರೆದುಕೊಟ್ಟು ಬಂದೆ. ನಾನು ಅಲ್ಲಿನ ರಿಜಿಸ್ಟ್ರಾರ್ ಹತ್ತಿರ ಮಾತನಾಡಿದೆ. ನಾವು ಆಸ್ತಿ ಡಿಕ್ಲರೇಷನ್ ಏನು ಕೊಟ್ಟಿದ್ದೇವೆ, ಅದೇ ಗ್ಯಾರಂಟಿ ಎಂಬುದು ಏನು ? ಏನು ನಂಬಿಕೆ ಇದನ್ನು ವೆರಿಫಿಕೇಷನ್ ಮಾಡುವಂತಹ ವ್ಯವಸ್ಥೆ ಇದೆಯೇ ? ಒಟ್ಟು ಕುಟುಂಬದಲ್ಲಿ ಆಸ್ತಿ ಇಷ್ಟು ಇದೆ. ಭೂಮಿ ಇಷ್ಟು ಇದೆ, ವೆಹಿಕಲ್ಸ್ ಇಷ್ಟು ಇವೆ ಎಂಬುದಾಗಿ ಹೇಳಬಹುದು. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಕೊಡುತ್ತಾರೆ. ಬೇರೆ ಮಂತ್ರಿಗಳೂ ಕೂಡ ಕೊಡುತ್ತಾರೆ. ಈ ಬಗ್ಗೆ ಮಾನ್ಯ ಜೀವರಾಜ್‌ಆಳ್ವರವರು ಆಸ್ತಿ ಬಗ್ಗೆ ಡಿಕ್ಲರೇಷನ್ ಕೊಟ್ಟಿದ್ದಾರೆ. ಅದರಲ್ಲಿ ಏನು ಕೊಟ್ಟಿದ್ದಾರೆಂದರೆ, ೮೦ ಲಕ್ಷ ಸಾಲ, ಒಂದೂವರೆ ಲಕ್ಷದ ಮನೆ. ಇಷ್ಟು ಮಾತ್ರ ನಂತರ ಸ್ವಲ್ಪ ಡಿಪಾಜಿಟ್. ಇದನ್ನು ಯಾರಾದರೂ ನಂಬುವುದಕ್ಕೆ ಸಾಧ್ಯವೆ ? ಇವರ ಮೇಲೆ ವೆರಿಫಿಕೇಷನ್ ಮಾಡತಕ್ಕ ಪ್ರಾವಿಜನ್ ಲೋಕಾಯುಕ್ತದ ಕಾನೂನಿನಲ್ಲಿ ಇಲ್ಲ. ಆ ಬಗ್ಗೆ ತಿದ್ದುಪಡಿ ಬರಬೇಕಾಗಿದೆ. ನಾವು ಏನು ಆಸ್ತಿ ಬಗ್ಗೆ ಡಿಕ್ಲರೇಷನ್ ಕೊಡುತ್ತೇವೆ. ಅದೇ ಕೊನೆ. ಅದಕ್ಕೆ ರಿಜಿಸ್ಟ್ರಾರ್ ಏನು ಹೇಳಿದರು ಎಂದರೆ ನಾವು ಏನು ಮಾಡುವುದಕ್ಕಾಗುತ್ತದೆ ? ನೀವು ಏನು ಕೊಡುತ್ತೀರೋ ಅದನ್ನೇ ಫೈಲಿಗೆ ಹಾಕಿಕೊಳ್ಳುತ್ತೇವೆಂದು. ನಿಮ್ಮಲ್ಲಿ ಪ್ರಾಮಾಣಿಕತೆ ಬರಬೇಕೆಂದಿದ್ದರೆ

ಲೋಕಾಯುಕ್ತದಂತಹ ಸಂಸ್ಥೆಯನ್ನು ಇಲ್ಲಿ ತಂದಿದ್ದೇವೆಂದು ಪ್ರತಿಷ್ಠೆಯಾಗಿ ಹೇಳತಕ್ಕ ಮಾತನ್ನು ಬಿಟ್ಟು ಆಸ್ತಿಯ ಬಗ್ಗೆ ಏನು ಘೋಷಣೆಯನ್ನು ಮಾಡುತ್ತೇವೆ, ಅದರ ಮೇಲೆ ವೆರಿಫಿಕೇಷನ್ ಮಾಡತಕ್ಕ ಬಗ್ಗೆ ಇರತಕ್ಕ ಕಾನೂನಿಗೆ ತಿದ್ದುಪಡಿ ಬರಬೇಕಾಗಿದೆ. ನಿಜವಾಗಿಯೂ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವ ಕಾರ್ಯಕ್ರಮದಲ್ಲಿ ನಿಮಗೆ ನಂಬಿಕೆ ಇದ್ದರೆ, ಕೂಡಲೇ ಆ ಬಗ್ಗೆ ಲೋಕಾಯುಕ್ತ ಕಾನೂನಿಗೆ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಎಂಬುದಾಗಿ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನೊಂದೇ ಒಂದು ವಿಚಾರವನ್ನು ಹೇಳುತ್ತೇನೆ. ಅದೇನೆಂದರೆ, ಅನಧಿಕೃತವಾಗಿ ಸಾಗುವಳಿ ಮಾಡತಕ್ಕ ಭೂಮಿಯನ್ನು ಸಕ್ರಮಗೊಳಿಸುವಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡು, ಬಂದ ಮೇಲೆ ಆ ಬಗ್ಗೆ ಜಂಟೀ ಸಲಹಾ ಸಮಿತಿಯೊಂದನ್ನೂ ಕೂಡ ರಚಿಸಲಾಯಿತು. ಆ ಜಂಟಿ ಸಲಹಾ ಸಮಿತಿಯಲ್ಲಿ ನಾನೂ ಕೂಡ ಒಬ್ಬ ಸದಸ್ಯನಾಗಿದ್ದೆ. ಆ ಜಂಟಿ ಸಲಹಾ ಸಮಿತಿಯು ತನ್ನ ವರದಿಯನ್ನೂ ಕೂಡ ಕೊಟ್ಟಿದೆ. ಆ ವರದಿಯನ್ನು ಕೊಟ್ಟು ಈಗಾಗಲೇ ೬ ತಿಂಗಳ ಮೇಲೆ ಆಯಿತು. ಆದರೂ ಇದುವರೆವಿಗೂ ಆ ವರದಿ ಏಕೆ ಇಲ್ಲಿ ಬರುತ್ತಿಲ್ಲವೆಂಬುದು ನನಗೆ ಅರ್ಥವಾಗುತ್ತಿಲ್ಲ. ಇದರ ಹಿಂದೆ ಏನು ಮಸಲತ್ತು ನಡೆಯುತ್ತಿದೆಯೋ ನಾನು ಕಾಣೆ.

ಶ್ರೀ ಆರ್. ಎಲ್. ಜಾಲಪ್ಪ.—ಈಗ ಬರುತ್ತಿದೆ.

ಶ್ರೀ ಯು. ಭೂಪತಿ.—ಈ ಬರುತ್ತದೆಯೋ. ಬಂದರೆ ಆ ಬಗ್ಗೆ ಚರ್ಚೆ ಮಾಡೋಣ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರತಕ್ಕ, ಕಂದಾಯ ಇಲಾಖೆಗೆ ಸಂಬಂಧಪಟ್ಟ ಭೂಮಿ, ಕರ್ನಾಟಕ ರಾಜ್ಯದಲ್ಲಿ ಸಿ ಅಂಡ್ ಡಿ. ಲ್ಯಾಂಡ್ ಎಂಬುದಾಗಿ ೫೦ ಸಾವಿರ ಎಕರೆ ಇದೆ. ಅಂದರೆ ೨೦ ಸಾವಿರ ಹೆಕ್ಟೇರ್. ಈ ೫೦ ಸಾವಿರ ಎಕರೆ ಭೂಮಿಯನ್ನು ಕಂದಾಯ ಇಲಾಖೆ ಕಲವು ವರ್ಷಗಳ ಹಿಂದೆ ಅಲ್ಲಿ ಸಸಿಗಳನ್ನು ನೆಡತಕ್ಕ ಕಾರ್ಯಕ್ರಮಕ್ಕಾಗಿ ಬರೀ ಪೇಪರ್ ಮೇಲೆ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದೆ. ಆದರೆ ನನಗೆ ಗೊತ್ತಿರುವ ಪ್ರಕಾರ ೪೦ ಸಾವಿರ ಎಕರೆ ಭೂಮಿಯಲ್ಲಿ ಯಾವುದೇ ರೀತಿಯ ಸಸಿಗಳನ್ನು ನೆಟ್ಟಿಲ್ಲ. ಅದನ್ನು ರೈತರು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಇತ್ತೀಚೆಗೆ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿರತಕ್ಕಂತಹ ರೈತರು ಏನು ಇದ್ದಾರೆ, ಅದನ್ನು ಅವರಿಗೇ ರೆಗ್ಯುಲರೈಸ್ ಮಾಡುತ್ತೇವೆ ಎನ್ನುವ ಸುದ್ದಿ ಹೊರಗೆ ಬಂದಿದೆ. ಅದಕ್ಕಾಗಿ ಅರಣ್ಯ ಇಲಾಖೆಯವರು ಏನು ಮಾಡಿದ್ದಾರೆಂದರೆ ಯಾರು ಈ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ, ಆ ರೈತರಿಗೆ ಕಿರುಕುಳವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆ ಬಗ್ಗೆ ಅನೇಕ ಕಡೆಗಳಲ್ಲಿ ಗಲಾಟೆಯಾಗಿದೆ. ಚಿಕ್ಕಮಗಳೂರಿನಲ್ಲಿ ಗಲಾಟೆಯಾಗಿದೆ. ಬೆಳಗಾಂ ಜಿಲ್ಲೆಯಲ್ಲಿ ಗಲಾಟೆಯಾಗಿದೆ. ಸಿ. ಅಂಡ್ ಡಿ. ಲ್ಯಾಂಡ್‌ನಲ್ಲಿ ಸಾಗುವಳಿ ಮಾಡತಕ್ಕ ಸಾವಿರಾರು ರೈತರು ಏನು ಇದ್ದಾರೆ, ಅವರಿಗೆ ಸಹಾಯ ಮಾಡಬೇಕೆಂದಿದ್ದರೆ ಕೂಡಲೇ ಆ ಭೂಮಿಯನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಅದನ್ನು ಆಯಾ ರೈತರಿಗೆ ಬಿಡುಗಡೆ ಮಾಡಬೇಕು ಇಲ್ಲದಿದ್ದರೆ ಇದರಿಂದ ಬಹಳ ಅನ್ಯಾಯವಾಗುತ್ತದೆ. ಇದೇನೂ ರಿಸರ್ವ್ ಫಾರೆಸ್ಟ್ ಅಲ್ಲ. ರಿಸರ್ವ್ ಫಾರೆಸ್ಟ್ ಆಗಿದಿದ್ದರೆ, ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುತ್ತಿರಲಿಲ್ಲ, ಅದು ನನಗೂ ಗೊತ್ತಿದೆ. ಆ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಇದುವರೆವಿಗೂ ಯಾವ ಸಸಿಗಳನ್ನೂ ಬೆಳೆಸಿಲ್ಲ. ಅವರು ಸಸಿಗಳನ್ನು ಬೆಳೆಸಬೇಕೆಂದಿದ್ದರೆ, ಬೇಕಾದಷ್ಟು ಜಾಗ ಅವರಿಗೆ ಇದೆ. ಸಂಡೂರು ಫಾರೆಸ್ಟ್ ಇದೆ. ಅಲ್ಲಿ ಇದ್ದಂತಹ ಮರಗಳನ್ನು ಕಡಿದು ಎಲ್ಲಾ ಹಾಳಾಗಿ ಹೋಗಿದೆ. ನಂತರ ಮೈನ್ಸ್‌ಗೆ ಪರ್ಮಿಷನ್ ಕೊಟ್ಟಿದ್ದಾರೆ. ಅಲ್ಲಿರತಕ್ಕ ಗಿಡಗಳನ್ನು ತೆಗೆಯುವುದು ಒಂದು ಕಡೆಯಾದರೆ, ನಮ್ಮಲ್ಲಿರತಕ್ಕ ಸಂಪನ್ಮೂಲ ಐರನ್ ಓರ್ ಮ್ಯಾಂಗನೀಸ್ ಇವುಗಳನ್ನು ಮಾರಿ, ಇವತ್ತು ಆ ಸ್ಥಳದಲ್ಲಿ ಬರೀ ಮಣ್ಣನ್ನು ಕಾಣುತ್ತೇವೆ. ಪಶ್ಚಿಮ ಘಟ್ಟದ ರೀತಿ ಇಲ್ಲಿರುವಂತಹ ಅರಣ್ಯ ಹಾಳಾಗಿ ಇವತ್ತು ಬರೀ ಮಣ್ಣಿನ ರಾಶಿಯನ್ನು ಕಾಣುತ್ತಿದ್ದೇವೆ. ಟನ್‌ಗಟ್ಟಲೆ ಸ್ಯಾಂಡಲ್‌ವುಡ್ ಹೋಗುತ್ತಿರುವುದನ್ನು ತಡೆಯುವುದಕ್ಕಾಗಿಲ್ಲ. ಸ್ವಲ್ಪ ಜನರ ಮೇಲೆ ಕೇಸು ಹಾಕಿರಬಹುದು. ಇದರಿಂದ ಇಲಾಖೆ ಕೆಲಸ ಮಾಡುತ್ತಿದೆ ಎಂಬುದಾಗಿ ತಿಳಿದುಕೊಳ್ಳಬೇಡಿ. ಇದನ್ನು ತಡೆಯಬೇಕಾದ ಸಂದರ್ಭದಲ್ಲಿ ಆ ಸ್ಯಾಂಡಲ್‌ವುಡ್ ಹೋಗದಂತೆ ತಡೆಯಬೇಕಾಗಿದ್ದರೆ, ಚೆಕ್‌ಪೋಸ್ಟ್‌ಗಳನ್ನು ಜಾಸ್ತಿ ಮಾಡಬೇಕಾಗುತ್ತದೆ. ಸಿಬ್ಬಂದಿಯನ್ನು ಅಲ್ಲಿಗೆ ಜಾಸ್ತಿ ಪೋಸ್ಟ್ ಮಾಡಬೇಕಾಗುತ್ತದೆ. ವೈರ್‌ಲೆಸ್ ಸೆಟ್‌ಗಳನ್ನು ಅವರಿಗೆ ಕೊಡಬೇಕಾಗುತ್ತದೆ. ವೆಹಿಕಲ್ಸ್‌ಗಳನ್ನು ಕೊಡಬೇಕಾಗುತ್ತದೆ. ನೀವು

ಅವುಗಳಾವುದನ್ನೂ ಕೊಡುವುದಿಲ್ಲ. ಮಾನ್ಯ ಮಂತ್ರಿಗಳನ್ನು ಕೇಳಿದರೆ, ನಮ್ಮ ಇಲಾಖೆ ಇಷ್ಟು ಕೇಸುಗಳನ್ನು ಹಾಕಿದೆ ಎಂಬುದಾಗಿ ಹೇಳುತ್ತಾರೆ, ಇಷ್ಟು ಕೆಲಸ ಮಾಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಸಿ. ಅಂಡ್ ಡಿ. ಲ್ಯಾಂಡ್ ಏನು ಇದೆ, ಅದನ್ನು ಕೂಡಲೇ ಅರಣ್ಯ ಇಲಾಖೆಯಿಂದ ವಾಪಸ್ಸು ಕಂದಾಯ ಇಲಾಖೆಗೆ ತೆಗೆದುಕೊಂಡು ಅವನ್ನು ಆಯಾ ರೈತರಿಗೆ ಮಂಜೂರು ಮಾಡುವಂತಹ ವ್ಯವಸ್ಥೆ ಮಾಡಬೇಕು. ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ಈ ರೀತಿಯ ವಿಚಾರದಲ್ಲಿ ಹೇಳುವುದನ್ನು ಬಿಟ್ಟು ಸಣ್ಣಪುಟ್ಟ ವಿಚಾರದಲ್ಲಿ ಮಾತನಾಡಿದ್ದಾರೆಂದು ಹೇಳುತ್ತಾ ರಾಜ್ಯಪಾಲರ ಭಾಷಣ ಬಹಳ ನೀರಸವಾಗಿದೆ, ಬೇರೆ ಕೆಲವು ಒಂದೆರಡು ಅಂಕಿ ಅಂಶಗಳನ್ನು ಬಿಟ್ಟರೆ ಅವರಿಂದ ಉತ್ತಮವಾದ ಭಾಷಣ ಜನರಿಗೆ ನೀಡುವ ನಿಖರವಾದ ರೀತಿಯಲ್ಲಿ ಹೇಳುವಂತಹ ಮಾತಾಗಲಿ ಅದರಲ್ಲಿಲ್ಲವೆಂದು ಹಾಗೂ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು) —ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಜಂಟೀ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದೀರಿ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಕೂಡಾ ಇಂತಹ ಒಂದು ರಾಜ್ಯಪಾಲರ ಭಾಷಣ ಈ ಸದನದಲ್ಲಿ ನಡೆಯುತ್ತಾ ಬಂದಿವೆ. ಈ ಸಂಪ್ರದಾಯ ನಡೆಯುತ್ತಾ ಬಂದಿದ್ದರೂ ಕೂಡಾ ಯಾವ ಒಂದು ದಿಕ್ಕಿನಲ್ಲಿ ಒಬ್ಬ ಶ್ರೀಸಾಮಾನ್ಯನ ಬದುಕು ಹಸನು ಆಗಬೇಕಾಗಿತ್ತೋ ಆತನ ಜೀವನ ನೆಮ್ಮದಿಯಿಂದ ಇರಬೇಕಾಗಿತ್ತೋ ಅತ್ತ ಕಡೆ ಸರ್ಕಾರ ಗಮನ ಹರಿಸಿಲ್ಲ ಎಂದರೆ ಇದಕ್ಕಿಂಥ ದುಃಖಕರ ಸಂಗತಿ ಬೇರೊಂದಿಲ್ಲ ಜನತಾ ಸರ್ಕಾರ ಇರಲಿ, ಅಥವಾ ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರ ಇರಲಿ ಬಡವರ ಬಗ್ಗೆ ಘೋಷಣೆಗಳನ್ನು ಮಾಡಲಾಗುತ್ತಿದೆಯೋ ಹೊರತು ಪ್ರಾಕ್ಟಿಕಲ್ ಆಗಿ ಅವರ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಎಷ್ಟರಮಟ್ಟಿನ ಪ್ರಯತ್ನವನ್ನು ಗುರಿಯನ್ನು ಸಾಧಿಸಬೇಕೊ ಅಷ್ಟು ಸಾಧಿಸದೇ ಇರತಕ್ಕದ್ದು ದುಃಖಕರದ ಸಂಗತಿ. ಇವತ್ತು ಬಡವರ ಬಗ್ಗೆ ಅನೇಕ ಕಾರ್ಯಕ್ರಮಗಳು ಇವೆ. ವೃದ್ಧಾಪ್ಯವೇತನ, ವಿಧವಾವೇತನ, ತಾಳಿಭಾಗ್ಯ, ಗರ್ಭಿಣಿಯರಿಗೆ ಸಹಾಯ ಹಸಿರು ಕಾರ್ಡುಗಳನ್ನು ಹಂಚುವ ಕಾರ್ಯಕ್ರಮಗಳು ಬೇಕಾದಷ್ಟು ಇವೆ. ನಾವು ಯಾವುದೇ ಯೋಜನೆಯನ್ನು ತರುವಾಗ ಅವು ಶ್ರೀಸಾಮಾನ್ಯನಿಗೆ ತಲುಪುತ್ತವೇ ಎನ್ನುವುದನ್ನು ನೋಡಿದಾಗ ನಾವು ತಲೆ ತಗ್ಗಿಸಬೇಕಾಗುತ್ತದೆ. ಹಸಿರು ಕಾರ್ಡುಗಳು ಅರ್ಹರಿಗೆ ಸೇರದೇ ಅನರ್ಹ ವ್ಯಕ್ತಿಗಳ ಪಾಲಾಗಿವೆ. ಇದನ್ನು ಸರಿಪಡಿಸತಕ್ಕ ಕೆಲಸವನ್ನು ಶಾಸಕರು, ಸಚಿವರುಗಳು ಮಾಡಬೇಕು. ಅನರ್ಹ ವ್ಯಕ್ತಿಗಳು ಪಡೆಯಲು ಸಹಾಯ ಮಾಡಿದ ಅಧಿಕಾರಿಗಳ ಬಗ್ಗೆ ತಾವು ಗಮನಹರಿಸ ಬೇಕು. ಎಲ್ಲಾ ಕಾರ್ಯಕ್ರಮಗಳು ನೂರಕ್ಕೆ ನೂರು ಫಲಪ್ರದವಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೫ ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಹಿಂದೆ ಜನತಾ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ, ಜನತಾ ಸರ್ಕಾರ ಅಧಿಕಾರಕ್ಕೆ ಬಂದರೆ ಬಡವರ ಮೇಲೆ ಚಪ್ಪಡಿ ಎಳೆಯುತ್ತಾರೆಂದು ಅಪಪ್ರಚಾರ ಮಾಡಿದರು. ವೃದ್ಧಾಪ್ಯವೇತನ ಜನತಾ ಮನೆ ಹಾಗೂ ಸಾಲ ಕೊಡಿಸುವ ಕಾರ್ಯಕ್ರಮಗಳನ್ನೆಲ್ಲಾ ಜನತಾ ಸರ್ಕಾರ ನಿಲ್ಲಿಸುತ್ತದೆಂದು ಪ್ರಚಾರ ಮಾಡಿದರು. ಅಂತಹ ಯಾವ ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರ ನಿಲ್ಲಿಸದೇ ಮುಂದುವರಿಸಿಕೊಂಡು ಬಂದಿದೆ. ಅವರು ಹತ್ತು ಆಣೆ ಕೆಲಸ ಮಾಡಿದ್ದರೆ ನಾವು ೧ ರೂಪಾಯಿ ಕೆಲಸ ಮಾಡಿದ್ದೇವೆ. ಆದರೆ ನಮ್ಮ ಸರ್ಕಾರಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿಲ್ಲ. ಹಿಂದಿನ ಸರ್ಕಾರ ೨೫ ಪರ್ಸೆಂಟ್ ಕೆಲಸ ಮಾಡಿದರೆ ಅದಕ್ಕೆ ೭೫ ಪರ್ಸೆಂಟ್ ಪ್ರಚಾರ ಸಿಕ್ಕುತ್ತಿತ್ತು. ನಮ್ಮ ಸರ್ಕಾರ ೭೫ ಪರ್ಸೆಂಟ್ ಕೆಲಸ ಮಾಡಿದರೂ ಸಹ ೨೫ ಪರ್ಸೆಂಟ್ ಪ್ರಚಾರ ಸಿಕ್ಕುತ್ತಿಲ್ಲ. ಇವತ್ತು ಒಬ್ಬ ಶ್ರೀಸಾಮಾನ್ಯ ಬಿ. ಡಿ. ಓ. ಕಛೇರಿಗಾಗಲೀ, ತಹಶೀಲ್ದಾರ್‌ರವರ ಕಛೇರಿಗಾಗಲೀ ಯಾವುದೇ ತಡೆಯಿಲ್ಲದೇ ಹೋಗಿ ತನ್ನ ಕೆಲಸಗಳನ್ನು ಮಾಡಿಸಿಕೊಳ್ಳಬಹುದಾಗಿದೆ. ಸರ್ವೇ ಸಾಮಾನ್ಯವಾಗಿ ೩೦ ವರ್ಷಗಳಿಂದ ಜನ ಒಬ್ಬ ಹಳ್ಳಿ ಪುಡಾರಿಯನ್ನು ನಂಬಿಕೊಂಡು ಆತನು ಹೇಳಿದಹಾಗೆ ಸಾಲ ಸೋಲ ಮಾಡಿದ ಹಣವನ್ನು ಖರ್ಚು ಮಾಡಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಆದರೆ ಇವತ್ತಿನ ದಿವಸ ಜನತಾ ಕಾರ್ಯಕರ್ತ ಬಡವನ ಹತ್ತಿರ ಹೋಗಿ ತನ್ನದೇ ಹಣ ಖರ್ಚು ಮಾಡು ಕೊಂಡು ಬಸ್‌ನಲ್ಲಿ ಹೋಗಿ, ಕಾಫಿ ಕುಡಿದು ಆತನ ಕೆಲಸ ಮಾಡಿಸಿಕೊಡುತ್ತೇನೆಂದು ಈ ಜನ ಈತನನ್ನು ನಂಬುವುದಿಲ್ಲ. ಕಾರಣ ೩೦ ವರ್ಷಗಳಿಂದ ಆ ಪುಡಾರಿ · ನಂಬಿದ ಜನ ಈತನನ್ನು ಸುಲಭವಾಗಿ

ನಂಬುವುದಿಲ್ಲ. ಆ ಪುಡಾರಿ ಈ ರೈತನ ಹಣದಲ್ಲಿ ಬಸ್‌ನಲ್ಲಿ ಹೋಗಿ ತಿಂಡಿ ತಿಂದು ಕಛೇರಿಯಲ್ಲಿನ ಗುಮಾಸ್ತರಿಗೆ ನಿಯಮಾನುಸಾರ ಹಣವನ್ನು ಹಂಚಿಸಿ ಕೆಲಸ ಮಾಡಿಸುತ್ತಿದ್ದ. ಇಂದಿರಾಗಾಂಧಿಯವರು ಏನೆಲ್ಲಾ ಮಾಡಿಟ್ಟು ಹೋಗಿದ್ದಾರೆ, ಅದನ್ನು ಈ ಸರ್ಕಾರದವರು ನಡೆಸಿಕೊಂಡು ಬರುತ್ತಿದ್ದಾರೆಯಷ್ಟೇ ಎಂಬ ಭಾವನೆ ಬರುವಂತೆ ಆ ಜನ ಮಾಡಿದ್ದಾರೆ. ಜನತಾ ಸರ್ಕಾರ ಯಾವುದೇ ಕಾರ್ಯಕ್ರಮ ಹಾಕಿಕೊಂಡರೂ ಅದು ಇಂದಿರಗಾಂಧಿಯವರ ಕಾರ್ಯಕ್ರಮಗಳೆಂದೇ ಆ ಜನ ತಿಳಿದುಕೊಂಡಿದ್ದಾರೆ ಇಂತಹ ಹಸೀಸುಳ್ಳನ್ನು ಆ ಅವಿದ್ಯಾವಂತ ಜನರ ತಲೆಯಲ್ಲಿ ತುಂಬಿ, ಅರಿವಿಲ್ಲದ ಆ ಜನರಿಗೆಗೆ ತಿಳುವಳಿಕೆ ಇಲ್ಲದ ಹಾಗೆ ಮಾಡಿದ್ದಾರೆ. ಗರ್ಭಿಣಿಯರಿಗೆ ನೀಡುತ್ತಿರುವ ಹಣ, ಹಸಿರು ಕಾರ್ಡು ಹಂಚುವ ವ್ಯವಸ್ಥೆ ಜನತಾ ಸರ್ಕಾರ ತಂದಿದ್ದರೂ, ಅವರೇ ಇವನ್ನೆಲ್ಲಾ ತಂದಿದ್ದು ಎನ್ನುವಂತ ಅಪಪ್ರಚಾರ ಮಾಡುತ್ತಿರುವ ಆ ಜನರ ಬಗ್ಗೆ ಏನು ಹೇಳಿದರೂ ಸಾಲದು. ಇಂತಹ ಅವರ ನಾಚಿಕೆಗೇಡಿನ ವರ್ತನೆ ಬಗ್ಗೆ ನಾವು ಖಂಡಿಸಬೇಕಾಗುತ್ತದೆ.

ಸಾಲಮೇಳ ಇದು ಏನಾಗಿದೆಯೆಂದು ಹೇಳಬೇಕಾದರೆ, ಅದು ಸಾಲಮೇಳವಾಗಿಲ್ಲ, ಗೋಳುಮೇಳವಾಗಿದೆ. ನನ್ನ ಕ್ಷೇತ್ರವಾದ ನಂಜನಗೂಡಿನಲ್ಲಿ ಮಾನ್ಯ ಜನಾರ್ಧನ ಪೂಜಾರಿಯವರು ಬಂದರು ೫ ಸಾವಿರ ಅರ್ಜಿಗಳನ್ನು ಕಲೆಕ್ಟ್ ಮಾಡಿದರು. ಒಂದು ಅರ್ಜಿಯ ಬೆಲೆ ೫೦ ರೂಪಾಯಿ ಎಲ್ಲಾ ಅರ್ಜಿಗಳನ್ನು ಕಾಂಗ್ರೆಸ್ ಕಾರ್ಯಕರ್ತರ ಮುಖಾಂತರ ಸಂಗ್ರಹಿಸಿ ಸಾಲಮೇಳ ಮಾಡಿದರು. ಜೊತೆಗೆ ನಾಚಿಕೆಗೇಡಿನ ಸಂಗತಿ ಏನೆಂದರೆ ಸಾಲಮೇಳ ಮಾಡುವಾಗ ಕಾಂಗ್ರೆಸ್ ಬಾವುಟ ಹಾಕಿಕೊಂಡರು ಬ್ಯಾಂಕಿನ ಹಣ, ಸಾರ್ವಜನಿಕ ಹಣ, ಅದೇನು ಕಾಂಗ್ರೆಸ್‌ನವರ ಹಣವಲ್ಲ. ಹಣವನ್ನು ವಿತರಣೆ ಮಾಡತಕ್ಕ ಸಂದರ್ಭದಲ್ಲಿ ಆ ಕ್ಷೇತ್ರದ ಶಾಸಕರನ್ನು ಮರೆತರು. ನಮ್ಮನ್ನು ಸಾಲಮೇಳಕ್ಕೆ ಕರೆಯುವ ಸೌಜನ್ಯವನ್ನು ಅವರು ತೋರಲಿಲ್ಲ. ಇಲ್ಲಿ ನಮ್ಮ ಪ್ರತಿ ಪಕ್ಷದ ಸದಸ್ಯರು ಸಮಾರಂಭಕ್ಕೆ ನಮ್ಮನ್ನು ಕರೆಯಲಿಲ್ಲವೆಂದು ಆಪಾದಿಸುತ್ತಾರೆ. ಈ ರೀತಿ ಸಾಲಮೇಳವನ್ನು ಮಾಡುವುದರಿಂದ ಜನತಾ ಪಕ್ಷಕ್ಕೆ ಒಳ್ಳೆಯದಾಗಿದೆ. ಉದಾಹರಣೆಗೆ ಹೇಳುವುದಾದರೆ ೫ ಸಾವಿರ ಅರ್ಜಿಗಳಲ್ಲಿ ೫೦೦-೬೦೦ ಜನರಿಗೆ ಸಾಲ ಕೊಟ್ಟರು. ಉಳಿದ ೪೪೦೦ ಜನ ೨೦೦–೩೦೦ ರೂಪಾಯಿಗಳ ಲಂಚ ಕೊಟ್ಟಿದ್ದಾರೆ. ಅವರು ಈಗ ಲಂಚ ತೆಗೆದುಕೊಂಡವರ ಹೆಕ್ಕತ್ತಿನಪಟ್ಟಿ ಹಿಡಿದುಕೊಂಡು ಹೊಡೆಯುವ ಪರಿಸ್ಥಿತಿ ಬಂದಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ಜನಾರ್ಧನ ಪೂಜಾರಿಯವರಿಗೆ ಬಡವರ ಬಗ್ಗೆ, ದೀನದಲಿತರ ಬಗ್ಗೆ, ಹಿಂದುಳಿದವರ ಬಗ್ಗೆ ಕಾಳಜಿಯಿದ್ದರೆ, ಈ ರೀತಿ ಮಾಡುವುದು ಸರಿಯಲ್ಲ. ಮಂಡಲ ಪಂಚಾಯತಿ ಸೆಂಟರ್‌ಗಳಲ್ಲಿ ಗುಡಿ ಕೈಗಾರಿಕೆಗಳನು ಮಾಡಿ ಅಲ್ಲಿರತಕ್ಕ ನಿರುದ್ಯೋಗಿಗಳಿಗೆ ೫೦೦ ರೂಪಾಯಿಗಳ ಸಂಬಳ ಸಿಗತಕ್ಕ, ಒಂದು ಖಾಯಂ ಪರಿಹಾರ ನೀಡತಕ್ಕ ಕೆಲಸ ಮಾಡಲಿ. ಕೋಟ್ಯಾಂತರ ರೂಪಾಯಿಗಳನ್ನು ಸಾಲಮೇಳಕ್ಕಾಗಿ ವ್ಯಯ ಮಾಡುತ್ತೀರಿ. ಮಾನ್ಯ ಪಟೇಲ್‌ರವರು ಹೇಳುವ ಹಾಗೆ "ಕೊಟ್ಟವನು ಕೋಡಂಗಿ, ತೆಗೆದುಕೊಂಡವನು ಈರಭದ್ರ" ಆ ತರಹ ಆಗುವುದು ಬೇಡ. ಮಾನ್ಯ ಭೂಪತಿಯವರು ಹೇಳುತ್ತಿದ್ದರು. ಈ ಕೈಯಲ್ಲಿ ಕೊಟ್ಟು ಆ ಕೈಯಲ್ಲಿ ವಾಪಸ್ಸು ತೆಗೆದುಕೊಳ್ಳುತ್ತೀರಿ ಎಂದು. ಅಂದರೆ ಹಣ ಕೊಡುತ್ತೀರಿ ಹೆಂಡ ಸಾರಾಯಿ ಕುಡಿಸುತ್ತೀರಿ ಎಂದು ಹೇಳುತ್ತಿದ್ದರು. ಕುಡಿದು ಜನರು ಹಾಳಾಗುತ್ತಾರೆಂದು ಹೇಳುತ್ತಿದ್ದರು. ಪೂಜಾರಿಯವರು ಸಾಲಮೇಳಗಳನ್ನು ಮಾಡಿ ಕೊಡುವ ಹಣದಿಂದ ಜನರ ಜೀವನಮಟ್ಟ ಸುಧಾರಣೆಯಾಗುತ್ತದೆಯೇನು ? ಜನತಾ ಸರ್ಕಾರದ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ನೋಡಿ, ಅದರಿಂದ ಜನತಾ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತಿದೆಯೆಂದು ತಿಳಿದುಕೊಂಡು, ಅದಕ್ಕೋಸ್ಕರ ಇವರು ಸಾಲಮೇಳಗಳನ್ನು ಮಾಡುವ ಮುಖಾಂತರ ಜನಗಳನ್ನು ಆಕರ್ಷಿಸತಕ್ಕ ಸಂಚು ಮಾಡಿದರು. ಇವರಿಗೆ ಸಾಲಮೇಳಗಳನ್ನು ಮಾಡುವ ಮೂಲಕ ಬಡ ಜನರ ಜೀವನಮಟ್ಟ ಸುಧಾರಿಸುತ್ತದೆನ್ನುವ ಕಾಳಜಿ ಮಾತ್ರ ಎಳ್ಳಷ್ಟು ಇಲ್ಲ. ಸಾಲಮೇಳ ಅದೊಂದು ಗೋಳುಮೇಳವಾಗಿದೆ. ಅದನ್ನು ಬಿಟ್ಟು ಶಾಶ್ವತವಾದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡಬೇಕು. ಗುಡಿ ಕೈಗಾರಿಕೆಗಳನ್ನು ಮಾಡುವ ಕಡೆಗೆ ಕಾಂಗ್ರೆಸ್ ಮಿತ್ರರು ಚಿಂತನೆ ಮಾಡಬೇಕೆಂದು ತಮ್ಮ ಮುಖಾಂತರ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಬಡವರ ಬಗ್ಗೆ ಎಲ್ಲರೂ ಕಾಳಜಿ ವಹಿಸುತ್ತಾರೆ. ಉದಾಹರಣೆಗೆ ಹೇಳುವುದಾದರೆ ಅವರಿಗೆ ನೀರು ಕೊಡುವ ಕೆಲಸವನ್ನು ಮಾಡಬೇಕು ಮಂಡ್ಯ ಜಿಲ್ಲೆಯ ರೈತರು ಎಲ್ಲಾ ಜನಾಂಗದವರು ಷೆಡ್ಯೂಲ್ಡ್ ಕಾಸ್ಟ್‌ನವರು ಅಲ್ಪಸಂಖ್ಯಾತರ ಅವರಿಗೆ ಜಮೀನು ಇದ್ದರೆ ಅವರಿಗೆ ನೀರು ಕೊಡುವುದರಿಂದ ಅವರ ಆರ್ಥಿಕ ಮಟ್ಟ ಸುಧಾರಿಸುತ್ತದೆ ಅವರು ಮುಂದುವರಿಯುತ್ತಾರೆ. ಇವತ್ತು ಮಂಡ್ಯದಲ್ಲಿ ಹರಿಜನರು ಸ್ಕೂಟರ್, ಜೀಪ ಇಟ್ಟುಕೊಂಡು ಓಡಾಡುತ್ತಾರೆ. ಅವರ ಮಕ್ಕಳು ಇಂಜಿನಿಯರ್, ಡಾಕ್ಟರ್ ಓದಿರುತ್ತಾರೆ, ಅವರ ಆರ್ಥಿಕ

ಮಟ್ಟ ಚೆನ್ನಾಗಿದೆ. ಸಮಾಜದಲ್ಲಿ ಇತರೆ ಜನಾಂಗದವರು ಯಾವ ರೀತಿ ಬದುಕುತ್ತಾರೆ, ಅದೇ ರೀತಿ ಅವರು ಕೂಡ ಬದುಕುತ್ತಿದ್ದಾರೆ. ಆದ್ಯತೆ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ನೀರಾವರಿಗೆ ನೀರನ್ನು ಒದಗಿಸಿ ಕೊಡುವುದರಿಂದ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟತಕ್ಕ ಪ್ರಮೇಯ ಇರುವುದಿಲ್ಲ. ಸಣ್ಣ ನೀರಾವರಿ ಕೆರೆಕಟ್ಟೆಗಳ ನಿರ್ಮಾಣ. ಗಂಗಾ ಕಲ್ಯಾಣ ಯೋಜನೆ ಸಾಮೂಹಿಕ ನೀರಾವರಿ ಬಾವಿ ಯೋಜನೆ ಮಾಡುವುದರಿಂದ ಬಡ ರೈತರಿಗೆ ಅನುಕೂಲವಾಗುತ್ತದೆ. ಜನತಾ ಸರ್ಕಾರ ಬಂದ ಮೇಲೆ ಗಂಗಾ ಕಲ್ಯಾಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಆ ರೀತಿಯಲ್ಲಿ ಹೆಚ್ಚಿನ ಅವಕಾಶ ದೊರಕಿಸಿ ಕೊಡುವುದರಿಂದ ಹಿಂದುಳಿದ ವರ್ಗದವರು, ಬಡವರು ಇವರ ಆರ್ಥಿಕ ಮಟ್ಟ ಸುಧಾರಿಸಿ ಮುಂದೆ ಬರುತ್ತಾರೆ, ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಜೀತ ಪದ್ಧತಿಯನ್ನು ನಿರ್ಮೂಲನ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಿದೆ. ಜೀತ ವಿಮುಕ್ತರಿಗೆ ಪರಿಹಾರ ವನ್ನು ಸಹ ಕೊಡಲಾಗುತ್ತಿದೆ.

ಆರು ಸಾವಿರದ ಇನ್ನೂರೈವತ್ತು ರೂಪಾಯಿಗಳನ್ನು ಜೀತದಾಳುಗಳಿಗೆ ಕೊಡುವಾಗ ಇದರಲ್ಲಿ ಬಹುಶಃ ಎರಡು ಮೂರು ಸಾವಿರ ಕೂಡ ಆತನಿಗೆ ತಲುಪುತ್ತಿಲ್ಲ. ಮೈಸೂರು ಜಿಲ್ಲಾ ಪರಿಷತ್ತಿನಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು, ಅಲ್ಲಿ ಒಂದು ಸಲಹೆ ಬಂತು ಏನೆಂದರೆ, ಎಮ್ಮೆ ದನ ಕುರಿ ಕೊಡಿಸುವ ಬದಲು ಚೆಕ್ ಅನ್ನು ನೇರವಾಗಿ ಆತನಿಗೆ ಕೊಟ್ಟುಬಿಟ್ಟರೆ ಅವನಾದರೂ ತಿಂದುಕೊಂಡು ಬದುಕುತ್ತಾನೆ. ಅದರ ಬದಲು ಮಧ್ಯವರ್ತಿಗಳು ಇರಬಹುದು, ಅಧಿಕಾರಿಗಳು, ರಾಜಕಾರಣಿಗಳು ಇರಬಹುದು ಎಲ್ಲರೂ ಆತನಿಗೆ ಮೋಸ ಮಾಡುವುದರಿಂದ ಆತನಿಗೆ ಮೂರು ಸಾವಿರ ಕೂಡ ಕೈಗೆ ಸಿಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ನಾನು ವಿಚಾರ ಮಾಡಿದೆ. ಸಂತೆಗೆ ಹೋಗಿ ೭೦–೮೦ ಹಸುಗಳ ಜೊತೆ ತಂದರು. ಲಕ್ಷಾಂತರ ರೂಪಾಯಿಗಳ ಬಿಲ್ ಮಾಡಿದರು. ಆದರೆ ಇದರಲ್ಲಿ ಒಂದು ಜೊತೆ ಕೂಡ ಮನೆಯನ್ನು ತಲುಪಲಿಲ್ಲ. ಒಂದು ಎತ್ತನ್ನು ಖರೀದಿ ಮಾಡಿದ್ದು ಎಂದು ತೋರಿಸುವುದು. ಆತನಿಗೆ ಇನ್ನೂರು ರೂಪಾಯಿ ಕೊಟ್ಟುಬಿಡುವುದು. ನಾನು ಸತತವಾಗಿ ಇದನ್ನು ಸರಿಮಾಡಲು ಪ್ರಯತ್ನ ಪಟ್ಟೆ, ಆದರೆ ಪ್ರಯೋಜನವಾಗಲಿಲ್ಲ. ಬಡವರಿಗೆ ಆರು ಸಾವಿರದ ಇನ್ನೂರು ರೂಪಾಯಿ ಸರಿಯಾಗಿ ತಲುಪುತ್ತಿಲ್ಲ. ಮಧ್ಯವರ್ತಿಗಳು, ರಾಜಕಾರಣಿಗಳು, ಅಧಿಕಾರಿಗಳು ತನಗೆ ಮೋಸ ಮಾಡುತ್ತಿದ್ದಾರೆಂಬ ಅರಿವು ತಿಳುವಳಿಕೆ ಕೂಡ ರೈತನಿಗೆ ಇರುವುದಿಲ್ಲ. ಅನೇಕ ರೀತಿಯ ಅನ್ಯಾಯಗಳು, ಹಸಿರು ಕಾರ್ಡುಗಳಲ್ಲಿ, ವೃದ್ಧಾಪ್ಯವೇತನ, ವಿಧವಾವೇತನವಾಗಲೀ ಸರ್ಕಾರ ಬಡವರ ಕಲ್ಯಾಣ ಮಾಡಲಿಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ, ಅರ್ಹರಿಗೆ ಅದು ತಲುಪುತ್ತದೆಯೇ ಎನ್ನತಕ್ಕಂಥ ವಿಚಾರ ಮಾಡುವುದಕ್ಕೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಸಮಿತಿಯನ್ನು, ಜಾಗ್ರತ ಸಮಿತಿಯಿಂದಾಗಲೀ, ಹಿತರಕ್ಷಣಾ ಸಮಿತಿಯಿಂದಾಗಲೀ ಸಂಬಂಧಪಟ್ಟ ಶಾಸಕರು. ಅಧಿಕಾರಿಗಳು ಜೊತೆಗೆ ಅಧಿಕಾರೇತರರು ಯಾರು ಪ್ರಾಮಾಣಿಕರಿದ್ದಾರೆ ಅಂತಹ ವ್ಯಕ್ತಿಗಳನ್ನು ಹಾಕಿ ಸಮಿತಿಯನ್ನು ಮಾಡಿ ಇಂತಹ ಆಗುಹೋಗುಗಳನ್ನು ಗಮನಿಸತಕ್ಕಂಥ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ ಎಂದು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಲು ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕೆಂದರೆ ತಮಗೆ ಗೊತ್ತಿರಬಹುದು, ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸುಮಾರು ಎಂಟು ಸಾವಿರಕ್ಕಿಂತ ಹೆಚ್ಚು ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಟ್ಟು ರೈತಬಾಂಧವರಿಗೆ ಅನುಕೂಲವನ್ನು ಮಾಡಿದೆ. ನನ್ನ ಕ್ಷೇತ್ರವನ್ನು ತೆಗೆದುಕೊಂಡರೆ ನಾನು ಶಾಸಕನಾಗಿ ಬಂದಮೇಲೆ ಮೂವತ್ತೊಂದು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಇರಲಿಲ್ಲ. ಇವತ್ತು ಸುಮಾರು ೨೬–೨೭ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡತಕ್ಕಂಥ ಒಂದು ಕೆಲಸವನ್ನು ಒಳ್ಳೆಯ ಕಾರ್ಯವನ್ನು ಜನತಾ ಸರ್ಕಾರ ಮಾಡಿದೆ. ಇದರಲ್ಲಿ ಕೆಲವು ನ್ಯೂನತೆಗಳು ಇರಬಹುದು. ಆದರೆ ಜನತಾ ಸರ್ಕಾರ ಈ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ ಇಟ್ಟು ಎಂಟು ಸಾವಿರ ರೈತಬಾಂಧವರಿಗೆ ಪಂಪುಸೆಟ್ಟುಗಳನ್ನು ಹಾಕಿಸಿಕೊಟ್ಟಿದೆ. ಇಪ್ಪತ್ತು ವರ್ಷಗಳಲ್ಲಿ ಇದು ಆಗಿರಲಿಲ್ಲ. ಇಂತಹ ಒಳ್ಳೆಯ ಕೆಲಸವನ್ನು ಜನತಾ ಸರ್ಕಾರ ಮಾಡುತ್ತಿದೆಯೆಂಬ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನೊಂದು ವಿಚಾರ ಈ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತುಗಳ ಚುನಾವಣೆಗೆ ಸಂಬಂಧಪಟ್ಟಿದ್ದು. ಮಾನ್ಯ ವಿರೋಧ ಪಕ್ಷದವರು ಇಲ್ಲಿ ಇಲ್ಲ. ಇದೊಂದು ದುರ್ದೈವ. ಆದರೆ ಯಾವ ಜನ ಜನತೆಯ ಬಗ್ಗೆ, ಶ್ರೀಸಾಮಾನ್ಯನ ಬಗ್ಗೆ ಕುರಿತು ಚರ್ಚೆ ಮಾಡಬೇಕಿತ್ತೋ ಇದನ್ನು

ಮಾಡುವುದು ಬಿಟ್ಟು ತಮ್ಮ ಒಣ ಪ್ರತಿಷ್ಠೆಗೋಸ್ಕರ ನಮ್ಮ ಜೊತೆಯಲ್ಲಿ ಅವರು ಇಂತಹ ಚರ್ಚೆಯಲ್ಲಿ ಭಾಗವಹಿಸಲು ಹಿಂಜರಿದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ಸಲ ಹೇಳುತ್ತಿರುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಚುನಾವಣೆ ಬಂದಮೇಲೆ ಇವತ್ತು ರಕ್ತಪಾತವಾಗುತ್ತಿದೆ, ಮನೆಮನೆಯಲ್ಲಿ ವೈಷಮ್ಯ ಬೆಳೆಯುತ್ತಿದೆ, ಎಲ್ಲರೂ ಕಿತ್ತಾಡುತ್ತಾರೆ, ಊರು ಹಳ್ಳಿಗಳು ಹಾಳಾಗಿ ಬಿಟ್ಟಿವೆ ಎಂದು ಅನೇಕ ಸಂದರ್ಭದಲ್ಲಿ ಚರ್ಚೆ ಮಾಡಿದ್ದಾರೆ, ಅಧ್ಯಕ್ಷರೇ, ಇವತ್ತು ಒಂದು ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಕಿತ್ತಾಡುವುದಿಲ್ಲವೆ? ಹಿಂದೆ ಕೋರ್ಟು ಕಚೇರಿ ಎಂದು ಗಲಾಟೆ ಆಗಿಲ್ಲವೆ? ಒಬ್ಬರ ತಲೆ ಒಡೆದು ಇನ್ನೊಬ್ಬರು ಪೋಲೀಸ್ ಸ್ಟೇಷನ್‌ಗೆ ಹೋಗಿಲ್ಲವೆ? ಇದೆಲ್ಲಾ ನಮ್ಮ ಸಮಾಜದಲ್ಲಿ ಮೊದಲಿನಿಂದಲೂ ನಡೆದು ಬಂದಿರುವಂಥಾದ್ದು ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಆದರೆ ಒಂದು ಹೊಸ ವ್ಯವಸ್ಥೆಯನ್ನು ಶ್ರೀಸಾಮಾನ್ಯನಿಗೆ ತಲುಪಿಸತಕ್ಕಂಥ ರಾಜಕೀಯ ವಿಕೇಂದ್ರೀಕರಣ ಮಾಡುವಂಥ ಸಂದರ್ಭದಲ್ಲಿ ಕೆಲವು ನ್ಯೂನತೆಗಳು ಇರಬಹುದು, ಅಷ್ಟು ಮಾತ್ರಕ್ಕೇ ನಾವು ಈ ವ್ಯವಸ್ಥೆಯನ್ನೇ ಬದಲಾವಣೆ ಮಾಡಬೇಕು, ಇದು ಸರಿಯಲ್ಲ ಎನ್ನತಕ್ಕದ್ದು ಮೂರ್ಖತನದ ಮಾತಾಗುತ್ತದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ಅನೇಕ ವಿಚಾರಗಳು ಹೇಳಲಿಕ್ಕೆ ಇದೆ. ಆದರೆ ವೇಳೆ ಕಡಿಮೆ ಇರುವುದರಿಂದ ಕೆಲವು ವಿಷಯಗಳನ್ನು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ ನಿಜವಾಗಿಯೂ ಲಾ ಅಂಡ್ ಆರ್ಡರ್ ಬಗ್ಗೆ ಮೈಸೂರು, ಬೆಂಗಳೂರು ಅಥವಾ ಮಹಾನಗರಗಳಲ್ಲಿ ಶ್ರೀಸಾಮಾನ್ಯರನ್ನು ಹೋಗಿ ಕೇಳಿದರೆ ಎಷ್ಟು ಸಂತೋಷ ಪಡುತ್ತಿದ್ದಾರೆ ಎಂದು ನೋಡಬಹುದು. ಡಕಾಯಿತರ ವಿಚಾರ ಇದೆ. ಹೊರಗಡೆಯವರು ಬಂದು ನಮ್ಮ ರಾಜ್ಯದಲ್ಲಿ ಬೇಕೂ ಎಂದು ಹೇಳಿ ಈ ರೀತಿ ದುರುದ್ದೇಶಪೂರಿತವಾಗಿ ಪಟ್ಟಭದ್ರ ಹಿತಾಶಕ್ತಿಗಳು ಮಾಡುತ್ತಿರುವುದನ್ನು ಬಿಟ್ಟರೆ ಬೇರಾವ ಪರಿಸ್ಥಿತಿ ಇಲ್ಲ. ರೌಡಿಸಂ ಮೊದಲು ಇತ್ತು, ಚಾಕು ಚೂರಿ ಸಂಸ್ಕೃತಿ ಬಹಳವಾಗಿತ್ತು, ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಬೀದಿಗೆ ಬರುವುದಕ್ಕೆ ಆಗುತ್ತಿರಲಿಲ್ಲ. ಹಾಗೆಯೇ ಪಟ್ಟಣಗಳಲ್ಲಿ ಮರ್ಯಾದಸ್ಥ ಹೆಣ್ಣುಮಕ್ಕಳು ನಿರ್ಭಯವಾಗಿ ಓಡಾಡುವಂಥ ಪರಿಸ್ಥಿತಿ ಇರಲಿಲ್ಲ. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಹನ್ನೆರಡು ಗಂಟೆ ರಾತ್ರಿ ಹೊತ್ತು ಬೇಕಾದರೂ ಹೆಂಗಸರು ನಿರ್ಭಯವಾಗಿ ಓಡಾಡಬಹುದು. ಆದರೆ ಡಕಾಯಿತ ಜನ ಆಯ್ಕೆ ಮಾಡಿದಂಥ ಗ್ರಾಮಗಳಲ್ಲಿಯೂ ರಾತ್ರಿ ಹೊತ್ತು ಜನ ಪ್ರವೇಶಿಸಿ ಮಾಡುತ್ತಿದ್ದಾರೆ. ಶ್ರೀಸಾಮಾನ್ಯರು ಹೆಣ್ಣುಮಕ್ಕಳು ಹಳ್ಳಿಗಳಲ್ಲಿ ರಾತ್ರಿಹೊತ್ತು ಯಾವುದೇ ಕಾಲದಲ್ಲಿ ಸುಖವಾಗಿ ಹೋಗಿ ಬರುವ ಪರಿಸ್ಥಿತಿ ಇದೆ ಮೈಸೂರು ನಗರದಲ್ಲಿ ಜನರು ಹೇಳುತ್ತಿದ್ದರು,ಬಿಡಪ್ಪ ಜನತಾ ಸರ್ಕಾರ ಏನು ಮಾಡದಿದ್ದರೂ ಚಿಂತೆ ಇಲ್ಲ. ಇವತ್ತು ನಾವು ನೆಮ್ಮದಿಯಿಂದ ಹಾದಿಬೀದಿಯಲ್ಲಿ ತಿರುಗಾಡುತ್ತಿದ್ದೇವೆ. ಹೆಣ್ಣುಮಕ್ಕಳು ನಿರ್ಭಯವಾಗಿದ್ದಾರೆ. ಈ ಒಂದು ಕೆಲಸವನ್ನು ಜನತಾ ಸರ್ಕಾರ ಮಾಡಿದೆ ಎಂದು ಮೆಚ್ಚುಗೆಯ ಮಾತನ್ನು ಅವರು ಹೇಳುತ್ತಿದ್ದಾರೆ. ಡಕಾಯಿತಿಗಳ ಬಗ್ಗೆ ಎಷ್ಟರಮಟ್ಟಿಗೆ ಪೋಲೀಸ್ ಇಲಾಖೆಗೆ ಸಾಕಷ್ಟು ಸಾಮಗ್ರಿಗಳನ್ನು ಒದಗಿಸಿಕೊಟ್ಟಿದ್ದೇವೆ? ಇವತ್ತು ಸರಿಯಾದ ವೆಹಿಕಲ್ಸ್ ಅವರಿಗೆ ಇಲ್ಲ. ಅವರು ಇಪ್ಪತ್ನಾಲ್ಕು ಗಂಟೆ ಕೆಲಸ ಮಾಡಬೇಕು. ಒಬ್ಬ ಪೋಲೀಸ್‌ಗೆ ಆತನಿಗೂ ಕಷ್ಟ ಸುಖಗಳು ಇರುತ್ತವೆ, ಆತನ ಮನೆಯಲ್ಲಿ ಸಹಜವಾದ ತೊಂದರೆಗಳು ಇರುತ್ತವೆ.

ಇವೆಲ್ಲವನ್ನೂ ಅವನು ನೀಗಿಸಿಕೊಳ್ಳಬೇಕು. ಅವನಿಗೆ ಯಾವುದೇ ಒಂದು ಸಲಕರಣೆ ಇಲ್ಲ. ಅತ್ಯುತ್ತಮವಾದ ಸಲಕರಣೆಗಳು ಇಲ್ಲ. ಅವನು ಈಗ ಬಂದೂಕು ಹಿಡಿದುಕೊಳ್ಳುವಂಥ ವ್ಯವಸ್ಥೆ ಇದೆ. ಆದರೆ ಅವನಿಗೆ ಅತ್ಯುತ್ತಮವಾದ ಸಲಕರಣೆ ಕೊಟ್ಟು, ಈ ಕೆಲಸವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಬರೀ ಟೀಕೆ ಟಿಪ್ಪಣಿಗಳಿಂದ ಪ್ರಯೋಜನ ಇಲ್ಲ. ವಿರೋಧ ಮಾಡಬೇಕು, ಎಲ್ಲದಕ್ಕೂ ವಿರೋಧ ಮಾಡೋಣ ಎನ್ನತಕ್ಕಂಥ ವಿಚಾರವನ್ನು ಇಟ್ಟುಕೊಂಡರೆ ಬಹುಶಃ ಯಾವುದೇ ಸರ್ಕಾರಕ್ಕೂ ಪರಿಸ್ಥಿತಿ ಕಷ್ಟವಾಗುತ್ತದೆ. ಲಾ ಅಂಡ್ ಆರ್ಡರ್ ವಿಚಾರದಲ್ಲಿ ಹೆಚ್ಚಿನ ಕೆಲಸ ಜನತಾ ಸರ್ಕಾರದಲ್ಲಿ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ಒಬ್ಬ ಶ್ರೀಸಾಮಾನ್ಯನ ಬದುಕು ಚೆನ್ನಾಗಿ ಆಗಬೇಕಾದರೆ, ಯಾವರೀತಿ ಮಾನವನ ಆರೋಗ್ಯವಾಗಿರಬೇಕಾದರೆ ಎಲ್ಲಾ ಅಂಗಗಳೂ ಚೆನ್ನಾಗಿರಬೇಕೋ ಹಾಗೆ ಎಲ್ಲರೂ ಚೆನ್ನಾಗಿ ಕೆಲಸ ಮಾಡಬೇಕು. ಈಗ ಕೇಂದ್ರ ಸರ್ಕಾರ, ನಮ್ಮ ರಾಜ್ಯಕ್ಕೆ ಮೊದಲಿನಿಂದಲೂ ಮಲತಾಯಿಧೋರಣೆಯನ್ನು ತೋರಿಸಿಕೊಂಡೆ ಬಂದಿದೆ. ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಸಾಕಷ್ಟು ಹೋರಾಟ ಆಯಿತು. ಸ್ವತಃ

ಶ್ರೀಮತಿ ಇಂದಿರಾ ಗಾಂಧಿಯವರೇ ಹೊಸಪೇಟೆಯಲ್ಲಿ ಗುದ್ದಲಿಪೂಜೆ ಮಾಡಿದರು. ಆದರೆ ಇವತ್ತಿನ ವರೆಗೂ ಆಗಿಲ್ಲ, ಅತ್ತಕಡೆ ಕಾಳಜಿ ಇಲ್ಲ.

ಇನ್ನು ರೈಲ್ವೆ ವಿಚಾರ. ಇಡೀ ಭರತ ಖಂಡದಲ್ಲಿ ಯಾವ ರಾಜ್ಯವಾದರೂ ಅನ್ಯಾಯವಾದ ರಾಜ್ಯ ಇದ್ದರೆ, ಅದು ಕರ್ನಾಟಕ ರಾಜ್ಯ. ಇವತ್ತು ಮೈಸೂರು, ಬೆಂಗಳೂರು ಬ್ರಾಡ್‌ಗೇಜ್ ಮಾಡುವುದಕ್ಕೆ ೫ ವರ್ಷಗಳಿಂದಲೂ ಆಮೆಯ ವೇಗದಲ್ಲಿ, ಕುಂಠಿತವಾಗಿ ಕೆಲಸ ನಡೆಯುತ್ತಿದೆ. ಇದನ್ನು ಬ್ರಾಡ್ ಗೇಜ್ ಮಾಡುವ ಬದಲು ಡಬಲ್ ಬ್ರಾಡ್‌ಗೇಜ್ ಮಾಡಬೇಕು, ಡಬಲ್ ರೋಡ್ ಮಾಡಬೇಕು. ಜೊತೆಗೆ ಇದಕ್ಕೆ ವಿದ್ಯುಚ್ಛಕ್ತಿ ಅಳವಡಿಸತಕ್ಕ ರೈಲನ್ನು ತರಬೇಕು. ಯಾವರೀತಿ ಬಾಂಬೆ ಮತ್ತು ಪೂನಕ್ಕೆ ಸೌಕರ್ಯ ಇದೆಯೋ, ಆ ಸೌಕರ್ಯವನ್ನು ಇಲ್ಲಿಯೂ ತರಬೇಕು. ಈ ವ್ಯವಸ್ಥೆಯನ್ನು ಬೆಂಗಳೂರು ಮತ್ತು ಮೈಸೂರಿಗೆ ಮಾಡಿದರೆ, ಕಾರ್ಪೊರೇಷನ್‌ಗೆ ಒಳಪಟ್ಟಂಥ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಬರುತ್ತವೆ. ಇವೆಲ್ಲವನ್ನೂ ಡೀವಿಯೇಷನ್ ಮಾಡಿ, ಈ ಮಧ್ಯೆ ಬರತಕ್ಕಂಥ ರಾಮನಗರ, ಮಂಡ್ಯ, ಮದ್ದೂರು, ಚನ್ನಪಟ್ಟಣ, ಶ್ರೀರಂಗಪಟ್ಟಣ ಈ ಉದ್ದಕ್ಕೂ ವಿಸ್ತಾರ ಮಾಡಬೇಕು. ಈ ರೀತಿ ಸೌಕರ್ಯ ಕೊಡುವುದರ ಜೊತೆಗೆ ನೀರಿನ ಸೌಲಭ್ಯವೂ ಮುಖ್ಯ. ಕಾವೇರಿ ನದಿ ನೀರನ್ನು ಕನಕಪುರ, ತೊರೆಕಾಡನಹಳ್ಳಿ ಮಾರ್ಗವಾಗಿ ತಂದಿದ್ದೇವೆ, ಅದರ ಬದಲು ಮೈಸೂರು ಅಥವಾ ಶ್ರೀರಂಗಪಟ್ಟಣದಿಂದ ನೇರವಾಗಿ ಬೆಂಗಳೂರಿಗೆ ಆ ಲೈನನ್ನು ಹಾಕಿಕೊಳ್ಳಬೇಕು. ನೀರಿನ ಸೌಕರ್ಯ ಮತ್ತು ರೈಲ್ವೆ ಲೈನ್‌ನಲ್ಲಿ ಸರಿಯಾದ ವ್ಯವಸ್ಥೆ ಆದರೆ, ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಬೆಳೆಸಬಹುದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಈ ಕೆಲಸಗಳನ್ನು ಆಗುವಂತೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ. ಆರೋಗ್ಯ ಇಲಾಖೆಯವರ ಪಾಪ್ಯುಲೇಷನ್ ಕಂಟ್ರೋಲ್. ಈ ಪಾಪ್ಯುಲೇಷನ್ ಕಂಟ್ರೋಲ್ ಮಾಡದೇಹೋದರೆ ಬಹುಶಃ ಯಾವುದೇ ಒಂದು ಪ್ರಗತಿಯನ್ನು, ಯಾವುದೇ ಸರ್ಕಾರ ಇರಲಿ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಕಡೆ ಹಲವಾರು ಯೋಜನೆಗಳನ್ನು ಹಾಕಿಕೊಂಡು, ಮತ್ತೊಂದು ಕಡೆ ಈ ಜನತೆಯನ್ನು ನಿಯಂತ್ರಿಸದೇ ಹೋದರೆ, ಈ ರಾಷ್ಟ್ರಕ್ಕೆ, ಈ ದೇಶಕ್ಕೆ ಮೋಕ್ಷ ಇಲ್ಲ. ಒಂದು ಕಡೆ ಪ್ರಗತಿಯನ್ನು ಸಾಧನೆ ಮಾಡಿ, ಇನ್ನೊಂದು ಕಡೆ ಮಕ್ಕಳನ್ನು ಹುಟ್ಟಿಸುತ್ತಾ ಹೋದರೆ, ಪಾಪ್ಯುಲೇಷನ್ ಕಂಟ್ರೋಲ್ ಮಾಡದೇ ಹೋದರೆ ಉಪಯೋಗವಿಲ್ಲ. "ಹೊಳೆಯಲ್ಲಿ ಹುಣಿಸೇಹಣ್ಣು ತೇಯ್ದ ಹಾಗೆ'' ಆಗುತ್ತದೆ ಇತ್ತಕಡೆ ಸರ್ಕಾರ ಗಮನಕೊಡಬೇಕು. ಈಗ ಬಹಳ ಸುಲಭವಾಗಿದೆ. ಮಂಡಲ್ ಪಂಚಾಯಿತಿ, ಜಿಲ್ಲಾ ಪರಿಷತ್ತುಗಳ ವ್ಯವಸ್ಥೆ ಬಂದಮೇಲೆ ಒಂದೊಂದು ಮಂಡಲ್ ಪಂಚಾಯಿತಿಗೆ ಇಷ್ಟು ಸಂತಾನ ನಿಯಂತ್ರಣ ಆಗಬೇಕೆಂದು ಜವಾಬ್ದಾರಿ ಕೊಡಬೇಕು. ಈ ರೀತಿ ಮಾಡುವುದರಿಂದ ಆರೋಗ್ಯ ಇಲಾಖೆ, ಈ ಪಾಪ್ಯುಲೇಷನ್ ಕಂಟ್ರೋಲ್ ಮಾಡಬಹುದು. ಇದನ್ನು ಕಂಟ್ರೋಲ್ ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ನಾವು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಇದನ್ನು ತಡೆ ಹಿಡಿಯುವುದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸ. ಜನತಾ ಸರ್ಕಾರ ಬಂದಮೇಲೆ ವಿದ್ಯಾಭ್ಯಾಸಕ್ಕೆ ಹೆಚ್ಚು ಆದ್ಯತೆ ಕೊಟ್ಟಿದೇ ನಮ್ಮ ವಿರೋಧ ಪಕ್ಷದ ಮಿತ್ರರು ಹೇಳುತ್ತಾರೆ. ಸಿಕ್ಕಿಸಿಕ್ಕಿದ ಕಡೆ ಮೆಡಿಕಲ್ ಕಾಲೇಜು ಕೊಟ್ಟರು, ಸಿಕ್ಕಿಸಿಕ್ಕಿದ ಕಡೆ ಇಂಜಿನಿಯರಿಂಗ್, ಪಾಲಿಟೆಕ್ನಿಕ್‌ಗಳನ್ನು ಕೊಟ್ಟರು ಎಂದು. ನಾನು ಕೇಳುತ್ತೇನೆ, ಏಕೆ ಕೊಡಬಾರದು ? ಇದೇನು ಬರೀ ಸಿರಿವಂತರ ಸಂಪತ್ತೇ. ನನಗನ್ನಿಸುತ್ತದೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಮೆಡಿಕಲ್ ಕಾಲೇಜು ಕೊಟ್ಟರು ಚಿಂತೆ ಇಲ್ಲ. ಸಾಹುಕಾರರ ಮಕ್ಕಳು, ಸಿರಿವಂತರ ಮಕ್ಕಳು ಮಾತ್ರ ಇಂಜಿನಿಯರಿಂಗ್ ಓದಬೇಕು, ಅವರು ಮಾತ್ರ ಡಾಕ್ಟರು ಆಗಬೇಕು. ಅದೇ ಶ್ರೀಸಾಮಾನ್ಯನ ಬಡವನ ಮಕ್ಕಳು ಮಾತ್ರ ಬಿ. ಎ. ಅಥವಾ ಬಿ ಎಸ್. ಸಿ. ಯಂಥ ಕೆಲಸಕ್ಕೆ ಬಾರದಂಥ ವಿದ್ಯಾಭ್ಯಾಸ ಮಾಡಬೇಕು. ಯಾವನು ೨ ಲಕ್ಷ ೫ ಲಕ್ಷ ಡೊನೇಷನ್ ಕೊಡುವ ಶಕ್ತಿ ಇದೆ ಅವನು ಮಾತ್ರ ಮೆಡಿಕಲ್ ಕಾಲೇಜು ಓದುವುದಕ್ಕೆ ಸಾಧ್ಯವಾಗುತ್ತದೆ. ಅದೇ ಶ್ರೀಸಾಮಾನ್ಯನ ಮಗ ಮಾತ್ರ ಅವನು ಎಷ್ಟೇ ಬುದ್ಧಿವಂತನಾಗಿದ್ದರೂ ಸಹ ಇದನ್ನು ಓದುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಹೆಚ್ಚು ಈ ಕಾಲೇಜುಗಳನ್ನು ಮಾಡುವುದರಿಂದ, ಹೆಚ್ಚು ಹೆಚ್ಚು ಬುದ್ಧಿವಂತರು, ವಿದ್ಯಾವಂತರನ್ನು ತಯಾರು ಮಾಡುವುದಕ್ಕೆ ಬರುತ್ತದೆ. ಒಂದು ದುರ್ದೈವದ ಸಂಗತಿ. ಸ್ವಾತಂತ್ರ್ಯ ಬಂದು ೪೦ ವರ್ಷಗಳು ಕಳೆದರೂ ಈ ದೇಶದಲ್ಲಿ, ಈ ರಾಷ್ಟ್ರದಲ್ಲಿ ಇವತ್ತೂ ಕೂಡ ೬೪ ಪರ್ಸೆಂಟ್ ಅವಿದ್ಯಾವಂತರು ಇದ್ದಾರೆ. ಇದರ ಅರ್ಥ ಏನು ?

ಇದರಲ್ಲಿ ನಡೆಯುತ್ತಿರತಕ್ಕಂಥ ಒಳಸಂಚು ಏನು ? ಜನರು ಎಲ್ಲಿಯತನಕ ದಡ್ಡರಾಗಿರುತ್ತಾರೆ ಅಲ್ಲಿಯವರೆಗೆ ತಮಗೆ ಏನೂ ತೊಂದರೆ ಇಲ್ಲ ಎಂದು ಅಧಿಕಾರ ಮಾಡಿದಂಥ ಜನ ಭಾವಿಸಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಅವರು ಒಂದು ನಿಮಿಷ ಈಲ್ಡ್ ಆದರೆ ಒಂದು ವಿಚಾರ ಹೇಳುತ್ತೇನೆ. ಮಾನ್ಯ ಸದಸ್ಯರು ಈಗ ಮಾತನಾಡುತ್ತಾ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಕಾಲೇಜುಗಳನ್ನು ಕೊಡುವುದಕ್ಕೆ, ಮೆಡಿಕಲ್ ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ವಿರೋಧ ಪಕ್ಷದವರು ವಿರೋಧ ಮಾಡುತ್ತಾರೆ ಎನ್ನುವ ರೀತಿಯಲ್ಲಿ ಮಾತನಾಡಿದರು. ಗ್ರಾಮಾಂತರ ಪ್ರದೇಶದಲ್ಲಿ, ಡಿಸ್ಟ್ರಿಕ್ಟ್‌ಗಳಲ್ಲಿ ಕಾಲೇಜ್, ಸ್ಕೂಲ್‌ಗಳನ್ನು ಓಪನ್ ಮಾಡುವುದಕ್ಕೆ ಇಲ್ಲಿ ಯಾರೂ ವಿರೋಧ ಪಕ್ಷದವರೂ ವಿರೋಧ ಮಾಡಲಿಲ್ಲ. ಇವರು ಯಾವರೀತಿ ಅರ್ಥ ಮಾಡಿಕೊಂಡರೋ ನನಗೆ ಗೊತ್ತಿಲ್ಲ. ಡೊನೇಷನ್ ಪದ್ಧತಿ, ಕ್ಯಾಪಿಟೇಷನ್ ಪದ್ಧತಿ ಏನಿದೆ ಅದರಿಂದ ಬಡವರಿಗೆ ಸೀಟ್ ಸಿಗುತ್ತದೆಂದು ಯೋಚನೆ ಮಾಡುತ್ತೀರಾ ? ಖಂಡಿತಾ ಸಿಗುತ್ತಿಲ್ಲ. ಕೇವಲ ಸಾಹುಕಾರರ ಮಕ್ಕಳಿಗೆ ಇದರಿಂದ ಅನುಕೂಲವಾಗುತ್ತದೆ. ಬಡವರಿಗೆ ಖಂಡಿತಾ ಅನುಕೂಲವಾಗುವುದಿಲ್ಲ. ಸರಕಾರವೇ ಈ ಕಾಲೇಜುಗಳನ್ನು ನಡೆಸಿದರೆ ತೊಂದರೆ ಏನಿಲ್ಲ. ಖಾಸಗಿಯವರಿಗೆ ಕೊಡುವುದರಿಂದ ಅಲ್ಲಿ ಲೂಟಿ ಮಾಡುವ ಒಂದು ಪರಿಸ್ಥಿತಿ ಬಂದಿದೆ, ಇದು ಸರಿಯಾದುದಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ. ಇದನ್ನು ಜಾತಿ ಆಧಾರದ ಮೇಲೂ ಕೊಡುತ್ತಿದ್ದಾರೆ, ಇದು ಸರಿಯಾದುದಲ್ಲ ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಕೃಷ್ಣನ್‌ರವರ ಕಾಳಜಿ ನನಗೆ ಗೊತ್ತಿದೆ ಸ್ಕೂಲ್ ಕಾಲೇಜ್‌ಗಳನ್ನು ಕೊಡುವುದಕ್ಕೆ ಅವರು ವಿರೋಧ ಮಾಡುವುದಿಲ್ಲ ವಿರೋಧ ಪಕ್ಷದಲ್ಲಿ ನೀವು ಮಾತ್ರವಲ್ಲ, ಕಾಂಗ್ರೆಸ್ ಮಿತ್ರರೂ ಇದ್ದಾರೆ. ಅವರು ಹೇಳುವಂಥದ್ದು ಏನು ಎಂದರೆ ಎಂಜಿನಿಯರಿಂಗ್ ಕಾಲೇಜುಗಳನ್ನು ಈ ಸರಕಾರ ಜಾಸ್ತಿ ಕೊಡುತ್ತಿದೆ, ಈ ಕಾಲೇಜುಗಳು ಅಣಬೆಗಳು ಹುಟ್ಟಿಕೊಂಡ ಹಾಗೆ ಹುಟ್ಟಿಕೊಳ್ಳುತ್ತಿವೆ ಎಂದು ಅನೇಕ ಸಂದರ್ಭದಲ್ಲಿ ಹೇಳಿದ್ದಾರೆ. ಕೃಷ್ಣನ್‌ರವರಿಗೆ ಇದರ ಬಗ್ಗೆ ಹೆಚ್ಚಿನ ಕಾಳಜಿ ಇದೆ ಎಂದು ನನಗೆ ಚೆನ್ನಾಗಿ ಗೊತ್ತು. ಇದರ ಬಗ್ಗೆ ಅವರು ಯೋಚನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ, ಅಧಿಕಾರದಲ್ಲಿದ್ದಂಥ ಜನರು ಏನು ಹೇಳುತ್ತಿದ್ದರು ಎಂದರೆ ಎಲ್ಲಿತನಕ ಜನ ಜಾಸ್ತಿ ದಡ್ಡರಾಗಿರುತ್ತಾರೋ, ಅಲ್ಲಿತನಕ ನಮ್ಮ ಬೇಳೆಕಾಳು ಬೇಯುತ್ತದೆ, ಅಲ್ಲಿತನಕ ನಾವು ಅವರ ಓಟುಗಳನ್ನು ಪಡೆಯುತ್ತೇವೆ ಎಂದುಕೊಳ್ಳುತ್ತಿದ್ದರು. ಜನತಾ ಸರಕಾರ ಬಂದಮೇಲೆ ಜನಗಳ ವಿದ್ಯಾಭ್ಯಾಸದ ಮಟ್ಟವನ್ನು ಜಾಸ್ತಿ ಮಾಡಿದೆ ಇಲ್ಲದೇ ಹೋದರೆ ಜನಗಳಿಗೆ ಬುದ್ಧಿವಂತಿಕೆ ಎಲ್ಲಿಂದ ಬರಬೇಕು ? ಬುದ್ಧಿವಂತಿಕೆಯನ್ನು ಅಂಗಡಿಗೆ ಹೋಗಿ ಒಂದು ಕೆ.ಜಿ. ಬೇಳೆ, ಒಂದು ಕೆ.ಜಿ. ಟೊಮ್ಯಾಟೋ, ಒಂದು ಕೆ.ಜಿ. ತರಕಾರಿ ತಂದಹಾಗೆ ತರುವುದಕ್ಕೆ ಆಗುವುದಿಲ್ಲ. ಇದು ವಿದ್ಯಾಭ್ಯಾಸದ ಮುಖಾಂತರವೇ ಬರಬೇಕು. ಜನತಾ ಸರಕಾರ ಬಂದಮೇಲೆ ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಪುಸ್ತಕಗಳನ್ನು ಕೊಡುತ್ತಿದೆ. ಈ ಯೋಜನೆಯನ್ನು ಗೇಲಿ ಮಾಡುವ ಪ್ರಯತ್ನ ನಡೆಯುತ್ತಿದೆ. ಆದರೆ ಈ ಯೋಜನೆ ಪ್ರಾರಂಭವಾದ ಮೇಲೆ, ಇವತ್ತು ಒಂದು ತರಗತಿಗೆ ೩೦–೪೦ ಮಕ್ಕಳು ಬರುತ್ತಿದ್ದ ಕಡೆ ೧೦೦–೨೦೦ ಮಕ್ಕಳು ಬರುತ್ತಿದ್ದಾರೆ. ಇದರಿಂದ ನಮಗೆ ಬಹಳ ಹೆಮ್ಮೆ ಎನಿಸುತ್ತದೆ ಸಂತೋಷವಾಗುತ್ತದೆ. ಈಗ ಶಾಸಕರು ಹಳ್ಳಿಗಳಿಗೆ ಹೋದರೆ ಅಲ್ಲಿಯ ಜನರು ನಮಗೆ ಟೀಚರ್‌ಗಳನ್ನು ಕೊಡಿ, ಉಪಾಧ್ಯಾಯರನ್ನು ಹಾಕಿಕೊಡಿ, ನೀವು ಏನು ಮಾಡದೇ ಹೋದರೂ ಪರವಾಗಿಲ್ಲ ಉಪಾಧ್ಯಾಯರನ್ನು ಕೊಡಿ ಎಂದು ಕೇಳುತ್ತಿದ್ದಾರೆ ಇಂತಹ ಒಂದು ವಾತಾವರಣ ಕ್ರಿಯೇಟ್ ಆಗಬೇಕಾದರೆ ಇದಕ್ಕೆ ಜನತಾ ಸರಕಾರ ಕಾರಣ ಎಂದು ಹೇಳಬೇಕಾಗಿದೆ ಉಚಿತ ಪುಸ್ತಕ ಹಾಗೂ ಸಮವಸ್ತ್ರಗಳನ್ನು ಕೊಡುತ್ತಿರುವುದರಿಂದ, ಬಡವರ ಮಕ್ಕಳೂ ಸಹ ಶಾಲೆಗೆ ಹೋಗದೇ ಇದ್ದವರೂ ಸಹ ಶಾಲೆಗೆ ಹೋಗುತ್ತಿದ್ದಾರೆ. ಜನತಾ ಸರಕಾರ ಜನರಿಗೆ ಇವತ್ತು ಹೆಚ್ಚಿನ ವಿದ್ಯಾಭ್ಯಾಸ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದೆ.

ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿರಬಹುದು, ಇವತ್ತು ಚೈನಾ ದೇಶದಲ್ಲಿ ಒಂದು ಸಣ್ಣ ಉಪಾಯವನ್ನು ಕಂಡುಹಿಡಿದಿದ್ದಾರೆ. ಅಲ್ಲಿ ೬೫ ವರ್ಷ ಕೆಳಪಟ್ಟಂಥ ಎಲ್ಲಾ ಜನಸಾಮಾನ್ಯರೂ ವಿದ್ಯಾವಂತರಾಗಿದ್ದಾರೆ. ಇದು ಹೇಗೆ ಸಾಧ್ಯವಾಯಿತು ಎಂದು ನಾನು ಕೇಳಿದೆ, ಅವರು ಏನು ಮಾಡಿದ್ದಾರೆ ಎಂದರೆ ಒಬ್ಬ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ ಎಂದು ಸರ್ಟಿಫಿಕೇಟ್ ಪಡೆಯಬೇಕಾದರೆ ಅವನು ೫ ಜನಕ್ಕೆ ಓದುಬರಹ ಕಲಿಸಬೇಕು, ಅದೇ ರೀತಿ ಒಬ್ಬ ಪದವೀಧರನಾಗಬೇಕಾದರೆ,

ಅವನು ಎಂಜಿನಿಯರ್ ಇರಬಹುದು, ಡಾಕ್ಟರ್ ಇರಬಹುದು. ಅವನು ಡಿಗ್ರಿ ತೆಗೆದುಕೊಳ್ಳಬೇಕಾದರೆ ಅವನು ಕನಿಷ್ಠ ಪಕ್ಷ ತನ್ನ ಹಳ್ಳಿಯ ಗ್ರಾಮದ ೧೦ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಅಂದರೆ ಓದುಬರಹ ಕಲಿಸಬೇಕು. ಬರೀ ಕಲಿಸಿದರೆ ಸಾಲದು. ಅವರು ಸರಿಯಾಗಿ ಕಲಿತಿದ್ದಾರೋ ಇಲ್ಲವೋ ಎಂದು ಒಂದು ಟೆಸ್ಟ್ ಇಡುತ್ತಾರೆ. ಆ ಟೆಸ್ಟ್‌ನಲ್ಲಿ ಪಾಸಾದರೆ ಮಾತ್ರ ಆ ನಂತರ ಇವರಿಗೆ ಡಿಗ್ರಿ ಸರ್ಟಿಫಿಕೇಟ್ ಕೊಡುತ್ತಾರೆ. ಇಂತಹ ಒಂದು ವ್ಯವಸ್ಥೆ ಇದೆ. ಇಂತಹ ಒಂದು ಸಣ್ಣ ಉಪಾಯವನ್ನು ಕಂಡುಹಿಡಿದುದರಿಂದ ಇವತ್ತು ಅಲ್ಲಿ, ನಮಗಿಂತ ಹೆಚ್ಚು ಜನಸಂಖ್ಯೆ ಚೈನಾ ದೇಶದಲ್ಲಿದ್ದರೂ ಕೂಡಾ. ಅಲ್ಲಿ ೬೫ ವರ್ಷ ಕೆಳಪಟ್ಟ ಎಲ್ಲಾ ಶ್ರೀಸಾಮಾನ್ಯರೂ ಕೂಡಾ ೧೦೦ಕ್ಕೆ ೧೦೦ರಷ್ಟು ವಿದ್ಯಾವಂತರಾಗಿದ್ದಾರೆ. ತನ್ಮೂಲಕ ರಾಷ್ಟ್ರದ ಪ್ರಗತಿಯನ್ನು ಸಾಧಿಸುವುದಕ್ಕೆ ಅವರಿಗೆ ಸಾಧ್ಯವಾಗಿದೆ. ಇದಕ್ಕೆ ಕೇಂದ್ರ ಸರಕಾರ ಮಾಡಬೇಕು, ರಾಜ್ಯ ಸರಕಾರ ಮಾಡಬೇಕು ಎಂದಲ್ಲ. ಕೇಂದ್ರ ಸರಕಾರ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಂಡರೆ ನಮ್ಮ ರಾಷ್ಟ್ರದಲ್ಲೂ ಕೂಡಾ ಈ ರೀತಿ ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಚೈನಾ ದೇಶ ಮೂಲಭೂತವಾಗಿ ಒಂದು ಸಮಾಜವಾದಿ ರಾಷ್ಟ್ರ. ಸಮಾಜವಾದಿ ವ್ಯವಸ್ಥೆ ಅಲ್ಲಿದೆ ಇದು ತಮಗೂ ಗೊತ್ತಿರಬೇಕು. ಸಮಾಜವಾದಿ ವ್ಯವಸ್ಥೆ ಇರುವುದರಿಂದಲೇ ಇದು ಸಾಧ್ಯವಾಯಿತು. ಎಲ್ಲಿಯವರೆಗೆ ಸಮಾಜವಾದಿ ವ್ಯವಸ್ಥೆ ಇರುವುದಿಲ್ಲವೋ, ಎಲ್ಲಿಯತನಕ ಬಂಡವಾಳ ಶಾಹಿ ವ್ಯವಸ್ಥೆ ಇರುತ್ತದೋ, ಅಲ್ಲಿಯವರೆಗೆ ಇದನ್ನು ಇಲ್ಲಿ ಮಾಡುವುದಕ್ಕೆ ಸಾಧ್ಯ ಇಲ್ಲ. ಇದು ತಮಗೂ ಗೊತ್ತಿದೆ.

ಶ್ರೀ ಡಿ. ಟಿ. ಜಯಕುಮಾರ್.—ಪ್ರಜಾಪ್ರಭುತ್ವದಲ್ಲೂ ಸಹ ಇದನ್ನು ಅಳವಡಿಸಿಕೊಳ್ಳಬಹುದು ಇದಕ್ಕೆ ಒಂದು ದೊಡ್ಡ ಕಾನೂನನ್ನು ಏನೂ ತರಬೇಕಾಗಿಲ್ಲ. ಚೈನಾ ದೇಶದಲ್ಲಿ ಒಂದು ಕಾನೂನು ಏನು ತಂದಿದ್ದಾರೆ, ಅದೇ ಒಂದು ಕಾನೂನನ್ನು ಇಲ್ಲೂ ತಂದರೆ, ಇಲ್ಲೂ ಕೂಡಾ, ನೂರಕ್ಕೆ ಎಂಬತ್ತು ಪರ್ಸೆಂಟ್ ಯಶಸ್ಸು ಪಡೆಯದೇ ಹೋದರೂ ಸಹ ಅರವತ್ತು ಪರ್ಸೆಂಟ್ ಆದರೂ ಸಾಧನೆ ಮಾಡ ಬಹುದು ಎಂಬ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

೪—೦೦ ಪಿ. ಎಂ.

ಬಹುಶಃ ಕೇಂದ್ರ ಸರ್ಕಾರದ ಗಮನಹರಿಸಿದರೆ ಇಂತಹ ಕೆಲಸ ಸಾಧ್ಯವಾದೀತೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿದರೆ ಉಚಿತವೆಂದು ನನಗನ್ನಿಸುತ್ತದೆ. ಹಿಂದುಳಿದ ವರ್ಗಗಳ ಬಗ್ಗೆ ನಮ್ಮ ಜನತಾ ಸರ್ಕಾರಕ್ಕೆ ಹೆಚ್ಚು ಆಸಕ್ತಿ ಇಲ್ಲ, ಎನ್ನುವ ಒಂದು ಸಂಶಯ ನಮ್ಮ ಕಾಂಗ್ರೆಸ್ ಸ್ನೇಹಿತರಿಗೇನಿದೆ ಅದು ಸರಿಯಲ್ಲ. ೧೯೭೭ನೇ ಇಸವಿಯಲ್ಲಿ ಜನತಾ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಇಡೀ ರಾಷ್ಟ್ರದಲ್ಲಿರುವ ಹಿಂದುಳಿದ ವರ್ಗಗಳಾದಿಯಾಗಿ ಎಲ್ಲಾ ಬಡವರಿಗೂ ಅನುಕೂಲವಾಗಲೆಂದು ಮಂಡಲ್ ಆಯೋಗವನ್ನು ರಚನೆ ಮಾಡಿದರು. ಆ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಆ ವರದಿ ಇದುವರೆವಿಗೂ ಮೂಲೆ ಗುಂಪಾಗಿ ಬಿದ್ದಿದೆ. ನಮ್ಮ ಜನಾರ್ಧನ ಪೂಜಾರಿಯವರಾಗಲಿ ಅಥವಾ ಕಾಂಗ್ರೆಸ್ ಪಕ್ಷದ ಸದಸ್ಯರಾಗಲಿ ನಿಜವಾದ ಬಡವರ ಬಗ್ಗೆ ಹಿಂದುಳಿದ ವರ್ಗಗಳ ಬಗ್ಗೆ ಕಿಂಚಿತ್ತು ಕಾಳಜಿ ಏನಾದರೂ ಇದ್ದರೆ ಆ ಮಂಡಲ್ ವರದಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲಿ. ಆಗ ನಮ್ಮ ರಾಜ್ಯದಲ್ಲಿ ವೆಂಕಟಸ್ವಾಮಿ ಆಯೋಗ ಬೇಕಾಗಿಲ್ಲ. ಮೂರನೇಯ ಆಯೋಗ ರಚಿಸಬೇಕೆಂದು ಸರ್ಕಾರ ಏನು ತೀರ್ಮಾನ ಮಾಡಿದೆ ಆ ಆಯೋಗ ಸಹ ಬೇಕಾಗುವುದಿಲ್ಲ. ಮಂಡಲ್ ವರದಿ ಎಷ್ಟು ಅರ್ಥಗರ್ಭಿತವಾಗಿದೆ ಎಂದರೆ ಅಷ್ಟು ಅರ್ಥಗರ್ಭಿತವಾಗಿದೆ. ಆ ಮಂಡಲ್ ವರದಿಯನ್ನು ಅನೇಕ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಸದಸ್ಯರು ಆ ವರದಿಯನ್ನು ಜಾರಿಗೆ ತಂದರೆ ಆಗ ನಾವು ಅವರನ್ನು ಬೆನ್ನು ತಟ್ಟೋಣ. ಹಿಂದುಳಿದ ವರ್ಗಗಳ ಆಯೋಗವನ್ನು ಜನತಾ ಸರ್ಕಾರ ರಚಿಸಿ ಆ ಆಯೋಗದಲ್ಲಿ ಅಂದರೆ ಅವರು ಕೊಟ್ಟಂತಹ ವರದಿಯಲ್ಲಿ ಕೆಲವು ವೈಜ್ಞಾನಿಕ ತೊಂದರೆಗಳು ಇರಬಹುದು ಅದು ಬೇರೆ ಮಾತು. ಆಮೇಲೆ ಕಾಂಗ್ರೆಸ್ ಪಕ್ಷದ ಸದಸ್ಯರು ಜನತಾ ಪಕ್ಷದ ಸರ್ಕಾರದ ಮೇಲೆ ಏನೇನೋ ಹೇಳಿಕೊಳ್ಳುತ್ತಿದ್ದಾರೆ. ಇವತ್ತು ಜನತಾ ಸರ್ಕಾರದಲ್ಲಿ ದುಡ್ಡು ಇಲ್ಲ, ಜನತಾ ಸರ್ಕಾರ ದಿವಾಳಿಯಾಗಿದೆ, ಇವರೇನು ಕೆಲಸ ಮಾಡುತ್ತಾರೆ ಇದರಿಂದ ಏನಾಗುತ್ತದೆ ಈ ಮಾತುಗಳನ್ನು ಬಿಟ್ಟು ಮಂಡಲ್ ವರದಿಯನ್ನು ಜಾರಿಗೆ ತರುವುದಕ್ಕೆ

ತಾವು ಪೈಪೋಟಿ ಮಾಡಿದ್ದರೆ ಆಗ ನಮ್ಮ ಜನತಾ ಸರ್ಕಾರ ಸಹ ನಿಮ್ಮ ಹೋರಾಟಕ್ಕೆ ಬೆಂಬಲ ನೀಡುತ್ತದೆ. ಇಂತಹ ಒಂದು ಹೋರಾಟವನ್ನು ಕೈಗೊಂಡರೆ ಆಗ ನಿಜವಾಗಿ ಬಡವರ ಮೇಲೆ ಹಿಂದುಳಿದವರ್ಗದವರ ಮೇಲೆ ತಮಗೆ ಕಾಳಜಿ ಇದೆ ಎಂದು ಅರ್ಥವಾಗುತ್ತದೆ. ಇಲ್ಲದಿದ್ದರೆ ಬರೀ ಮೊಸಳೆ ಕಣ್ಣೀರು ಸುರಿಸಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ವಿಚಾರವನ್ನು ನಾವು ಜನತೆಯ ಮುಂದೆ ಇಡಬೇಕಾಗುತ್ತದೆ. ಜನತೆಯ ಮುಂದೆ ಇಟ್ಟರೆ, ನಿಮ್ಮ ಉದ್ದೇಶ ಸಫಲವಾಗುವುದಿಲ್ಲ ಆದ್ದರಿಂದ ತಾವು ಮಂಡಲ್ ವರದಿಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜನತಾ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ, ಅದರಲ್ಲಿ ಯಶಸ್ವಿಯನ್ನು ಸಹ ಮಾಡಿದೆ, ಆದರೆ ಒಂದು ವಿಚಾರದಲ್ಲಿ ಮಾತ್ರ ತಪ್ಪು ಮಾಡಿತ್ತೇನೋ ಎಂದು ನನಗೆ ಅನಿಸುತ್ತದೆ. ಅದೇನೆಂದರೆ ಅಪಿಲೇಟ್ ಟ್ರಿಬ್ಯೂನಲ್‌ಗಳಲ್ಲಿ ಯಾವ ರೈತನಿಗೆ, ಯಾವ ಬಡವನಿಗೆ ಮತ್ತು ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಬಡವರ್ಗದವರು ತಮ್ಮ ಜಮೀನುಗಳನ್ನು ಅನುಭವಿಸಿಕೊಂಡಿದ್ದರು, ಅಂತಹವರ ಕಲ್ಯಾಣ ಮಾಡುವ ಸಲುವಾಗಿ ದೇವರಾಜ ಅರಸುರವರು ಭೂಸುಧಾರಣಾ ಕಾನೂನನ್ನು ಜಾರಿಗೆ ತಂದರು, ಆ ಭೂಸುಧಾರಣಾ ಮಂಡಲಿಯಲ್ಲಿ ನಾನ್ ಅಫಿಷಿಯಲ್ಸ್‌ನ್ನು ಹಾಕಿ ಒಳ್ಳೆಯ ಕೆಲಸವನ್ನು ಮಾಡಿದರು. ಇದರಿಂದ ಲಕ್ಷಾಂತರ ಜನ ಬಡವರಿಗೆ ಅನುಕೂಲವಾಯಿತು. ಅವರು ಆಗ ತಂದಂತಹ ಉದ್ದೇಶ ಒಳ್ಳೆಯದಾಗಿತ್ತು. ಅವರ ಮೂಲ ತತ್ವ ಒಳ್ಳೆಯದಾಗಿತ್ತು. ಈಗ ತಾವು ಅಪಿಲೇಟ್ ಟ್ರಿಬ್ಯೂನಲ್ ಗಳನ್ನು ಮಾಡಿರುವುದರಿಂದ ಬಡ ರೈತರನ್ನು ಈ ಟ್ರಿಬ್ಯೂನಲ್‌ನಲ್ಲಿ ಕಾಗದಪತ್ರಗಳು ನಿಮ್ಮ ಹೆಸರಿನಲ್ಲಿ ಇವೆಯೋ? ಆರ್.ಟಿ.ಸಿ. ನಿಮ್ಮ ಹೆಸರಿನಲ್ಲಿ ಇದೆಯೋ? ಗುತ್ತಿಗೆ ಕರಾರುಪತ್ರ ಇದೆಯೋ? ಇತ್ಯಾದಿ ಪ್ರಶ್ನೆಗಳನ್ನು ಅಲ್ಲಿ ಕೇಳುತ್ತಾರೆ. ಇದರಿಂದ ನಿಜವಾಗಿ ಬಡವರಿಗೆ ಅನುಕೂಲವಾಗುವುದಿಲ್ಲ. ಬಡವನಿಗೆ ಆರ್.ಟಿ.ಸಿ. ಎಂದರೆ ಏನೂ ಎನ್ನುವುದೇ ಗೊತ್ತಿಲ್ಲ. ಗುತ್ತಿಗೆ ಕರಾರುಪತ್ರ ಎಲ್ಲಿ ಬರೆಸಿಕೊಳ್ಳುತ್ತಾನೆ? ಅವನಿಗೆ ತಿಳುವಳಿಕೆ ಇದ್ದಿದ್ದರೆ ಅವನು ಆ ಜಮೀನನ್ನು ಕಳೆದುಕೊಳ್ಳುವ ಸ್ಥಿತಿಗೆ ಬರುತ್ತಿರಲಿಲ್ಲ. ಬುದ್ಧಿ ಇಲ್ಲದೆ ಇದುದ್ದರಿಂದ ಅವನು ಆ ದಾಖಲೆ ಪತ್ರಗಳನ್ನು ಹೊಂದಿಲ್ಲ. ಇದನ್ನು ಮುನಗಂಡೇ ದಿವಂಗತ ದೇವರಾಜ ಅರಸುರವರು ಭೂ ಸುಧಾರಣಾ ಕಾನೂನು ಜಾರಿಗೆ ತಂದಿದ್ದರು. ನಾನ್ ಅಫಿಷಿಯಲ್ಸ್‌ನ್ನು ಹಾಕಿ ಅವರು ಸ್ಪಾಟ್‌ಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ ನಿಜವಾಗಿ ಯಾರು ಆ ಜಮೀನನ್ನು ಉಳುಮೆ ಮಾಡುತ್ತಿದ್ದರೋ ಎನ್ನುವುದನ್ನು ಪರಿಶೀಲನೆ ಮಾಡಿ ತೀರ್ಪು ಕೊಡುತ್ತಿದ್ದರು ಆದರೆ ಈಗ ಭೂ ನ್ಯಾಯ ಮಂಡಲಿಯಲ್ಲಿ ಅಂದರೆ ಅಪಿಲೇಟ್ ಟ್ರಿಬ್ಯೂನಲ್‌ಗಳಿಗೆ ಅಡ್ವೋಕೇಟ್ಸ್ ಹೋಗಿ ವಕಾಲತ್ತು ವಹಿಸುವಂತೆ ಕಾನೂನಿನಲ್ಲಿ ಅವಕಾಶ ಇದೆ. ಆದ್ದರಿಂದ ಈ ಅಡ್ವೋಕೇಟ್ಸ್ ಅಲ್ಲಿ ಅವಕಾಶವಿಲ್ಲ. ಇದರಿಂದ ಅಪಿಲೇಟ್ ಟ್ರಿಬ್ಯೂನಲ್ಸ್‌ನಲ್ಲಿ ನಿಜವಾದ ಗೇಣಿದಾರನಿಗೆ ತೊಂದರೆ ಯಾಗುತ್ತದೆ. ಆ ಕೆಲಸವನ್ನು ಒಬ್ಬ ಕ್ಲರ್ಕ್ ಮಾಡಬಹುದು, ಆ ಕೆಲಸವನ್ನು ಇವತ್ತು ಅಪಿಲೇಟ್ ಟ್ರಿಬ್ಯೂನಲ್‌ನಲ್ಲಿ ಮಾಡುತ್ತಿದ್ದಾರೆ. ಆರ್.ಟಿ.ಸಿ. ಇವೆಯೋ? ಗುತ್ತಿಗೆ ಕರಾರು ಪತ್ರ ಇವೆಯೋ ಇತ್ಯಾದಿ ಕೇಳುವುದಕ್ಕೆ ಈ ಟ್ರಿಬ್ಯೂನಲ್ ಬೇಕೆ? ಇದನ್ನು ಒಬ್ಬ ಕ್ಲರ್ಕ್ ಮಾಡಬಹುದೆಂದು ಅದಕ್ಕೆ ನಾನು ಹೇಳಿದ್ದು.

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಮಹಾಸಭೆ ಮತ್ತು ವಿಧಾನ ಪರಿಷತ್ತುಗಳ ಮುಂದೆ ಆ ಮಸೂದೆ ಬಂದು ಚರ್ಚೆಯಾಗತಕ್ಕಂಥ ಕಾಲದಲ್ಲಿ ಈ ಟ್ರಿಬ್ಯೂನಲ್‌ಗಳಿಗೆ ವಕೀಲರು ಬೇಡ ವೆಂದು ನಿರ್ಣಯ ಮಾಡಿತ್ತು. ಆದರೆ ಇಲ್ಲಿ ಏನಾಯಿತು ಎಂದರೆ ಇದನ್ನು ಸುಪ್ರಿಂ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಲಾಗಿ ಇತ್ತೀಚೆಗೆ ಅವರು ತೀರ್ಪು ನೀಡಿ ವಕೀಲರು ಭೂ ನ್ಯಾಯ ಮಂಡಲಿಗಳಿಗೆ ಹೋಗ ಬಹುದೆಂದು ಹೇಳಿದ್ದಾರೆ. ಸುಪ್ರಿಂ ಕೋರ್ಟಿನ ತೀರ್ಮಾನವೇ ಕೊನೆಯ ತೀರ್ಮಾನ.

ಗೇಣಿದಾರರಿಗೆ ಅನ್ಯಾಯವಾಗಬಾರದೆನ್ನುವ ದೃಷ್ಟಿಯಿಂದ ಲಾಯರ್‌ಗಳು ಅಪಲೇಟ್ ಟ್ರಿಬ್ಯೂನಲ್‌ಗೆ ಬಂದು ವಾದಿಸುವುದಕ್ಕೆ ಅವಕಾಶವನ್ನು ಕೊಡಲಾಗಿದೆಯೆಂದು ಮಾನ್ಯ ಕಾನೂನು ಮಂತ್ರಿಯವರು ಹೇಳಿದರು. ನಾನು ಇನ್ನೊಂದು ವಿಷಯದಲ್ಲಿ ಮಾನ್ಯ ಕಾನೂನು ಮಂತ್ರಿಯವರನ್ನು ಕೇಳುವುದೇನೆಂದರೆ, ಅಪಲೇಟ್ ಟ್ರಿಬ್ಯೂನಲ್‌ನಲ್ಲಿ ಗೇಣಿದಾರರಿಗೆ ಆರ್.ಟಿ.ಸಿ. ತೆಗೆದುಕೊಂಡು ಬಾ ಅದು ತೆಗೆದುಕೊಂಡು ಬಾ ಇದು ತೆಗೆದುಕೊಂಡು ಬಾ ಎಂದು ಬಹಳ ತಿರುಗಿಸುತ್ತಾರೆ, ಇದನ್ನು ಆದಷ್ಟು ಸರಳವಾಗಿ ಮಾಡುವುವಂತೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು.

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಕಾನೂನು ಮಂತ್ರಿಯವರು ಏನು ಹೇಳಿದರು ಎಂದರೆ, ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಲಾಯರುಗಳು ಅಪಲೇಟ್ ಟ್ರಿಬ್ಯುನಲ್‌ನಲ್ಲಿ ಹಾಜರಾಗುವುದಕ್ಕೆ ಅವಕಾಶವನ್ನು ಕೊಡಲಾಗಿದೆ. ಲಾಯರುಗಳು ಅಟೆಂಡ್ ಆಗುವುದರಿಂದ ಗೇಣಿದಾರರಿಗೆ ಇನ್ನೂ ಅನುಕೂಲವೇ ಆಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಇಷ್ಟು ವಿಚಾರಗಳನ್ನು ಈಗ ಹೇಳಿ ಇನ್ನು ಕೊನೆಯದಾಗಿ ಹೇಳುವುದೇನೆಂದರೆ, ಕ್ಯಾಸ್ಟ್ ಸರ್ಟಿಫಿಕೇಟ್‌ಗಳನ್ನು ಪಡೆಯುವಾಗ ಬಹಳ ತೊಂದರೆಯಾಗುತ್ತಿದೆ. ಈ ವಿಷಯವನ್ನು ನಾನು ಕಳೆದ ಸಾರಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗಲೂ ಹೇಳಿದ್ದೆ. ಆದರೆ, ಅದನ್ನು ಕಾರ್ಯಗತ ಮಾಡಲಿಲ್ಲ. ಯಾರಾದರೂ ಒಂದು ಸಾರಿ ಜಾತಿ ಸರ್ಟಿಫಿಕೇಟ್‌ನ್ನು ಪಡೆದರೆ ಪುನಃ ಸರ್ಟಿಫಿಕೇಟ್ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲದ ಹಾಗೆ ಮಾಡಬೇಕು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಒಂದು ಸಾರಿ ನಾಯಕ ಎಂಬ ಜಾತಿಗೆ ಸರ್ಟಿಫಿಕೇಟ್ ತೆಗೆದುಕೊಂಡರೆ ಸಾಕು ಅವನು ಎಂದೆಂದೂ ನಾಯಕ ಜಾತಿಯವನೇ ಆಗಿರುತ್ತಾನೆಯೇ ಹೊರತು ಬೇರೆ ಜಾತಿಯವನಾಗುವುದಕ್ಕಾಗುವುದಿಲ್ಲ. ಬೇರೆ ಜಾತಿ ಆಗುವುದಕ್ಕೆ ಸಾಧ್ಯವೂ ಇಲ್ಲ. ಸ್ಕೂಲ್‌ನಲ್ಲಿ ಓದುವ ಮಕ್ಕಳಿಗೆ ಯಾವುದಾದರೂ ಒಂದು ಹಂತದಲ್ಲಿ ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಇವನು ಇಂಥ ಜಾತಿಗೆ ಸೇರಿದವನೆಂದು ನಮೂದಿಸಿಬಿಟ್ಟರೆ ಅವನ ಪೂರ್ತಿ ಜೀವನದುದ್ದಕ್ಕೂ ಅದೇ ಇರಬೇಕು. ಪ್ರತಿ ವರ್ಷ ಜಾತಿ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ತಾಲ್ಲೂಕು ಆಫೀಸ್‌ಗಳಲ್ಲಿ ಅಧಿಕಾರಿಗಳ ಮುಂದೆ ಅಲೆಯಬೇಕಾದ ಪ್ರಮೇಯ ಇರುವುದಿಲ್ಲ. ಈ ರೀತಿ ಮಾಡುವುದರಿಂದ ಸರ್ಕಾರದ ಅಧಿಕಾರಿಗಳಿಗೂ ಕೆಲಸ ಕಡಿಮೆಯಾದಂತಾಗುತ್ತದೆ. ವರ್ಷೇ ವರ್ಷೇ ಸರ್ಟಿಫಿಕೇಟ್‌ಗಳನ್ನು ಮಾಡಿಸಿಕೊಳ್ಳುವುದಕ್ಕೆ ಜನರು ಹೋಗುವುದರಿಂದ, ಜನರಿಗೂ ತೊಂದರೆ, ಅಧಿಕಾರಿಗಳಿಗೂ ಕೆಲಸ ಜಾಸ್ತಿಯಾಗುತ್ತದೆ. ದಿವಂಗತ ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ನಾಯಕ್ ಜನಾಂಗದವರ ಹಿಂದುಳಿದ ಜಾತಿಯವರಿಗೆ ಸಿಗುವ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದರು. ಮಾನ್ಯ ಗುಂಡೂರಾಯರ ಕಾಲದಲ್ಲಿ ಈ ನಾಯಕ ಜಾತಿ ಎನ್ನುವ ಜನಾಂಗದವರು ಚಿತ್ರದುರ್ಗ, ಬಳ್ಳಾರಿ ಮತ್ತು ಬೆಳಗಾಂನಲ್ಲಿ ಮಾತ್ರ ಇದ್ದಾರೆ. ಅಲ್ಲಿ ವಾಸ ಮಾಡತಕ್ಕ ಮೂಲ ಜನಗಳಿಗೆ ಮಾತ್ರ ಹಿಂದುಳಿದ ಜನಾಂಗದ ಸರ್ಟಿಫಿಕೇಟ್‌ನ್ನು ಕೊಡಿ ಇನ್ನು ಉಳಿದ ಕಡೆ ಇರುವ ನಾಯಕ ಜನಾಂಗದವರು ಹಿಂದುಳಿದ ಜನಾಂಗಕ್ಕೆ ಸೇರಿದವರಲ್ಲವೆಂದು ಮಾಡಿದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಅಧಿಕಾರಕ್ಕೆ ಬಂದ ಮೇಲೆ ಕ್ಯಾಬಿನೆಟ್ ಒಂದು ತೀರ್ಮಾನ ತೆಗೆದುಕೊಂಡು ಈ ನಾಯಕ ಜನಾಂಗದವರೂ ಕೂಡ ಆರ್ಥಿಕವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಹಳ ಹಿಂದೆ ಬಿದ್ದಿದ್ದಾರೆ, ಇವರಿಗೆ ಎಸ್.ಟಿ. ಜನಾಂಗದವರಿಗೆ ಯಾವ ರೀತಿ ಸೌಲಭ್ಯಗಳನ್ನು ಕೊಡಲಾಗುತ್ತಿದೆಯೋ ಅದೇ ರೀತಿ ಇವರಿಗೂ ಕೊಡುವುದಕ್ಕೆ ಅನುಕೂಲವಾಗುವಂಥ ಕಾನೂನಿಗೆ ಅನುಮತಿ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ರೆಕ್‌ಮೆಂಡ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅದಕ್ಕೆ ಇನ್ನೂ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿಲ್ಲ. ನಾಯಕ ಜನಾಂಗಕ್ಕೆ ಎಸ್.ಟಿ. ಯವರಿಗೆ ಯಾವ ರೀತಿ ಸೌಲಭ್ಯಗಳನ್ನು ಕೊಡಲಾಗುತ್ತಿದೆಯೋ ಅದೇ ರೀತಿ ಸೌಲಭ್ಯಗಳನ್ನು ಕೊಡಬೇಕು. ಕಡೇ ಪಕ್ಷ ವಿದ್ಯಾಭ್ಯಾಸಕ್ಕಾಗಿಯಾದರೂ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ನಮ್ಮ ನಾಯಕ ಜನಾಂಗದವರನ್ನು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಕರೆಯುತ್ತಾರೆ. ಚಿತ್ರದುರ್ಗದ ಕಡೆ ವಾಲ್ಮೀಕಿ ಜನಗಳು ಎಂದೂ, ದಾವಣಗೆರೆಯಲ್ಲಿ ಬೇಡ ಜನಗಳು ಎಂದೂ, ಇನ್ನೊಂದು ಕಡೆ ತಳವಾರ ಜನಗಳು ಎಂದು, ಮೈಸೂರು ಜಿಲ್ಲೆಯಲ್ಲಿ ಪರಿವಾರದವರು ಎಂದು ಕರೆಯುತ್ತಾರೆ. ಈ ಎಲ್ಲಾ ಜನಾಂಗದವರು ಒಂದೇ ಜಾತಿಗೆ ಸೇರಿದವರಾಗಿದ್ದರೂ ಕೂಡ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇನ್ನೊಂದು ಶೋಚನೀಯ ಪರಿಸ್ಥಿತಿ ಎಂದರೆ, ಎನ್.ಎ.ವೈ.ಎ.ಕೆ. ಎಂದು ಬರೆದಿದ್ದರೆ ಎಸ್.ಟಿ. ಸರ್ಟಿಫಿಕೇಟ್‌ನ್ನು ನಮ್ಮ ಅಧಿಕಾರಿಗಳು ಕೊಡುತ್ತಾರೆ. ಆದರೆ ಎನ್.ಎ.ಐ.ಕೆ. ಎಂದು ನಮೂದು ಮಾಡಿದರೆ ಸರ್ಟಿಫಿಕೇಟ್‌ನ್ನು ಕೊಡುವುದಿಲ್ಲ. ಇದರಿಂದ ನಾಯಕ್ ಜನಾಂಗದವರಿಗೆ ಬಹಳ ತೊಂದರೆಯಾಗುತ್ತಿದೆ. ಮಾನ್ಯ ಅಧ್ಯಕ್ಷರೇ, ಇವತ್ತು 30 ರೂಪಾಯಿಗಳ ವೃದ್ಧಾಪ್ಯ ವೇತನವನ್ನು ವೃದ್ಧರಿಗೆ ಕೊಡುತ್ತಿದ್ದೇವೆ. ನಾಳೆ ಯಾವುದೋ ಒಂದು ಬೇರೆ ಸರ್ಕಾರ ಬಂದಾಗ ಆ ಕಾನೂನು ನಿಲ್ಲಿಸುತ್ತೇವೆ, ಜನತಾ ಸರ್ಕಾರ ಇದ್ದಾಗ ಯಾರು ಯಾರು ಮಾಸಾಶನ ತೆಗೆದುಕೊಂಡಿದ್ದೀರೋ ಅವರೆಲ್ಲಾ ವಾಪಸ್ ಕೊಡಿ ಎಂದರೆ ಅದು ಮೂರ್ಖತನವಾಗುತ್ತದೆ. ಹಾಗೆಯೇ

ನಾಳೆ ಯಾವುದೋ ಬೇರೆ ಒಂದು ಸರಕಾರ ಬರುತ್ತದೆ. ಅದು ಈ ಸೌಲಭ್ಯವನ್ನು ನಿಲ್ಲಿಸುತ್ತದೆ. ಉದಾಹರಣೆಗೆ ಜನತಾ ಸರ್ಕಾರ ಇದ್ದಾಗ ಕೊಟ್ಟ ಸರ್ಟಿಫಿಕೇಟನ್ನು ಮುಂದೊಮ್ಮೆ ಯಾರಾದರೂ ಬೇರೆ ಸರಕಾರ ಬಂದಾಗ ಅದನ್ನು ವಾಪಸ್ಸು ಕೊಡಿ ಎಂದು ಹೇಳಿದರೆ, ಅದು ಮೂರ್ಖತನವಾಗುತ್ತದೆ. ಅದೇ ರೀತಿಯಲ್ಲಿ ಮಾನ್ಯ ದೇವರಾಜ ಅರಸ್‌ರವರು ಇದ್ದಾಗ, ಅವರ ಕಾಲದಲ್ಲಿ ಕೊಟ್ಟಂಥ ಸರ್ಟಿಫಿಕೇಟ್‌ಗಳು ಈಗ ನಾವು ಸುಳ್ಳು ಎಂದು ಹೇಳಿದರೆ ಹೇಗೆ ಆಗುತ್ತದೆ? ಆದುದರಿಂದ ದಯಮಾಡಿ ತಾವು ಸಿ. ಆರ್. ಇ. ಸೆಲ್‌ನವರಿಗೆ ಈ ಒಂದು ಆದೇಶವನ್ನು ಕೊಡಬೇಕು. ದೇವರಾಜ್ ಅರಸ್‌ರವರ ಕಾಲದಲ್ಲಿ ಪಡೆದಂತಹ ಜಾತಿ ಸರ್ಟಿಫಿಕೇಟ್‌ಗಳು ಏನಿವೆ ಅವುಗಳನ್ನು ರದ್ದು ಮಾಡುವ ಮತ್ತು ಅಮಾನ್ಯ ಮಾಡುವ ಕೆಲಸ ನಡೆಯುತ್ತಾ ಇದೆ. ಇದರಿಂದ ಕೆಲವರಿಗೆ ಆಗುತ್ತಿರುವ ಒಂದು ಅನ್ಯಾಯವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಭೂಪತಿಯವರು ಶಾಸಕರು ಇತ್ತೀಚೆಗೆ ಒಳ್ಳೆಯ ಕೆಲಸವನ್ನು ಮಾಡುತ್ತಾ ಇದ್ದಾರೆ ಎಂದು ಹೇಳಿದ್ದಾರೆ. ನಮ್ಮಲ್ಲಿ ಈಗ ಮಂಡಳ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆಯು ಜಾರಿಗೆ ಬಂದಿದೆ. ಅಧಿಕಾರ ವಿಕೇಂದ್ರೀಕರಣವಾಗಿದೆ. ಶಾಸಕರ ಜವಾಬ್ದಾರಿ ಕೂಡ ಅಷ್ಟೇ ಮಹತ್ವದ್ದಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಲ್ಲಿಯ ಕೆಲಸಕಾರ್ಯಗಳ ಮೇಲೆ ನಿಗಾ ವಹಿಸಿ ತನ್ನ ಕರ್ತವ್ಯವನ್ನು ಶಾಸಕರು ಮಾಡುವಲ್ಲಿ ಅವರಿಗೆ ಸ್ವಲ್ಪ ಅನಾನುಕೂಲತೆಯೂ ಇದೆ. ತಮ್ಮ ಕ್ಷೇತ್ರದಲ್ಲಿನ ದೂರದ ಹಳ್ಳಿಗಳಿಗೆ ಹೋಗ ಬೇಕು ಅಂದರೆ ಸರಿಯಾದ ವಾಹನ ಸೌಲಭ್ಯ ಇರಬೇಕು. ತಹಶೀಲ್ದಾರರ ಹತ್ತಿರ ಇರುವ ಜೀಪನ್ನು ಉಪಯೋಗಿಸುವುದು ಕೆಲವೊಂದು ಸಾರಿ ಕಷ್ಟಸಾಧ್ಯವಾಗುತ್ತದೆ. ಆದುದರಿಂದ ಇನ್ನೂ ಹೆಚ್ಚಿನ ಒಂದು ಕೆಲಸವನ್ನು ಶಾಸಕರ ಕಡೆಯಿಂದ ನಿರ್ವಹಿಸಿಕೊಳ್ಳ ಬೇಕಾದರೆ, ಅವರಿಗೆ ಒಂದು ಜೀಪನ್ನು ಮತ್ತು ಒಬ್ಬ ಸಹಾಯಕನನ್ನು ಅಂದರೆ ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಬಲ್ಲವರನ್ನು ಕೊಡಬೇಕು. ಆ ಮೂಲಕ ಇನ್ನೂ ಜನೋಪಯುಕ್ತ ಕೆಲಸವನ್ನು ಅವರು ಮಾಡುವಂತೆ ನೋಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ಶಾಸಕರು ಇನ್ನೂ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಶಕ್ತರಾಗುತ್ತಾರೆ ಎಂದು ಹೇಳಬಯಸುತ್ತೇನೆ. ಆದುದರಿಂದ ಈ ಸೌಲಭ್ಯಗಳನ್ನು ಶಾಸಕರಿಗೆ ಒದಗಿಸಿಕೊಡತಕ್ಕಂಥಾದ್ದರ ಬಗ್ಗೆ ಸರಕಾರದವರು ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ರಾಜ್ಯಪಾಲರ ಭಾಷಣದಲ್ಲಿ ಜನತಾ ಸರ್ಕಾರದ ಸಾಧನೆಗಳನ್ನು ಹೇಳಿದ್ದಾರೆ. ಅಂತೆಯೇ ಕೊನೆಯದಾಗಿ, ನಿವೇಶನ ರಹಿತ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವ ಯೋಜನೆಯ ಬಗ್ಗೆ ಹೇಳಿದ್ದಾರೆ. ೧೯೮೮ನೇ ಇಸವಿಯ ಮಾರ್ಚ್ ೩೧ನೇ ತಾರೀಖಿನ ವೇಳೆಗೆ ಗ್ರಾಮೀಣ ಪ್ರದೇಶದಲ್ಲಿ ಮನೆ ನಿವೇಶನ ಇಲ್ಲದವರು ಯಾರು ಇರಕೂಡದು ಎಂಬುದೇ ಸರಕಾರದ ಉದ್ದೇಶ ಎಂದು ಹೇಳಿದ್ದಾರೆ. ಅಂದರೆ ಬಡವರಿಗೆ ಯಾರಿಗೆ ಸೈಟ್ ಇಲ್ಲವೊ ಅಂತಹ ಎಲ್ಲರಿಗೂ ಕೂಡ ಸೈಟ್‌ನ್ನು ಕೊಡುವಂಥ ಒಂದು ಮಹತ್ವವಾದ ಯೋಜನೆಯನ್ನು ಅದರ ಬಗ್ಗೆ ತೀರ್ಮಾನವನ್ನು ನಮ್ಮ ಸರಕಾರ ತೆಗೆದುಕೊಂಡಿದೆ ಎಂದು ಹೇಳಲು ನಾನು ತುಂಬಾ ಸಂತೋಷಪಡುತ್ತೇನೆ. ಅಂತೆಯೇ ಸರಕಾರದವರು ಏನೇ ಒಳ್ಳೆಯ ತಿದ್ದುಪಡಿಗಳನ್ನು ತಂದರೂ ಕೂಡ ಅಲ್ಲಿನ ಅಧಿಕಾರಿಗಳು ಅದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಚಾಪೆಯ ಕೆಳಗೆ ತೂರುವ ಅವರ ಪ್ರವೃತ್ತಿಯ ಬಗ್ಗೆ ನಾನು ಹೆಚ್ಚಿಗೆ ಹೇಳ ಬೇಕಾದುದಿಲ್ಲ ಎಂದು ಭಾವಿಸುತ್ತೇನೆ. ಇಂತಹ ಸಂದರ್ಭಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಕರಾಳ ಕೆಲಸವನ್ನು ಪ್ರಾರಂಭ ಮಾಡುತ್ತವೆ. ಒಂದು ಜಮೀನನ್ನು ಸೈಟ್‌ಗಾಗಿ ಅಕ್ವೈರ್ ಮಾಡಿಕೊಂಡರೆ ಅದಕ್ಕೆ ಕೂಡಲೇ ಕೋರ್ಟ್‌ಗೆ ಹೋಗಿ ಸ್ಟೇ ಇತ್ಯಾದಿಗಳನ್ನು ತಂದು ಅದು ೧೦–೧೫ ವರ್ಷಗಳಾದರೂ ತೀರ್ಮಾನವಾಗದ ಹಾಗೆ ಮಾಡಿಬಿಡುತ್ತಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಬಡಜನತೆಗೆ ಅನುಕೂಲವಾಗಲಿ ಎಂದು ಸರಕಾರ ಉದ್ದೇಶಿಸಿರುವಾಗ ಯಾವುದೇ ಕಾರಣಕ್ಕಾಗಿ ಇಂತಹ ಜನರು ಕೋರ್ಟಿಗೆ ಹೋಗಿ ಬಡಜನರಿಗೆ ಸಿಗುವ ಜಾಗಕ್ಕೆ ತೊಂದರೆ ಕೊಡದಂತೆ ನೋಡಿಕೊಳ್ಳಬೇಕು, ಅಂತೆಯೇ ಇಂತಹ ಸಂದರ್ಭಗಳಲ್ಲಿ ಸಣ್ಣ ಹಿಡುವಳಿದಾರರು ಯಾರಿದ್ದಾರೆ ಅಂತಹವರಿಗೆ ಹೆಚ್ಚಿನ ಪರಿಹಾರವನ್ನು ಕೊಟ್ಟು ಈ ಕೆಲಸವನ್ನು ಮಾಡಬೇಕು. ನಮ್ಮ ಸರಕಾರವು ಏನೊಂದು ಒಳ್ಳೆಯ ಗುರಿಯನ್ನು ಇಟ್ಟುಕೊಂಡಿದೆ, ಅದನ್ನು ಸಾಧಿಸುವುದಕ್ಕೆ ಯಾವ ಅಡೆತಡೆಗಳು ಬಾರದಂತೆ ನೋಡಿಕೊಂಡು ಮತ್ತು ಅದರ ದುರುಪಯೋಗವನ್ನು ಯಾರು ಮಾಡಿಕೊಳ್ಳದಂತೆ ನೋಡಿಕೊಂಡು ಆ ಒಂದು ಒಳ್ಳೆಯ ಗುರಿಯನ್ನು ಸಾಧಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ದಿಸೆಯಲ್ಲಿ ಸೂಕ್ತ ತಿದ್ದುಪಡಿಯನ್ನು ತಂದು ಜನತೆಗೆ ಅನುಕೂಲವಾಗುವಂತೆ ಮಾಡಿ ಜನರಿಗೆ ಇನ್ನೂ ಹೆಚ್ಚಿನ ಸಹಾಯ, ಸಹಕಾರವನ್ನು ನೀಡಲಿ ಮತ್ತು ಸರಕಾರ

ಇದುವರೆಗೆ ಮಾಡಿದಂತಹ ಜನೋಪಯುಕ್ತ ಕೆಲಸಕಾರ್ಯಗಳಿಗಾಗಿ ಸರಕಾರವನ್ನು ಹೆಮ್ಮೆಯಿಂದ ಅಭಿನಂದಿಸುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಸನ್ಮಾನ್ಯ ಅಧ್ಯಕ್ಷರೆ. ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದಂಥ ಭಾಷಣವನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ, ಆ ಒಂದು ಭಾಷಣವು ಒಳ್ಳೆಯ ವಾಸ್ತವಾಂಶಗಳನ್ನು ಹೊಂದಿರತಕ್ಕಂಥ ಚಿತ್ರವನ್ನು ನಮ್ಮ ಮುಂದೆ ಈ ಕರ್ನಾಟಕದ ಜನತೆಯ ಮುಂದೆ ಇಟ್ಟಿದೆ ಎಂದು ತುಂಬಾ ಹೆಮ್ಮೆಯಿಂದ ನಾನು ಹೇಳಬಯಸುತ್ತೇನೆ.

ಅವಿರತವಾದಂತಹ ಬರಗಾಲ ಪರಿಸ್ಥಿತಿಯು ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಇತ್ತು ಹಾಗೂ ನಮ್ಮ ಸರಕಾರವನ್ನು ಯಾವಾಗ ಪತನ ಮಾಡುತ್ತೇವೆ ಎಂದು ಕೇಂದ್ರಸರ್ಕಾರದವರು ಕಿರಿಕಿರಿ ಮಾಡಿ ಪ್ರಯತ್ನಿಸುತ್ತಿದ್ದರೂ ಕೂಡ ನಮ್ಮ ಸರ್ಕಾರ ಮಾಡಿದ ಸಾಧನೆಗಳನ್ನು ರಾಜ್ಯಪಾಲರ ಭಾಷಣ ದಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಮಾನ್ಯ ಜಯಕುಮಾರ್‌ರವರು ತಮ್ಮ ಭಾಷಣದ ಕೊನೆಯಲ್ಲಿ ಹೇಳಿದಂತೆ ಬಡವರಿಗಾಗಿ ಎರಡು ಭರವಸೆಗಳನ್ನು ಕೊಟ್ಟಿದ್ದಾರೆ.

"ಇನ್ನು ಎರಡು ವರ್ಷದೊಳಗಾಗಿ ಎಲ್ಲಾ ಗ್ರಾಮಗಳಿಗೆ ಹರಿಜನ ಬಸದಿಗಳಿಗೆ ಮತ್ತು ಎಲ್ಲಾ ತಾಂಡಾಗಳಿಗೆ ವಿದ್ಯುದ್ದೀಕರಣ ಕಾರ್ಯವನ್ನು ಪೂರ್ತಿ ಮಾಡುತ್ತೇವೆ ಮತ್ತು ರಾಜ್ಯದಲ್ಲಿರುವ ಎಲ್ಲಾ ನಿವೇಶನ ರಹಿತರಿಗೆ ನಿವೇಶನ ಹಂಚುತ್ತೇವೆಂದು ಹೇಳುವಂತಹ ಬಹಳ ಮಹತ್ವಾಕಾಂಕ್ಷೆ ಯೋಜನೆ ಅದು ಎಂದು ಹೇಳಬಹುದು." ಮಹತ್ವಾಕಾಂಕ್ಷೆ ಯೋಜನೆ ಎಂದು ಇದನ್ನು ಚರ್ಚಿಸುತ್ತೇನೆ ತಮಗೆ ತಿಳಿದಂತೆ ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷವಾಗಳಯಿತು ೪೦ನೇ ವರ್ಷವನ್ನು ನಾವು ಆಚರಣೆ ಮಾಡುತ್ತಿದ್ದೇವೆ ೪೦ನೇ ವರ್ಷಕ್ಕೆ ನಮ್ಮ ಸರ್ಕಾರ ಬಹಳ ಮಹತ್ವವಾದ ಕೊಡುಗೆಯನ್ನು ನೀಡಿದೆ ಅದನ್ನು ಮಾನ್ಯ ರಾಜ್ಯಪಾಲರ ಕೈಯ್ಯಲ್ಲಿ ಹೇಳಿಸಿದೆಯೆಂದು ಹೇಳುತ್ತಾ ಈ ಸರಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ, ಕಳೆದ ವರ್ಷ ಆಗಿರುವಂತಹ ಒಂದು ಹೊಸ ಪದ್ಧತಿ ಜಾರಿಗೆ ಬಂದಿದೆ ಅದು ಯಾವುದೆಂದರೆ ಅಧಿಕಾರ ವಿಕೇಂದ್ರೀಕರಣ, ಅಧಿಕಾರ ವಿಕೇಂದ್ರೀಕರಣದ ಕೆಲಸ ಈ ಒಂದು ವಿಧಾನ ಬಹಳ ಹೊಸದು ಆದ್ದರಿಂದ ಇದು ಇನ್ನೂ ಜನ ಸಾಮಾನ್ಯರಿಗೆ ತಲುಪುವ ದಿಶೆಯಲ್ಲಿ ಅಡ್ಡಿ ಅಡಚಣೆಗಳು ಬರುವುದು ಸ್ವಾಭಾವಿಕ. ಈ ಅಧಿಕಾರವಿಕೇಂದ್ರೀಕರಣದ ವ್ಯವಸ್ಥೆ ಯಾವ ರೀತಿಯಲ್ಲಿ ಯಶಸ್ವಿಯಾಗುತ್ತಿದೆ ಎಂದು ಇಡೀ ದೇಶವೇ ನಮ್ಮನ್ನು ಇವತ್ತು ಕುತೂಹಲದಿಂದ ನೋಡುವಂತಹ ಕಾಲ ಬಂದಿದೆ. ಈ ವ್ಯವಸ್ಥೆಯಲ್ಲಿ ಇರುವಂತಹ ಅಡ್ಡಿ ಅಡಚಣೆಗಳನ್ನು ನಿವಾರಿಸಿ ಪಂಚಾಯತ್ ರಾಜ್ ಮತ್ತು ಜಿಲ್ಲಾಪರಿಷತ್ ವ್ಯವಸ್ಥೆಯಿಂದಾಗಿ ಜನ ಸಾಮಾನ್ಯ ಉದ್ಧಾರವಾಗುತ್ತಿದೆ ಅದರಿಂದ ಕಲ್ಯಾಣ ಕಾರ್ಯವಾಗುತ್ತಿದೆ ಎಂದು ಹೇಳಬಹುದಾಗಿದೆ ಇದು ಗಾಂಧೀ ರಾಜ್ಯವೆಂಬ ಕಲ್ಪನೆ ಯನ್ನು ಮೂಡಿಸುವುದಕ್ಕಾಗಿ ಸರಕಾರ ಮಂಡಲ ಪಂಚಾಯತಿ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಿ ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಅದರ ಜೊತೆಗೆ ಮಾನ್ಯ ರಾಜ್ಯಪಾಲರು ನಮಗೆ ಅನೇಕರಿಗೆ ತಿಳಿಯುದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಹಸಿರುಕಾರ್ಡಿನ ಯೋಜನೆಯಲ್ಲಿ ೩೧ ೯೩.೭೭೦ ಕುಟುಂಬಗಳಿಗೆ ಪ್ರಯೋಜನವಾಗಿದೆಯೆಂದು ಪ್ರಸ್ತಾಪ ಮಾಡಿದ್ದಾರೆ ಇದು ಬಹಳ ಒಳ್ಳೆಯ ವಿಚಾರ ಬಡವರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯವನ್ನು ಪೂರೈಸುವಂತಹ ಕೆಲಸವೇನಿದೆ ಇದು ಬಹಳ ಜವಾಬ್ದಾರಿಯುತವಾದ ಕೆಲಸ. ಈ ಕಾರ್ಯ ಹೆಚ್ಚು ಹೆಚ್ಚಾಗಿ ಮುಂದುವರಿಯಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ ತಮ್ಮ ಕ್ಷೇತ್ರದಲ್ಲೂ ಈ ಕಾರ್ಯ ಆಗಿರಬೇಕು. ಅದರಲ್ಲಿ ಅಲ್ಪಸಲ್ಪದೋಷ ಇದೆ. ಈ ಏಜೆನ್ಸಿಗಳ ಮೂಲಕ ಆಹಾರ ವಿತರಣೆ ಮಾಡುವುದು,ಒಂದೊಂದು ನಡೆದಿದೆ. ಊರಿನಲ್ಲಿ ಬೇರೆ ಬೇರೆಯವರು ವಿತರಣೆ ಮಾಡುತ್ತಾರೆ ಒಂದು ಕಡೆ ಪಂಚಾಯಿತಿಯವರು ಹಂಚುತ್ತಾರೆ ಇನ್ನೊಂದು ಕಡೆ ಗ್ರಾಮ ಮಂಡಳಿಯವರು ಹಂಚುತ್ತಾರೆ, ಮತ್ತೊಂದು ಕಡೆ ಕೆಲವು ವ್ಯಕ್ತಿಗಳು ಹಂಚುತ್ತಾರೆ, ಮಗದೊಂದು ಕಡೆ ಕನ್ಸೂಮರ್ ಸೊಸೈಟಿಯವರು ಹಂಚುತ್ತಾರೆ. ನಾನು ತಮ್ಮ ಮೂಲಕ ಆಹಾರ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಲ್ಲಿಯವರೆಗೆ ಮಂತ್ರಿಗಳು ಇಲ್ಲಿಯೇ ಇದ್ದರು ಈಗ ಎಲ್ಲೋ ಹೊರಗಡೆ ಹೋಗಿದ್ದಾರೆಂದು ಅನಿಸುತ್ತದೆ ಅದು ಇರಲಿ, ನನ್ನ ವಿನಂತಿ ಏನೆಂದರೆ ನೀವು ಏನು ಏಜೆನ್ಸಿಗಳ ಮೂಲಕ ಸರಬರಾಜು ಮಾಡುತ್ತೀರಿ ಅದು ಒಂದು ಏಕ

ರೂಪವಾದ ಏಜೆನ್ಸಿಯನ್ನಾಗಿ ಮಾಡಿದರೆ ಸಮರ್ಪಕವಾಗುತ್ತದೆಂದು ನಾನು ಶಾಸಕನಾದ ಮೇಲೆ ಜನ ನನ್ನನ್ನು ಏನೆಂದು ಕೇಳುತ್ತಾರೆಂದರೆ ಹಸಿರು ಕಾರ್ಡನ್ನು ಬರೀ ಹಳ್ಳಿ ಪ್ರದೇಶದಲ್ಲಿದ್ದವರಿಗೆ ಮಾತ್ರ ಕೊಡುತ್ತೀರಿ ಅವರು ಕಡಿಮೆ ದರದಲ್ಲಿ ಅಕ್ಕಿಕೊಂಡು ತಿನ್ನುತ್ತಾರೆ ನಮಗೇಕೆ ಆ ಹಕ್ಕು ಇಲ್ಲ ಎಂದು. ಹಿಂದೆ ಹಳ್ಳಿಯೊಳಗೆ ಕೊಡುವಂತಹ ಸಕ್ಕರೆ ಪ್ರಮಾಣ ಬಹಳ ಕಡಿಮೆ ಇತ್ತು. ಪೇಟೆಯೊಳಗೆ ಇರುವಂತಹವರಿಗೆ ಜಾಸ್ತಿ ಕೊಡುತ್ತೀರಿ ಎನ್ನುವ ಆರೋಪವಿತ್ತು. ಹಸಿರು ಕಾರ್ಡನ್ನು ಗ್ರಾಮಾಂತರ ಪ್ರದೇಶಗಳವರಿಗೆ ಮಾತ್ರ ಏಕೆ ಕೊಡುತ್ತೀರಿ, ಪಟ್ಟಣ ಪ್ರದೇಶದವರಿಗೂ ಕೊಡಿ ಎನ್ನುವ ಒತ್ತಾಯ ಜನರಿಂದ ಇವತ್ತು ಬರುತ್ತಿದೆ. ಮಾನ್ಯ ರಾಜ್ಯಪಾಲರು ಆ ಸೂಕ್ಷ್ಮತೆಯನ್ನು ತಿಳಿದುಕೊಂಡು ಇದರ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. 20,000ಕ್ಕಿಂತ ಕಡಿಮೆ ಜನಸಂಖ್ಯೆಯಿರುವ ನಗರ ಪ್ರದೇಶಗಳಲ್ಲಿ ಹಸಿರು ಕಾರ್ಡನು ಹಂಚುವ ಯೋಜನೆಯನ್ನು ಮಾಡುತ್ತೇವೆಂದು ಸೂಚ್ಯವಾಗಿ ಹೇಳಿದ್ದಾರೆ ಇದು ಆಗಬೇಕು ಗ್ರಾಮಾಂತರ ಪ್ರದೇಶದಲ್ಲಿ ಮತ್ತು ಪಟ್ಟಣಗಳಲ್ಲಿ ಅಂತರ ಉಳಿಯಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಹಾರಧಾನ್ಯವನ್ನು ಕಾಡಿಬೇಡಿಯಾದರೂ ತಂದು ಇಲ್ಲವೇ ನಮ್ಮ ಆಹಾರಧಾನ್ಯದ ಉತ್ಪಾದನೆಯನ್ನು ವೃದ್ಧಿಗೊಳಿಸಿ ದಿಟ್ಟವಾದ ಕ್ರಮವನ್ನು ಕೈಗೊಳ್ಳಬೇಕು ಈ ಮೂಲಕ ಪಟ್ಟಣಪ್ರದೇಶದವರಿಗೆ ಹಸಿರು ಕಾರ್ಡನ್ನು ಹಂಚುವಂತಹ ಕ್ರಮವನ್ನು ಸರಕಾರ ಕೈಗೊಳ್ಳಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಆಮೇಲೆ ಬಹಳ ಹೆಮ್ಮೆಯಿಂದ ಹೇಳಬೇಕಾದ ವಿಷಯವು ಎಂದರೆ ನಮ್ಮ ಸರ್ಕಾರ ಬಂದಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಈಗಿರತಕ್ಕಂಥ ಕುಡಿಯುವ ನೀರಿನ ಬವಣೆಯನ್ನು ನೀಗಿಸಿರುವುದು, ಸ್ವಾತಂತ್ರ್ಯ ಸಿಕ್ಕಿದಾಗ ಗಾಂಧೀಜಿಯವರು ಜವಹರಲಾಲ್‌ನೆಹೆರೂರವರಿಗೆ ಒಂದು ಮಾತನ್ನು ಹೇಳಿದರು ಆ ಮಾತು ಏನೆಂದರೆ ಈ ದೇಶದ ಪ್ರಧಾನಮಂತ್ರಿಯಾಗಿ ಅಧಿಕಾರದಲ್ಲಿ ಕುಳಿತಿದ್ದೀಯೆ, ಇನ್ನು ಹತ್ತು ವರ್ಷ ಯಾವುದೇ ಕಾರ್ಯಕ್ರಮಗಳನ್ನು ನೀನು ಕೈಗೊಳ್ಳಬೇಡ, ರಸ್ತೆಗೆ ಡಾಂಬರು ಹಾಕಿಸುವುದನ್ನು ನಿಲ್ಲಿಸು. ಏನೇನು ಕೆಲಸಗಳು ಇದೆಯೋ ಅವೆಲ್ಲವನ್ನೂ ನಿಲ್ಲಿಸು, ಆದರೆ ಒಂದು ಮಾತನ್ನು ಮಾತ್ರ ಜ್ಞಾಪಕದಲ್ಲಿಟ್ಟುಕೋ, ಅದೇನೆಂದರೆ ಇನ್ನು ಮೂರು ವರ್ಷದ ಒಳಗಾಗಿ ಇಡೀ ನಮ್ಮ ದೇಶದ ಏಳೂವರೆ ಲಕ್ಷ ಹಳ್ಳಿಗಳಿಗೆ ಸಾಧ್ಯವಾದಷ್ಟು ಕುಡಿಯುವ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದೇ ನಾನು ರಾಷ್ಟ್ರಪಿತನಾಗಿ ನಿನಗೆ ಕೊಡುವ ಆದೇಶ ಎಂದು ಹೇಳಿದರು. ಆದರೂ ಕೂಡಾ ನೆಹರೂರವರಿಗೂ ಆ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ. ನೆಹರೂರವರ ನಂತರ ನಮ್ಮ ದೇಶವನ್ನು ಆಳುವಂಥ ಯಾವ ಗಾಂಧಿಯವರು ಕೂಡಾ ಈ ಕೆಲಸವನ್ನು ಮಾಡಲಿಲ್ಲ. ಈ ಕೆಲಸವನ್ನು ಮಾಡಿದವರು ಎಂದರೆ ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಜೀರ್‌ಸಾಬ್‌ರವರಿಗೆ ಆ ಅಭಿನಂದನೆ ಸಿಗುತ್ತದೆ. ಈ ಸಮಯದಲ್ಲಿ ನಾನು ಅವರನ್ನು ಮುಂಕ್ತಕಂಠದಿಂದ ಹೊಗಳಬೇಕಾಗುತ್ತದೆ. ಆದರೂ ಆಗಬೇಕಾದ್ದು ಇನ್ನೂ ಇದೆ. ನಮ್ಮಲ್ಲಿ ಆಗಿರುವಂಥ ದೊಡ್ಡ ದೋಷ ಎಂದರೆ ನಮ್ಮ ಮಾನ್ಯ ಮಿತ್ರರು ಹೇಳಿದರು, ಸಾಕಷ್ಟು ಮಿನಿ ವಾಟರ್ ಇವತ್ತು ಸಣ್ಣ ನೀರಾವರಿ ಕುಡಿಯುವ ನೀರಿನ ಯೋಜನೆಗಳು ಬಂದಿವೆ. ದೊಡ್ಡ ದೊಡ್ಡ ಕುಡಿಯುವ ನೀರಿನ ಯೋಜನೆಯೂ ಕೂಡಾ ಬಂದಿದೆ. ತಪ್ಪು ಏನಾಯಿತು ಎಂದರೆ ಒಂದು ಸಲ ಈ ಗ್ರಾಮಾಂತರ ಪ್ರದೇಶದೊಳಗೆ ಕುಡಿಯುವ ನೀರಿನ ಪೂರೈಕೆಯ ಯೋಜನೆ ಮಾಡಿ ಪಿ.ಎಚ್‌.ಇ. ಅತ್ತಕಡೆ ಹೋದಮೇಲೆ ಮತ್ತೊಮ್ಮೆ ನೋಡುವವರೇ ಇಲ್ಲ. ಜಮಖಂಡಿ ಮುಧೋಳ್ ತಾಲ್ಲೂಕಿನಲ್ಲಿ ಎರಡೂ ತಾಲ್ಲೂಕಿಗೂ ಒಂದೇ ಒಂದು ಸಂಸ್ಥೆ ಇದೆ. ಎರಡು ತಾಲ್ಲೂಕುಗಳಲ್ಲಿ ಒಂದು ಕೊಳವೆಬಾವಿ ಕೆಟ್ಟರೆ, ಒಂದು ಮೋಟಾರ್ ಕೆಟ್ಟರೆ ಒಂದು ಪಂಪ್‌ಸೆಟ್ ಕೆಟ್ಟರೆ ಅಲ್ಲಿ ಒಂದೇ ಒಂದು ತಾಂತ್ರಿಕ ತಜ್ಞರ ಗುಂಪು ಇದೆ. ಎರಡು ತಾಲ್ಲೂಕುಗಳಿಗೂ ಸೇರಿ ಒಂದೇ ಒಂದು ವೆಹಿಕಲನ್ನು ಕೊಟ್ಟಿದ್ದಾರೆ. ಇವುಗಳು ಬಹಳ ದೊಡ್ಡ ತಾಲ್ಲೂಕುಗಳು ಆದಂದರಿಂದ ಸುತ್ತಾಡುವುದಕ್ಕೆ ಆಗುವುದಿಲ್ಲ. ಸರ್ಕಾರದ ಯೋಜನೆ ಬಹಳ ಒಳ್ಳೆಯದು ಇದೆ, ಆದರೆ "ಕೈಗೆ ಬಂದದ್ದು ನೀರು ಬಾಯಿಗೆ ಬಂದಂತೆ ಆಗುವುದಿಲ್ಲ" ಆದ್ದರಿಂದ ಈ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದನ್ನು ಮಾಡಿದರೆ ಮಾತ್ರ ಈ ಯೋಜನೆ ಸಾರ್ಥಕವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ತಾವು ಅತ್ಯಂತ ಶೀಘ್ರಗತಿಯಿಂದ ಮಾಡಬೇಕಾಗುತ್ತದೆ.

ಇನ್ನು ನೀರಾವರಿಯ ಬಗ್ಗೆ ಮೇಲಿಂದ ಮೇಲೆ ಹೇಳುತ್ತಿದ್ದೇವೆ. ಉಳಿದ ಎಲ್ಲಾ ಯೋಜನೆಗಳನ್ನು ಬಿಟ್ಟು ನೀರಾವರಿ ಯೋಜನೆಗಳಿಗೆ ಒತ್ತುಕೊಟ್ಟು ಆ ಕೆಲಸವನ್ನು ತಾವು ಮಾಡಬೇಕು. ಹಣಕಾಸಿನ

ತೊಂದರೆ ಇರುವುದರಿಂದ ಸಧ್ಯಕ್ಕೆ ದೊಡ್ಡ ಯೋಜನೆಗಳನ್ನು ನಮಗೆ ಮಾಡುವುದಕ್ಕೆ ಆಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಈ ಕಾರ್ಯಕ್ರಮಕ್ಕಾಗಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಹೆಚ್ಚು ಹೆಚ್ಚು ಚಿಕ್ಕ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಡಬೇಕು. ನನ್ನ ಜಿಲ್ಲೆಯಲ್ಲಿ ನಾಲ್ಕು ನದಿಗಳು ಇವೆ. ನೀರಾವರಿಗಾಗಿ ನಾಲ್ಕು ನದಿಗಳು ಇದ್ದಂಥದ್ದು ಕರ್ನಾಟಕದಲ್ಲಿ ಯಾವುದೂ ಇಲ್ಲ. ನನ್ನ ಜಿಲ್ಲೆಯಲ್ಲಿ ಮಲಪ್ರಭ, ಘಟಪ್ರಭ, ಕೃಷ್ಣಾ ಮತ್ತು ಭೀಮ ಇವೇ ಆ ನಾಲ್ಕು ನದಿಗಳು. ಈ ನಾಲ್ಕು ನದಿಗಳಿಗೆ ಹತ್ತು-ಹದಿನೈದು ಕಿಲೋಮೀಟರ್‌ಗಳಿಗೆ ಬರಾಜ್‌ನ್ನು ಹಾಕಿದರೆ ಒಳ್ಳೆಯದಾಗುತ್ತದೆ. ಅಪ್ಪರ್ ಕೃಷ್ಣಾ ಯೋಜನೆ ಮಾಡಬೇಕಾದರೆ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ರೀತಿ ಬರಾಜನ್ನು ಹಾಕಿದ್ದರೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಮಾಡುವಂಥ ಪ್ರಸಂಗ ಬರುತ್ತಿರಲಿಲ್ಲ. ಆದ್ದರಿಂದ ಇದಕ್ಕೆ ಹೆಚ್ಚಿಗೆ ಹಣ ಆದರೂ ಚಿಂತೆ ಇಲ್ಲ. ಈ ನದಿಗಳಿಗೆ ಹತ್ತು-ಹದಿನೈದು ಕಿಲೋಮೀಟರ್‌ಗೆ ಬರಾಜನ್ನು ಕಟ್ಟಿದರೆ ಬಹಳ ಅನುಕೂಲವಾಗುತ್ತದೆ. ಈ ವ್ಯವಸ್ಥೆಯನ್ನು ತಾವು ಶೀಘ್ರವಾಗಿ ಮಾಡಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ನಾವು ಒಣಬೇಸಾಯ ಅಭಿವೃದ್ಧಿ ಯೋಜನೆಯನ್ನು ಮಾಡಿದ್ದೇವೆ, ನಮ್ಮಲ್ಲಿ ಬಿಟ್ಟರೆ ಕೇರಳದಲ್ಲಿ ಇದನ್ನು ಮಾಡಿದ್ದಾರೆ. ಒಣಬೇಸಾಯ ಅಭಿವೃದ್ಧಿ ಕಾರ್ಯಕ್ರಮ ಕೈಗೊಂಡಮೇಲೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಗಮನವನ್ನು ಹರಿಸಿದ್ದಾರೆ, ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ. ಬೆಳಗಾಂ ವಿಭಾಗ, ಗುಲ್ಬರ್ಗ ವಿಭಾಗ, ಮೈಸೂರು ವಿಭಾಗಗಳಲ್ಲಿ ಬೇರೆ ಬೇರೆ ಒಣ ಬೇಸಾಯ ಅಭಿವೃದ್ಧಿ ನಿಗಮ ಎಂದು ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸಿಂಧಗಿ ತಾಲ್ಲೂಕಿನಲ್ಲಿ ಚಾಂದಕವಟಿಗೆ ತಾವು ಒಂದು ಸಲ ಹೋದಾಗ ದಯಮಾಡಿ ಇದನ್ನು ನೋಡಬೇಕಾಗುತ್ತದೆ. ಸುಮಾರು ಮೂರು ಸಾವಿರ ಹೆಕ್ಟೇರ್ ಜಮೀನಿನಲ್ಲಿ ಅವರು ಮಾಡಿರುವಂಥ ಕೆಲಸವನ್ನು ನೋಡಿದರೆ ಯಾರಾದರೂ ಅದನ್ನು ಹೊಗಳಲೇಬೇಕು. ಇದನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡಿದರೆ ಅಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಯಾವುದೋ ಯೋಜನೆಗಳಿಗೆ ಹೋಗಿ ಕಂಟ್ರಾಕ್ಟರ್, ಏಜೆಂಟ್ ಹಂಚಿಕೆ ಮಾಡಿಬಿಡುತ್ತಾರೆ. ಈ ಒಣ ಬೇಸಾಯ ನಿಗಮದವರು ಏನು ಬೆಳಗಾಂ ವಿಭಾಗದಲ್ಲಿ ಪ್ರಾಯೋಗಾತ್ಮಕವಾಗಿ ಕೆಲಸವನ್ನು ಮಾಡಿದ್ದಾರೆ. ನಿಜವಾಗಿಯೂ ಅವರು ರೈತರಿಗೆ ಪ್ರಯೋಜನವಾಗುವಂಥ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಅಂಥ ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ಹಣವನ್ನು ಕೊಡಬೇಕು. ಇದಕ್ಕೆ ಸರ್ಕಾರದವರು ಗಮನವನ್ನು ಕೊಟ್ಟಲ್ಲಿ ಮಾತ್ರ ಮಧ್ಯಮ ವರ್ಗದ ಮತ್ತು ಸಣ್ಣ ರೈತರು ಬಹಳ ಸಂತೋಷಪಡುತ್ತಾರೆ. ನಮ್ಮ ಬಿಜಾಪುರ ಜಿಲ್ಲೆ ಅತ್ಯಂತ ಕನಿಷ್ಟ ಪ್ರಮಾಣದಲ್ಲಿ ಮಳೆಯನ್ನು ಪಡೆಯುವಂಥ ಜಿಲ್ಲೆ. ಆದ್ದರಿಂದ ಇಂಥ ಜಿಲ್ಲೆಗಳಿಗೆ ಹೆಚ್ಚು ಹೆಚ್ಚು ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

ಆ ಮೇಲೆ ರೈತರ ಬಗ್ಗೆ ಹೇಳುವುದಾದರೆ ಮಾನ್ಯ ಕೃಷಿ ಸಚಿವರಾದ ದೇಶಪಾಂಡೆಯವರು ಇಲ್ಲಿಯೇ ಇದ್ದಾರೆ. ಸೂರ್ಯಕಾಂತಿ ಬೆಳೆ ವಿಷಯದಲ್ಲಿ ಲಕ್ಷಾಂತರ ರೂಪಾಯಿಗಳು ಹಾನಿ ಆಗಿದೆ. ಎಂದು ಹೇಳಿದ್ದಾರೆ. ಮಾನ್ಯ ಭೂಪತಿಯವರು ಕೋಟ್ಯಾಂತರ ರೂಪಾಯಿ ಹಾನಿ ಆಗಿದೆಯೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಮಾನ್ಯ ದೇಶಪಾಂಡೆಯವರು ಅಕ್ಟೋಬರ್ ತಿಂಗಳಲ್ಲಿ ಅಕಾಲಿಕ ಮಳೆಯಿಂದಾಗಿ ಸೂರ್ಯಕಾಂತಿ ಬೆಳೆಗೆ ಧಕ್ಕೆ ಆಯಿತೆಂದು ಹೇಳಿದ್ದಾರೆ. ನಾನು ಈ ಮಾತನ್ನು ಒಪ್ಪುವುದಿಲ್ಲ. ಈ ವರ್ಷ ಏನು ಆಯಿತು, ಮುಂದಿನ ವರ್ಷದಲ್ಲಿ ಹೀಗೆ ಆಗಲಾರದಂತೆ ಮಾಡಬೇಕು. ಅವರೂ ಸಹಾ ಕೃಷಿ ಮನೆತನದಿಂದ ಬಂದವರು ಕೃಷಿ ಮಂತ್ರಿಗಳಾದ ಮೇಲೆ ಕೃಷಿ ಇಲಾಖೆಯಲ್ಲಿ ಆಮೂಲಾಗ್ರವಾಗಿ ಬದಲಾವಣೆ ಆಗಿರುವುದರಿಂದ ಅವರ ಮೇಲೆ ಹೆಚ್ಚಿನ ವಿಶ್ವಾಸ ನನಗಿದೆ, ಸೂರ್ಯಕಾಂತಿ ಬೆಳೆ ಆಗಲಿ ಅಥವಾ ಯಾವುದೇ ಒಂದು ಬೀಜಕ್ಕೆ ರೈತರು ಜಮಖಂಡಿಯಿಂದ ಬೆಂಗಳೂರಿಗೆ ಬಂದು ಪರದಾಡುವ ಪ್ರಸಂಗವನ್ನು ತಪ್ಪಿಸಬೇಕು. ರೈತರಿಗೆ ಮಹತ್ವವಾಗಿ ಬೇಕಾದಂತಹ ಬೀಜಗಳನ್ನು ಮಳೆಗಾಲ ಬರುವ ಪೂರ್ವದಲ್ಲಿ ಆಯಾಯ ಜಿಲ್ಲಾ ಕೇಂದ್ರಗಳಲ್ಲಿ ಸಂಗ್ರಹ ಮಾಡುವಂತಹ ಏರ್ಪಾಡು ಮಾಡುತ್ತಾರೆಂದು ನನಗೆ ನಂಬಿಕೆ ಇದೆ. ಕೋಟ್ಯಾಂತರ ರೂಪಾಯಿಗಳ ಸೂರ್ಯಕಾಂತಿ ಬೀಜ ಇವೊತ್ತು ಏನು ಹಾಳಾಗುತ್ತಿದೆ ಅವು ಅಕಾಲಿಕ ಮಳೆಯಿಂದಾಗಿ ಹಾಳಾದುದು ಅಲ್ಲ. ಇದು ಒಂದು ಗಂಭೀರವಾದ ವಿಷಯವೆಂದು ತಮಗೆ ತಿಳಿಸಬಯಸುತ್ತೇನೆ. ಬೆಂಗಳೂರಿನ ಕೆಲವು ಲಫಂಗರು ಡಿ.ಸಿ.ಹೆಚ್. ೧ ಹಾಗೂ ಡಿ.ಸಿ.ಹೆಚ್. ೨ ಪ್ಯಾಕೆಟ್ ಅನ್ನು ಸಮೃದ್ಧಿ ಮಾಡುವುದಕ್ಕೆ ವ್ಯಾಪಾರಸ್ಥರು ಚೀಲದಲ್ಲಿ ಬೋಗಸ್ ಬೀಜಗಳನ್ನು ತುಂಬಿ ಮಾರಾಟ ಮಾಡುತ್ತಿದ್ದಾರೆ. ಎಲ್ಲಾ ಜಿಲ್ಲೆಯಲ್ಲಿ ಕೆಲವು ವ್ಯಾಪಾರಸ್ಥರು ಡಿ.ಸಿ.ಹೆಚ್. ಪ್ಯಾಕೇಟ್‌ನ ಖಾಲಿ ಚೀಲದಲ್ಲಿ ರೈತರಿಗೆ ಬೋಗಸ್ ಬೀಜವನ್ನು ಕೊಡು

ತ್ತಿದ್ದಾರೆ. ಈ ಕಾರಣದಿಂದ ಎಷ್ಟು ಯೀಲ್ಡ್ ಬರಬೇಕಾಗಿತ್ತು ಅಷ್ಟು ಬರಲಿಲ್ಲ. ನನ್ನ ತಮ್ಮನಿಗೆ ೧೦ ಕ್ವಿಂಟಾಲ್ ಹಾಕಿದರೆ ಎರಡು ಕ್ವಿಂಟಾಲ್ ಬೆಳೆ ಕೂಡ ಆಗಿಲ್ಲ. ಈ ರೀತಿ ೭೦-೮೦ ರೂಪಾಯಿಗಳ ಬೋಗಸ್ ಬೀಜಗಳನ್ನು ವ್ಯಾಪಾರ ಮಾಡತಕ್ಕ ಕಳ್ಳ ಮಾರಾಟಗಾರರಿಗೆ ಬೀದಿಯಲ್ಲಿ ನಿಂತು ನೀವು ಗುಂಡು ಹಾರಿಸಿದರೆ ನನಗೆ ಸಂತೋಷವಾಗುತ್ತದೆ. ಇವರ ಬಗ್ಗೆ ಯಾವುದೇ ಕ್ರಮವನ್ನು ತಾವು ತೆಗೆದುಕೊಂಡಿಲ್ಲ. ಅನೇಕ ರೈತರು ಇವೊತ್ತು ಕೋಟ್ಯಾಂತರ ರೂಪಾಯಿಗಳ ಹಾನಿಗೆ ಒಳಗಾಗಿದ್ದಾರೆ. ಇದರ ಬಗ್ಗೆ ಸಿ.ಓ.ಡಿ. ತನಿಖೆಯನ್ನು ಮಾಡಿಸಬೇಕು.

ಅಧ್ಯಕ್ಷರು.—ಸ್ವಲ್ಪ ತಾಳಿ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.—ರಾಜ್ಯದಲ್ಲಿ ಬಹಳಷ್ಟು ಕಡೆ ಬೀಜಗಳ ನಷ್ಟ ಆಗಿದೆ ಎಂದು ಒಪ್ಪಿಕೊಂಡಿದ್ದೇನೆ ಕಾರಣ ಮಳೆ ಸಕಾಲಿಕವಾಗಿ ಬರಲಿಲ್ಲ, ಅಕಾಲಿಕ ಮಳೆಯಿಂದಾಗಿ ಹಾಗೂ ಸೈಕ್ಲೋನ್ ಎಫೆಕ್ಟ್‌ನಿಂದ ಈ ರೀತಿ ಆಗಿದೆ. ಈಗ ಕೆಲವರು ಆರೋಪ ಮಾಡಿದ್ದಾರೆ. ಏನೆಂದರೆ ಬೋಗಸ್ ಬೀಜಗಳನ್ನು ವ್ಯಾಪಾರಸ್ಥರು ಮಾರುತ್ತಾ ಇದ್ದಾರೆಂದು. ಅಂತಹ ಯಾವುದೇ ಕಂಪ್ಲೇಂಟ್ ನಮಗೆ ಬಂದಿಲ್ಲ. ಅಂತಹ ಕಂಪ್ಲೇಂಟ್ ಬಂದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ. ಮೊನ್ನೆ ದಾವಣಗೆರೆಯಲ್ಲಿ ಒಬ್ಬ ವ್ಯಾಪಾರಸ್ಥ ಕಳ್ಳ ವ್ಯಾಪಾರ ಮಾಡಿದ್ದಕಾಗಿ ಅವನಿಗೆ ಪ್ರಾಸಿಕ್ಯೂಟ್ ಮಾಡಿ ಅವನಿಗೆ ಫೈನ್ ಹಾಕಲಾಗಿದೆ ದಯವಿಟ್ಟು ನಾನು ತಮ್ಮ ಮೂಲಕ ಶ್ರೀ ತುಂಗಳ್ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ, ಇಂತಹ ಕಳ್ಳ ವ್ಯಾಪಾರಸ್ಥರ ಬಗ್ಗೆ ನಮ್ಮ ಗಮನಕ್ಕೆ ತಂದರೆ ಅವರ ಬಗ್ಗೆ ಸರ್ಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಇದರ ಬಗ್ಗೆ ನಾನು ತಮಗೆ ವಂದನೆಗಳನ್ನು ಸಮರ್ಪಿಸುತ್ತೇನೆ. ಮುಂದಿನ ವರ್ಷವಾದರೂ ಈ ರೀತಿ ಅನ್ಯಾಯ ನಡೆಯದಂತೆ ಮಾಡಿ, ಸರ್ಕಾರದವರ ದೊಡ್ಡ ಸಂಘಟನೆ ಇದೆ, ರೈತ ಸಂಘದ ಹೆಸರಿನಲ್ಲಿ. ಹಸಿರು ಬಾವುಟದ ಹೆಸರಿನಲ್ಲಿ ಕತ್ತಿ ಮಸೆಯುವಂತಹ ಕೆಲವು ಶಕ್ತಿಗಳು ಇವೊತ್ತು ಹೋರಾಡ ಕಾಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರೀತಿ ಇರುವುದರಿಂದ ರೈತರಿಗೆ ಅನ್ಯಾಯ ಆಗಬಾರದು ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತೇನೆ. ದಯವಿಟ್ಟು ಬರುವ ಮಳೆಗಾಲದ ಸಮಯದಲ್ಲಿಯಾದರೂ ಈ ಬೋಗಸ್ ಬೀಜಗಳನ್ನು ಮಾರುವಂತಹ ವ್ಯವಸ್ಥೆಯನ್ನು ತಡೆಗಟ್ಟಬೇಕು. ನಮ್ಮ ಬಾಗಲ್‌ಕೋಟೆಯಲ್ಲಿ ರೈತರು ಬೀಜಗಳನ್ನು ಹೆಚ್ಚಿನ ಬೆಲೆಗೆ ಮಾರುವುದನ್ನು ಘೇರಾವ್ ಮಾಡಿರುವ ವಿಷಯದ ಬಗ್ಗೆ ಪತ್ರಿಕೆಗಳಲ್ಲಿ ಬಂತು. ಇಂತಹ ಪರಿಸ್ಥಿತಿಯಲ್ಲಿ ಸಂಸತ್ ಸದಸ್ಯರು ರೈತರ ಜೊತೆ ಸೇರಿ ಚಳುವಳಿ ಮಾಡುವ ಪ್ರಸಂಗ ಬಂತು. ದುರ್ದೈವದಿಂದ ಇಂತಹ ಪ್ರಸಂಗಗಳನ್ನು ಮುಂದೆ ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕೆಂದು ತಾವು ಹೆಚ್ಚಿನ ಆಸಕ್ತಿ ವಹಿಸುತ್ತೀರೆಂದು ತಮ್ಮ ಮೇಲೆ ವಿಶ್ವಾಸವಿದೆ. ಆ ಮೇಲೆ ಲೋಕ ಅದಲತ್ ವಿಷಯದಲ್ಲಿ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಬೇಡಿಕೊಳ್ಳುವುದು ಏನೆಂದರೆ ಇಂತಹ ಒಂದು ವ್ಯವಸ್ಥೆ ಇತ್ತೀಚಿನ ಪರಿಸ್ಥಿತಿಯಲ್ಲಿ ಲೋಕ ಅದಾಲತ್ ವ್ಯವಸ್ಥೆಯಿಂದ ಮೋಟಾರು ಅಪಘಾತಗಳು ಎಲ್ಲಿ ನಡೆಯುತ್ತವೋ ಅಲ್ಲಿ ಲಕ್ಷಾಂತರ ರೂಪಾಯಿಗಳ ಪರಿಹಾರ ಕೊಡುತ್ತಿದ್ದಾರೆ. ಇತರ ಸವಲತ್ತುಗಳನ್ನು ಕೂಡಾ ಇದೇ ರೀತಿಯಾಗಿ ಎಲ್ಲಾ ಕಡೆ ಕೊಡುವಂತಹ ವ್ಯವಸ್ಥೆಯನ್ನು ಅವರು ಮಾಡುತ್ತಾರೆ ಎಂಬ ವಿಶ್ವಾಸ ಅವರ ಮೇಲೆ ಇದೆ, ಖಂಡಿತ ಅವರು ಈ ರೀತಿ ಮಾಡಿಯೇ ಮಾಡುತ್ತಾರೆ.

೪-೩೦ ಪಿ. ಎಂ.

ಮತ್ತೊಂದು ಗಂಭೀರವಾಗಿ ಇಡೀ ರಾಜ್ಯದಲ್ಲಿ ಕೇಳಿಬರುತ್ತಿರುವ ವಿಷಯುವೆಂದರೆ ನಿರುದ್ಯೋಗದ ಸಮಸ್ಯೆ. ಇವೊತ್ತು ಲಕ್ಷಾಂತರ ಯುವಕರು ಡಿಗ್ರಿ ಪಡೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಇವೊತ್ತು ಸರ್ಕಾರದ ನಾನಾ ಇಲಾಖೆಗಳಲ್ಲಿ ಸುಮಾರು ೪೦ರಿಂದ ೪೫ ಸಾವಿರ ಹುದ್ದೆಗಳು ಖಾಲಿ ಇವೆ, ಅವುಗಳನ್ನು ಭರ್ತಿ ಮಾಡಿಲ್ಲ ಎಂಬುದು ಅವರ ತಲೆಯಲ್ಲಿ ಬಂದಿದೆ. ಆದ್ದರಿಂದ ನಿರುದ್ಯೋಗದ ಬವಣೆಯಿಂದ ತತ್ತರಿಸುತ್ತಿರುವ ಮತ್ತು ತಮ್ಮ ಮುಂದಿನ ಭವಿಷ್ಯದ ಬಗ್ಗೆ ಹೆಚ್ಚಿನ ಒಂದು ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುವ ಈ ಯುವ ಜನಾಂಗಕ್ಕೆ ಉದ್ಯೋಗಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಖಾಲಿ ಇರುವ ಜಾಗಗಳಿಗೆ ಇವರನ್ನು ಭರ್ತಿ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನನಗೆ ಅತ್ಯಂತ ಪ್ರಿಯವಾದಂಥ ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. 'ಆಡಳಿತದಲ್ಲಿ ಕನ್ನಡವನ್ನು ಬಳಸುವಲ್ಲಿ ಈಗ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ,' ಎಂದು. ಆದರೆ ಈ ಮಾತನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಏಕೆಂದರೆ ನಾನು ಕನ್ನಡ ಭಾಷೆ ಅಭಿವೃದ್ಧಿಯ ಬಗ್ಗೆ ಮತ್ತು ಗಡಿ ಸಮಸ್ಯೆಯ ಬಗ್ಗೆ ಹೆಚ್ಚು ಹೋರಾಟ ಮಾಡುತ್ತಿದ್ದೇನೆ. ಆದ್ದರಿಂದ ನಿಜ ಸಂಗತಿಯನ್ನು ನೋಡಿದಾಗ ಮತ್ತು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವ ಮಾತನ್ನು ನೋಡಿದಾಗ ನನ್ನ ಮನಸ್ಸಿಗೆ ಸಮಾಧಾನವಾಗಿಲ್ಲ. ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಕಾವಲು ಸಮಿತಿ ಬೇರೆ ಇದೆ. ಗಡಿ ಮತ್ತು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರ ಪ್ರವಾಸ ಭತ್ಯಕ್ಕಾಗಿ ೭೮ ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಮುಖ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ. ಈ ಅಧ್ಯಕ್ಷರ ಪ್ರಗತಿ ಆದರೆ ಮಾತ್ರ ಸಾಲುವುದಿಲ್ಲ. ಕನ್ನಡ ಭಾಷೆಯ ಬಗ್ಗೆ ಸಹ ಪ್ರಗತಿ ಆಗಬೇಕು. ಇವೊತ್ತಿನ ಬೆಳಿಗ್ಗೆಯ ಪತ್ರಿಕೆಯನ್ನು ತಾವೆಲ್ಲರೂ ಓದಿರಬಹುದು. ನಮ್ಮ ದೂರದರ್ಶನ ಕೇಂದ್ರದವರು ಕನ್ನಡ ಭಾಷೆಯ ಬಗ್ಗೆ ನಿರಂತರವಾಗಿ ಮಾಡುತ್ತಿರುವ ಪಕ್ಷಪಾತದ ಧೋರಣೆಯನ್ನು ಖಂಡಿಸುವ ಸಲುವಾಗಿ ನಮ್ಮ ಕನ್ನಡ ಸಾಹಿತಿಗಳು ಮತ್ತು ಕನ್ನಡ ಬಳಗದವರು ಸೇರಿಕೊಂಡು ದೂರದರ್ಶನ ಕೇಂದ್ರವನ್ನೇ ಸ್ವಾಧೀನ ಪಡಿಸಿಕೊಳ್ಳಲು ಹೊರಟಂತಹ ಪ್ರಸಂಗವನ್ನು ನೋಡಿದಾಗ ನಮ್ಮ ಕನ್ನಡಿಗರಿಗೆ ಯಾವ ರೀತಿ ಅನ್ಯಾಯವಾಗುತ್ತಿದೆ ಎಂಬುದು ಅರ್ಥವಾಗುತ್ತದೆ. ರಾಜ್ಯ ಸರ್ಕಾರದವರು ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಗೆ ಹೋರಾಟ ಮಾಡದಿದ್ದರೆ ಕನ್ನಡ ಭಾಷೆಯ ಕಾರ್ಯಕ್ರಮಗಳು ಪ್ರಸಾರವಾಗುವುದಿಲ್ಲ. ಅದೇ ಮಹಾರಾಷ್ಟ್ರದಲ್ಲಿ ತಮಿಳುನಾಡಿನಲ್ಲಿ ಹಾಗೂ ಗುಜರಾತ್‌ನಲ್ಲಿ ಆಯಾ ರಾಜ್ಯಗಳ ಭಾಷೆಯಲ್ಲಿಯೇ ಎಲ್ಲಾ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಆದರೆ ನಮ್ಮ ಬೆಂಗಳೂರು ದೂರದರ್ಶನದವರು ಕನ್ನಡ ಭಾಷೆಯಲ್ಲಿ ಕೇವಲ ೪೦-೪೫ ನಿಮಿಷಗಳ ಕಾಲ ಅದೂ ನಾಮಕಾವಸ್ಥೆಗೆ ಕೆಲವು ಕಾರ್ಯಕ್ರಮಗಳನ್ನು ತೋರಿಸುತ್ತಾರೆ. ಎಲ್ಲಾ ಕಾರ್ಯಕ್ರಮಗಳೂ ಕನ್ನಡ ಭಾಷೆಯಲ್ಲಿಯೇ ಪ್ರಸಾರವಾಗುವಂಥ ವ್ಯವಸ್ಥೆ ಆಗಬೇಕು. ಈ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರದ ಜೊತೆ ಹೋರಾಟ ಮಾಡಬೇಕು. ಕನ್ನಡವನ್ನೇ ಎಲ್ಲಾ ಹಂತಗಳಲ್ಲಿಯೂ ಬಳಸಬೇಕೆಂದು ಹೇಳುತ್ತಿರುವಾಗ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ಕೊಡುವುದು ಸಹ ಸರಿಯಲ್ಲ. ಮತ್ತೆ ಡಾ॥ ಸರೋಜಿನಿ ಮಹಿಷಿ ಅವರು ಸಾರ್ವಜನಿಕ ಉದ್ಯಮ ರಂಗಗಳಲ್ಲಿ ಶೇಕಡಾ ೮೦ರಷ್ಟು ಹುದ್ದೆಗಳು ಕನ್ನಡಿಗರಿಗೆ ಮೀಸಲಿಡಬೇಕೆಂದು ಕೊಟ್ಟಂಥ ವರದಿಯನ್ನು ಜಾರಿಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೋದ ವರ್ಷ ಇಲ್ಲಿ ನಮಗೆ ಭರವಸೆಯನ್ನು ಕೊಟ್ಟಿದ್ದರು. ಆದರೆ ಅದು ಸಹ ಕಾರ್ಯರೂಪದಲ್ಲಿ ಬರಲಿಲ್ಲ. ರೈಲ್ವೆ, ಅಂಚೆ ಇಲಾಖೆ ಮುಂತಾದ ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಕನ್ನಡಿಗರೂ ಯಾರೂ ಇಲ್ಲ. ಅದೇ ರೀತಿ ಬಿ.ಎಚ್.ಇ.ಎಲ್., ಎಚ್.ಎಂ.ಟಿ. ಮುಂತಾದ ಕೈಗಾರಿಕೆಗಳಲ್ಲಿಯೂ ಸಹ ಕನ್ನಡಿಗರಿಗೆ ಕೆಲಸಗಳು ಸಿಗುತ್ತಿಲ್ಲ. ತಾವು ಅಲ್ಲಿಗೆ ಹೋಗಿ ದುರ್ಬೀನು ಹಾಕಿ ನೋಡಿದರೂ ಸಹ ಕನ್ನಡಿಗರು ಸಿಗುವುದಿಲ್ಲ. ನಮ್ಮ ನೆಲ, ನಮ್ಮ ಗಾಳಿ, ನಮ್ಮ ಜಲ ಉಪಯೋಗಿಸಿಕೊಂಡು ಪ್ರಾರಂಭ ಮಾಡಿದಂಥ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಕೆಲಸಗಳು ಸಿಗುತ್ತಿಲ್ಲ. ನಮ್ಮ ಸರ್ಕಾರದವರು ಕೈಗಾರಿಕೆಗಳನ್ನು ಪ್ರಾರಂಭ ಮಾಡುವವರಿಗೆ ರಿಯಾಯಿತಿ ದರದಲ್ಲಿ ಭೂಮಿ, ವಿದ್ಯುತ್ ಹಾಗೂ ನೀರನ್ನು ಒದಗಿಸುತ್ತಾರೆ. ಸಬ್ಸಿಡಿ ಕೊಡುತ್ತಾರೆ. ಇಂತಹ ಉದ್ಯಮಗಳಲ್ಲಿ ಸಹ ಶೇಕಡ ೫ರಿಂದ ಶೇಕಡಾ ೧೦ರಷ್ಟು ಮಾತ್ರ ಕನ್ನಡಿಗರು ಇದ್ದಾರೆ. ಇದಕ್ಕಿಂತ ಹೆಚ್ಚು ಇಲ್ಲ. ಇದು ಕನ್ನಡಿಗರೆಲ್ಲಾ ನಾಚಿಕೆಯಿಂದ ತಲೆತಗ್ಗಿಸುವಂತಹ ವಿಷಯವೆಂದು ಹೇಳುತ್ತೇನೆ. ಡಾ॥ ಸರೋಜಿನಿ ಮಹಿಷಿ ಅವರು ಕೊಟ್ಟ ವರದಿ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ಈಗ ನಮ್ಮಲ್ಲಿರುವಂತಹ ಐ.ಎ.ಎಸ್. ಅಧಿಕಾರಿಗಳು ಮತ್ತು ಐ.ಪಿ.ಎಸ್. ಅಧಿಕಾರಿಗಳು ಕನ್ನಡದಲ್ಲಿ ಸಹಿ ಮಾಡಿದರೆ ತಮ್ಮ ಕುಲ ಕೆಡುತ್ತದೆಂದು ತಿಳಿದುಕೊಂಡಿದ್ದಾರೆ. ಇವರುಗಳು ಯಾರೂ ಕನ್ನಡದಲ್ಲಿ ಸಹಿ ಮಾಡುವುದಿಲ್ಲ. ಕನ್ನಡದಲ್ಲಿ ಅರ್ಜಿ ಕೊಟ್ಟರೆ ಅದರ ಕಡೆ ಗಮನ ಕೊಡುವುದಿಲ್ಲ. ಅದೇ ಇಂಗ್ಲೀಷ್‌ನಲ್ಲಿ ಮನವಿ ಕೊಟ್ಟರೆ ಬಹಳ ಬೇಗನೆ ವಿಲೆವಾರಿ ಮಾಡುತ್ತಾರೆ. ಇಂತಹ ಒಂದು ಅನಾದಾರಣೆ ಅವರಲ್ಲಿ ಮೊದಲು ಹೋಗಬೇಕು. ಅವರು ಕನ್ನಡ ಭಾಷೆಗೆ ಹೆಚ್ಚು ಆದ್ಯತೆ ಕೊಡಬೇಕು ಎಂದು ಹೇಳುತ್ತೇನೆ.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವ ಸಲುವಾಗಿ ಸರ್ಕಾರದವರು ಯಾವುದೇ ಕಠಿಣ ಕ್ರಮವನ್ನು ಕೈಗೊಂಡರೂ ಕೂಡ ಸರ್ಕಾರಕ್ಕೆ ಇಡೀ ಜನಕೋಟಿ ಬೆಂಬಲ ಕೊಡುತ್ತದೆ. ನಾವು ಸೌಮ್ಯವಾದ

ಕ್ರಮಗಳನ್ನು ಮಾಡಿದಿರಿ, ಹೀಗೆ ಮಾಡಿದರೆ ಇನ್ನೂ ಒಂದು ಶತಮಾನ ಹೋದರೂ ಕೂಡ ಆಗುವುದಿಲ್ಲ. ಈಗಾಗಲೇ ಅರ್ಧ ಶತಮಾನ ಕಳೆದಿದೆ. ಇನ್ನೂ ಒಂದು ಶತಮಾನ ಹೋದರೂ ಕೂಡ ಆಡಳಿತದಲ್ಲಿ ಕನ್ನಡ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಹೇಳುತ್ತೇನೆ. ಕನ್ನಡವನ್ನು ಜಾರಿಗೆ ತರುವಷ್ಟರಲ್ಲಿ ಪರಭಾಷಿಕರಿಗೆ ಧಕ್ಕೆ ಆಗದ ರೀತಿಯಲ್ಲಿ ಕನ್ನಡವನ್ನು ಜಾರಿಗೆ ತರುವಂಥ ಕೆಲಸವನ್ನು ಸರ್ಕಾರದವರು ಮಾಡಬೇಕು. ಕೊನೆಯದಾಗಿ ಪೋಲೀಸ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮಾನ್ಯ ಜಾಲಪ್ಪನವರು ಬಂದಮೇಲೆ ಪೋಲೀಸರಿಗೆ ಏನು ಮಾಡಿದರೋ ಗೊತ್ತಿಲ್ಲ. ಮಾನ್ಯ ಜಾಲಪ್ಪನವರು ಕೋಆಪರೇಷನ್ ಮಿನಿಸ್ಟರಾಗಿದ್ದಾಗ ಸಾವಿರಾರು ರೋಗಗ್ರಸ್ತ ಸೊಸೈಟಿಗಳನ್ನು ಬದುಕಿಸಿದರು. ಆದರೆ ಕಾನ್‌ಸ್ಟೇಬಲ್ಲನ್ನು ಸುಧಾರಿಸಲಿಕ್ಕೆ ಇವತ್ತು ಅವರಿಂದ ಆಗುವುದಿಲ್ಲ, ಅಂದರೆ ಏಕೋ ಅರ್ಥವಾಗುತ್ತಾ ಇಲ್ಲ. ೫೦ ವರ್ಷ ಮುಗಿಯಿತು ಎಂದು ಜನೋತ್ಸವ ಮಾಡಿಯಾಯಿತು. ಪೋಲೀಸ್ ಅಧಿಕಾರಿಗಳು ಜನತಾ ಸರ್ಕಾರದವರು ಉರುಳಿಸಬೇಕು ಎಂದು ಪ್ರಯತ್ನ ಮಾಡುತ್ತಾರೋ ಏನೋ ನನಗಂತೂ ಗೊತ್ತಿಲ್ಲ. ಆಗಲೇ ಮಾನ್ಯ ಭೂಪತಿಯವರು ಪೋಲೀಸ್ ನಾಯಿಗಳ ವಿಚಾರ ಹೇಳಿದಾಗ ಮಾನ್ಯ ಜಾಲಪ್ಪನವರು ಉತ್ತರ ಹೇಳಿದರು. ನಾನೇ ಸ್ವಾರಸ್ಯಕರವಾದ ನನ್ನ ಅನುಭವದಲ್ಲಿ ಆದಂಥ ಒಂದು ನಿದರ್ಶನವನ್ನು ಹೇಳುತ್ತೇನೆ, ನನ್ನ ಮನೆಯಲ್ಲಿ ಒಂದು ವರ್ಷದಲ್ಲಿ ಎರಡು ಸಲ ಕಳುವು ಆಯಿತು. ನಾನು ಒಬ್ಬ ಶಾಸಕ. ನಾನು ಪ್ರವಾಸಕ್ಕೆ ಹೋಗಿದ್ದಾಗ ನನ್ನ ಮನೆಯಲ್ಲಿ ಎರಡು ಸಲ ಕಳವು ಆಯಿತು. ನನ್ನ ಮನೆಗೂ ಪೋಲೀಸ್ ಸ್ಟೇಷನ್‌ಗೂ ೧೦೦ ಅಡಿ ದೂರ ಇದೆ. ನನ್ನ ಮನೆಗೂ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್ ಮನೆಗೂ ೩೦ ಅಡಿ ದೂರ ಇದೆ. ನನ್ನ ಮನೆಯಲ್ಲಿ ಎರಡು ಸಲ ಕಳವು ಆಯಿತು. ಎರಡನೆಯ ಸಲ ಕಳುವಾದಾಗ ನಾನು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯಲ್ಲಿ ಪ್ರವಾಸಕ್ಕೆ ಹೋಗಿದ್ದೆ. ನನ್ನ ಮನೆ ಕಳುವಾದ ದಿವಸ ನಾನು ಶ್ರೀನಗರದಲ್ಲಿದ್ದೆ. ಆ ದಿವಸ ನನ್ನ ಹೆಂಡತಿ ೨೫ ಕಿಲೋಮೀಟರ್ ದೂರದಲ್ಲಿರುವ ತೌರುಮನೆಗೆ ಹೋಗಿದ್ದರು, ಆಗ ಯಾರೋ ಬಂದು ಎಂ.ಎಲ್.ಎ. ಮನೆಯಲ್ಲಿ ಹೋದವರ್ಷ ಕಳುವಾಯಿತು, ಒಂದೆರಡು ಸೀರೆ ಒಂದಿನ್ನೂರು ರೂಪಾಯಿ ಹೋಯಿತು ಎಂದು ಸುಮ್ಮನೆ ಕುಳಿತರು. ಈ ಸಲವೂ ಎಂ.ಎಲ್.ಎ, ಮನೆಯಲ್ಲಿ ಕಳುವಾಯಿತು ಎಂದು ನಮ್ಮ ಸ್ನೇಹಿತರು ಗಲಾಟೆ ಮಾಡಿದಾಗ, ಏನೋ ಸುಮ್ಮನೆ ಬರಬೇಕೋ, ಬರಬಾರದೋ ಎಂದು ಇನ್ಸ್‌ಪೆಕ್ಟರ್ ಬಂದು, ಪೋಲೀಸ್ ನಾಯಿ ತಂದರು. ಎಂ.ಎಲ್.ಎ.ಯವರು ಮನೆಯಲ್ಲಿಲ್ಲ, ಅವರ ಶ್ರೀಮತಿಯವರೂ ಕೂಡ ಮನೆಯಲಿಲ್ಲ ಅವರು ೨೫ ಕಿಲೋಮೀಟರ್ ದೂರದಲ್ಲಿರುವ ಅವರ ತೌರುಮನೆಯಲ್ಲಿದ್ದಾರೆ ಅವರನ್ನು ಕರೆಯಿಸೋಣ ಎಂದು ಪೋಲೀಸರು ಮೆಸೇಜ್ ಕೊಟ್ಟು ನನ್ನ ಮಿಸೆಸನ್ನು ಕರೆಯಿಸಿದರು. ಬಸ್‌ನಲ್ಲಿ ಬಂದು ಇಳಿದು ನಿಂತ ನನ್ನ ಮಿಸೆಸನ್ನು ಪೋಲೀಸ್ ನಾಯಿ ಹಿಡಿಯುತ್ತದೆ. ಆಕೆ ಮನೆಗೆ ಬಂದಳು. ನಮ್ಮ ಮನೆಯವರು ಕಾಶಿಯಲ್ಲಿದ್ದಾರೋ, ಶ್ರೀನಗರದಲ್ಲಿದ್ದಾರೋ, ಡೆಲ್ಲಿಯಲ್ಲಿದ್ದಾರೋ ಗೊತ್ತಿಲ್ಲ, ಹೋದಸಲವೂ ಕಳುವಾಯಿತು, ಈ ಸಲವೂ ಕಳುವಾದರೆ ಗತಿ ಏನು ? ನಾವು ಬಡವರು ಎಂದು ಹೇಳುತ್ತಾ ನನ್ನ ಮಿಸೆಸನ್ನು .ಕಾಂಪೌಂಡ್ ದಾಟಿ ಮನೆಯೊಳಗೆ ಹೋದರೆ ಆ ನಾಯಿ ನನ್ನ ಮಿಸೆಸನ್ನು ಹಿಡಿಯಬೇಕೇನು? ಇನ್ನು ಯಾರು ಕಳ್ಳರು? ನಾನು ನನ್ನ ಹೆಂಡತಿ ಜೋಡಿ ಬಾಳ್ವೆ ಮಾಡಬೇಕೋ, ಡೈವರ್ಸ್ ಮಾಡಬೇಕೋ. ಇದೆಂಥ ವಿಚಾರ ? ಯಾರು ಕಳ್ಳರು ? ಅದಕ್ಕೆ ನಾನು ಹೇಳುತ್ತೇನೆ, ಪೋಲೀಸ್ ನಾಯಿಗಳು ಪೋಲೀಸ್ ಅಧಿಕಾರಿಗಳು ಹೇಗೆ ಇದ್ದಾರೋ ಆ ನಾಯಿಗಳೂ ಹಾಗೆ ಇವೆ. ಅವರ ನೆರಳು ಅದರ ಮೇಲೆ ಬಿದ್ದಿರುತ್ತದೆ. ನಾನು ಮಾನ್ಯ ಜಾಲಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪೋಲೀಸ್ ನಾಯಿಗಳ ಮೇಲೆ ಜಾಸ್ತಿ ನೀವು ಅವಲಂಬನೆ ಆಗತಕ್ಕದ್ದಲ್ಲ.**

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಅವರ ಮಿಸೆಸ್ ಅವರು ತೌರುಮನೆಗೆ ತೆಗೆದುಕೊಂಡು ಹೋಗಿರುವ ಸೀರೆಯನ್ನೇ ತಿರಿಗಿ ಉಟ್ಟುಕೊಂಡುಬಂದಿದ್ದಾರೆ, ಆ ವಾಸನೆ ಮೇಲೆ ಅವರ ಹತ್ತಿರಕ್ಕೆ ಹೋಗಿದೆ. ಅದಕ್ಕೆ ನಾವೇನು ಮಾಡುವುದು ?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ತೌರುಮನೆ ಸೀರೆ ಉಟ್ಟುಕೊಂಡಿದ್ದಾರೆ ನಿಜ. ಆದರೆ ಕಳುವಾಗಿರುವುದು ಇಲ್ಲಿ. ಆಕೆ ಬಂದಿರುವುದು ತೌರುಮನೆಯಿಂದ. ಪೋಲೀಸ್ ನಾಯಿಗಳಿಗೆ ಈ ರೀತಿ ಟ್ರೈನಿಂಗ್ ಇದ್ದರೆ ದಯಮಾಡಿ ಇಲ್ಲಿ ತರಬೇಡಿ, ಅದನ್ನು ಬೇರೆ ಕಡೆ ಕಳಿಸಿ ಇಲ್ಲಿ ಅವುಗಳಿಂದಏನೂ ಉಪಯೋಗವಾಗುವುದಿಲ್ಲ, ಪೋಲೀಸ್ ವ್ಯವಸ್ಥೆಯಲ್ಲಿ ಒಳ್ಳೆಯ ನಂಬಿಕೆ

ಇರಬೇಕು. ನನಗೆ ಒಮ್ಮೆ ಚಿಂತೆಯಾಗುತ್ತದೆ. ಯಾವ ಸೊಸೈಟಿಗಳನ್ನು ರೋಗಗ್ರಸ್ತ ಸೊಸೈಟಿಗಳು ಎಂದು ಹೇಳಿ ನಾವು ಜಾಲಪ್ಪನವರೆ ನಮ್ಮ ಪಿ.ಎಲ್.ಡಿ. ಬ್ಯಾಂಕ್ ಸರಿಯಿಲ್ಲ ಅಂದರೆ 24 ತಾಸಿನೊಳಗೆ ರಿಪೇರಿ ಮಾಡುತ್ತಿದ್ದರು. ಜಾಲಪ್ಪನವರೇ, ನಮ್ಮ ಊರಿನ ಸೇವಾ ಸಹಕಾರ ಸಂಘ ಸರಿಯಿಲ್ಲ ಅಂದರೆ 24 ತಾಸಿನೊಳಗೆ ರಿಪೇರಿ ಮಾಡುತ್ತಿದ್ದರು. ಅಂಥವರು ಈ ಪೋಲೀಸ್ ಇಲಾಖೆಯನ್ನು ರಿಪೇರಿ ಮಾಡಲಿಕ್ಕೆ ಆಗಲೊಲ್ಲದೋ ಏಕೋ ನನಗೆ ಗೊತ್ತಾಗುತ್ತಾ ಇಲ್ಲ. ಅಥವಾ ಪೋಲೀಸರು ಏನಾದರೂ ಜಾಲಪ್ಪನವರ ಜೊತೆ ಬಿದ್ದು ಜಿದ್ದು ಕಟ್ಟಿದ್ದಾರೋ ಗೊತ್ತಿಲ್ಲ. ಮೊನ್ನೆ ನಮ್ಮ ಊರಿನೊಳಗೆ ಒಂದು ಘಟನೆ ನಡೆಯಿತು. ನಮ್ಮ ಊರಿನಲ್ಲಿ ಒಬ್ಬ ವಿಧವಾ ಹೆಣ್ಣು ಮಗಳನ್ನು ಊರಿನ ಕೆಲವು ಪುಂಡರು ಸೇರಿ ಬೆತ್ತಲೆ ಮಾಡಿ ಹೊಡೆದರು ಅದಕ್ಕಿಂತ ಪೂರ್ವದಲ್ಲಿ ಒಂದು ಪಂಚಾಯತಿ ಸಭೆ ನಡೆಯುವಾಗ ಬೀರು ಬಾಟಲಿಯಲ್ಲಿ ಹೊಡೆದರು, ಮಂಡಲ್ ಪಂಚಾಯತಿ ಸದಸ್ಯೆಯಾದಂಥ ನನ್ನ ಹೆಂಡತಿ ಹೊಟ್ಟೆಗೆ ಮತ್ತು ಬೆನ್ನಿಗೆ ಬೀರು ಬಾಟಲಿ ಹಿಡಿದು ಹೊಡೆದರು. ಇವತ್ತು ಪ್ರಧಾನನ್ನು ಹೊಡೆಯಲಿಕ್ಕೆ ಹತ್ತಿದ್ದೇವೆ, ನೀವು ಏನಾದರೂ ಆ ಪ್ರಧಾನನ್ನು ಬಿಡಿಸಲಿಕ್ಕೆ ಹೋದರೆ ಈ ಬೀರು ಬಾಟ್ಲಿಯನ್ನು ನಿಮ್ಮ ಹೊಟ್ಟೆಯೊಳಗೆ ಹಾಕುತ್ತೇವೆ ಎಂದು ನನ್ನ ಹೆಂಡತಿಗೆ ತೋರಿಸಿ ಹೆದರಿಸಿದ್ದಾರೆ ಇವತ್ತು ಎಂ.ಎಲ್.ಎ ಹೆಂಡತಿಗೆ ಈ ರೀತಿ ಆಗುತ್ತದೆ ಎಂದರೆ ಇನ್ನು ಸಾಮಾನ್ಯ ಜನರಿಗೆ ಏನಾಗಿರಬೇಕು ಎಂದು ವಿಚಾರ ಮಾಡಬೇಕು.

ಈ ಘಟನೆಯಾದ ಮೇಲೆ ಹೆಣ್ಣುಮಗಳನ್ನು ಬೀದಿಯಲ್ಲಿ ಬೆತ್ತಲೆ ಮಾಡಿ ಹೊಡೆದಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸದಸ್ಯರು ಮಾತನಾಡುವಾಗ ಪೋಲೀಸರನ್ನು ನಾಯಿಗಳು ಎಂದು ಹೇಳಿದ್ದಾರೆ. ಆ ಪದ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಅದನ್ನು ಕಡತದಿಂದ ತೆಗೆಸಿ ಹಾಕುವುದು ಒಳ್ಳೆಯದು.

ಶ್ರೀ ಆರ್. ಎಲ್. ಜಾಲಪ್ಪ.—ಪೋಲೀಸರನ್ನು ನಾಯಿಗಳು ಎಂದು ಹೇಳಿದ್ದಾರೆ. ಆ ಪದವನ್ನು ಕಡತದಿಂದ ತೆಗೆಸಿ ಹಾಕಿ.

ಶ್ರೀ ಎಂ. ರಘುಪತಿ.—ಖಾಕಿ ನಾಯಿಗಳು ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಆ ಪದಗಳನ್ನು ಕಡತದಿಂದ ತೆಗೆಸಿ ಹಾಕಿದ್ದೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಇದು ಎರಡನೆಯ ಘಟನೆ ಆಯಿತು. ವಿಧವೆ ಹೆಣ್ಣು ಮಗಳನ್ನು ಬೆತ್ತಲೆ ಮಾಡಿ ಹೊಡೆದಿದ್ದಾರೆ. ಈ ವಿಚಾರದಲ್ಲಿ ಪೋಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿ ತಿಳಿಸಿದರೆ, ನೋಡುತ್ತೇನೆ, ನೋಡುತ್ತೇನೆಂದು ಹೇಳಿದರೆ ಹೊರತು ಅಲ್ಲಿಗೆ ಹೋಗಿ ನೋಡಲಿಲ್ಲ. ಪುಂಡರು ಯಾರಿಗೂ ಅಂಜದೆ ಓಡಾಡುತ್ತಿದ್ದಾರೆ. ಪೋಲೀಸು ವ್ಯವಸ್ಥೆ ಕೆಟ್ಟು ಹೋಗಿದೆ. ನಮ್ಮ ಸರಕಾರವನ್ನು ಪತನ ಮಾಡುವ ಒಳಸಂಚು ಇವರಿಂದ ಏನಾದರೂ ನಡೆಯುತ್ತಿದೆಯೋ ಎನ್ನುವ ಅನುಮಾನ ಕೂಡ ನಮಗೆ ಬರುತ್ತಿದೆ ಪೋಲೀಸ್ ಇಲಾಖೆಯಲ್ಲಿ ಅಶಿಸ್ತು ಬೆಳೆಯುವಂತೆ ಮಾಡಬೇಕು. ಬೆಳಗಿನ ಅಧಿವೇಶನದಲ್ಲಿ ಮಾಜಿ ಸಚಿವರಾದ ಬಸವರಾಜ್ ಅವರು, ಮುಳಬಾಗಿಲು ಗ್ರಾಮದ ನರ್ಸ್ ಭಾಗೀರಥಿ ಎಂಬುವವರು ಪೋಲೀಸಿನವರ ಅತ್ಯಾಚಾರಕ್ಕೆ ಸಿಕ್ಕಿ ಸತ್ತಿದ್ದಾರೆಂದು ಹೇಳಿದರು. ಇಂಥ ಘಟನೆಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಜನತಾ ಸರ್ಕಾರಕ್ಕೆ ಒಂದು ಕೀರ್ತಿ ಇದೆ. ತನ್ನದೇ ಆದಂಥ ಹೆಸರು ಇದೆ. 1983ರಲ್ಲಿ ಅಧಿಕಾರಕ್ಕೆ ಬಂದಂಥ ಸರ್ಕಾರ ಚಾಕು ಚೂರಿ ಸಂಸ್ಕೃತಿಯನ್ನು ಯಶಸ್ವಿಯಾಗಿ ಬಲಿ ಹಾಕಿ ನಗರಗಳಲ್ಲಿ ರಾತ್ರಿಹೊತ್ತು ಹೆಣ್ಣು ಮಕ್ಕಳು ನೆಮ್ಮದಿಯಿಂದ ಸಿನಿಮಾನೋಡಿಕೊಂಡು ಬರುವಂಥ ವಾತಾವರಣ ಉಂಟು ಮಾಡಿದೆ. ಮೊದಲಿನ ಕಾಲ ಈಗ ಇಲ್ಲ. ನಮ್ಮ ಕಾಂಗ್ರೆಸ್ ಸ್ನೇಹಿತರು, ನಮ್ಮ ಸರ್ಕಾರದ ಧ್ಯೇಯಧೋರಣೆಗಳನ್ನು ಒಪ್ಪದೇ ಇದ್ದರೂ, ನಮ್ಮ ಸರ್ಕಾರ ಮಾಡಿರುವಂತ ಹಸಿರು ಕಾರ್ಡುಗಳ ವಿತರಣೆ, ಮತ್ತು ಕುಡಿಯುವ ನೀರಿನ ಪೂರೈಕೆ ಮತ್ತು ಬೆಂಗಳೂರು ನಗರದಲ್ಲಿ ಚಾಕು ಚೂರಿ ಸಂಸ್ಕೃತಿ ಏನಿತ್ತು ಅದನ್ನು ಪರಿಣಾಮಕಾರಿಯಾಗಿ ನಿಲ್ಲಿಸಿದ್ದಾರೆಂದು ತಾವು ಖಾಸಗಿಯಾಗಿ ಮಾತನಾಡಿಕೊಳ್ಳುವ ಸಂದರ್ಭದಲ್ಲಿ ಹೇಳಿದ್ದಾರೆ. ಆ ಒಂದು ಪರಂಪರೆ ಉಳಿಯಬೇಕು. ಈ ಒಂದು ಇಲಾಖೆಗೆ ಟ್ರೈನಿಂಗ್ ಕೊಡಿ. ಪುರಾಣ ಹೇಳಿ. ಪ್ರವಚನ ಹೇಳಿ ಸರಿಯಾದರೀತಿಯಲ್ಲಿ ನಡೆದುಕೊಂಡು ಹೋಗುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಅತ್ಯಾಚಾರ ನಡೆದ ಘಟನೆಗಳಾಗಲಿ, ಬೆಂಡಿಗೇರಿಯಲ್ಲಿ ನಡೆದಂಥ ಪ್ರಕರಣಗಳಾಗಲೀ ನಡೆದಲ್ಲಿ ಪೋಲೀಸ್ ಪೇದೆಗಳು ಅವರ ಮೇಲೆ ಬ್ರಹ್ಮಾಸ್ತ್ರ ಬಳಸಬೇಡಿ. ಎಸ್. ಪಿ, ಯಾವರನ್ನು ಹೊಣೆಗಾರರನ್ನಾಗಿ ಮಾಡಿ.

ಇಂಥ ಪ್ರಕರಣಗಳು ಮುಂದೆ ನಡೆಯದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒತ್ತಾಸೆ ಕಂಡು ಬಂದಿದೆ, ಕಾಂಗ್ರೆಸ್ ಸ್ನೇಹಿತರು ಸಭಾತ್ಯಾಗ ಮಾಡುವುದಕ್ಕೆ ಮುಂಚೆ ರಾಮಕೃಷ್ಣ ಹೆಗಡೆಯವರು ಹೇಳಬೇಕಾದುದನ್ನು, ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆಂದು ಹೇಳಿದರು. ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ. ರಾಜೀವಗಾಂಧಿಯವರು ಹೇಳಬೇಕಾದುದನ್ನು ವೆಂಕಟರಾಮನ್‌ರವರು ಹೇಳುತ್ತಾರೆ. ರಾಮಕೃಷ್ಣ ಹೆಗಡೆಯವರು ಹೇಳ ಬೇಕಾದುದನ್ನು ಅಶೋಕನಾಥ ಬ್ಯಾನರ್ಜಿಯವರು ಹೇಳುತ್ತಾರೆ. ೫ ವರ್ಷಗಳ ಕಾಲ ಇದರಿಂದ ಸತತವಾಗಿ ಕಿರಿಕಿರಿ ಹಿಂಸೆಯಾಗಿದ್ದರೂ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದಾರೆ ರಾಮಕೃಷ್ಣ ಹೆಗಡೆಯವರಲ್ಲದೇ ಬೇರೆ ಯಾರೇ ಇದ್ದರೂ ಸರ್ಕಾರ ನಡೆಸಿಕೊಂಡು ಹೋಗುತ್ತಿರಲಿಲ್ಲ. ಸತತವಾಗಿ ರಾಜ್ಯದಲ್ಲಿ ಭೀಕರ ಬರಗಾಲವಿದೆ. ಕೇಂದ್ರದಿಂದ ನಿರೀಕ್ಷಿತ ಪ್ರಮಾಣದಲ್ಲಿ ಹಣದ ಸಹಾಯ ಬಂದಿಲ್ಲ. ಆದರೂ ಬಡವರಿಗೋಸ್ಕರ, ನಿರುದ್ಯೋಗಿಗಳಿಗೋಸ್ಕರ ಅಲ್ಪ ಸಂಖ್ಯಾತರ ಏಳಿಗೆಗೋಸ್ಕರ ಮಾಡಿರು ವಂಥ ಕೆಲಸ ಸಣ್ಣ ಕೆಲಸವಲ್ಲ. ಮಹಾ ಸಾಧನೆ ಎಂದು ನಾನು ಹೇಳುತ್ತೇನೆ. ೫ ವರ್ಷಗಳು ಮುಗಿದ ಮೇಲೆ ಜನೋತ್ಸವವನ್ನು ಮಾಡಲಾಗಿದೆ. ಇದನ್ನು ಏತಕ್ಕೆ ಮಾಡಿದರು ಎಂದರೆ.

ಈ ಜನೋತ್ಸವಕ್ಕೆ ನಾವು ಯಾರಿಗೂ ದುಡ್ಡು ಕೊಟ್ಟು ಟ್ರಕ್‌ನಲ್ಲಿ ಜನರನ್ನು ತಂದಿಲ್ಲ ಕೆಲವು ಬೇಜವಾಬ್ದಾರಿ ಜನ ತಲಾ ೩೦ ರೂಪಾಯಿ ಕೊಟ್ಟು ಕರೆದುಕೊಂಡು ಬಂದಿದ್ದಾರೆ ಎಂದು ಹೇಳುತ್ತಾರೆ. ಇದಕ್ಕಿಂತಲೂ ಬೇಜವಾಬ್ದಾರಿ ಹೇಳಿಕೆ ಮತ್ತೊಂದು ಇಲ್ಲ ಎಂದು ನಾನು ಹೇಳ ಬೇಕಾಗುತ್ತದೆ. ಟ್ರಕ್‌ಗಳಲ್ಲಿ ಲಾರಿಗಳಲ್ಲಿ ಜನರನ್ನು ತುಂಬಿಕೊಂಡು ಬರತಕ್ಕ ಸಂಸ್ಕೃತಿಯವರು ನಾವಲ್ಲ ಲಕ್ಷೋಪಲಕ್ಷ ಜನರು ಬೆಂಗಳೂರಿಗೆ ಬಂದಿದ್ದರು ಕಳೆದ ಐದು ವರ್ಷಗಳಲ್ಲಿ ಆಗಿರುವಂಥ ಕೆಲಸ ವನ್ನು ನೋಡಿ ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರಿಗೆ ಸರ್ಟಿಫಿಕೇಟ್ ಕೊಟ್ಟು ಇನ್ನೂ ಹದಿನೈದು ವರ್ಷಗಳ ಕಾಲ ಈ ರಾಜ್ಯದಲ್ಲಿ ಮುಂದುವರಿಯಿರಿ ಎಂದು ಹೇಳಿದರು. ಜನರು ಹಳ್ಳಿ ಗಳಿಂದ ತಮ್ಮ ಕರ್ತವ್ಯವನ್ನು ಮರೆತು ಬೆಂಗಳೂರನ್ನೇ ನೋಡಿರದವರು ರಾಮಕೃಷ್ಣ ಹೆಗಡೆಯವರ ಮುಖವನ್ನೇ ನೋಡಿರದವರೆಲ್ಲರೂ ಸರ್ಕಾರದ ಒಂದು ಪ್ರಯೋಜನ ಪಡೆದಂಥ ಲಕ್ಷಾಂತರ ಜನ ಬಂದು ಬೆಂಗಳೂರಿನಲ್ಲಿ ಬೀದಿಗೆ ಇಳಿದರು. ಈ ಸರ್ಕಾರದ ತಂಟೆಗೆ ಯಾರಾದರೂ ಬಂದರೆ, ಈ ಸರ್ಕಾರದ ಜನಪ್ರಿಯತೆಗೆ ಧಕ್ಕೆ ಏನಾದರೂ ತಂದರೆ ಹುಷಾರ್ ಎಂದು ಹೇಳಿ, ಹೆಗಡೆಯವರ ಹಿಂದೆ ನಾವಿದ್ದೇವೆ, ನಾವಿದ್ದೇವೆ ಎಂದು ಕೂಗುತ್ತಿದ್ದರು ಚಂದ್ರಶೇಖರ್‌ರವರ ಹಿಂದೆ ನಾವಿದ್ದೇವೆ, ನಾವಿದ್ದೇವೆ ಎಂದು ಕೂಗುತ್ತಿದ್ದರು. ನಾವು ಯಾರ ಕಡೆಯಿಂದಲೂ ದುಡ್ಡು ತೆಗೆದುಕೊಂಡು ಜನೋತ್ಸವವನ್ನು ಮಾಡ ಲಿಲ್ಲ. ಸರ್ಕಾರದ ಇಷ್ಟು ಕೆಲಸದಿಂದಲೇ ಸಂಪೂರ್ಣವಾದ ತೃಪ್ತಿಯಾಗಿದೆ ಎಂದು ಹೇಳುವುದಿಲ್ಲ, ನಮ್ಮ ಸರ್ಕಾರ ಸಾಧಿಸಬೇಕಾದುದು ಇನ್ನೂ ಇದೆ. ಈ ಮಾತನ್ನು ನಮ್ಮ ರಾಜ್ಯಪಾಲರು ತಮ್ಮ ಭಾಷಣದ ಪ್ರಾರಂಭದಲ್ಲಿಯೇ ಹೇಳಿದ್ದಾರೆ. ಅದರ ಸಲುವಾಗಿ ಬಹಳ ದಿಟ್ಟವಾದ ಹೆಜ್ಜೆಯನ್ನು ಇಡಬೇಕು, ಬಹಳ ಧೈರ್ಯದಿಂದ ಹೆಜ್ಜೆಯನ್ನು ಇಡಬೇಕಾಗುತ್ತದೆ. ಸರ್ಕಾರ ಪುರೋಗಾಮಿ ದಿಕ್ಕಿನಲ್ಲಿ ಹೋಗಬೇಕೆಂದು ಹೇಳುತ್ತೇನೆ. ಎಲ್ಲಾ ಸರ್ಕಾರಗಳು ಹೋಗುತ್ತವೆ, ಆದರೆ ಅವು ಹೋಗುವ ದಾರಿಗಳು ಬೇರೆ ಇರುತ್ತವೆ. ಆದ್ದರಿಂದ ಸರ್ಕಾರ ಬಹಳ ದಿಟ್ಟವಾದ ಹೆಜ್ಜೆಯನ್ನು ಇಟ್ಟು ಪುರೋಗಾಮಿ ಪಥದಲ್ಲಿ ಹೋಗಬೇಕು. ದೂರಗಾಮಿ ದೃಷ್ಟಿಯನ್ನು ಇಟ್ಟುಕೊಂಡು ಜನ ಕಲ್ಯಾಣ ಮಾಡಿದಂಥ ಈ ಸರ್ಕಾರವನ್ನು ಕರ್ನಾಟಕದ ಜನ ಎಂದೆಂದಿಗೂ ಮರೆಯುವುದಿಲ್ಲ. ನಾವು ನಮ್ಮ ಹಳ್ಳಿಯಲ್ಲಿ ಹೇಳುವ ಹಾಗೆ ಇದ್ದಿದ್ದರಲ್ಲಿಯೇ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂದು ಏನು ಹೇಳುತ್ತೇವೆ ಅದೇ ರೀತಿ ಈ ಭಾಷಣ ಸಹ ಇದೆ. ನಮ್ಮ ರಾಜ್ಯದ ಸಂಪನ್ಮೂಲಗಳ ಇತಿಮಿತಿಗಳನ್ನು ತಿಳಿದುಕೊಂಡು ರಾಜ್ಯಪಾಲರು ತಮ್ಮ ಮುಂದಿಟ್ಟಿರುವ ಭಾಷಣ ಏನು ಇದೆ, ಇದರ ಬಗ್ಗೆ ನಾನು ರಾಜ್ಯಪಾಲರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವೊತ್ತು ನಿಂದಕರ ಮಾತುಗಳಿಗೆ ಯಾವುದೇ ಟೀಕೆ ಟಿಪ್ಪಣಿಗಳಿಗೆ ಹೆದರಲಾರದೆ ನಾವು ಕೆಲಸವನ್ನು ಮಾಡಬೇಕು ತಮಗೆ ಒಂದು ಮಾತು ಹೇಳ ಬೇಕೆಂದರೆ, ಮರಾಠಿಯಲ್ಲಿ ಒಂದು ಗಾದೆ ಮಾತು ಇದೆ. ಅದನ್ನು ಕನ್ನಡದ ಅರ್ಥದಲ್ಲಿ ಹೇಳಬೇಕಾ ದರೆ. ನಿಂದಕರು ಯಾವಾಗಲೂ ನೆರೆ ಮನೆಯಲ್ಲಿ ಇರಬೇಕೆಂದು ಅವೊತ್ತೇ ಶಿವಾಜಿಗೆ ದೀಕ್ಷೆ ಕೊಟ್ಟಂಥ ರಾಮದಾಸ್ ಅವರು ಹೇಳಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಂದ ಕರಿಗೆ ಬಹಳ ಮಹತ್ವವನ್ನು ಕೊಡಬೇಕಾಗುತ್ತದೆ. ಆದರೆ, ನಮ್ಮ ಪ್ರಗತಿಯನ್ನು ನೋಡಿ ಯಾರು ಅಸೂಯೆ ಪಡುತ್ತಾರೆ, ಆ ರೀತಿ ಅಸೂಯೆ ಪಡತಕ್ಕವರಿಗೆ ಹೆದರದೆ ಸರ್ಕಾರ ಬಡವರಿಗಾಗಿ ಕಾರ್ಮಿಕ ರಿಗಾಗಿ ಕೈಗೊಂಡಿರತಕ್ಕ ಕಾರ್ಯಕ್ರಮಗಳು ಏನಿವೆ ಅವು ಬರೀ ಮಾತಿನಲ್ಲಿ ಉಳಿಯದೆ ಕೇವಲ ಕಾಗದ

ದಲ್ಲಿ ಉಳಿಯದೆ ಅವು ಕಾರ್ಯರೂಪಕ್ಕೆ ಬರುವಂಥ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಅಸಂಘಟಿತ ಕಾರ್ಮಿಕರ ಬಗ್ಗೆಯೂ ಕೂಡ ಗಮನ ಕೊಡಬೇಕು. ಅಲ್ಲದೆ, ಇಪ್ಪತ್ತು ಐವತ್ತು ಸಾವಿರಕ್ಕಿಂತಲೂ ಹೆಚ್ಚು ದಿನಗೂಲಿ ಕಾರ್ಮಿಕರು ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಇವರಿಗೂ ಸಹ ಖಾಯಂ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಅನೇಕ ಉದ್ದಿಮೆಗಳಲ್ಲಿ ಕನಿಷ್ಟ ವೇತನ ಜಾರಿಯಾಗಬೇಕಾದುದು ಇನ್ನೂ ಆಗಿಲ್ಲ. ಇದನ್ನೂ ಕೂಡ ಜಾರಿಗೆ ತಂದರೆ ಬಡವರ ವರ್ಗ ಸಂಪೂರ್ಣವಾಗಿ ಸರ್ಕಾರದ ಬೆಂಬಲಕ್ಕೆ ಇರುತ್ತದೆ ಎಂದು ಹೇಳಿ, ರಾಜ್ಯಪಾಲರ ಸಕಾಲಿಕ ಭಾಷಣವನ್ನು ವಂದಿಸಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ಬಚ್ಚೇಗೌಡ (ಹೊಸಕೋಟೆ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತಾ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ.

ನಮ್ಮ ಜನತಾ ಸರ್ಕಾರ ೫ ವರ್ಷಗಳ ಆಳ್ವಿಕೆಯನ್ನು ಮುಗಿಸಿ ಸ್ವಾತಂತ್ರ್ಯ ನಂತರ ೪೦ ವರ್ಷಗಳಲ್ಲಿ ೫ ವರ್ಷಗಳ ರಾಷ್ಟ್ರ ರಾಜಕಾರಣದ ಪರ್ಯಾಯ ವ್ಯವಸ್ಥೆಯನ್ನು ಮಾಡಿ. ಉತ್ತಮ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ನಮ್ಮ ಜನತಾ ಪಕ್ಷ ೧೯೮೩ರಲ್ಲಿ ಒಂದುಸಾರಿ ಗೆದ್ದು ಬಂದನಂತರ ೫ ವರ್ಷಕಾಲ ಜನತೆಯ ಮನಸ್ಸನ್ನು ಗೆದ್ದು, ಜನತೆಯ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಕೆಲಸಗಳನ್ನು ಮಾಡಿ ಸುಮಾರು ೫ ಚುನಾವಣೆಗಳನ್ನು ಎದುರಿಸಿ ರಾಷ್ಟ್ರದ ಯಾವುದೇ ರಾಜ್ಯದಲ್ಲೂ ಮತದಾನ ಆಗದೇ ಇದ್ದಷ್ಟು ಹೆಚ್ಚಿನ ರೀತಿಯಲ್ಲಿ ೫ ಚುನಾವಣೆಗಳಲ್ಲಿ ಅಂದರೆ ೨ ವಿಧಾನ ಸಭಾ ಚುನಾವಣೆ, ಒಂದು ಲೋಕಸಭಾ ಚುನಾವಣೆ, ಇನ್ನೊಂದು ಜಿಲ್ಲಾ ಪರಿಷತ್ತು ಮತ್ತೊಂದು ಮಂಡಲ ಪಂಚಾಯತ್ ಚುನಾವಣೆ ಹೀಗೆ ಜನತೆಯಿಂದ ಆಯ್ಕೆಯಾದಂಥ ಪ್ರತಿನಿಧಿಗಳಿಂದ ಆಡಳಿತವನ್ನು ನಡೆಸತಕ್ಕ ವ್ಯವಸ್ಥೆಯನ್ನು ಮಾಡಿ ಕಳೆದ ೫ ವರ್ಷಗಳಿಂದಲೂ ಉತ್ತಮ ಸೇವೆಯನ್ನು ಮಾಡಿದಂಥ ಈ ಜನತಾ ಸರ್ಕಾರದ ಸಾಧನೆಗಳನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇವತ್ತು ಉತ್ತಮ ಕೆಲಸಗಳನ್ನು ಕಳೆದ ೫ ವರ್ಷಗಳಲ್ಲಿ ನಮ್ಮ ಸರ್ಕಾರ ಕರ್ನಾಟಕದ ಜನತೆಗೋಸ್ಕರ ಅದು ಶಿಕ್ಷಣ ಕ್ಷೇತ್ರದಲ್ಲಿರಬಹುದು, ವಸತಿಯನ್ನು ಕಲ್ಪಿಸಿಕೊಡತಕ್ಕ ಕೆಲಸದಲ್ಲಿರಬಹುದು, ಮನೆಗಳನ್ನು ಒದಗಿಸಿಕೊಡತಕ್ಕ ಕಾರ್ಯದಲ್ಲಿರಬಹುದು, ಬಟ್ಟೆಗಳನ್ನು ಹಂಚತಕ್ಕ ಕೆಲಸದಲ್ಲಿರಬಹುದು ಹೀಗೆ ಹಲವಾರು ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಂಡು ಅವುಗಳನೆಲ್ಲಾ ಕಾರ್ಯಗತ ಮಾಡಿ ಬಡವರಿಗೋಸ್ಕರ, ದೀನದಲಿತರಿಗೋಸ್ಕರ, ಕೃಷಿ ಕಾರ್ಮಿಕರಿಗೋಸ್ಕರ, ಅವರೆಲ್ಲರಿಗೂ ಒಳ್ಳೆಯದಾಗಬೇಕೆಂಬ ಉದ್ದೇಶದಿಂದ ಉತ್ತಮ ಕೆಲಸಗಳನ್ನು ಮಾಡುತ್ತಾ ಬಂದಿದೆ. ಇದಕ್ಕೆ ನಿದರ್ಶನ ಎಂದರೆ ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ೩೧ ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ಕೊಡುವುದರ ಮೂಲಕ ಸುಮಾರು ೧೦ ಕೆ.ಜಿ. ಅಕ್ಕಿಯನ್ನು ೨ ರೂಪಾಯಿಗೆ ಕೊಡುವಂಥ ಉತ್ತಮ ಯೋಜನೆಯನ್ನು ಹಾಕಿಕೊಂಡು ಖಾಸಗೀ ಮತ್ತು ಸರ್ಕಾರೀ ನ್ಯಾಯಬೆಲೆ ಅಂಗಡಿಗಳ ಮೂಲಕ ಹಂಚುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಆಹಾರ ಸಚಿವರಲ್ಲಿ ನನ್ನ ಬೇಡಿಕೆ ಏನೆಂದರೆ, ಈ ಒಂದು ಕಾರ್ಯಕ್ರಮದ ರೀತ್ಯಾ ಇದು ಕೇವಲ ಗ್ರಾಮಾಂತರ ಪ್ರದೇಶಕ್ಕೆ ಮಾತ್ರ ಸೀಮಿತವಾಗದೆ ಇದನ್ನು ಪಟ್ಟಣ ಪ್ರದೇಶಗಳಲ್ಲಿಯೂ ಅಂದರೆ ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರತಕ್ಕ ಪಟ್ಟಣ ಪ್ರದೇಶಗಳಿಗೂ ಈ ಸೌಲಭ್ಯವನ್ನು ವಿಸ್ತರಿಸ ಬೇಕೆಂದು ಮಾನ್ಯ ರಾಜ್ಯಪಾಲರು ಏನು ತಿಳಿಸಿದ್ದಾರೆ ಅದು ಬೇಗನೆ ಜಾರಿಗೆ ಬರಬೇಕು. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಕಡೆಪ್ರಸ್ತಾಪಮಾಡಿ ಈ ಸೌಲಭ್ಯವನ್ನುಯಾರು ಬಡತನ ರೇಖೆಯಿಂದ ಕೆಳಗಿದ್ದಾರೆ ಅವರೆಲ್ಲರಿಗೂ ಇದು ತಲುಪಬೇಕೆಂಬ ಉದ್ದೇಶದಿಂದ ಪಟ್ಟಣ ಪ್ರದೇಶಗಳಿಗೂ ಇದನ್ನು ವಿಸ್ತರಿಸಬೇಕೆಂದು ಯೋಜನೆಯನ್ನು ಹಾಕಿಕೊಂಡಿರತಕ್ಕದ್ದು ಉತ್ತಮವಾದುದೆಂದು ನಾನು ಅವರನ್ನು ಅಭಿನಂದಿಸುತ್ತಾ ಇದುವರೆಗೂ ೧೦ ಕೆ. ಜಿ. ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಇನ್ನೂ ಹೆಚ್ಚಿಗೆ ಮಾಡತಕ್ಕ ಅಂದರೆ ೧೫ ಕೆ. ಜಿ. ಕೊಡತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಮಾಡಬೇಕು. ಇವತ್ತು ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರ ಏನು ಅಕ್ಕಿಯನ್ನು ಸಾವಿರಾರು ಟನ್‌ಗಳಷ್ಟು ಪಡೆಯುತ್ತಿದೆ ಆ ಕೋಟಾವನ್ನು ಇನ್ನೂ ಹೆಚ್ಚಿಗೆ ಪಡೆಯುವುದಕ್ಕೆ ಕ್ರಮ ಕೈಗೊಳ್ಳಬೇಕು ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕೊಡತಕ್ಕ

ಅಕ್ಕಿಯ ಪ್ರಮಾಣವನ್ನು ೧೫ ಕೆ.ಜಿ. ಯಂತೆ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಕೆಂಪು ಕಾರ್ಡುಗಳನ್ನು ಕೊಟ್ಟಿರುವಂಥ ಕಡೆಗಳಲ್ಲಿ ಅವರಿಗೆ ಕೊಡತಕ್ಕ ೩ ಕೆ.ಜಿ. ಅಥವಾ ೫ ಕೆ.ಜಿ. ಅಕ್ಕಿಯ ಪ್ರಮಾಣವನ್ನು ಇನ್ನೂ ಹೆಚ್ಚು ಮಾಡಬೇಕು. ಸಿಟಿ ಏರಿಯಾದಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಎಂದು ಒಂದು ಯೋಜನೆಯನ್ನು ಹಾಕಿಕೊಂಡು ಅವರಿಗೆ ಹೆಚ್ಚು ಅಕ್ಕಿ, ಸಕ್ಕರೆಯನ್ನು ಕೊಡುತ್ತಿರುವಂತೆಯೇ ಪಟ್ಟಣ ಅಥವಾ ಟೌನ್‌ಗಳಲ್ಲಿರತಕ್ಕ ಜನರಿಗೂ (ಕೆಂಪು ಕಾರ್ಡುಗಳನ್ನು ಹೊಂದಿರುವವರಿಗೆ) ಅಕ್ಕಿ ಮತ್ತು ಸಕ್ಕರೆಯ ಪ್ರಮಾಣವನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಪ್ರಗತಿಯನ್ನು ತೆಗೆದುಕೊಂಡರೆ ಇವತ್ತು ರಾಜ್ಯಾಂಗದ ೪೫ನೇ ವಿಧಿಯ ಪ್ರಕಾರ.—

> "The State shall endeavour to provide, within a period of ten years from the commencement of this Constitution, for free and compulsory education for all children until they complete the age of fourteen years."

But, ೪೦ ವರ್ಷಗಳು ಕಳೆದರೂ ಕೂಡ ನಾವು ನಮ್ಮ ಜನರಿಗೆ ಕಡ್ಡಾಯ ಶಿಕ್ಷಣವನ್ನು ಕೊಡತಕ್ಕ ಕೆಲಸ ಆಗಿಲ್ಲ.

ಕಾರಣವಾದರೂ ಇಷ್ಟೇ, ಕೇಂದ್ರದ ಬಜೆಟ್‌ನಲ್ಲಿ ಕೇವಲ ಮೂರು ಪರ್ಸೆಂಟ್ ಹಣವನ್ನು ಶಿಕ್ಷಣ ಕ್ಷೇತ್ರದಲ್ಲಿ ಕೊಡಗಿಸಿದ್ದಾರೆ. ಇದು ಏನೇನು ಸಾಲದು. ಇದನ್ನು ೮-೧೦ ಭಾಗ ಮಾಡಿ ಶಿಕ್ಷಣ ಕೊಟ್ಟರೆ ಸಾಕಾಗುತ್ತದೆ.

ಇನ್ನು ವ್ಯವಸಾಯ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರೂ ಕೂಡ ಇದ್ದಾರೆ, ಮಾನ್ಯ ಸದಸ್ಯರಾದ ಭೂಪತಿಯವರು ಮಾತನಾಡುತ್ತಾ ಖಾದ್ಯ ತೈಲ ಎಣ್ಣೆ ಬೀಜಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಆಯಿಲ್ ಫೆಡರೇಷನ್ ಖಾದ್ಯ ತೈಲ ಮಹಾಮಂಡಳಿಯವರು ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಅಂದರೆ ಬಿಜಾಪುರ, ರಾಯಚೂರು, ಬೆಳಗಾಮ್, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಿ, ೫೦ ಸಾವಿರ ಜನರನ್ನು ಗುರುತಿಸಿ, ೧೦೦ ಸಹಕಾರಿ ಸಂಘಗಳ ಮೂಲಕ ಸಹಾಯವನ್ನು ಮಾಡಿ ಖಾದ್ಯ ತೈಲ ಉತ್ಪಾದನೆಯಲ್ಲಿ ಲಾಭವನ್ನು ಗಳಿಸಿದ್ದಾರೆ. ಆ ಭಾಗದ ಜನರು ಸೂರ್ಯಕಾಂತಿಯಿಂದಲಾಗಲಿ, ಅಥವಾ ಶೇಂಗಾದಿಂದಲಾಗಲಿ ಬೆಳೆಯನ್ನು ತೆಗೆದು ಹೆಚ್ಚು ಲಾಭವನ್ನು ಗಳಿಸುವುದನ್ನು ಕಂಡುಕೊಂಡಿದ್ದಾರೆ. ಅದೇ ವಿಧಾನವನ್ನು ಅನುಸರಿಸಿ ಮೈಸೂರು ಬೆಂಗಳೂರು ಮತ್ತು ಮಂಡ್ಯ, ತುಮಕೂರು ವಿಭಾಗಗಳಲ್ಲಿಯೂ ಈ ಕಾರ್ಯವನ್ನು ಜಾಸ್ತಿ ಮಾಡಬೇಕು. ಬರೀ ಉತ್ತರ ಕರ್ನಾಟಕದಲ್ಲಿ ಖಾದ್ಯ ತೈಲವನ್ನು ಉತ್ಪಾದನೆ ಮಾಡಿದರೆ ಸಾಲದು. ಈ ಜಿಲ್ಲೆಗಳಲ್ಲೂ ಆಗುವಂಥ ಕಾರ್ಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜನತಾ ಸರ್ಕಾರ ಬಂದ ಮೇಲೆ ಕೃಷಿ ಅಭಿವೃದ್ಧಿ ಮಾಡಬೇಕೆಂದು, ಕೃಷಿ ಭೂಮಿಯನ್ನು ಅವಲಂಬಿಸಿರತಕ್ಕಂಥ ಪ್ರದೇಶಗಳನ್ನು ೪ ಭಾಗಗಳಾಗಿ ಮಾಡಿ ಕೃಷಿ ಅಭಿವೃದ್ಧಿ ಮಂಡಲಿಗಳನ್ನು ಸ್ಥಾಪನೆ ಮಾಡಿದೆ. ಆ ಮಂಡಲಿಗಳ ಮುಖಾಂತರ ನ್ಯಾಷನಲ್ ವಾಟರ್ ಷೆಡ್, ಮೈಕ್ರೋ ವಾಟರ್ ಷೆಡ್ ಮುಖಾಂತರ ವ್ಯವಸಾಯ ಇಲಾಖೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಗುರುತಿಸಿದ್ದಾರೆ. ಹರಿದುಹಂಚಿಹೋಗುತ್ತಿರುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ರೈತರ ಜೀವನ ಹಸನಾಗಬೇಕೆಂದು ಜನತಾ ಸರ್ಕಾರ ಅಧಿಕಾರಕ್ಕೆ ಬಂದನಂತರ ಒಂದು ಉತ್ತಮವಾದ ಕೆಲಸವನ್ನು ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರಿಂದಾಗಿ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಹಸಿರು ಕ್ರಾಂತಿಯಾಗಿ ಉತ್ಪಾದನೆಯು ಹೆಚ್ಚಿ ಜನರು ಸ್ವಾವಲಂಬಿಯಾಗಿದ್ದಾರೆ,

ಇನ್ನು ಕ್ಷೀರ ಕ್ಷೇತ್ರದಲ್ಲಿ ಕ್ಷೀರ ಕ್ರಾಂತಿಯಾಗಿ ಹಾಲಿನ ಉತ್ಪಾದನೆಯು ಜಾಸ್ತಿಯಾಗಿದೆ. ಆಪರೇಷನ್ ಫ್ಲಡ್-ಒನ್ ಆಪರೇಷನ್ ಫ್ಲಡ್-ಟು ಮುಖಾಂತರ ಹೈನುಗಾರಿಕೆಯ ಅಭಿವೃದ್ಧಿ ಜಾಸ್ತಿಯಾಗಿ ರೈತರು ಉತ್ಪಾದನೆ ಮಾಡಿದ ಹಾಲಿಗೆ ಉತ್ತಮವಾದ ದರವನ್ನು ಕೂಡ ಕೊಟ್ಟು ಸರ್ಕಾರ ಕ್ಷೀರ ಕ್ರಾಂತಿಯನ್ನೇ ಮಾಡಿದೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಅರಣ್ಯ ನಾಶದ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಓದಿದ್ದೇವೆ, ಇಡೀ ರಾಷ್ಟ್ರದಲ್ಲಿ ೮೦ ಲಕ್ಷ ಮಿಲಿಯನ್

ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶವಿದೆ. ರಾಷ್ಟ್ರದಲ್ಲಿರುವ ಅರಣ್ಯ ಪ್ರದೇಶದ ಸುಮಾರು ೫೦ ಭಾಗ ಅರಣ್ಯ ನಾಶವಾಗಿದೆ. ಸುಮಾರು ೪೦ ಲಕ್ಷ ಮಿಲಿಯನ್ ಹೆಕ್ಟೇರು ಅರಣ್ಯ ಪ್ರದೇಶಗಳಲ್ಲಿ ಮರಗಳನ್ನು ಕಡಿದು ಅರಣ್ಯ ಸಂಪತ್ತನ್ನು ನಾಶ ಮಾಡಿರುತ್ತಾರೆಂದು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಪ್ರತಿವರ್ಷ ೧೦ ಲಕ್ಷ ಮಿಲಿಯನ್ ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶ ನಾಶವಾಗುತ್ತಿದೆ ಎಂದು ಹೇಳಿದ್ದಾರೆ. ಈ ರೀತಿ ಮರಗಳನ್ನು ಕಡಿದು ಹಾಕುವಂಥ ಕಾರ್ಯವನ್ನು ನಿಲ್ಲಿಸಬೇಕು. ಮರಗಳನ್ನು ಬೆಳೆಸುವಂಥ ಕಾರ್ಯವನ್ನು ಸರ್ಕಾರದವರು ಕೈಗೊಳ್ಳಬೇಕು. ಮಾನ್ಯ ಅರಣ್ಯ ಸಚಿವರಾದ ಜೀವಿಜಯರವರು ಸಾಮಾಜಿಕ ಸೋಷಿಯಲ್ ಫಾರೆಸ್ಟ್ ಬೆಳೆಸುವ ಸಲುವಾಗಿ ಸುಮಾರು ೧೦೩ ಕೋಟಿ ಸಸಿಗಳನ್ನು ಬೆಳೆಸುವ ಕಾರ್ಯವನ್ನು ಮಾಡಿರುವುದು ಬಹಳ ಮೆಚ್ಚುವಂತದ್ದಾಗಿದೆ. ಅರಣ್ಯ ನಾಶದಿಂದ ನಾವು ಪ್ರಕೃತಿಯ ವಿಕೋಪಕ್ಕೆ ತುತ್ತಾಗಬೇಕಾದ ಪ್ರಸಂಗ ಉಂಟಾಗಿದೆ. ಪ್ರಕೃತಿಯ ವಿಕೋಪದಿಂದ ಮಳೆಯಾಗದೆ ಬರಗಾಲಕ್ಕೆ ತುತ್ತಾಗುತ್ತಿರುವುದಲ್ಲದೆ, ಇಂತಕ್ಕಂಥ ಅರಣ್ಯವೂ ಕೂಡ ನಾಶವಾಗುತ್ತಿದೆ.

೫-೦೦ ಪಿ.ಎಂ.

ಇವತ್ತು ಇರತಕ್ಕ ಅರಣ್ಯ ನಾಶವಾಗುತ್ತಿದೆ. ಅರಣ್ಯ ಪ್ರದೇಶಗಳನ್ನು ಬಗರ್‌ಹುಕುಂ ಸಾಗುವಳಿ ಮಾಡಿ ಅಡ್ಡಿಪಡಿಸುತ್ತಿದ್ದಾರೆ. ಅದಕ್ಕೋಸ್ಕರ ಅರಣ್ಯ ಪ್ರದೇಶಗಳಲ್ಲಿ ಹೆಚ್ಚು ಸಸ್ಯಗಳನ್ನು ಬೆಳೆಸುವ ಕಾರ್ಯ ಮಾಡಬೇಕೆಂದು ಹೇಳುತ್ತೇನೆ. ಮರ ಕಡಿಯುವ ಕಾರ್ಯಕ್ಕೆ ಒಪ್ಪಿಗೆ ಕೊಟ್ಟಿದ್ದರೆ ಅದನ್ನು ನಿಲ್ಲಿಸುವ ಕಾರ್ಯ ಮಾಡಬೇಕಾದುದು ಬಹಳ ಮುಖ್ಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ ಬಯೋಗ್ಯಾಸ್ ಅನಿಲವನ್ನು ಹೆಚ್ಚು ಉತ್ಪಾದಿಸುವ ಕಾರ್ಯ ನಡೆಯಬೇಕು. ಸೀಮೆಎಣ್ಣೆ, ವಿದ್ಯುಚ್ಛಕ್ತಿಗಳನ್ನು ಅವಲಂಬಿಸಿ ಅದನ್ನೆ ಹೆಚ್ಚಾಗಿ ಉಪಯೋಗಿಸುವುದನ್ನು ತಡೆಗಟ್ಟುವುದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಲ್ಲಿ ಬಯೋಗ್ಯಾಸ್ ಅನಿಲ ಯಂತ್ರಗಳನ್ನು ಹೆಚ್ಚು ಮಾಡಬೇಕು. ಇದರಿಂದ ಸೌದೆ ಕಡಿಯುವುದನ್ನು ಸಹ ತಪ್ಪಿಸಬಹುದು. ಸೀಮೆ ಎಣ್ಣೆ ಉಪಯೋಗಿಸುವುದನ್ನು ತಪ್ಪಿಸಬಹುದು, ವಿದ್ಯುಚ್ಛಕ್ತಿ ಉಪಯೋಗಿಸುವುದನ್ನು ತಪ್ಪಿಸಬಹುದು. ಬಯೋಗ್ಯಾಸ್ ಉಪಯೋಗಿಸುವಂಥ ಕಾರ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ಜವಾಬ್ದಾರಿಯುತವಾಗಿ ಮಾಡಬೇಕಾದ ಕಾರ್ಯವೆಂದರೆ ಪರಿಸರ ಮಾಲಿನ್ಯ ಆಗತಕ್ಕದ್ದರ ಕಡೆಗೆ ದೃಷ್ಟಿ ಹರಿಸಬೇಕಾದುದು ಬಹಳ ಮುಖ್ಯ. ವಾಟರ್ ಪೊಲ್ಯೂಷನ್ ಇರಬಹುದು, ಏರ್ ಪಲ್ಯೂಷನ್ ಇರಬಹುದು, ಅಟ್ಮಾಸ್ಫಿಯರ್ ಪಲ್ಯೂಷನ್ ಇರಬಹುದು, ಈ ಮೂರನ್ನು ನಾವು ಎಲ್ಲಾ ಕಡೆ ಕಾಣುತ್ತೇವೆ. ಕೈಗಾರಿಕೆಗಳು ಹೊಗೆಯನ್ನು ಬಿಡುವುದರ ಮೂಲಕ ಆಗಬಹುದು, ಕೊಳಚೆ ನೀರನ್ನು ನದಿಗಳಿಗೆ, ಕೆರೆಗಳಿಗೆ ಬಿಡುವುದರಿಂದ ಇರಬಹುದು. ಇಂಥದ್ದನ್ನು ತಡೆಗಟ್ಟಬೇಕು. ಪಲ್ಯೂಷನ್ ಬೋರ್ಡ್ ಮುಖಾಂತರ ಪರಿಸರ ಮಾಲಿನ್ಯತೆಯನ್ನು ತಡೆಗಟ್ಟುವ ಕಾರ್ಯವನ್ನು ಮಾಡಬೇಕಾಗುತ್ತದೆಂದು ತಿಳಿಸುತ್ತೇನೆ. ಮುಖ್ಯವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಹಾಗೆ ನೀರಾವರಿ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಆಗಬೇಕು. ಆ ದಿಸೆಯಲ್ಲಿ ಹೆಚ್ಚು ಹಣವನ್ನು ಮುಖ್ಯಮಂತ್ರಿಗಳು ತೊಡಗಿಸಬೇಕು. ಸರ್ಕಾರ ಆರ್ಥಿಕ ದುಸ್ಥಿತಿಯಲ್ಲಿದ್ದರೂ ಆರ್ಥಿಕ ಸಂಪನ್ಮೂಲಗಳನ್ನು ಉತ್ತಮಪಡಿಸಿಕೊಂಡು ವಿದ್ಯುಚ್ಛಕ್ತಿಗೆ ಆದ್ಯತೆ ಕೊಡಬೇಕು, ಮತ್ತು ಅದರ ಜೊತೆಗೆ ನೀರಾವರಿಗೂ ಆದ್ಯತೆ ಕೊಟ್ಟು ಬೇರೆ ಕಡೆ ಹಣ ಉಪಯೋಗಿಸುವುದನ್ನು ಕಡಿಮೆ ಮಾಡಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಹಣ ಬಳಕೆಯಾಗುವಂತೆ ಮಾಡಬೇಕಾದುದು ಮುಖ್ಯ. ವಿದ್ಯುಚ್ಛಕ್ತಿ ಬಗ್ಗೆ ಭೂಪತಿಯವರು ಪ್ರಸ್ತಾಪಿಸಿದರು. ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಲ್ಲಿ, ಮಳೆ ಬಾರದೆ ಇರುವುದರಿಂದ ಉತ್ಪತ್ತಿ ಕಡಿಮೆಯಾಗಿದೆ ಎಂಬುದು ನಮಗೆಲ್ಲ ಗೊತ್ತಿರತಕ್ಕ ವಿಷಯ, ಆದ್ದರಿಂದ, ಕೈಗಾದಲ್ಲಿ ಪ್ರಾರಂಭವಾಗಲಿರುವ ಅಣು ವಿದ್ಯುತ್ ಸ್ಥಾವರವನ್ನು ಆದಷ್ಟು ಬೇಗ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದರ ಮೂಲಕ ವಿದ್ಯುತ್ ಉತ್ಪಾದನೆ ಕಡೆಗೆ ಗಮನ ಹರಿಸಬೇಕಾಗುತ್ತದೆ. ಕಳೆದ ೩೫ ವರ್ಷಗಳಿಂದ ಪ್ರಯತ್ನ ಮಾಡಿದರೂ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಒಂದು ಪೈಸೆ ಕೂಡ ಕೊಡದೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಸಹಕರಿಸಿಲ್ಲ.